ಶುಕ್ರವಾರ, ಮೇ 22, 2026| ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಬಿಸಿಲ ಬೇಗೆ



ಕಲಬುರಗಿಯ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಮಹಿಳೆಯೊಬ್ಬರು ಬಿಸಿಲಿನ ಬೇಗೆಯಿಂದ ಬಳಲಿದ ಮಗುವಿಗೆ ನೀರುಣಿಸಿದರು

ಕಂದಮ್ಮನೊಂದಿಗೆ ಶರಣು



ತನ್ನ ಕಂದಮ್ಮನನ್ನು ಎತ್ತಿಕೊಂಡು ನಕ್ಸಲ್ ಮಹಿಳೆಯೊಬ್ಬರು ರಾಂಚಿಯಲ್ಲಿ ಪೊಲೀಸರಿಗೆ ಶರಣಾದರು

ಶುಕ್ರವಾರ, ಮೇ 22, 2026 | ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಸೂರಕ್ಕಿ...
ದೆಹಲಿಯಲ್ಲಿ ಮರವೊಂದರ ಮೇಲೆ ಕಂಡ ನೇರಳೆ ಸೂರಕ್ಕಿ



ಜೆನಿಲಿಯಾ ಸಂಭ್ರಮ
'ರಾಜಾ ಶಿವಾಜಿ' ಸಿನಿಮಾ ಯಶಸ್ಸು ಕಂಡ ಕಾರಣ ಮುಂಬೈನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನಟ ಜೆನಿಲಿಯಾ ದೇಶ್‌ಮುಖ್ ಕಾಣಿಸಿಕೊಂಡಿದ್ದು ಹೀಗೆ...

‘ನೀಟ್ ರದ್ದು ಮಾಡಿ, ರಾಜ್ಯಕ್ಕೆ ಅಧಿಕಾರ ಕೊಡಿ’

ಹತ್ತು ವರ್ಷದಲ್ಲಿ ಐದು ಬಾರಿ ಪ್ರಶ್ನೆಪತ್ರಿಕೆ ಸೋರಿಕೆ: ಸಿದ್ದರಾಮಯ್ಯ

• ರಾಜ್ಯ ಯುವ ಕಾಂಗ್ರೆಸ್‌ನಿಂದ ಸಮಾವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೀಟ್ ರದ್ದುಪಡಿಸಿ, ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ಮೊದಲಿನಂತೆಯೇ ಸಿಇಟಿ ನಡೆಸುವ ಅಧಿಕಾರವನ್ನು ರಾಜ್ಯಗಳಿಗೆ ನೀಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದರು.

ನೀಟ್ ಆಯೋಜನೆಯಲ್ಲಿ ನಡೆದಿರುವ ಅಕ್ರಮಗಳನ್ನು ಖಂಡಿಸಿ, ಕೇಂದ್ರ ಸರ್ಕಾರದ ವಿರುದ್ಧ ರಾಜ್ಯ ಯುವ ಕಾಂಗ್ರೆಸ್ ಇಲ್ಲಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಬೃಹತ್ ಸಮಾವೇಶ ಹಮ್ಮಿಕೊಂಡಿತ್ತು.

ಸಮಾವೇಶ ಉದ್ದೇಶಿಸಿ ಮಾತನಾಡಿದ ಸಿದ್ದರಾಮಯ್ಯ, ’ಕರ್ನಾಟಕ ಸೇರಿ ಇತರೆ ರಾಜ್ಯಗಳಲ್ಲಿ ವೈದ್ಯಕೀಯ ಶಿಕ್ಷಣ ಪ್ರವೇಶ ಬಯಸುವವರಿಗೆ ಸಿಇಟಿ ಪಾರದರ್ಶಕವಾಗಿ ನಡೆಯುತ್ತಿತ್ತು. 2016ರಲ್ಲಿ ನೀಟ್ ಅನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿತು. ಹತ್ತು ವರ್ಷಗಳಲ್ಲಿ ಐದು ಬಾರಿ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ. ಯುಪಿಎ ಅವಧಿಯಲ್ಲಿ ನಡೆಯುತ್ತಿದ್ದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಒಂದು ಬಾರಿಯೂ ಪ್ರಶ್ನೆ ಪತ್ರಿಕೆ ಸೋರಿಕೆ ಆಗಿರಲಿಲ್ಲ’ ಎಂದರು.

‘ನೀಟ್ ಪ್ರಶ್ನೆಪತ್ರಿಕೆ ಸೋರಿಕೆಯಿಂದಾಗಿ ಅನೇಕ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡರು. ಪ್ರಶ್ನೆಪತ್ರಿಕೆ ಸೋರಿಕೆಯ ನೈತಿಕ ಹೊಣೆ ಹೊತ್ತು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಬೇಕು. ಅವರು ರಾಜೀನಾಮೆ ನೀಡುವವರೆಗೆ ಹೋರಾಟ ಮುಂದುವರಿಸಬೇಕು. ಬಿಜೆಪಿಯವರು ಭಂಡರು’ ಎಂದು ಟೀಕಿಸಿದರು.

‘ಪ್ರಶ್ನೆಪತ್ರಿಕೆ ಸೋರಿಕೆ ಮಾಡಿದವರನ್ನು ಪತ್ತೆ ಹಚ್ಚಿ ಅವರ ಮೇಲೆ ಕೊಲೆ ಪ್ರಕರಣ ದಾಖಲಿಸಬೇಕು. ಮೃತ ವಿದ್ಯಾರ್ಥಿಗಳ ಕುಟುಂಬದವರಿಗೆ ಪರಿಹಾರ ನೀಡಬೇಕು. ನರೇಂದ್ರ ಮೋದಿ ಅವರು ದೇಶದ ಜ್ವಲಂತ ಸಮಸ್ಯೆಗಳ ಪರಿಹಾರಕ್ಕೆ ಸರ್ವ ಪಕ್ಷಗಳೊಂದಿಗೆ ಚರ್ಚಿಸಬೇಕು ಹಾಗೂ ನೀಟ್‌ನಲ್ಲಿ ಆದ ಅವಾಂತರಕ್ಕೆ ವಿದ್ಯಾರ್ಥಿಗಳ ಕ್ಷಮೆಯಾಚಿಸಬೇಕು’ ಎಂದು ಆಗ್ರಹಿಸಿದರು.

ರಾಜ್ಯದಲ್ಲಿ ಬಿಜೆಪಿ ಸರ್ಕಾರದ ಅವಧಿಯಲ್ಲಿ ಪಿಎಸ್‌ಐ, ಎಂಜಿನಿಯರ್‌ಗಳ ನೇಮಕಾತಿಗೆ ನಡೆದ ಪರೀಕ್ಷೆಯಲ್ಲಿ ಪಶ್ನೆ ಪತ್ರಿಕೆಗಳು ಸೋರಿಕೆಯಾಗಿತ್ತು. ರಾಜ್ಯದ ಇತಿಹಾಸದಲ್ಲಿ ಎಡಿಜಿಪಿ ದರ್ಜೆಯ ಅಧಿಕಾರಿಯೊಬ್ಬರು ಜೈಲಿಗೆ ಹೋದರು. ಮಾಹಿತಿ ಪ್ರಕಾರ ದೇಶದಲ್ಲಿ 20 ರಿಂದ 29 ವರ್ಷದೊಳಗಿನ ಯುವ ಪದವೀಧರರ ನಿರುದ್ಯೋಗಿಗಳ ಪ್ರಮಾಣ ಶೇಕಡ 69ರಷ್ಟಿದೆ. ದುಡಿಯುವ ಯುವ ಜನರ ಕೈಗೆ ಉದ್ಯೋಗ ಕೊಡಲು ಸಾಧ್ಯವಾಗುವುದಿಲ್ಲವೊ ಆ ದೇಶ ದಾರಿದ್ರ್ಯಾವಸ್ಥೆಗೆ ಕುಸಿಯುತ್ತದೆ ಎಂದು ಎಚ್ಚರಿಸಿದರು.

ಇದೇ ವೇಳೆ ‘ಮೋದಿ ಈಸ್ ಕಾಂಪ್ರಮೈಸ್ಡ್ (ಮೋದಿ ರಾಜಿಯಾಗಿದ್ದಾರೆ), ‘ಐ ಆ್ಯಮ್ ಕಾಕ್ರೋಚ್’ ಎಂಬ ಘೋಷಣೆಯ ಜರ್ಸಿಗಳನ್ನು ನಾಯಕರು ಪ್ರದರ್ಶಿಸಿದರು.

ಸಚಿವರಾದ ಕೃಷ್ಣ ಬೈರೇಗೌಡ, ಬೈರತಿ ಸುರೇಶ್, ಈಶ್ವರ್ ಖಂಡ್ರೆ, ಎಂ.ಸಿ. ಸುಧಾಕರ್, ಶಾಸಕರಾದ ರಿಜ್ವಾನ್ ಅರ್ಷದ್, ಪ್ರದೀಪ್ ಈಶ್ವರ್, ಅಖಿಲ ಭಾರತ ಯುವ ಕಾಂಗ್ರೆಸ್ ಅಧ್ಯಕ್ಷ ಉದಯಭಾನು ಚಿಬ್, ಯುವ ಕಾಂಗ್ರೆಸ್ ಸಮಿತಿ ರಾಜ್ಯ ಘಟಕದ ಅಧ್ಯಕ್ಷ ಎಚ್.ಎಸ್. ಮಂಜುನಾಥ್ ಗೌಡ, ಯುವ ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ನಿಗಂ ಭಂಡಾರಿ, ಐ.ವೈ.ಸಿ. ಕಾರ್ಯದರ್ಶಿ ತಾರೀಖ್ ಭಗವಾನ್, ಮಾಜಿ ಸಂಸದ ಉಗ್ರಪ್ಪ ಇದ್ದರು.



ಲೋಕಭವನ ಚಲೋ ವೇಳೆ ಬ್ಯಾರಿಕೇಡ್ ದಾಟಲು ಯತ್ನಿಸಿದ ಕಾಂಗ್ರೆಸ್ ಕಾರ್ಯಕರ್ತೆಗೆ ನೆರವಾದ ಕಾರ್ಯಕರ್ತರು

> ರಾಜ್ಯಗಳಿಗೆ ಪರೀಕ್ಷೆ ನಡೆಸುವ ಅಧಿಕಾರ ಕೊಡುವಂತೆ ಕರ್ನಾಟಕ, ತಮಿಳುನಾಡು, ಕೇರಳ ಕೇಂದ್ರಕ್ಕೆ ಪತ್ರ ಬರೆದಿವೆ. 1.29 ಲಕ್ಷ ಸೀಟುಗಳಿಗೆ 22 ಲಕ್ಷ ವಿದ್ಯಾರ್ಥಿಗಳು ಈ ಬಾರಿ ನೀಟ್ ಪರೀಕ್ಷೆ ಬರೆದಿದ್ದಾರೆ
> **ಶರಣಪ್ರಕಾಶ ಪಾಟೀಲ,** ವೈದ್ಯಕೀಯ ಶಿಕ್ಷಣ ಸಚಿವ

> ಪರೀಕ್ಷೆಗಳನ್ನು ಹೇಗೆ ನಡೆಸಬೇಕು ಎಂಬುದನ್ನು ಕರ್ನಾಟಕ ನೋಡಿ ಕಲಿಯ ಬೇಕು. ನೀಟ್ ಪರೀಕ್ಷೆ ತೆಗೆದುಕೊಳ್ಳದವರಿಗೆ ಶುಲ್ಕ ಮರುಪಾವತಿಸಿದರೆ ಸಾಲದು, ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಬೇಕು
> **ಮಧು ಬಂಗಾರಪ್ಪ,** ಶಿಕ್ಷಣ ಸಚಿವ



ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಯುವ ಕಾಂಗ್ರೆಸ್ ಹಮ್ಮಿಕೊಂಡಿದ್ದ ಪ್ರತಿಭಟನೆ ವೇಳೆ ‘ಮೋದಿ ಈಸ್ ಕಾಂಪ್ರಮೈಸ್ಡ್ (ಮೋದಿ ರಾಜಿಯಾಗಿದ್ದಾರೆ), ‘ಐ ಆ್ಯಮ್ ಕಾಕ್ರೋಚ್’ ಘೋಷಣೆ ಜರ್ಸಿ ಬಿಡುಗಡೆ ಮಾಡಲಾಯಿತು. ಮಧು ಬಂಗಾರಪ್ಪ, ಈಶ್ವರ್ ಖಂಡ್ರೆ, ಉದಯ್ ಭಾನು ಚಿಬ್, ಸಿದ್ದರಾಮಯ್ಯ, ಎಚ್.ಎಸ್. ಮಂಜುನಾಥ್ ಗೌಡ, ರಣದೀಪ್ ಸಿಂಗ್ ಸುರ್ಜೇವಾಲಾ, ಬೈರತಿ ಸುರೇಶ್ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

‘ಮೋದಿ ಪೇಪರ್ ಲೀಕ್ ಪೇ ಚರ್ಚೆ ಮಾಡಲಿ’

ಪ್ರಧಾನಿ ನರೇಂದ್ರ ಮೋದಿ ಅವರು ಪರೀಕ್ಷಾ ಪೇ ಚರ್ಚಾ ಬಿಟ್ಟು, ಪೇಪರ್ ಲೀಕ್ ಪೇ ಚರ್ಚೆ ಮಾಡಬೇಕು’ ಎಂದು ಕಾಂಗ್ರೆಸ್ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲಾ, ವ್ಯಂಗ್ಯವಾಗಿ ಹೇಳಿದರು.

‘ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ರದ್ದುಗೊಳಿಸಿ, ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆ ಪಡೆಯಬೇಕು. ಮೋದಿ ಸರ್ಕಾರ ಶಿಕ್ಷಣ ಮಾಫಿಯಾಗೆ ಎಲ್ಲವನ್ನೂ ಒಪ್ಪಿಸಿಬಿಟ್ಟಿದೆ’ ಎಂದು ಅವರು ದೂರಿದರು.

ಕಾರ್ಯಕರ್ತರು ವಶಕ್ಕೆ

ಸಮಾವೇಶದ ಬಳಿಕ ಯುವ ಕಾಂಗ್ರೆಸ್ ಅಧ್ಯಕ್ಷ ಎಚ್.ಎಸ್. ಮಂಜುನಾಥಗೌಡ ನೇತೃತ್ವದಲ್ಲಿ ಲೋಕಭವನಕ್ಕೆ ಮುತ್ತಿಗೆ ಹಾಕಲು ಹೊರಟ ಕಾಂಗ್ರೆಸ್ ಕಾರ್ಯಕರ್ತರನ್ನು ಪೊಲೀಸರು ತಡೆದರು. ಬಿಗಿ ಭದ್ರತೆಯ ನಡುವೆಯೂ ಕಾರ್ಯಕರ್ತರು, ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ, ಬ್ಯಾರಿಕೇಡ್ ದಾಟಲು ಯತ್ನಿಸಿದರು. ಎಲ್ಲರನ್ನೂ ತಡೆದು, ಬಸ್‌ನಲ್ಲಿ ಕರೆದೊಯ್ದರು. ಸಂಜೆ ಬಿಡುಗಡೆ ಮಾಡಲಾಯಿತು.

ಸುದ್ದಿ 2 ನಿಮಿಷ


ಪಿಸ್ತೂಲ್‌ನೊಂದಿಗೆ ಉಪ ಲೋಕಾಯುಕ್ತರ ಓಡಾಟ

ಮಂಡ್ಯ: ‘ರಾಯಚೂರಿಗೆ ಭೇಟಿ ನೀಡಿದ್ದಾಗ ದುಷ್ಕರ್ಮಿಗಳು ಗುಂಪು ಕಟ್ಟಿಕೊಂಡು ನನ್ನ ಮೇಲೆ ರೌಡಿಸಂ ಮಾಡಲು ಬಂದಿದ್ದರು. ಇತ್ತೀಚೆಗೆ ಬೆದರಿಕೆ ಕರೆಗಳೂ ಬರುತ್ತಿವೆ. ಆತ್ಮರಕ್ಷಣೆಗಾಗಿ ಪಿಸ್ತೂಲ್ ಅನ್ನು ಜತೆಯಲ್ಲಿಟ್ಟುಕೊಂಡು ಓಡಾಡುತ್ತಿದ್ದೇನೆ’ ಎಂದು ಉಪಲೋಕಾಯುಕ್ತ ಬಿ.ವೀರಪ್ಪ ಹೇಳಿದರು.

ನಗರದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಗುರುವಾರ ಬಾಕಿ ಪ್ರಕರಣಗಳ ವಿಚಾರಣೆ ಮತ್ತು ವಿಲೇವಾರಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

‘ಲೋಕಾಯುಕ್ತ ಸಂಸ್ಥೆ ಯಾರಿಗೂ ಬಗ್ಗುವುದಿಲ್ಲ. ಯಾರ ಶಿಫಾರಸ್ಸಿಗೂ ಮಣಿಯುವುದಿಲ್ಲ. ಧರ್ಮ ಸಂಸ್ಥಾಪನೆಗಾಗಿ ದುಷ್ಟರನ್ನು ಶಿಕ್ಷಿಸಲು ಮತ್ತು ಶಿಷ್ಟರನ್ನು ರಕ್ಷಿಸಲು ಭಗವಾನ್ ವಿಷ್ಣುವು ಸುದರ್ಶನ ಚಕ್ರ ಹಿಡಿದಂತೆ, ಆಯುಧವಾಗಿ ಪಿಸ್ತೂಲ್ ಇಟ್ಟುಕೊಂಡಿದ್ದೇನೆ’ ಎಂದು ತಿಳಿಸಿದರು.

‘ಭ್ರಷ್ಟಾಚಾರದಲ್ಲಿ ಕರ್ನಾಟಕಕ್ಕೆ 5ನೇ ಸ್ಥಾನ’: ‘ರಾಜ್ಯದ ಪ್ರತಿ ಇಲಾಖೆಯಲ್ಲೂ ಭ್ರಷ್ಟಾಚಾರ ತುಂಬಿ ತುಳುಕುತ್ತಿದೆ. ಭ್ರಷ್ಟಾಚಾರದ ಪಟ್ಟಿಯಲ್ಲಿ ಕರ್ನಾಟಕ ಐದನೇ ಸ್ಥಾನದಲ್ಲಿದೆ. ಈ ಪಿಡುಗನ್ನು ತಡೆಯದಿದ್ದರೆ ಭವಿಷ್ಯದಲ್ಲಿ ಭೀಕರ ಅಪಾಯ ಕಟ್ಟಿಟ್ಟ ಬುತ್ತಿ. ಬ್ರಿಟಿಷರ ಆಡಳಿತಾವಧಿಯಲ್ಲಿನ ಸ್ಥಿತಿ ಮರುಕಳಿಸಲಿದೆ’ ಎಂದು ಆತಂಕ ವ್ಯಕ್ತಪಡಿಸಿದರು.



‘ಭ್ರಷ್ಟಾಚಾರವುಳ್ಳ 140 ದೇಶಗಳ ಪೈಕಿ ಭಾರತವು 91ನೇ ಸ್ಥಾನದಲ್ಲಿದೆ. ರಾಜ್ಯದ 16 ಜಿಲ್ಲೆಗಳಲ್ಲಿ 1,281 ಅಕ್ರಮ ಪ್ರಕರಣಗಳನ್ನು ಪತ್ತೆ ಮಾಡಲಾಗಿದೆ. ಅಧಿಕಾರ ಎಂಬುದು ಭ್ರಷ್ಟಾಚಾರ ನಡೆಸಲು ಸಿಕ್ಕಿದ ಲೈಸೆನ್ಸ್ ಎಂಬಂತೆ ವರ್ತಿಸುವವರನ್ನು ಲೋಕಾಯುಕ್ತ ಸಂಸ್ಥೆ ಸಹಿಸುವುದಿಲ್ಲ’ ಎಂದು ಎಚ್ಚರಿಕೆ ನೀಡಿದರು.

ಕೇಂದ್ರವನ್ನೇಕೆ ಪ್ರಶ್ನಿಸುವುದಿಲ್ಲ: ಮುಖ್ಯಮಂತ್ರಿ ಗರಂ

ಬೆಂಗಳೂರು: ‘ಕೇಂದ್ರ ಸರ್ಕಾರದವರು ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಿಸಿದಾಗ ನೀವು (ಮಾಧ್ಯಮ) ಮಾತನಾಡುವುದಿಲ್ಲ, ಮೌನವಾಗಿರುತ್ತೀರಿ, ಅವರನ್ನು ಏನೂ ಪ್ರಶ್ನಿಸುವುದಿಲ್ಲ. ದರ ಇಳಿಸುತ್ತೀರಾ ಎಂದು ನಮ್ಮನ್ನು ಪ್ರಶ್ನೆ ಮಾಡುತ್ತೀರಿ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆಕ್ಷೇಪ ವ್ಯಕ್ತಪಡಿಸಿದರು.

ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಳವಾಗಿರುವ ಕುರಿತು ಸುದ್ದಿಗಾರರು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಕೇಂದ್ರದಲ್ಲಿ ನರೇಂದ್ರ ಮೋದಿ 2014ರಲ್ಲಿ ಅಧಿಕಾರಕ್ಕೆ ಬಂದಾಗ ಡೀಸೆಲ್ ಬೆಲೆ ₹48, ಪೆಟ್ರೋಲ್ ಬೆಲೆ ₹ 70, ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರ್ ಬೆಲೆ ₹ 414 ಇತ್ತು. ಇಂದು ಇಷ್ಟು ಬೆಲೆ ಏರಿಕೆ ಮಾಡಿದ್ದು ಯಾರು’ ಎಂದು ಕೋಪದಿಂದಲೇ ಪ್ರಶ್ನಿಸಿದರು.

‘ರಾಜ್ಯ ಸರ್ಕಾರ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ತೆರಿಗೆ ಕಡಿಮೆ ಮಾಡಲಿದೆಯೇ’ ಎಂಬ ಪ್ರಶ್ನೆಗೆ ಮುಖ್ಯಮಂತ್ರಿ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ.

ಶೃಂಗೇರಿ ಶಾಸಕರಾಗಿ ರಾಜೇಗೌಡ: ಆದೇಶ ಮುಂದುವರಿಕೆ

ನವದೆಹಲಿ: ಶೃಂಗೇರಿ ಶಾಸಕರನ್ನಾಗಿ ಕಾಂಗ್ರೆಸ್‌ನ ಟಿ.ಡಿ.ರಾಜೇಗೌಡ ಅವರನ್ನು ಮರುಸ್ಥಾಪಿಸಿದ್ದ ಮಧ್ಯಂತರ ಆದೇಶವನ್ನು ಸುಪ್ರೀಂ ಕೋರ್ಟ್ ಮುಂದುವರಿಸಿದೆ.

ರಾಜೇಗೌಡ ಸಲ್ಲಿಸಿದ ಮೇಲ್ಮನವಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸಂಜಯ್ ಕುಮಾರ್ ಮತ್ತು ಕೆ. ವಿನೋದ್ ಚಂದ್ರನ್ ಅವರ ಪೀಠವು, ಈ ಆದೇಶ ಹೊರಡಿಸಿತು.

ಅಂಚೆ ಮತ ಮರು ಎಣಿಕೆಯ ವರದಿಯನ್ನು ಚುನಾವಣಾ ಆಯೋಗವು ಮುಚ್ಚಿದ ಲಕೋಟೆಯಲ್ಲಿ ನ್ಯಾಯಪೀಠಕ್ಕೆ ಸಲ್ಲಿಸಿತು. ಈ ವರದಿಯ ಪ್ರತಿಗಳನ್ನು ಪ್ರತಿವಾದಿಗಳಿಗೆ ನೀಡುವಂತೆ ನ್ಯಾಯಪೀಠ ನಿರ್ದೇಶನ ನೀಡಿತು. ಬಳಿಕ ವಿಚಾರಣೆ ಯನ್ನು ಜುಲೈ 23ಕ್ಕೆ ಮುಂದೂಡಿತು.

2023ರ ವಿಧಾನಸಭಾ ಚುನಾವಣೆಯಲ್ಲಿ ರಾಜೇಗೌಡ ಅವರು ಜೀವರಾಜ್ ಅವರನ್ನು 201 ಮತಗಳ ಅಂತರ ದಿಂದ ಸೋಲಿಸಿದ್ದರು. 1,811 ಅಂಚೆಮತಗಳು ಚಲಾವಣೆ ಯಾಗಿದ್ದವು.

ರಾಜೇಗೌಡ ಅವರ ಸಮೀಪದ ಪ್ರತಿಸ್ಪರ್ಧಿ ಡಿ.ಎನ್.ಜೀವರಾಜ್ ಹೈಕೋರ್ಟ್‌ಗೆ ಚುನಾವಣಾ ತಕರಾರು ಅರ್ಜಿ ಸಲ್ಲಿಸಿ, ‘1951ರ ಜನ ಪ್ರಾತಿನಿಧ್ಯ ಕಾಯ್ದೆ ಮತ್ತು ಭಾರತ ಚುನಾವಣಾ ಆಯೋಗ ಹೊರಡಿಸಿದ ಚುನಾವಣಾ ಅಧಿಕಾರಿಯ ಕೈಪಿಡಿಯ ನಿಬಂಧನೆಗಳ ಪ್ರಕಾರ, ಪ್ರತಿವಾದಿ ವಿಜೇತ ಅಭ್ಯರ್ಥಿಯು ಚುನಾವಣೆಯಲ್ಲಿ ಎಸಗಿರುವ ದುಷ್ಕೃತ್ಯ ಗಳು, ಅಪರಾಧಗಳು, ಅನೈತಿಕ ಕೃತ್ಯಗಳು ಮತ್ತು ಲೋಪಗಳ ಆರೋಪಗಳನ್ನು ಪರಿಗಣಿಸಬೇಕು. ಕ್ಷೇತ್ರದಲ್ಲಿ ಚಲಾವಣೆಯಾದ ಮತಗಳನ್ನು ಕಾನೂನಿನ ಪ್ರಕಾರ ಮರು ಎಣಿಕೆ ಮಾಡಲು ಆದೇಶಿಸಿ ಫಲಿತಾಂಶಗಳನ್ನು ಹೊಸದಾಗಿ ಘೋಷಿಸಲು ಆದೇಶಿಸಬೇಕು’ ಎಂದು ಕೋರಿದ್ದರು.

ಹೈಕೋರ್ಟ್ ಆದೇಶದ ಕಾರಣ ಇತ್ತೀಚೆಗೆ ಮರು ಮತ ಎಣಿಕೆ ನಡೆಸಲಾಗಿತ್ತು.

ಬಿಜೆಪಿ ಪ್ರಮುಖರ ಜತೆ ರಾಜ್ಯ ಉಸ್ತುವಾರಿ ರಾಧಾ ಮೋಹನದಾಸ್ ಅಗರ್‌ವಾಲ್ ಸಮಾಲೋಚನೆ

‘ರಾಜ್ಯ ಘಟಕದ ಅಧ್ಯಕ್ಷರ ಮೌಲ್ಯಮಾಪನ ಇಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕದಲ್ಲಿ ನಮ್ಮ ಪಕ್ಷಕ್ಕೆ ಶಕ್ತಿಶಾಲಿ ಅಧ್ಯಕ್ಷರಿದ್ದು, ಸಕ್ರಿಯವಾಗಿ ಕೆಲಸ ಮಾಡುತ್ತಿದ್ದಾರೆ. ಯಾರು ಅಧ್ಯಕ್ಷರಿರುತ್ತಾರೋ ಅವರ ನೇತೃತ್ವದಲ್ಲಿ ವಿಧಾನಸಭಾ ಚುನಾವಣೆ ಎದುರಿಸುತ್ತೇವೆ’ ಎಂದು ಬಿಜೆಪಿ ರಾಜ್ಯ ಉಸ್ತುವಾರಿ ರಾಧಾ ಮೋಹನದಾಸ್ ಅಗರ್‌ವಾಲ್ ಹೇಳಿದರು.

ಪಕ್ಷದ ಪ್ರಮುಖರ ಜತೆ ಸಮಾಲೋಚನೆಗಾಗಿ ಇಲ್ಲಿಗೆ ಬಂದಿರುವ ಅಗರ್‌ವಾಲ್ ಅವರು, ಸುದ್ದಿಗಾರರ ಜತೆ ಮಾತನಾಡಿದರು.

‘ರಾಜ್ಯ ಘಟಕದ ಅಧ್ಯಕ್ಷರು ಹೇಗೆ ಕೆಲಸ ಮಾಡುತ್ತಿದ್ದಾರೆ ಎನ್ನುವುದನ್ನು ಪತ್ತೆ ಮಾಡಲು ಆಯಾ ರಾಜ್ಯಗಳಿಗೆ ತೆರಳುವ ಅಗತ್ಯವಿಲ್ಲ. ಪಕ್ಷದ ಜವಾಬ್ದಾರಿ ವಹಿಸಿಕೊಂಡವರ ಚಟುವಟಿಕೆಗಳ ಮೌಲ್ಯಮಾಪನ ನಿರಂತರವಾಗಿ ನಡೆಯುತ್ತಲೇ ಇರುತ್ತದೆ. ಅಧ್ಯಕ್ಷರ ಕಾರ್ಯ ವೈಖರಿಯ ಮೌಲ್ಯಮಾಪನ ನಡೆಯುತ್ತಿದೆ ಎನ್ನುವುದು ಭ್ರಮೆ’ ಎಂದು ಅವರು ಹೇಳಿದರು.

‘3ನೇ ತಾರೀಕಿಗೆ ಫಾರಂ ಭರ್ತಿ ಮಾಡಬೇಕು. 5ರಂದು ಸಂದರ್ಶನ ನಡೆಸಬೇಕು. 7 ರಂದು ಹೆಸರು ಘೋಷಿಸಬೇಕು ಎನ್ನಲು ಅಧ್ಯಕ್ಷತೆ ಎಂಬುದು ಒಂದು ಉದ್ಯೋಗವಲ್ಲ. ಈಗಿನ ಅಧ್ಯಕ್ಷರ (ಬಿ.ವೈ. ವಿಜಯೇಂದ್ರ) ನೇತೃತ್ವದಲ್ಲೇ ಲೋಕಸಭೆ ಚುನಾವಣೆ ಎದುರಿಸಿದ್ದೇವೆ. ಇಲ್ಲಿ ಎಲ್ಲರೂ ಬಿಜೆಪಿ ಕಾರ್ಯಕರ್ತರೇ ವಿನಾ ಅಧ್ಯಕ್ಷ ಅಥವಾ ಇತರೆ ಪದಾಧಿಕಾರಿಗಳ ಕಾರ್ಯಕರ್ತರಲ್ಲ. ಅಧ್ಯಕ್ಷರು ಬದಲಾದಾಗ ಹಳೆಯ ತಂಡ ಬದಲಾಗಿ ಹೊಸ ತಂಡ ರಚಿಸಲಾಗುತ್ತದೆ’ ಎಂದರು.

‘ನಮ್ಮ ಪಕ್ಷದ ರಾಷ್ಟ್ರೀಯ ಸಹ-ಸಂಘಟನಾ ಕಾರ್ಯದರ್ಶಿ ಶಿವಪ್ರಕಾಶ್ ಇಲ್ಲಿಗೆ ಬಂದಿದ್ದಾರೆ. 2028ರಲ್ಲಿ ವಿಧಾನಸಭಾ ಚುನಾವಣೆ ಇದೆ. ರಾಜ್ಯದಲ್ಲಿ ವಿಫಲ, ಭ್ರಷ್ಟಾಚಾರಿಗಳ ಸರಕಾರ ಇದೆ. ತುಷ್ಟೀಕರಣ ಆಧರಿತ ಸರ್ಕಾರ ಇದಾಗಿದೆ. ಅದು ಕರ್ನಾಟಕದ ಜನರಿಗೆ ಮೋಸ ಮಾಡಿದೆ. ಗ್ಯಾರಂಟಿಗಳನ್ನೂ ಸರಿಯಾಗಿ ನೀಡಿಲ್ಲ’ ಎಂದು ಟೀಕಿಸಿದರು.



ಬಿಜೆಪಿ ವಿಶೇಷ ಸಂಘಟನಾ ಸಭೆಯಲ್ಲಿ ರಾಜ್ಯ ಉಸ್ತುವಾರಿ ರಾಧಾಮೋಹನದಾಸ್ ಅಗರ್‌ವಾಲ್, ರಾಷ್ಟ್ರೀಯ ಸಹಸಂಘಟನಾ ಕಾರ್ಯದರ್ಶಿ ಶಿವಪ್ರಕಾಶ್, ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಸಂಸದ ಬೈಜಯಂತ್ ಜಯ್ ಪಾಂಡಾ, ವಿರೋಧಪಕ್ಷದ ನಾಯಕರಾದ ಆರ್.ಅಶೋಕ, ಛಲವಾದಿ ನಾರಾಯಣಸ್ವಾಮಿ ಉಪಸ್ಥಿತರಿದ್ದರು

‘ಸಂಪರ್ಕದಲ್ಲಿ ಕಾಂಗ್ರೆಸ್ ಶಾಸಕರು’

‘ಕಾಂಗ್ರೆಸ್‌ನ ಹಲವು ಶಾಸಕರು ಬಿಜೆಪಿ ಸಂಪರ್ಕದಲ್ಲಿದ್ದಾರೆ. ವಿಧಾನಸಭೆ ಚುನಾವಣೆ ನಡೆದರೆ ಪಕ್ಷ ಅಧಿಕಾರಕ್ಕೆ ಬರಲಿದೆ’ ಎಂದು ಬಿಜೆಪಿ ರಾಜ್ಯ ಉಸ್ತುವಾರಿ ರಾಧಾಮೋಹನದಾಸ್ ಅಗರ್‌ವಾಲ್ ಹೇಳಿದರು.

‘ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ನಡುವೆ ಮುಖ್ಯಮಂತ್ರಿ ಕುರ್ಚಿಗಾಗಿ ಕಿತ್ತಾಟ ನಡೆಯುತ್ತಿದ್ದು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಇಬ್ಬರಿಗೂ ಜಗಳ ಮಾಡಿಸುತ್ತಿದ್ದಾರೆ. ಇಬ್ಬರ ಕಿತ್ತಾಟದ ಲಾಭ ಪಡೆದು ತಾವು ಮುಖ್ಯಮಂತ್ರಿಯಾಗಲು ಖರ್ಗೆ ಕಾಯುತ್ತಿದ್ದಾರೆ. ಮುಖ್ಯಮಂತ್ರಿ ಸ್ಥಾನಕ್ಕಾಗಿ ಜಗಳದಿಂದಾಗಿ, ಕಾಂಗ್ರೆಸ್ ಸ್ಥಿತಿ ಹದಗೆಟ್ಟಿದೆ. ರಾಜ್ಯ ಸರ್ಕಾರ ಹೆಚ್ಚು ಸಾಲ ಮಾಡಿದ್ದರಿಂದ ಆರ್ಥಿಕ ಸಂಕಷ್ಟದಲ್ಲಿದೆ. ಆರೇಳು ತಿಂಗಳಿನಿಂದ ಸರ್ಕಾರವೇ ಇಲ್ಲದ ಸ್ಥಿತಿ ನಿರ್ಮಾಣವಾಗಿದೆ’ ಎಂದು ಹೇಳಿದರು.

ರಾಹುಲ್ ಕ್ಷಮೆಯಾಚನೆಗೆ ಒತ್ತಾಯ

‘ಪ್ರಧಾನಮಂತ್ರಿ, ಗೃಹ ಸಚಿವರ ವಿರುದ್ಧ ರಾಹುಲ್ ಗಾಂಧಿ ಅಪಮಾನಕರವಾಗಿ ಮಾತನಾಡಿದ್ದಾರೆ. ಕ್ಷಮೆ ಕೇಳದೆ ಇದ್ದರೆ ರಾಜ್ಯದ ಎಲ್ಲೆಡೆ ಹೋರಾಟ ನಡೆಸಲಾಗುವುದು’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಪಶ್ಚಿಮ ಬಂಗಾಳ, ಅಸ್ಸಾಂನಲ್ಲಿ ಬಿಜೆಪಿ ಗೆಲುವು ಸಾಧಿಸಿದೆ. ರಾಹುಲ್ ಗಾಂಧಿ ಅವರಿಗೆ ಸಹಿಸಲು ಆಗುತ್ತಿಲ್ಲ. ಕಾಂಗ್ರೆಸ್‌ನ ರಾಷ್ಟ್ರೀಯ ಅಧ್ಯಕ್ಷರಾಗಿದ್ದವರು ಬಾಲಿಶ ಹೇಳಿಕೆ ನೀಡಬಾರದು. ಸಂವಿಧಾನದ 370ನೇ ವಿಧಿಯನ್ನು ರದ್ದು ಮಾಡಿದ ಅಮಿತ್ ಶಾ ಅವರನ್ನು ದೇಶದ್ರೋಹಿ ಎಂದಿದ್ದಾರೆ’ ಎಂದು ದೂರಿದರು.

‘ರಾಜ್ಯದಲ್ಲೂ ನಾಲಾಯಕ್ ಕಾಂಗ್ರೆಸ್ ನಾಯಕರು ಇದ್ದಾರೆ. ಸಿದ್ದರಾಮಯ್ಯ ಸಂಪುಟದ ಸದಸ್ಯರು ವಿದೇಶಾಂಗ ಸಚಿವರಂತೆ, ರಕ್ಷಣಾ ಪರಿಣತರ ರೀತಿ ಹುಚ್ಚು ಹುಚ್ಚಾಗಿ ಮಾತನಾಡುತ್ತಾರೆ. ಅಧಿಕಾರಕ್ಕೆ ಬಂದು ಮೂರು ವರ್ಷವಾದರೂ ಪೌತಿ ಖಾತೆ ಮಾಡಿದ್ದೇ ಸಾಧನೆ ಎಂಬಂತೆ ಮಾತನಾಡುತ್ತಾರೆ’ ಎಂದು ಟೀಕಿಸಿದರು.

‘ಮುಖ್ಯಮಂತ್ರಿ ಬದಲಾವಣೆ ಬೇಡಿಕೆ ಬಂದಿದ್ದು ಯಾರಿಂದ?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಖ್ಯಮಂತ್ರಿ ಬದಲಾವಣೆ ನಾನು ಕೇಳಿಯೇ ಇಲ್ಲವೆಂದು ಉಪ ಮುಖ್ಯಮಂತ್ರಿ ಸ್ಪಷ್ಟಪಡಿಸಿದ್ದಾರೆ. ಬದಲಾವಣೆಯ ಬೇಡಿಕೆ ಯಾರಿಂದ ಬಂದಿದೆ ಎಂಬುದೇ ಈಗ ಪ್ರಶ್ನೆ’ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಮುಖ್ಯಮಂತ್ರಿ ಬದಲಾವಣೆ ವಿಚಾರದಲ್ಲಿ ಕೆ.ಎನ್. ರಾಜಣ್ಣ ನೀಡಿರುವ ಹೇಳಿಕೆ ವಿಚಾರವಾಗಿ ಪ್ರತಿಕ್ರಿಯಿಸಿದ ಪರಮೇಶ್ವರ, ‘ಒಬ್ಬೊಬ್ಬರು ಒಂದೊಂದು ರೀತಿ ವ್ಯಾಖ್ಯಾನ ಮಾಡುತ್ತಾರೆ. ಅದಕ್ಕೆಲ್ಲ ನಾನು ಪ್ರತಿಕ್ರಿಯಿಸುವುದಿಲ್ಲ’ ಎಂದರು.

‘ಪಕ್ಷಕ್ಕೆ ಹೈಕಮಾಂಡ್ ಇದೆ. ಯಾವ ಸಂದರ್ಭದಲ್ಲಿ ಏನು ಮಾಡಬೇಕೆಂದು ಹೈಕಮಾಂಡ್‌ಗೆ ಗೊತ್ತಿದೆ. ಮುಖ್ಯಮಂತ್ರಿಯನ್ನು ಬದಲಾಯಿಸುವ ಹಾಗೂ ಮುಂದುವರಿಸುವ ಪ್ರಸ್ತಾವದ ಬಗ್ಗೆ ನಾವು ಚರ್ಚೆ ಮಾಡಿ ಪ್ರಯೋಜನ ಇಲ್ಲ’ ಎಂದರು.

‘ಗೊಂದಲವನ್ನು ಹೈಕಮಾಂಡ್ ಯಾಕೆ ಬಗೆಹರಿಸುವುದಿಲ್ಲ’ ಎಂಬ ಪ್ರಶ್ನೆಗೆ, ‘ಗೊಂದಲದ ಪ್ರಶ್ನೆಯೇ ಇಲ್ಲ ಅಂದಮೇಲೆ ಆ ಬಗ್ಗೆ ಸ್ಪಷ್ಟನೆ ಯಾಕೆ ಕೊಡುತ್ತಾರೆ. ಬದಲಾವಣೆಯ ಪ್ರಶ್ನೆಯನ್ನು ಯಾರು ಎತ್ತಿದ್ದಾರೆ, ಯಾರು ಕೇಳುತ್ತಿದ್ದಾರೆ’ ಎಂದರು.



ಜಿ.ಪರಮೇಶ್ವರ

‘ಪರಮೇಶ್ವರ ಮುಖ್ಯಮಂತ್ರಿ ಆಗಬೇಕು’ ಎಂಬ ರಾಜಣ್ಣ ಹೇಳಿಕೆಗೆ, ‘ಅವರು ನಮ್ಮ ಜಿಲ್ಲೆಯವರು, ಜೊತೆಯಲ್ಲಿ ಓದಿದ್ದೇವೆ. ಸ್ವಾಭಾವಿಕವಾಗಿ ಅಭಿಮಾನ ಇದ್ದೇ ಇರುತ್ತದೆ. ಅವರ ಹೇಳಿಕೆಯಲ್ಲಿ ನನಗೇನು ತಪ್ಪು ಕಾಣಿಸಿಲ್ಲ’ ಎಂದರು.

ಇತಿಹಾಸ ಬದಲಾವಣೆ ಸಾಧ್ಯವೇ?: ‘ತುಮಕೂರಿನ ಇತಿಹಾಸವನ್ನು ನನ್ನಂಥವನು ಬದಲಾವಣೆ ಮಾಡಲು ಆಗುತ್ತದೆಯೇ? ಅಭಿವೃದ್ಧಿ ದೃಷ್ಟಿಯಿಂದ ತುಮಕೂರು ಜಿಲ್ಲೆಯನ್ನು ‘ಬೆಂಗಳೂರು ಉತ್ತರ’ ಎಂದು ಮಾಡುವಂತೆ ಕೇಳಿದ್ದೇನೆ ಅಷ್ಟೇ’ ಎಂದು ಸ್ಪಷ್ಟಪಡಿಸಿದರು.

ತುಮಕೂರನ್ನು ‘ಬೆಂಗಳೂರು ಉತ್ತರ’ ಮಾಡಬೇಕೆಂಬ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ತುಮಕೂರು ಜಿಲ್ಲೆಯ ಹೆಸರನ್ನು ಬದಲಾವಣೆ ಮಾಡಲು ಆಗುತ್ತದೆಯೇ? ತುಮಕೂರಿಗೆ ಅದರ ಇತಿಹಾಸ ಹಾಗೂ ಅಸ್ಮಿತೆ ಇದೆ. ಬಂಡವಾಳ ಹೂಡಿಕೆ ಸೇರಿದಂತೆ ಇತರೆ ಒಳಿತು ತುಮಕೂರಿಗೆ ಆಗುತ್ತದೆ ಎಂಬುದಷ್ಟೇ ನಮ್ಮ ಉದ್ದೇಶ. ತುಮಕೂರಿನ ಬಗ್ಗೆ ಇತರರಿಗೆ ಎಷ್ಟು ಭಾವನಾತ್ಮಕ ಸಂಬಂಧ ಇದೆಯೊ ನನಗೂ ಅಷ್ಟೇ ಇದೆ’ ಎಂದರು.

ರಾಜ್ಯಸಭೆಗೆ ಡಿ.ವಿ.ಸದಾನಂದ ಗೌಡ: ಬಿಜೆಪಿ ಸಭೆಯಲ್ಲಿ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ವಿಧಾನಸಭೆಯಿಂದ ರಾಜ್ಯಸಭೆಯ ಸ್ಥಾನಗಳಿಗೆ ಮುಂದಿನ ತಿಂಗಳು ನಡೆಯುವ ಚುನಾವಣೆಯಲ್ಲಿ ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದ ಗೌಡ ಅವರನ್ನು ಪರಿಗಣಿಸಬೇಕು ಎಂದು ವರಿಷ್ಠರಿಗೆ ಶಿಫಾರಸು ಮಾಡುವ ಬಗ್ಗೆ ಬಿಜೆಪಿ ಪ್ರಮುಖರ ಸಮಿತಿ ಸಭೆಯಲ್ಲಿ ಚರ್ಚೆ ನಡೆದಿದೆ.

ಪಕ್ಷದ ರಾಷ್ಟ್ರೀಯ ಸಹ ಸಂಘಟನಾ ಕಾರ್ಯದರ್ಶಿ ಶಿವಪ್ರಕಾಶ್, ರಾಜ್ಯ ಉಸ್ತುವಾರಿ ರಾಧಾ ಮೋಹನದಾಸ್ ಅಗರ್‌ವಾಲ್, ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಸಮ್ಮುಖದಲ್ಲಿ ಪ್ರಮುಖರ ಸಭೆ ಗುರುವಾರ ಇಲ್ಲಿ ನಡೆಯಿತು.

ಸದಾನಂದ ಗೌಡ ಅವರು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಾಗಿ, ಮುಖ್ಯಮಂತ್ರಿಯಾಗಿ, ಸಂಸದರಾಗಿ, ಕೇಂದ್ರ ಸಚಿವರಾಗಿ ಕೆಲಸ ಮಾಡಿದ್ದು, 2024ರ ಲೋಕಸಭಾ ಚುನಾವಣೆಯಲ್ಲಿ ಅವರಿಗೆ ಟಿಕೆಟ್ ನೀಡಿರಲಿಲ್ಲ. ಅವರು ಪ್ರತಿನಿಧಿಸುತ್ತಿದ್ದ ಲೋಕಸಭಾ ಕ್ಷೇತ್ರದಿಂದ ಶೋಭಾ ಕರಂದ್ಲಾಜೆ ಅವರನ್ನು ಕಣಕ್ಕೆ ಇಳಿಸಲಾಗಿತ್ತು. ನಂತರ ಅವರಿಗೆ ಯಾವುದೇ ಸ್ಥಾನ ನೀಡಿರಲಿಲ್ಲ. ಈಗ ವಿಧಾನಸಭೆಯಿಂದ ರಾಜ್ಯಸಭೆಗೆ ನಾಲ್ಕು ಸ್ಥಾನಗಳನ್ನು ಆಯ್ಕೆ ಮಾಡಲು ಅವಕಾಶವಿದ್ದು, ಬಿಜೆಪಿಗೆ ಒಂದು ಸ್ಥಾನ ಸಿಗಲಿದೆ. ಆ ಸ್ಥಾನಕ್ಕೆ ಸದಾನಂದ ಗೌಡರನ್ನು ಪರಿಗಣಿಸಬೇಕು ಎಂದು ಹಲವು ನಾಯಕರು ಪ್ರಸ್ತಾಪ ಮಾಡಿದರು.

ಕರ್ನಾಟಕವನ್ನು ಪ್ರತಿನಿಧಿಸುತ್ತಿರುವ ಎಚ್.ಡಿ.ದೇವೇಗೌಡ ಅವರ ಅವಧಿ ಜೂನ್ 25ಕ್ಕೆ ಮುಕ್ತಾಯವಾಗಲಿದೆ. ಅವರು ಈ ಹಿಂದೆ ಕಾಂಗ್ರೆಸ್ ಬೆಂಬಲದೊಂದಿಗೆ ರಾಜ್ಯಸಭೆ ಪ್ರವೇಶಿಸಿದ್ದರು. ಬದಲಾದ ಕಾಲಮಾನದಲ್ಲಿ ದೇವೇಗೌಡರ ನೇತೃತ್ವದ ಜೆಡಿಎಸ್– ಎನ್‌ಡಿಎ ಮೈತ್ರಿಕೂಟದಲ್ಲಿ ಗುರುತಿಸಿಕೊಂಡಿದೆ. ಅವರನ್ನು ಪುನರಾಯ್ಕೆ ಮಾಡುವಷ್ಟು ಸದಸ್ಯ ಬಲ ಜೆಡಿಎಸ್‌ನಲ್ಲಿ ಇಲ್ಲ. ದೇವೇಗೌಡರು ಬಿಜೆಪಿ ಬೆಂಬಲದೊಂದಿಗೆ ಮರು ಆಯ್ಕೆ ಬಯಸಿದ್ದಾರೆ. ಆದರೆ, ಅವರ ಬದಲು ಪಕ್ಷದವರಿಗೆ ಅವಕಾಶ ಕಲ್ಪಿಸಬೇಕೆಂಬ ಚರ್ಚೆ ಬಿಜೆಪಿಯಲ್ಲಿ ನಡೆದಿದೆ.

ವಿಧಾನಪರಿಷತ್ ಸದಸ್ಯತ್ವಕ್ಕೂ ಚರ್ಚೆ: ‘ವಿಧಾನ ಪರಿಷತ್‌ನಲ್ಲಿ ಏಳು ಸ್ಥಾನಗಳು ಖಾಲಿಯಾಗಲಿದ್ದು, ಅದರಲ್ಲಿ ಎರಡು ಸ್ಥಾನಗಳು ಬಿಜೆಪಿಗೆ ಸಿಗಲಿವೆ. ಭಾರತಿಶೆಟ್ಟಿ ಅವರನ್ನು ಪುನರಾಯ್ಕೆ ಮಾಡಲು, ಹೊಸಬರಿಗೆ ಒಂದು ಸ್ಥಾನ ನೀಡುವ ಕುರಿತು ಚರ್ಚೆಗಳು ನಡೆದವು’ ಎಂದು ಪಕ್ಷದ ಮೂಲಗಳು ತಿಳಿಸಿವೆ.

203 ದಿನಗಳಿಂದ ಧರಣಿ; ಹೋರಾಟಗಾರರಲ್ಲಿ ಮೂಡಿದ ಆಶಾಭಾವ

ಮಾಲಿನ್ಯ: 2 ಕಾರ್ಖಾನೆಗಳಿಗೆ ಬೀಗಮುದ್ರೆ

ಪ್ರಜಾವಾಣಿ ವಾರ್ತೆ

ಕೊಪ್ಪಳ: ಪರಿಸರ ಮಾಲಿನ್ಯ ಉಂಟು ಮಾಡಿ ಸ್ಪಾಂಜ್ ಮತ್ತು ಐರನ್ ತಯಾರಿಸುತ್ತಿದ್ದ ತಾಲ್ಲೂಕಿನ ಅಲ್ಲಾನಗರ ಗ್ರಾಮದ ಬಳಿಯ ಹೊಸಪೇಟೆ ಇಸ್ಪಾತ್ ಪ್ರೈವೆಟ್ ಲಿಮಿಟೆಡ್ ಹಾಗೂ ಹಾಲವರ್ತಿ ಗ್ರಾಮದ ಸಮೀಪದ ಪಿ. ಬಾಲಸುಬ್ಬಶೆಟ್ಟಿ ಪವರ್ ಆ್ಯಂಡ್ ಸ್ಟೀಲ್ಸ್ ಕಂಪನಿಗಳಿಗೆ ಗುರುವಾರ ಜಿಲ್ಲಾಡಳಿತ ಬೀಗಮುದ್ರೆ ಹಾಕಿದೆ.

ಈ ಎರಡೂ ಕಾರ್ಖಾನೆಗಳು ವ್ಯಾಪಕವಾಗಿ ಮಾಲಿನ್ಯ ಸೂಸುತ್ತಿದ್ದುದರಿಂದ ಸುತ್ತಮುತ್ತಲಿನ ಗ್ರಾಮಗಳ ಕೃಷಿ ಪರಿಸರ, ಜನರ ಆರೋಗ್ಯ, ನೀರು ಕಲುಷಿತಗೊಂಡಿತ್ತು. ಹೊಸಪೇಟೆ ಇಸ್ಪಾತ್ ಕಂಪನಿ ಹಲವು ತಿಂಗಳುಗಳಿಂದ ಕಾರ್ಯಾಚರಣೆ ಸ್ಥಗಿತಗೊಳಿಸಿತ್ತು.

‘ಜಿಲ್ಲಾ ಕೇಂದ್ರದ ಸಮೀಪದ ಹಿರೇಬಗನಾಳ, ಕಾಸನಖಂಡಿ, ಅಲ್ಲಾನಗರ, ಚಿಕ್ಕಬಗನಾಳ, ಕುಣಿಕೇರಿ, ಕುಣಿಕೇರಿ ತಾಂಡಾ, ಲಾಚನಕೇರಿ, ಕರ್ಕಿಹಳ್ಳಿ, ಮುಂಡರಗಿ ಹೀಗೆ ಅನೇಕ ಗ್ರಾಮಗಳಲ್ಲಿ ಮಾಲಿನ್ಯ ವ್ಯಾಪಕವಾಗಿದ್ದರ ಬಗ್ಗೆ ಹಲವು ದೂರುಗಳು ಬಂದಿದ್ದವು. ಈ ಗ್ರಾಮಗಳ ಜನರಲ್ಲಿ ಅಸ್ತಮಾ ಮತ್ತು ಮಕ್ಕಳಲ್ಲಿ ಉಸಿರಾಟದ ತೊಂದರೆ ವ್ಯಾಪಕವಾಗಿತ್ತು ಎಂದು ತಜ್ಞರು ನೀಡಿದ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಆದ್ದರಿಂದ ಎರಡೂ ಕಾರ್ಖಾನೆಗಳನ್ನು ಬಂದ್ ಮಾಡಿಸಲಾಗಿದೆ’ ಎಂದು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ತಿಳಿಸಿದೆ. ಮಾಲಿನ್ಯ ಮಾಡುತ್ತಿರುವ ಇನ್ನಷ್ಟು ಕಾರ್ಖಾನೆಗಳ ವಿರುದ್ಧವೂ ಕ್ರಮ ಜರುಗಿಸಲಾಗುವುದು ಎಂದು ಮಂಡಳಿ ಹೇಳಿದೆ.

ವರದಿ ಆಧರಿಸಿ ಕ್ರಮ: ಕೊಪ್ಪಳ ತಾಲ್ಲೂಕಿನ ಐದು ಮಾಲಿನ್ಯಕಾರಕ ಕಾರ್ಖಾನೆಗಳಿಗೆ ಬೀಗಮುದ್ರೆ ಹಾಕುವ (ಕ್ಲೋಸರ್) ನೋಟಿಸ್ ಜಾರಿ ಮಾಡಲು ರಾಜ್ಯ ಪರಿಸರ ಮಾಲಿನ್ಯ ಮಂಡಳಿ ಏಪ್ರಿಲ್‌ನಲ್ಲಿ ನಿರ್ಧರಿಸಿತ್ತು. ಅದರಲ್ಲಿ ಈಗ ಎರಡು ಕಾರ್ಖಾನೆಗಳನ್ನು ಬಂದ್ ಮಾಡಿಸಿದೆ. ಇನ್ನುಳಿದ ವನ್ಯ ಸ್ಟೀಲ್ಸ್ ಘಟಕ–1 ಹಾಗೂ 2, ಹಿರೇಕಾಸನಕಂಡಿಯ ಎಚ್‌ಆರ್‌ಜಿ ಅಲ್ಲಾಯ್ಸ್ ಆ್ಯಂಡ್ ಸ್ಟೀಲ್ಸ್ ಪ್ರೈವೆಟ್ ಲಿಮಿಟೆಡ್ ಕಂಪನಿಗಳ ಮೇಲೂ ಕ್ರಮ ಕೈಗೊಳ್ಳುವುದಾಗಿ ಮಂಡಳಿ ತಿಳಿಸಿದೆ.

ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ ಸೂಚನೆಯಂತೆ ಬೆಂಗಳೂರು ಪ್ರಾದೇಶಿಕ ಕಚೇರಿ ಅಧಿಕಾರಿಗಳು 2024ರಲ್ಲಿ ಕಾರ್ಖಾನೆಗಳಿಗೆ ಹಾಗೂ ಸುತ್ತಲಿನ ಗ್ರಾಮಗಳಿಗೆ ಭೇಟಿ ನೀಡಿದ್ದಾಗ ಅಲ್ಲಿನ ಜನರಿಗೆ ಮಾಲಿನ್ಯದಿಂದ ತೊಂದರೆಯಾಗುತ್ತಿರುವುದು ಗೊತ್ತಾಗಿತ್ತು. ಇದರ ಜೊತೆಗೆ ವಿವಿಧ ಸಮಿತಿಗಳು, ತಜ್ಞರು ಹಾಗೂ ಅಧಿಕಾರಿಗಳು ನೀಡಿದ ವರದಿ ಆಧರಿಸಿ ಕ್ರಮ ಕೈಗೊಳ್ಳಲಾಗಿದೆ.

ಕಾರ್ಖಾನೆಗಳ ಮಾಲಿನ್ಯದ ವಿರುದ್ಧ ಕೊಪ್ಪಳ ಜಿಲ್ಲಾ ಬಚಾವೊ ಆಂದೋಲನ ಸಮಿತಿ ಹಾಗೂ ಕೊಪ್ಪಳ ಪರಿಸರ ಹಿತರಕ್ಷಣಾ ವೇದಿಕೆ 203 ದಿನಗಳಿಂದ ಧರಣಿ ನಡೆಸುತ್ತಿದ್ದು, ಸರ್ಕಾರದ ಈ ಕ್ರಮದಿಂದಾಗಿ ಹೋರಾಟಗಾರರಲ್ಲಿ ಆಶಾಭಾವ ಮೂಡಿದೆ.



ಕೊಪ್ಪಳ ತಾಲ್ಲೂಕಿನ ಪಿ. ಬಾಲಸುಬ್ಬಶೆಟ್ಟಿ ಪವರ್ ಅಂಡ್ ಸ್ಟೀಲ್ಸ್ ಕಂಪನಿಯನ್ನು ಗುರುವಾರ ಅಧಿಕಾರಿಗಳು ಬಂದ್ ಮಾಡಿಸಿದರು

> ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಆದೇಶದ ಮೇರೆಗೆ 2 ಕಾರ್ಖಾನೆಗಳನ್ನು ಬಂದ್ ಮಾಡಿಸಲಾಗಿದೆ. ಉಳಿದ ಕಾರ್ಖಾನೆಗಳ ಬಗ್ಗೆ ಮಂಡಳಿ ತೀರ್ಮಾನ ಕೈಗೊಂಡ ಬಳಿಕ ಕ್ರಮ ವಹಿಸಲಾಗುವುದು
> **ಡಾ. ಸುರೇಶ ಇಟ್ನಾಳ,** ಜಿಲ್ಲಾಧಿಕಾರಿ

> 2 ಕಾರ್ಖಾನೆಗಳನ್ನು ಬಂದ್ ಮಾಡಿದ್ದು ಸ್ವಾಗತಾರ್ಹ. ಮಾಲಿನ್ಯ ಮಾಡುವ ಉಳಿದ ಕಾರ್ಖಾನೆಗಳ ವಿರುದ್ಧವೂ ತುರ್ತು ಕ್ರಮವಾಗಬೇಕು. ಈ ಕ್ರಮ ತೋರಿಕೆಗೆ ಆಗಬಾರದು
> **ಅಲ್ಲಮಪ್ರಭು ಬೆಟ್ಟದೂರು,** ಜಿಲ್ಲಾ ಬಚಾವೊ ಆಂದೋಲನ ಸಮಿತಿ ಪ್ರಧಾನ ಸಂಚಾಲಕ

ವಿಧಿವಿಜ್ಞಾನ ತಂಡದ ಜೊತೆ ಮತ್ತೆ ಕಾಡಿಗೆ ತೆರಳಿದ ಎಸ್‌ಐಟಿ

ತಲೆಬುರುಡೆ ಹೊರತೆಗೆದ ದೃಶ್ಯ ಮರುಸೃಷ್ಟಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಧರ್ಮಸ್ಥಳ ಗ್ರಾಮದ ವ್ಯಾಪ್ತಿಯಲ್ಲಿ ಅಪರಾಧ ಪ್ರಕರಣಗಳ ಮೃತದೇಹಗಳನ್ನು ಹೂತುಹಾಕಲಾಗಿದೆ ಎಂದು ಆರೋಪಿಸಲಾದ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ), ವಿಧಿವಿಜ್ಞಾನ ತಂಡದ ಅಧಿಕಾರಿಗಳ ಜೊತೆಗೆ ಧರ್ಮಸ್ಥಳದ ನೇತ್ರಾವತಿ ನದಿ ಪಕ್ಕದ ಬಂಗ್ಲೆಗುಡ್ಡೆ ಕಾಡಿನಲ್ಲಿ ಗುರುವಾರ ತನಿಖಾ ಪ್ರಕ್ರಿಯೆ ನಡೆಸಿತು.

ಈ ಪ್ರಕರಣದ ಸಾಕ್ಷಿ ದೂರುದಾರ ಚಿನ್ನ ಸಿ.ಎನ್. ಅಲಿಯಾಸ್ ಚಿನ್ನಯ್ಯ ನ್ಯಾಯಾಲಯಕ್ಕೆ ಒಪ್ಪಿಸಿದ್ದ ತಲೆ ಬುರುಡೆಯನ್ನು ಕಾಡಿನಿಂದ ಹೊರತೆಗೆದ ಸಂದರ್ಭದಲ್ಲಿ ಏನೆಲ್ಲ ನಡೆಯಿತು ಎಂಬ ದೃಶ್ಯಗಳನ್ನು ಅದೇ ಸ್ಥಳದಲ್ಲಿ ಮರುಸೃಷ್ಟಿ ನಡೆಸಲಾಗಿದೆ ಎಂದು ಎಸ್‌ಐಟಿ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

‘ಸಾಕ್ಷಿ ದೂರುದಾರ ನ್ಯಾಯಾಲಯಕ್ಕೆ ತಂದೊಪ್ಪಿಸಿದ್ದ ತಲೆ ಬುರುಡೆಯನ್ನು ಕಾಡಿನೊಳಗೆ ಅಗೆಯುತ್ತಿದ್ದ ದೃಶ್ಯ ಆಗ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು. ಆ ತಲೆ ಬುರುಡೆಯನ್ನು ನಾನು ನೆಲದಿಂದ ಹೊರತೆಗೆದಿಲ್ಲ ಎಂದು ಚಿನ್ನಯ್ಯ ವಿಚಾರಣೆ ವೇಳೆ ಎಸ್‌ಐಟಿ ಮುಂದೆ ಒಪ್ಪಿಕೊಂಡಿದ್ದ. ತಲೆಬುರುಡೆ ತೆಗೆಯುವ ದೃಶ್ಯವನ್ನು ಚಿತ್ರೀಕರಿಸಿದ್ದ ಪ್ರದೀಪ್ ಕುಲಾಲ್ ಎಂಬಾತ ಈ ಬಗ್ಗೆ ಎಸ್‌ಐಟಿ ಎದುರು ವಿಚಾರಣೆಗೆ ಹಾಜರಾಗಿ ಹೇಳಿಕೆ ನೀಡಿದ್ದ. ಎಸ್‌ಐಟಿ ಹಾಗೂ ವಿಧಿವಿಜ್ಞಾನ ತಂಡದ ಅಧಿಕಾರಿಗಳು ಪ್ರದೀಪ್‌ನನ್ನು ತಮ್ಮೊಂದಿಗೆ ಕಾಡಿನೊಳಗೆ ಕರೆದೊಯ್ದರು’ ಎಂದು ಮೂಲಗಳು ತಿಳಿಸಿವೆ.

ತಲೆಬುರುಡೆ ಹೊರತೆಗೆದಾಗಿನ ದೃಶ್ಯ ಹೇಗಿತ್ತು ಎಂಬುದನ್ನು ಖಾತರಿಪಡಿಸಿಕೊಳ್ಳಬೇಕಿದೆ. ವಿಧಿವಿಜ್ಞಾನ ತಂಡದವರು ಆ ಸನ್ನಿವೇಶದ ಮರು ಸೃಷ್ಟಿ ಮಾಡಬೇಕಿದೆ. ತನಿಖೆ ವೇಳೆ ಅನೇಕ ಹೊಸ ವಿಚಾರಗಳು ಪತ್ತೆಯಾಗುತ್ತವೆ. ಅವುಗಳನ್ನು ಮತ್ತೆ ಖಚಿತಪಡಿಸಿಕೊಳ್ಳಬೇಕಿರುತ್ತದೆ. ತಲೆಬುರುಡೆ ಪತ್ತೆಯಾದ ಸ್ಥಳಕ್ಕೆ ಸಂಬಂಧಿಸಿದ ಹೆಚ್ಚುವರಿ ದಾಖಲೆಗಳ ಅಗತ್ಯವಿರುತ್ತದೆ. ಈ ಕಾರಣಕ್ಕಾಗಿ ಈ ಪ್ರಕ್ರಿಯೆ ನಡೆಸಲಾಯಿತು ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.



ಧರ್ಮಸ್ಥಳ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡದ ಅಧಿಕಾರಿಗಳು ವಿಧಿ ವಿಜ್ಞಾನ ತಂಡದ ಅಧಿಕಾರಿಗಳ ಜೊತೆಗೆ ನೇತ್ರಾವತಿ ಸ್ನಾನಘಟ್ಟದ ಪಕ್ಕದ ಕಾಡಿನಲ್ಲಿ ಗುರುವಾರ ತೆರಳಿ ತನಿಖಾ ಪ್ರಕ್ರಿಯೆ ನಡೆಸಿದರು

prajavani.net prajavani | ಶುಕ್ರವಾರ, ಮೇ 22, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 141 | ಪುಟ 18 | www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ವಾರ್ಟರ್‌ಗೆ ಅಶ್ಮಿತಾ

ಭಾರತದ ಆಟಗಾರ್ತಿ ಅಶ್ಮಿತಾ ಚಾಲಿಹಾ ಅವರು ಮಲೇಷ್ಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯ ಮಹಿಳಾ ಸಿಂಗಲ್ಸ್‌ನಲ್ಲಿ ಆತಿಥೇಯ ದೇಶದ ಗೋಹ್ ಜಿನ್ ವೀ ಅವರನ್ನು ಸೋಲಿಸಿ ಎಂಟರ ಘಟ್ಟ ಪ್ರವೇಶಿಸಿದರು



ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 75,183 | ನಿಫ್ಟಿ 23,654 | $/₹ 96.36 | ಚಿನ್ನ (Std. 10g) ₹1,64,720 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,83,250 (ಬೆಂಗಳೂರು)

ಮತ ಹಕ್ಕು ರಕ್ಷಣೆ: ಸರ್ಕಾರ ಚಿತ್ತ


ಪಾರದರ್ಶಕ ಎಸ್‌ಐಆರ್: ಸುಪ್ರೀಂ ಕೋರ್ಟ್ ಮೆಟ್ಟಿಲು ಹತ್ತಲು ಚಿಂತನೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಜ್ಯದಲ್ಲಿ ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ಶುರುವಾಗಿದ್ದು, ಮತದಾರರ ಹಕ್ಕು ರಕ್ಷಣೆಗಾಗಿ ಸುಪ್ರೀಂ ಕೋರ್ಟ್ ಮೆಟ್ಟಿಲು ಹತ್ತುವುದೂ ಸೇರಿ ಹಲವು ಕ್ರಮಗಳನ್ನು ಕೈಗೊಳ್ಳಲು ರಾಜ್ಯ ಸರ್ಕಾರ ಮುಂದಾಗಿದೆ.

ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಎಸ್‌ಐಆರ್‌ನ ಸಾಧಕ–ಬಾಧಕಗಳ ಬಗ್ಗೆ ಸುದೀರ್ಘ ಚರ್ಚೆ ನಡೆದಿದೆ.



ಎಚ್‌.ಕೆ.ಪಾಟೀಲ

ಸಭೆ ಬಳಿಕ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಮತ್ತು ಸಂಸದೀಯ ಸಚಿವ ಎಚ್‌.ಕೆ.ಪಾಟೀಲ ಅವರು, ಸಂಪುಟ ಸಭೆಯಲ್ಲಿ ವ್ಯಕ್ತವಾದ ಅಭಿಪ್ರಾಯಗಳನ್ನು ವಿವರಿಸಿದರು.

‘ಎಸ್‌ಐಆರ್ ಕುರಿತ 10–12 ಅಂಶಗಳ ಬಗ್ಗೆ ಚರ್ಚೆ ಮಾಡಿದ್ದೇವೆ. ಈ ಬಗ್ಗೆ ಮುಖ್ಯಮಂತ್ರಿಯವರ ನೇತೃತ್ವದಲ್ಲಿ ಚರ್ಚೆ ಮುಂದುವರಿಸಲಾಗುವುದು. ಇದೇ 24 ಅಥವಾ 25ರ ಒಳಗೆ ಅಂತಿಮ ತೀರ್ಮಾನ ತೆಗೆದುಕೊಳ್ಳುತ್ತೇವೆ’ ಎಂದು ಅವರು ಹೇಳಿದರು.

‘ರಾಜ್ಯದಲ್ಲಿ ಯಾವುದೇ ಪ್ರಜೆಯ ಮತದಾನದ ಹಕ್ಕನ್ನು ಉದ್ದೇಶ ಪೂರ್ವಕವಾಗಿ ಕಸಿಯುವ ಅಥವಾ ದಮನ ಮಾಡುವ ಪ್ರಕ್ರಿಯೆ ನಡೆದರೆ, ಸರ್ಕಾರ ಸುಮ್ಮನಿರುವುದಿಲ್ಲ. ಅವರ ಮತದಾನದ ಹಕ್ಕನ್ನು ಉಳಿಸಿಕೊಡುವಲ್ಲಿ ಸರ್ವ ಪ್ರಯತ್ನ ಮಾಡಲಿದೆ. ಚುನಾವಣಾ ಆಯೋಗದ ವಿರುದ್ಧ ನ್ಯಾಯಾಲಯಕ್ಕೆ ಹೋಗುವುದರ ವಿರುದ್ಧ ರಕ್ಷಣೆ ಇದ್ದರೂ ಯಾವ ವಿಚಾರ ಮುಂದಿಟ್ಟುಕೊಂಡು ನ್ಯಾಯಾಲಯದ ಬಾಗಿಲು ತಟ್ಟಬಹುದು ಎಂಬ ಬಗ್ಗೆ ಚರ್ಚೆ ಮಾಡಿದ್ದೇವೆ’ ಎಂದರು.

‘ಮುಖ್ಯವಾಗಿ, ಚುನಾವಣಾ ಆಯೋಗ ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಮಾಡಿದ ಬಳಿಕ ಪಟ್ಟಿಯನ್ನು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಬೇಕು ಎಂಬ ನಿರ್ದೇಶವನ್ನು ಆಯೋಗಕ್ಕೆ ನೀಡಬೇಕು ಎಂದು ಮನವಿ ಮಾಡುವ ಬಗ್ಗೆಯೂ ಸಮಾಲೋಚನೆ ನಡೆಸಿದ್ದೇವೆ’ ಎಂದು ಹೇಳಿದರು.

‘ಎಸ್‌ಐಆರ್‌ನಿಂದ ದೇಶದಲ್ಲಿ ಹಲವಾರು ಅವಘಡಗಳು ಜರುಗಿವೆ. ಪಶ್ಚಿಮ ಬಂಗಾಳದಲ್ಲಿ 27 ಲಕ್ಷ ಮತದಾರರ ಮತದಾನದ ಹಕ್ಕು ಹೋಗಿದೆ. ತಮಿಳುನಾಡು, ಬಿಹಾರ ಮತ್ತಿತರ ಕಡೆಗಳಲ್ಲಿ ಹಲವು ಮತದಾರರ ಹಕ್ಕು ದಮನವಾಗಿದೆ. ಈ ಬಗ್ಗೆ ಹಲವು ರಾಜ್ಯಗಳಲ್ಲಿ ಆಕ್ಷೇಪ ವ್ಯಕ್ತವಾಗಿದೆ. ಆದ್ದರಿಂದ ರಾಜ್ಯದಲ್ಲಿ ಎಸ್‌ಐಆರ್ ಪ್ರಕ್ರಿಯೆ ಪಾರದರ್ಶಕವಾಗಿರಬೇಕು’ ಎಂದು ತಿಳಿಸಿದರು.

▶ 6

ಏನೇನು ಚರ್ಚೆ?

- ಮತದಾನದ ಹಕ್ಕನ್ನು ಉದ್ದೇಶ ಪೂರ್ವಕವಾಗಿ ಕಸಿಯುವ ಪ್ರಕ್ರಿಯೆ ನಡೆದರೆ ಸರ್ಕಾರ ಸುಮ್ಮನಿರುವುದಿಲ್ಲ ಎಂಬ ಎಚ್ಚರಿಕೆ ಕೊಡಲು ತೀರ್ಮಾನ
- ಪಾರದರ್ಶಕವಾಗಿ ನಡೆಸುವಂತೆ ಚುನಾವಣಾ ಆಯೋಗಕ್ಕೆ ಸಂದೇಶ ರವಾನೆ
- ಎಸ್‌ಐಆರ್ ಬಳಿಕ ಪಟ್ಟಿಯನ್ನು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಬೇಕು ಎಂದು ಆಯೋಗಕ್ಕೆ ನಿರ್ದೇಶನ ನೀಡುವಂತೆ ನ್ಯಾಯಾಲಯದ ಮೊರೆಗೆ ಚಿಂತನೆ
- ಯಾವ ಅಂಶಗಳನ್ನು ಮುಂದಿಟ್ಟು ಸುಪ್ರೀಂ ಕೋರ್ಟ್ ಮುಂದೆ ಹೋಗಬೇಕೆಂಬ ಬಗ್ಗೆ ಸಮಾಲೋಚನೆ
- ಹಲವು ರಾಜ್ಯಗಳಲ್ಲಿ ನಡೆದ ಅವಘಡಗಳು ನಡೆಯದಂತೆ ಎಚ್ಚರಿಕೆ ವಹಿಸುವ ಕುರಿತು ಚರ್ಚೆ

ಎಸ್‌ಐಆರ್‌ಗೆ ಆಯೋಗ ಸಿದ್ಧತೆ

ರಾಜ್ಯದಲ್ಲಿ ಎಸ್‌ಐಆರ್‌ಗೆ ವೇಳಾಪಟ್ಟಿ ನಿಗದಿಯಾಗಿದ್ದು, ಇದೇ ಜೂನ್ 30ರಿಂದ ಮತಗಟ್ಟೆ ಅಧಿಕಾರಿಗಳು ಮನೆ–ಮನೆಗೆ ಭೇಟಿ ನೀಡಲಿದ್ದಾರೆ. ಆಗಸ್ಟ್ 5ರಂದು ಕರಡು ಮತದಾರರ ಪಟ್ಟಿ ಮತ್ತು ಅಕ್ಟೋಬರ್ 5ರಂದು ಅಂತಿಮ ಪಟ್ಟಿ ಪ್ರಕಟವಾಗಲಿದೆ.

ಈ ಉದ್ದೇಶಕ್ಕಾಗಿ, 59,050 ಮತಗಟ್ಟೆ ಅಧಿಕಾರಿಗಳನ್ನು ಈಗಾಗಲೇ ನಿಯೋಜನೆ ಮಾಡಲಾಗಿದೆ. ಎಸ್‌ಐಆರ್ ಪ್ರಕ್ರಿಯೆಯಲ್ಲಿ ಭಾಗಿಯಾಗುವ ಎಲ್ಲ ಹಂತದ ಅಧಿಕಾರಿಗಳಿಗೆ ತರಬೇತಿ ನೀಡಲಾಗುತ್ತಿದೆ. ಎಸ್‌ಐಆರ್ ಭಾಗವಾಗಿ ರಾಜಕೀಯ ಪಕ್ಷಗಳು, ಸ್ವಯಂ ಸೇವಾ ಸಂಸ್ಥೆಗಳ ಜತೆಗೆ ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿಯು ಸಮಾಲೋಚನೆ ನಡೆಸುತ್ತಿದೆ.

ಎಸ್‌ಐಆರ್‌ಗೆ ಪೂರ್ವತಯಾರಿ ಭಾಗವಾಗಿ 2025ರ ಮತದಾರರ ಪಟ್ಟಿಯಲ್ಲಿ ಇರುವ ಮತದಾರರ ವಿವರಗಳನ್ನು 2002ರ ಮತದಾರರ ಪಟ್ಟಿಯಲ್ಲಿನ ವಿವರಕ್ಕೆ ಹೋಲಿಸಿ (ಮ್ಯಾಪಿಂಗ್) ನೋಡಲಾಗಿದೆ. 5.50 ಕೋಟಿ ಮತದಾರರ ಪೈಕಿ 4.83 ಕೋಟಿ ಮತದಾರರ ವಿವರ ಮ್ಯಾಪ್ ಆಗಿದೆ.



ಹಾವೇರಿ ತಾಲ್ಲೂಕಿನ ಕರ್ಜಗಿಯ ರೈತ ಸಂಪರ್ಕ ಕೇಂದ್ರದ ಎದುರು ಬೀಜ ಖರೀದಿಗಾಗಿ ಗುರುವಾರ ಸೇರಿದ್ದ ರೈತರು
– ಪ್ರಜಾವಾಣಿ ಚಿತ್ರ: ಮಾಲತೇಶ ಇಚ್ಚಂಗಿ

ಬಿತ್ತನೆ ಬೀಜಕ್ಕೆ ರೈತರ ಪರದಾಟ

ಪೊಲೀಸ್ ಭದ್ರತೆಯಲ್ಲಿ ಬೀಜ ವಿತರಣೆ • ಪ್ರಕ್ರಿಯೆ ವಿಳಂಬ

• ಸಂತೋಷ ಜಿಗಳಿಕೊಪ್ಪ

ಹಾವೇರಿ: ಜಿಲ್ಲೆಯಾದ್ಯಂತ ಮುಂಗಾರು ಪೂರ್ವ ಉತ್ತಮ ಮಳೆಯಾಗಿದ್ದು, ಬಿತ್ತನೆ ಬೀಜಕ್ಕೆ ಭಾರಿ ಬೇಡಿಕೆ ವ್ಯಕ್ತವಾಗಿದೆ. ಬೀಜ ಖರೀದಿಗಾಗಿ ರೈತ ಸಂಪರ್ಕ ಕೇಂದ್ರದ (ಆರ್‌ಎಸ್‌ಕೆ) ಎದುರು ರೈತರು ಹಗಲು–ರಾತ್ರಿ ಸರದಿಯಲ್ಲಿ ನಿಲ್ಲತೊಡಗಿದ್ದಾರೆ. ಕೌಂಟರ್‌ಗಳ ಸಂಖ್ಯೆ ಕಡಿಮೆಯಿದ್ದು, ಆನ್‌ಲೈನ್ ನೋಂದಣಿ ಪ್ರಕ್ರಿಯೆ ವಿಳಂಬ ಆಗುತ್ತಿದೆ. ಇದರ ಪರಿಣಾಮ ಸಕಾಲಕ್ಕೆ ಬೀಜ ಸಿಗದೇ, ರೈತರು ಸಂಕಷ್ಟಕ್ಕೆ ಒಳಗಾಗಿದ್ದಾರೆ.

ಜಿಲ್ಲೆಯ ಹಾವೇರಿ, ಕರ್ಜಗಿ, ಬಂಕಾಪುರ, ರಟ್ಟೀಹಳ್ಳಿ ರೈತ ಸಂಪರ್ಕ ಕೇಂದ್ರದಲ್ಲಿ ರೈತರ ದಟ್ಟಣೆ ಹೆಚ್ಚುತ್ತಿದೆ. ಬುಧವಾರ ರಾತ್ರಿಯೂ ಕೇಂದ್ರದ ಎದುರು ಮಲಗಿ ರೈತರು ಸರದಿಯಲ್ಲಿದ್ದು, ಗುರುವಾರ ಬೆಳಿಗ್ಗೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿದ್ದರು. ರೈತ ಮಹಿಳೆಯರೂ ಇದ್ದರು. ನೂಕುನುಗ್ಗಲು ಉಂಟಾಗಿದ್ದರಿಂದ, ಅವರನ್ನು ನಿಯಂತ್ರಿಸಲು ಪೊಲೀಸರು ಸ್ಥಳಕ್ಕೆ ಬರಬೇಕಾಯಿತು. ನಂತರ, ಪೊಲೀಸರ ಭದ್ರತೆಯಲ್ಲಿ ಬೀಜ ವಿತರಿಸಲಾಯಿತು.

▶ 7

ಕೇಂದ್ರಗಳಲ್ಲಿ ಮೂಲಸೌಲಭ್ಯ ಕೊರತೆ

ಜಿಲ್ಲೆಯ ಬಹುತೇಕ ರೈತ ಸಂಪರ್ಕ ಕೇಂದ್ರಗಳಲ್ಲಿ ಸಬ್ಸಿಡಿ ದರದಲ್ಲಿ ಬಿತ್ತನೆ ಬೀಜ ಮಾರಲಾಗುತ್ತಿದೆ. ಆದರೆ, ಖರೀದಿಗೆ ಬರುವ ರೈತರಿಗೆ ನೆರಳು, ಕುಡಿಯುವ ನೀರು, ಕೂರಲು ಆಸನ ವ್ಯವಸ್ಥೆಯಿಲ್ಲ.

‘ರಾತ್ರಿಯೇ ಚಾದರ (ಬೆಡ್‌ಶೀಟ್) ಸಮೇತ ಕೇಂದ್ರಕ್ಕೆ ಬಂದು ಮಲಗುತ್ತೇವೆ. ನಿತ್ಯದ ಕರ್ಮಗಳನ್ನು ಬಯಲಿನಲ್ಲೇ ಮುಗಿಸಿ, ಕೇಂದ್ರದ ಎದುರು ಬಿಸಿಲು, ಮಳೆಯೆನ್ನದೇ ನಿಲ್ಲುತ್ತೇವೆ. ಕುಡಿಯುವ ನೀರಿನ ವ್ಯವಸ್ಥೆಯಿಲ್ಲ. ಸರದಿ ತಪ್ಪುವ ಭಯದಲ್ಲಿ, ನೀರು ಕುಡಿಯಲು ಸಹ ಹೋಗುತ್ತಿಲ್ಲ. ರೈತರ ಹಿತದೃಷ್ಟಿಯಿಂದ ಮೂಲಸೌಲಭ್ಯ ಕಲ್ಪಿಸಿ’ ಎಂದು ರೈತರು ಆಗ್ರಹಿಸಿದರು.

ಉತ್ತಮ ಮಳೆಯಾಗಿದ್ದು, ಬಿತ್ತನೆಗೆ ತಯಾರಿ ಮಾಡಿಕೊಂಡಿದ್ದೇವೆ. ಬೀಜಕ್ಕೆ ಹೆಚ್ಚು ರೈತರು ಬರುತ್ತಾರೆ ಎಂಬ ಮಾಹಿತಿ ಇದ್ದರೂ ಹೆಚ್ಚುವರಿ ಕೌಂಟರ್ ತೆರೆದಿಲ್ಲ. ಬೀಜಕ್ಕಾಗಿ ದಿನಗಟ್ಟಲೇ ಕಾಯುವಂತಾಗಿದೆ

ಮಹೇಶ ಹಿರೇಮಠ, ರೈತ, ಕೋಣನತಂಬಿಗಿ

ಜಿಲ್ಲೆಯಲ್ಲಿ ಅಗತ್ಯವಿದ್ದಷ್ಟು ಬೀಜಗಳ ದಾಸ್ತಾನಿದೆ. ಆತಂಕ ಪಡಬೇಕಿಲ್ಲ. ರೈತರು ಏಕಾಏಕಿ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿರುವ ಕಾರಣ ಆನ್‌ಲೈನ್ ನೋಂದಣಿ ತಡವಾಗುತ್ತಿದೆ. ಎಲ್ಲರಿಗೂ ಬೀಜಗಳು ಸಿಗಲಿವೆ

ಮಲ್ಲಿಕಾರ್ಜುನ, ಜಂಟಿ ನಿರ್ದೇಶಕ, ಕೃಷಿ ಇಲಾಖೆ

ಎಂಟು ದಿನದಿಂದ ಬೀಜಕ್ಕಾಗಿ ಅಲೆದಾಡುತ್ತಿದ್ದೇವೆ. ಗುರುವಾರದಿಂದ ಬೀಜ ನೀಡುತ್ತಿದ್ದರೂ ಅದು ಸಮರ್ಪಕವಾಗಿಲ್ಲ. ಬೀಜ ಸಿಗುವುದು ತಡವಾದರೆ, ನಾವು ಬಿತ್ತನೆ ಮಾಡುವುದು ಯಾವಾಗ?

ಬೀರಪ್ಪ, ರೈತ, ಕರ್ಜಗಿ

ಚಿನಕುರುಳಿ ಪ್ರಕಾಶ್ ಶೆಟ್ಟಿ



ಎಂಜಿನಿಯರಿಂಗ್‌ಗೆ ಪ್ರತ್ಯೇಕ ಕೌನ್ಸೆಲಿಂಗ್


ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆಯನ್ನು ರದ್ದು ಮಾಡಿರುವುದರಿಂದ, ಕರ್ನಾಟಕದಲ್ಲಿ ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿ ಶಿಕ್ಷಣ ಕೋರ್ಸ್‌ಗಳ ಸೀಟು ಹಂಚಿಕೆಯಲ್ಲಿ ವಿಳಂಬವಾಗುವುದನ್ನು ತಪ್ಪಿಸಲು 2026–27ನೇ ಸಾಲಿಗೆ ಪ್ರತ್ಯೇಕ ಕೌನ್ಸೆಲಿಂಗ್ ನಡೆಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್, ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ ಪಾಟೀಲ ನೇತೃತ್ವದಲ್ಲಿ ಗುರುವಾರ ನಡೆದ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಅಧಿಕಾರಿಗಳು, ವಿವಿಧ ಶಿಕ್ಷಣ ಸಂಸ್ಥೆಗಳ ಪ್ರತಿನಿಧಿಗಳ ಸಭೆಯಲ್ಲಿ ತೆಗೆದುಕೊಂಡ ನಿರ್ಧಾರವನ್ನು ರಾಜ್ಯ ಸರ್ಕಾರ ಅಧಿಕೃತವಾಗಿ ಪ್ರಕಟಿಸಿದೆ.

ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯು (ಎನ್‌ಟಿಎ) ಅಖಿಲ ಭಾರತಮಟ್ಟದಲ್ಲಿ ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆಯನ್ನು (ಯುಜಿ–ನೀಟ್) ನಡೆಸುತ್ತದೆ.

▶ 6



ಪಿಯು ಪರೀಕ್ಷೆ–2: ಶೇ 45.65 ಫಲಿತಾಂಶ

ಬೆಂಗಳೂರು: ದ್ವಿತೀಯ ಪಿಯು ಪರೀಕ್ಷೆ–2 ಬರೆದಿದ್ದ 80,535 ವಿದ್ಯಾರ್ಥಿಗಳಲ್ಲಿ 36,764 (ಶೇ 45.65) ಮಂದಿ ಉತ್ತೀರ್ಣರಾಗಿದ್ದು, 2025–26ನೇ ಸಾಲಿನ ಒಟ್ಟಾರೆ ಫಲಿತಾಂಶ ಶೇ 92.25ಕ್ಕೆ ಏರಿಕೆಯಾಗಿದೆ.

ಕಳೆದ ವರ್ಷ ಮೂರೂ ಪರೀಕ್ಷೆಗಳ ಒಟ್ಟಾರೆ ಫಲಿತಾಂಶಕ್ಕೆ ಹೋಲಿಸಿದರೆ ಈ ಬಾರಿ ಶೇ 7ರಷ್ಟು ಹೆಚ್ಚಳವಾಗಿದೆ. ಪರೀಕ್ಷೆ–1ರಲ್ಲಿ ಶೇ 86.48 ಫಲಿತಾಂಶ ಬಂದಿತ್ತು.

ಕಲಾ ವಿಭಾಗದಿಂದ 33,451, ವಾಣಿಜ್ಯ ವಿಭಾಗದಿಂದ 23,615 ಮತ್ತು ವಿಜ್ಞಾನ ವಿಭಾಗದಿಂದ 23,469 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಆದರೆ, ಉತ್ತೀರ್ಣ ಪ್ರಮಾಣದಲ್ಲಿ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳೇ ಮೇಲುಗೈ (ಶೇ 50.79) ಸಾಧಿಸಿದ್ದಾರೆ. ಕಲಾ ವಿಭಾಗದಲ್ಲಿ ಶೇ 43.72 ಹಾಗೂ ವಾಣಿಜ್ಯ ವಿಭಾಗದಲ್ಲಿ ಶೇ 43.27 ಫಲಿತಾಂಶ ಬಂದಿದೆ. ಎರಡೂ ಪರೀಕ್ಷೆಗಳ ಒಟ್ಟಾರೆ ಫಲಿತಾಂಶದಲ್ಲಿ ವಿಜ್ಞಾನ ವಿಭಾಗ ಶೇ 96, ವಾಣಿಜ್ಯ ಶೇ 92.84 ಮತ್ತು ಕಲಾ ವಿಭಾಗದ ವಿದ್ಯಾರ್ಥಿಗಳು ಶೇ 83.31 ಫಲಿತಾಂಶ ಪಡೆದಿದ್ದಾರೆ.

▶ 6

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಮಳೆಯಾಗುವ ಸಾಧ್ಯತೆ ಇದೆ

‘ಮಹಾರಾಣಿ ಕ್ಲಸ್ಟರ್ ವಿ.ವಿ ವಿಲೀನ ಬೇಡ’

ವಿ.ವಿ ಸ್ಥಾನಮಾನ ಹಿಂಪಡೆಯದಂತೆ ಸಾಂಸ್ಕೃತಿಕ ಕ್ಷೇತ್ರದ ಪ್ರಮುಖರ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯವನ್ನು ಇತರ ವಿಶ್ವವಿದ್ಯಾಲಯಗಳ ಜತೆಗೆ ವಿಲೀನಗೊಳಿಸುವ ಅಥವಾ ವಿಶ್ವವಿದ್ಯಾಲಯ ಸ್ಥಾನಮಾನ ಹಿಂಪಡೆಯುವ ತೀರ್ಮಾನ ಕೈಗೊಳ್ಳಬಾರದು’ ಎಂದು ಸಾಹಿತ್ಯ ಹಾಗೂ ಸಾಂಸ್ಕೃತಿಕ ಕ್ಷೇತ್ರದ ಪ್ರಮುಖರು ರಾಜ್ಯ ಸರ್ಕಾರಕ್ಕೆ ಆಗ್ರಹಿಸಿದ್ದಾರೆ.

ಈ ಬಗ್ಗೆ ಕೆ. ಮರುಳಸಿದ್ದಪ್ಪ, ಜಿ. ರಾಮಕೃಷ್ಣ, ಎಸ್.ಜಿ. ಸಿದ್ಧರಾಮಯ್ಯ, ವಿಜಯಾ, ಜಾಣಗೆರೆ ವೆಂಕಟರಾಮಯ್ಯ, ಕಾ.ತ. ಚಿಕ್ಕಣ್ಣ, ಓ.ಎಲ್. ನಾಗಭೂಷಣಸ್ವಾಮಿ, ಎಚ್.ದಂಡಪ್ಪ, ಡಾ.ವಸುಂಧರಾ ಭೂಪತಿ, ಆರ್. ಪೂರ್ಣಿಮಾ, ಕೆ.ವಿ. ನಾಗರಾಜಮೂರ್ತಿ, ಎಲ್. ಹನುಮಂತಯ್ಯ, ಫಯಾಜ್ ಖಾನ್, ಆರ್. ಸುನಂದಮ್ಮ, ಬಿ.ಟಿ. ಲಲಿತಾನಾಯಕ್, ಸಿ. ಬಸವಲಿಂಗಯ್ಯ ಹಾಗೂ ವಿಮಲಾ ಕೆ.ಎಸ್. ಅವರು ಜಂಟಿಯಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದ್ದಾರೆ.

‘ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯವು ದಕ್ಷಿಣ ಭಾರತದ ಮೊಟ್ಟ ಮೊದಲ ಮಹಿಳಾ ಕ್ಲಸ್ಟರ್ ವಿಶ್ವವಿದ್ಯಾಲಯವಾಗಿದೆ. ಶತಮಾನದ ಹಿಂದೆಯೇ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ದಾರ್ಶನಿಕ ಕಾಣ್ಕೆಯ ಫಲವಾಗಿ ಆರಂಭವಾದ ಈ ಸಂಸ್ಥೆ, ಕರ್ನಾಟಕದ ಪ್ರತಿಷ್ಠಿತ ಕಾಲೇಜುಗಳಲ್ಲಿ ಒಂದಾಗಿದೆ. ಕೆಲ ವಿಶ್ವವಿದ್ಯಾಲಯಗಳನ್ನು ಉಳಿಸಿಕೊಳ್ಳುವ ಅಥವಾ ಪುನರ್ ಪರಿಶೀಲಿಸುವ ಬಗ್ಗೆ ತೀರ್ಮಾನ ತೆಗೆದುಕೊಳ್ಳಲು ರಾಜ್ಯ ಸರ್ಕಾರವು ಸಂಪುಟ ಉಪಸಮಿತಿಯೊಂದನ್ನು ರಚಿಸಿದೆ. ಆ ಪಟ್ಟಿಯಲ್ಲಿ ಮಹಾರಾಣಿ ಕ್ಲಸ್ಟರ್ ವಿ.ವಿಯೂ ಇದೆ’ ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

‘ಈ ವಿ.ವಿಯನ್ನು ಮುಚ್ಚುವುದು ರಾಜ್ಯ ಸರ್ಕಾರವೇ ಎತ್ತಿ ಹಿಡಿಯುತ್ತಿರುವ, ಬೆಂಬಲಿಸುತ್ತಿರುವ ಮಹಿಳಾ ಸಬಲೀಕರಣ ಯೋಜನೆಗೆ ಸ್ಪಷ್ಟ ಹಿನ್ನಡೆಯಾಗುತ್ತದೆ. ಸ್ತ್ರೀಪರ ಧೋರಣೆಗಳ ಪ್ರಣಾಳಿಕೆಯಿಂದಲೇ ಅಧಿಕಾರಕ್ಕೆ ಬಂದ ಈ ಸರ್ಕಾರ, ಈಗ ಮಹಿಳಾ ವಿ.ವಿಯ ಅಸ್ತಿತ್ವವನ್ನು ಇತರ ವಿವಿಗಳ ಜತೆಗೆ ವಿಲೀನಗೊಳಿಸುವ ಅಥವಾ ವಿ.ವಿ ಸ್ಥಾನಮಾನ ಹಿಂಪಡೆಯುವ ತೀರ್ಮಾನವು ಮಹಿಳಾ ಹಾಗೂ ಸಾಮಾಜಿಕ ನ್ಯಾಯದ ವಿರುದ್ಧದ ನಡೆಯಾಗುತ್ತದೆ’ ಎಂದು ಹೇಳಿದ್ದಾರೆ.


‘ಸ್ನಾತಕೋತ್ತರ ಶಿಕ್ಷಣ ಮುಗಿಸಿದ ನಂತರ ಸಂಶೋಧನೆ ಹಾಗೂ ಇತರ ಉನ್ನತ ಶಿಕ್ಷಣದ ಅವಕಾಶಗಳನ್ನು ಅತಿ ಕಡಿಮೆ ವೆಚ್ಚದಲ್ಲಿ ಪಡೆಯಲು ಸಾಧ್ಯವಾಗುವುದು ಈ ವಿ.ವಿಯಲ್ಲಿ ಮಾತ್ರ. ಮಹಿಳೆಯರಿಗೇ ವಿಶೇಷವಾದ ಅನೇಕ ಹೊಸ ಕೋರ್ಸ್‌ಗಳನ್ನು ತೆಗೆಯುವ ಅವಕಾಶಗಳು ಇಲ್ಲಿದ್ದು, ಹೆಣ್ಣು ಮಕ್ಕಳಿಗೆ ಉದ್ಯೋಗಾವಕಾಶ ಒದಗಿಸಿಕೊಡುವ ತರಬೇತಿ ಕೇಂದ್ರಗಳನ್ನು ಇಲ್ಲಿ ಪ್ರಾರಂಭಿಸಬಹುದು’ ಎಂದು ಅಭಿಪ್ರಾಯಪಟ್ಟಿದ್ದಾರೆ.

‘ಇಂದಿರಾ ಹೆಸರು ನಾಮಕರಣ ಮಾಡಿ’

‘ವಿಜಯಪುರದ ಅಕ್ಕಮಹಾದೇವಿ ವಿ.ವಿ ಉತ್ತರ ಕರ್ನಾಟಕ ಭಾಗದ 12 ಜಿಲ್ಲೆಗಳ ಎಲ್ಲ ಮಹಿಳಾ ಕಾಲೇಜುಗಳ ಸಂಯೋಜನೆಯನ್ನು ಪಡೆದುಕೊಂಡಿದೆ. ಅದೇ ರೀತಿ ಮಹಾರಾಣಿ ಕ್ಲಸ್ಟರ್ ವಿ.ವಿಯನ್ನು ಕರ್ನಾಟಕದ ದಕ್ಷಿಣ ಭಾಗದ ಎಲ್ಲ ಮಹಿಳಾ ಕಾಲೇಜುಗಳ ಸಂಯೋಜನೆಯೊಂದಿಗೆ ಬೃಹತ್ ವಿ.ವಿಯಾಗಿ ರೂಪುಗೊಳಿಸಬಹುದಾಗಿದೆ. ಹೀಗೆ ಹೊಸದಾಗಿ ರಚನೆಯಾಗುವ ವಿ.ವಿಗೆ ಇಂದಿರಾಗಾಂಧಿ ಮಹಿಳಾ ವಿ.ವಿ ಎಂದು ನಾಮಕರಣ ಮಾಡಬಹುದಾಗಿದೆ’ ಎಂದು ಸಾಂಸ್ಕೃತಿಕ ಕ್ಷೇತ್ರದ ಪ್ರಮುಖರು ಸಲಹೆ ನೀಡಿದ್ದಾರೆ.

‘ಕೆಪಿಎಸ್: ಮರುಚಿಂತನೆಯಾಗಲಿ’

ಪ್ರಜಾವಾಣಿ ವಾರ್ತೆ



ವಿಚಾರ ಸಂಕಿರಣದಲ್ಲಿ ಬರಗೂರು ರಾಮಚಂದ್ರಪ್ಪ ಹಾಗೂ ಬಿ. ರಮೇಶ್ ಸಮಾಲೋಚನೆಯಲ್ಲಿ ತೊಡಗಿದ್ದರು. ತಾಂಡವಗೌಡ ಟಿ.ಎನ್, ರಾಜಪ್ಪ ದಳವಾಯಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಬೆಂಗಳೂರು: ಕರ್ನಾಟಕ ಪಬ್ಲಿಕ್ ಸ್ಕೂಲ್‌ಗಳ (ಕೆಪಿಎಸ್) ಸ್ವರೂಪದ ಬಗ್ಗೆ ಸರ್ಕಾರ ಮರು ಚಿಂತನೆ ನಡೆಸಬೇಕು. ಪೂರ್ವ ಪ್ರಾಥಮಿಕ, ಕಿರಿಯ ಪ್ರಾಥಮಿಕ ಶಾಲೆಗಳನ್ನು ಕೆಪಿಎಸ್‌ನಿಂದ ಬೇರ್ಪಡಿಸಿ ಉಳಿಸಬೇಕು ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಹೇಳಿದರು.

ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ವಿಭಾಗ ಗುರುವಾರ ಹಮ್ಮಿಕೊಂಡಿದ್ದ ‘ಅನ್ನದ ಭಾಷೆಯಾಗಿ ಕನ್ನಡ’ ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕೆಪಿಎಸ್‌ನಲ್ಲಿ 1,200 ಮಕ್ಕಳಿಗೆ ಕಲಿಯಲು ಅವಕಾಶವಿದೆ ಎಂದು ಸಚಿವರು ಹೇಳಿದ್ದಾರೆ. ಅಷ್ಟು ವಿದ್ಯಾರ್ಥಿಗಳು ಒಂದೇ ಕಡೆ ಇರುತ್ತಾರೆ ಎಂದರೆ ಸುತ್ತಮುತ್ತಲಿನ ಶಾಲೆಗಳ ಪರಿಸ್ಥಿತಿ ಏನಾಗಲಿದೆ ಎಂಬುದನ್ನು ಯೋಚಿಸಬೇಕು. ಒಂದು ಊರಿನಲ್ಲಿ ಶಾಲೆ ಇದೆ ಅಂದರೆ, ಅದು ಅಕ್ಷರ ಕಲಿಸಲು ಸೀಮಿತವಾಗಿರುವುದಿಲ್ಲ. ಸ್ವಾತಂತ್ರ್ಯೋತ್ಸವ, ಗಾಂಧಿ ಜಯಂತಿ, ಸೇರಿದಂತೆ ಎಲ್ಲ ರಾಷ್ಟ್ರೀಯ ಹಬ್ಬ, ನಾಡಹಬ್ಬ, ರಾಷ್ಟ್ರೀಯ ದಿನಗಳನ್ನು ಆಚರಿಸುವ ಕೇಂದ್ರವಾಗಿರುತ್ತದೆ. ಶಾಲೆ ಇಲ್ಲಾಂದ್ರೆ ಯಾರೂ ಇವುಗಳನ್ನು ನೆನಪು ಮಾಡಿಕೊಳ್ಳುವುದಿಲ್ಲ. ಅದಕ್ಕಾಗಿ ಕಿರಿಯ ಪ್ರಾಥಮಿಕ ಶಾಲೆಗಳು, ಪೂರ್ವ ಪ್ರಾಥಮಿಕ ಶಾಲೆಗಳು ಪ್ರತ್ಯೇಕವಾಗಿಯೇ ಉಳಿಯಬೇಕು ಎಂದು ಪ್ರತಿಪಾದಿಸಿದರು.

ನಿವೃತ್ತ ಪ್ರಾಧ್ಯಾಪಕ ರಾಜಪ್ಪ ದಳವಾಯಿ ಮಾತನಾಡಿ, ‘ರಾಜಕಾರಣಿಗಳು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವುದರಿಂದ ಜನಪರವಾಗಿ ನಿಯಮಗಳು ಬರುವುದಿಲ್ಲ. ತಮ್ಮ ಹಣ ಒಂದು ಕಡೆ ನಿಲ್ಲಬಾರದು, ಚಲನೆಯಲ್ಲಿ ಇರಬೇಕು ಎಂಬ ಕಾರಣಕ್ಕೆ ಶಿಕ್ಷಣ ಕ್ಷೇತ್ರದಲ್ಲಿ ವ್ಯವಹಾರ ಮಾಡುತ್ತಿದ್ದಾರೆ’ ಎಂದು ಟೀಕಿಸಿದರು.

ವಿಶ್ವವಿದ್ಯಾಲಯದ ಕುಲಪತಿ ರಮೇಶ್ ಬಿ. ಅಧ್ಯಕ್ಷತೆ ವಹಿಸಿದ್ದರು. ಕನ್ನಡ ವಿಭಾಗದ ಮುಖ್ಯಸ್ಥ ತಾಂಡವಗೌಡ ಟಿ.ಎನ್. ಉಪಸ್ಥಿತರಿದ್ದರು.

‘ಕನ್ನಡ ಮಾಧ್ಯಮ: ಉದ್ಯೋಗ ಸಿಗಬೇಕು’

ಆಡಳಿತದಲ್ಲಿ ಕನ್ನಡ ಇರಬೇಕು ಎಂಬ ಒತ್ತಾಯ ಇದೆ. ತಮಿಳುನಾಡು ಸಹಿತ ಬೇರೆ ರಾಜ್ಯಗಳಲ್ಲಿ ಆಡಳಿತದಲ್ಲಿ ಇಂಗ್ಲಿಷ್ ಜಾಸ್ತಿ ಬಳಕೆ ಇದೆ. ಅದಕ್ಕೆ ಹೋಲಿಸಿದರೆ ಕರ್ನಾಟಕದಲ್ಲಿ ಕನ್ನಡ ಬಳಕೆ ಚೆನ್ನಾಗಿದೆ. ಶಿಕ್ಷಣದಲ್ಲಿ ಮತ್ತು ಉದ್ಯೋಗದಲ್ಲಿ ಕನ್ನಡ ಇರಬೇಕು. ಆದರೆ, ಶಿಕ್ಷಣ ಮತ್ತು ಉದ್ಯೋಗದಲ್ಲಿಯೇ ಸಮಸ್ಯೆ ಆಗಿದೆ. ಕನ್ನಡ ಮಾಧ್ಯಮದಲ್ಲಿ ಓದಿದವರಿಗೆ ಉದ್ಯೋಗ ಸಿಗುವಂತಾಗಬೇಕು. ಸರ್ಕಾರಿ ಮಾತ್ರವಲ್ಲ, ಖಾಸಗಿ ವಲಯದಲ್ಲಿಯೂ ಕನ್ನಡ ಮಾಧ್ಯಮದವರಿಗೆ ಉದ್ಯೋಗ ಸಿಗಬೇಕು ಎಂದು ಬರಗೂರು ರಾಮಚಂದ್ರಪ್ಪ ಆಗ್ರಹಿಸಿದರು.

ಕಾಸಾಗ್ರ್ಯಾಂಡ್‌ನಿಂದ 'ಮೂನ್‌ಡ್ಯಾನ್ಸ್ ವಸತಿ ಸಮುಚ್ಚಯ' ಲೋಕಾರ್ಪಣೆ



ಬೆಂಗಳೂರು: ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ದಿನೇದಿನೆ ಹೆಚ್ಚುತ್ತಿರುವ ಜನಸಂಖ್ಯೆ, ವಾಹನ ದಟ್ಟಣೆ ಹಾಗೂ ಕಿರಿದಾಗುತ್ತಿರುವ ವಸತಿ ಪ್ರದೇಶಗಳಿಂದಾಗಿ ಜನಸಾಮಾನ್ಯರು ಉಸಿರುಗಟ್ಟುವ ವಾತಾವರಣದಲ್ಲಿ ಬದುಕುವಂತಾಗಿದೆ. ನಗರದ ಜನಸಂದಣಿಯ ನಡುವೆ ಹಾಸುಹೊಕ್ಕಾಗಿರುವ ‘ಸ್ವಲ್ಪ ಅಡ್ಜಸ್ಟ್ ಮಾಡಿ’ ಎನ್ನುವ ಅಭ್ಯಾಸದ ಸಂಸ್ಕೃತಿಗೆ, ಕಿರಿದಾದ ಅಪಾರ್ಟ್‌ಮೆಂಟ್‌ಗಳಿಗೆ ಹಾಗೂ ಹಸಿರೇ ಇಲ್ಲದ ಕಾಂಕ್ರೀಟ್ ಕಾಡುಗಳಿಗೆ ಮುಕ್ತಿ ನೀಡಲು ಭಾರತದಲ್ಲೇ ಅತ್ಯಂತ ಮುಂಚೂಣಿಯಲ್ಲಿನ ರಿಯಲ್ ಎಸ್ಟೇಟ್ ಕಂಪನಿಗಳಲ್ಲಿ ಒಂದಾದ ‘ಕಾಸಾಗ್ರ್ಯಾಂಡ್ಮಂ’ ದಾಗಿದೆ. ಬೆಂಗಳೂರಿನ ಉದ್ಯಾನ ನಗರಿ ಎನ್ನುವ ಹಿಂದಿನ ಆಹ್ಲಾದಕರ, ಮುಕ್ತ ಹಾಗೂ ಪ್ರಶಾಂತ ಜೀವನಶೈಲಿಯನ್ನು (ನಮ್ಮೂರ ರಿದಮ್) ಮರಳಿ ತರುವ ಉದ್ದೇಶದಿಂದ ಸಂಸ್ಥೆಯು ತನ್ನ ಅತ್ಯಂತ ಮಹತ್ವಾಕಾಂಕ್ಷೆಯ ಪ್ರೀಮಿಯಂ ಉನ್ನತ ದರ್ಜೆಯ ವಸತಿ ಯೋಜನೆ ‘ಕಾಸಾಗ್ರ್ಯಾಂಡ್ ಮೂನ್‌ಡ್ಯಾನ್ಸ್’ ಅನ್ನು ಇಂದು ಅಧಿಕೃತವಾಗಿ ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಮೈಸೂರು ರಸ್ತೆ ಸಮೀಪದ ಕುಂಬಳಗೋಡು ಪ್ರದೇಶದಲ್ಲಿ, ರಾಜರಾಜೇಶ್ವರಿ ನಗರದಿಂದ ಕೇವಲ 15 ನಿಮಿಷಗಳ ಪ್ರಯಾಣದ ದೂರದಲ್ಲಿ ಈ ಬೃಹತ್ ವಸತಿ ಸಮುಚ್ಚಯ ತಲೆಎತ್ತುತ್ತಿದೆ. ಒಟ್ಟು 8.6 ಎಕರೆ ವಿಸ್ತಾರವಾದ ಭೂಪ್ರದೇಶದಲ್ಲಿ ಕೇವಲ ನಾಲ್ಕೇ ಅಂತಸ್ತುಗಳ (B + G + 4) ಕಡಿಮೆ ಎತ್ತರದ ಅಪಾರ್ಟ್‌ಮೆಂಟ್ ಶೈಲಿಯಲ್ಲಿ ಈ ಪ್ರಾಜೆಕ್ಟ್ ವಿನ್ಯಾಸಗೊಳಿಸಲಾಗಿದೆ. ಈ ಪ್ರಾಜೆಕ್ಟ್‌ನಲ್ಲಿ ಒಟ್ಟು 504 ಅತ್ಯಾಧುನಿಕ ಮನೆಗಳಿರಲಿದ್ದು, 2 ಮತ್ತು 3 ಬಿಎಚ್‌ಕೆ ವ್ಯವಸ್ಥೆಯೊಂದಿಗೆ ನಿರ್ಮಿಸಲಾಗುತ್ತಿದೆ.

ಹಸಿರು, ಪ್ರಶಾಂತತೆಗೆ ಆದ್ಯತೆ: ‘ಕಾಸಾಗ್ರ್ಯಾಂಡ್ ಮೂನ್‌ಡ್ಯಾನ್ಸ್’ ಯೋಜನೆಯ ಪ್ರಮುಖ ಆಕರ್ಷಣೆಯೆಂದರೆ ಇಲ್ಲಿ ಕಲ್ಪಿಸಲಾಗಿರುವ ಮುಕ್ತ ಪ್ರದೇಶ. ಇಡೀ 8.6 ಎಕರೆ ಜಾಗದ ಪೈಕಿ ಸುಮಾರು 4.5 ಎಕರೆ ಪ್ರದೇಶವನ್ನು ಕೇವಲ ಮುಕ್ತ ಹಸಿರು ವಾತಾವರಣ, ಉದ್ಯಾನ ಕೇಂದ್ರಿತ ಅಂಶಕ್ಕೆ ಮೀಸಲಿಡಲಾಗಿದೆ. ಸಮುಚ್ಚಯದ ಮಧ್ಯಭಾಗದಲ್ಲಿ ಒಟ್ಟು 71,500 ಚದರ ಅಡಿ (ಸುಮಾರು 1.64 ಎಕರೆ) ವಿಸ್ತೀರ್ಣದಲ್ಲಿ 3 ವಿಭಿನ್ನ ವಿನ್ಯಾಸದ ಆಕರ್ಷಕ ಥೀಂ ಹೊಂದಿದ ಪ್ರದೇಶಗಳನ್ನು ನಿರ್ಮಿಸಲಾಗುತ್ತಿದೆ.



ಇದು ನಿವಾಸಿಗಳಿಗೆ ಮುಂಜಾನೆ ಹಾಗೂ ಸಂಜೆಯ ಆಹ್ಲಾದಕರ ನಡಿಗೆಗೆ ಮತ್ತು ವಿಶ್ರಾಂತಿಗೆ ಅತ್ಯುತ್ತಮ ತಾಣವಾಗಲಿದೆ. ಮೊದಲ ಭಾಗವಾಗಿ ಮಕ್ಕಳು ಮತ್ತು ಹಿರಿಯ ನಾಗರಿಕರ ಸುರಕ್ಷತೆ ಹಾಗೂ ಅನುಕೂಲಕ್ಕೆ ತಕ್ಕಂತೆ ವಿನ್ಯಾಸಗೊಳಿಸಲಾಗಿದೆ. ವಾಹನ ಸಂಚಾರ ಮುಕ್ತ ಸುರಕ್ಷಿತ ವಲಯಗಳು, ಮಕ್ಕಳ ಆಟದ ಮೈದಾನಗಳು ಮತ್ತು ಹಿರಿಯರು ಕುಳಿತು ಹರಟೆ ಹೊಡೆಯಲು ಪ್ರತ್ಯೇಕ ಜಾಗಗಳನ್ನು ಕಲ್ಪಿಸಲಾಗಿದೆ. ಇದರೊಂದಿಗೆ, ಆಧುನಿಕ ನಗರ ಜೀವನಕ್ಕೆ ಸರಿಹೊಂದುವಂತೆ ಪ್ರತಿಯೊಂದು ವಯೋಮಾನದವರಿಗೂ ಒಪ್ಪುವ 65ಕ್ಕೂ ಹೆಚ್ಚು ಪ್ರೀಮಿಯಂ ಒಳಾಂಗಣ ಮತ್ತು ಹೊರಾಂಗಣ ಸೌಲಭ್ಯಗಳನ್ನು ಇಲ್ಲಿ ನೀಡಲಾಗುತ್ತಿದೆ. ನಿವಾಸಿಗಳ ಮನರಂಜನೆ ಮತ್ತು ಎಲ್ಲರೂ ಕೂಡಿ ಸಂಭ್ರಮಿಸಲು 20,300 ಚದರ ಅಡಿಯ ಬೃಹತ್ ಬಹುಅಂತಸ್ತಿನ ಕ್ಲಬ್‌ಹೌಸ್ ಅನ್ನು ನಿರ್ಮಿಸಲಾಗುತ್ತಿದ್ದು, ಇದು ಬೆಂಗಳೂರಿನಲ್ಲೇ ಮೊದಲ ಬಾರಿಗೆ ಮುಕ್ತ ಟೆರೇಸ್ ಶೈಲಿಯನ್ನು ಹೊಂದಿರಲಿದೆ. ಜತೆಗೆ, ಬಿಡುವಿನ ವೇಳೆಯಲ್ಲಿ ವಿಶ್ರಾಂತಿ ಪಡೆಯಲು ಬರೋಬ್ಬರಿ 7,800 ಚದರ ಅಡಿ ವಿಸ್ತೀರ್ಣದ ಭವ್ಯವಾದ ಈಜುಕೊಳವನ್ನು ವಿನ್ಯಾಸಗೊಳಿಸಲಾಗಿದೆ. ನಿವಾಸಿಗಳ ಆರೋಗ್ಯ ಸುರಕ್ಷತೆಗೆ ಅತ್ಯಾಧುನಿಕ ಜಿಮ್ನಾಷಿಯಂ, ಯೋಗ ಮತ್ತು ಧ್ಯಾನ ಕೇಂದ್ರಗಳು, ವಾಕಿಂಗ್ ಮತ್ತು ಜಾಗಿಂಗ್ ಟ್ರ್ಯಾಕ್‌ಗಳು ಹಾಗೂ ಕ್ರೀಡಾ ಪ್ರೇಮಿಗಳಿಗಾಗಿ ವಿವಿಧ ಕ್ರೀಡಾ ಮೈದಾನಗಳನ್ನು ಅಳವಡಿಸಲಾಗಿದೆ.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಸುಸಜ್ಜಿತ ಕನೆಕ್ಟಿವಿಟಿಯೇ ಆಕರ್ಷಣೆ!

‘ಮೂನ್‌ಡಾನ್ಸ್’ ಯೋಜನೆಯ ಪ್ರಮುಖ ಆಕರ್ಷಣೆಯೆಂದರೆ ಬೆಂಗಳೂರಿನ ಪ್ರಮುಖ ವಲಯಗಳಿಗೆ ಕನೆಕ್ಟಿವಿಟಿ. ಮೈಸೂರು ರಸ್ತೆ ಕಾರಿಡಾರ್‌ನಲ್ಲಿ ನೆಲೆಸಿರುವ ಈ ಯೋಜನೆಗೆ ಸಾರಿಗೆ ಸಂಪರ್ಕ ಅತ್ಯಂತ ಸುಲಭ ಮತ್ತು ವೇಗವಾಗಿದೆ. ಪಶ್ಚಿಮ ಬೆಂಗಳೂರಿನ ಪ್ರಮುಖ ಕೈಗಾರಿಕಾ ವಲಯಗಳು ಹಾಗೂ ಗ್ಲೋಬಲ್ ವಿಲೇಜ್ ಟೆಕ್ ಪಾರ್ಕ್ ಮತ್ತು ಇತರ ಐಟಿ ತಾಣಗಳಿಗೆ ಇದು ಅತ್ಯಂತ ಹತ್ತಿರದಲ್ಲಿದೆ. ಬೆಂಗಳೂರು ನಮ್ಮ ಮೆಟ್ರೋ ಮತ್ತು ನೈಸ್ ರಸ್ತೆ ಸಂಪರ್ಕ ಇರುವುದರಿಂದ ನಗರದ ಎಲೆಕ್ಟ್ರಾನಿಕ್ ಸಿಟಿ, ಬನ್ನೇರುಘಟ್ಟ ರಸ್ತೆ, ತುಮಕೂರು ರಸ್ತೆ ಹಾಗೂ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೂ ಸುಲಭವಾಗಿ ಸಂಚರಿಸಬಹುದು. ಜತೆಗೆ, ಈ ಯೋಜನೆ ರಾಜರಾಜೇಶ್ವರಿ ನಗರ, ಕೆಂಗೇರಿ ಮುಂತಾದ ಪ್ರಮುಖ ಜನವಸತಿ ಪ್ರದೇಶಗಳು ಕೇವಲ 15 ನಿಮಿಷಗಳ ಅಂತರದಲ್ಲಿವೆ. ಈ ಇಡೀ ಯೋಜನೆಯು ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದಿಂದ (ಕೆ-ರೇರಾ) ಸಂಪೂರ್ಣವಾಗಿ ಅನುಮೋದನೆ **(ರೇರಾ ನಂಬರ್: PRM/KA/RERA/1251/310/PR/200526/008667) ಪಡೆದುಕೊಂಡಿದೆ.**

ಲ್ಯಾಂಡಿಂಗ್ ವೇಳೆ ಅವಘಡ: ತಪ್ಪಿದ ದುರಂತ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ (ಬೆಂ.ಗ್ರಾಮಾಂತರ): ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ ಗುರುವಾರ ಬೆಳಿಗ್ಗೆ ವಿಮಾನ ಇಳಿಯುವಾಗ ಹಿಂಭಾಗ ಆಕಸ್ಮಿಕವಾಗಿ ನೆಲಕ್ಕೆ ತಾಗಿದೆ. ಆದರೆ, ಪೈಲಟ್ ತಕ್ಷಣ ವಿಮಾನವನ್ನು ಮೇಲಕ್ಕೆ ಹಾರಿಸಿದ್ದರಿಂದ ಅವಘಡ ತಪ್ಪಿದೆ.

ದೆಹಲಿಯಿಂದ ಹೊರಟ ಏರ್ ಇಂಡಿಯಾ ವಿಮಾನ(ಎಐ2651) ಗುರುವಾರ ಬೆಳಿಗ್ಗೆ 10.55ಕ್ಕೆ ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ ಇಳಿಯುವಾಗ ಹಿಂಭಾಗ ನೆಲಕ್ಕೆ ತಾಗಿದೆ(ಟೇಲ್ ಸ್ಟ್ರೈಕ್). ತಕ್ಷಣ ಎಚ್ಚೆತ್ತ ಪೈಲಟ್ ವಿಮಾನವನ್ನು ಮತ್ತೆ ಮೇಲಕ್ಕೆ ಹಾರಿಸಿದ್ದಾರೆ. ಸ್ವಲ್ಪ ಹೊತ್ತು ವಿಮಾನ ನಿಲ್ದಾಣದ ಸುತ್ತಮುತ್ತ ಆಗಸದಲ್ಲಿ ಹಾರಾಟ ನಡೆಸಿದ ಬಳಿಕ ಸುರಕ್ಷಿತವಾಗಿ ಕೆಳಗೆ ಇಳಿಸಲಾಯಿತು.

‘ಪ್ರಯಾಣಿಕರಿಗೆ ಉಂಟಾದ ತೊಂದರೆಗೆ ವಿಷಾದ ವ್ಯಕ್ತಪಡಿಸುತ್ತೇವೆ. ಈ ಘಟನೆಯ ಬಳಿಕ ತಾಂತ್ರಿಕ ಪರಿಶೀಲನೆಗಾಗಿ ವಿಮಾನವನ್ನು ಸಂಚಾರದಿಂದ ತಾತ್ಕಾಲಿಕವಾಗಿ ಹೊರಗಿಡಲಾಗಿದೆ. ನಾಗರಿಕ ವಿಮಾನಯಾನ ನಿಯಮಾವಳಿಗಳ ಪ್ರಕಾರ ಸಂಬಂಧಿತ ಅಧಿಕಾರಿಗಳ ಸಮನ್ವಯದಲ್ಲಿ ತನಿಖೆ ನಡೆಸಲಾಗುವುದು’ ಎಂದು ಎಂದು ಏರ್ ಇಂಡಿಯಾ ಸಂಸ್ಥೆಯ ವಕ್ತಾರರು ತಿಳಿಸಿದ್ದಾರೆ. ‘ಬೆಂಗಳೂರಿನಿಂದ ದೆಹಲಿಗೆ ತೆರಳಬೇಕಿದ್ದ AI2652 ವಿಮಾನ ಸಂಚಾರ ರದ್ದುಗೊಳಿಸಲಾಗಿದೆ. ಪ್ರಯಾಣಿಕರು ಮತ್ತು ಸಿಬ್ಬಂದಿಯ ಸುರಕ್ಷತೆ ನಮ್ಮ ಮೊದಲ ಆದ್ಯತೆ. ಪ್ರಯಾಣಿಕರಿಗೆ ಅಗತ್ಯ ಸಹಾಯ ಒದಗಿಸಲಾಗುತ್ತಿದೆ. ಪರ್ಯಾಯ ವ್ಯವಸ್ಥೆ ಕಲ್ಪಿಸಲಾಗುವುದು’ ಎಂದು ತಿಳಿಸಿದ್ದಾರೆ.

ವಿಮಾನದ ಎಂಜಿನ್‌ನಲ್ಲಿ ಬೆಂಕಿ

ನವದೆಹಲಿ (ಪಿಟಿಐ): ಬೆಂಗಳೂರಿನಿಂದ ನವದೆಹಲಿಗೆ ಹೊರಟಿದ್ದ ಏರ್ ಇಂಡಿಯಾ ವಿಮಾನದ ಎಂಜಿನ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದ್ದರಿಂದ ವಿಮಾನವು ದೆಹಲಿ ನಿಲ್ದಾಣದಲ್ಲಿ ತುರ್ತು ಭೂಸ್ಪರ್ಶ ಮಾಡಿದೆ ಎಂದು ಮೂಲಗಳು ತಿಳಿಸಿವೆ.

‘ವಿಮಾನವನ್ನು ಸುರಕ್ಷಿತವಾಗಿ ಇಳಿಸಲಾಗಿದ್ದು, ಎಲ್ಲ ಪ್ರಯಾಣಿಕರು ಮತ್ತು ಸಿಬ್ಬಂದಿ ಸುರಕ್ಷಿತವಾಗಿದ್ದಾರೆ. ಘಟನೆ ಬಗ್ಗೆ ತನಿಖೆ ಆರಂಭಿಸಲಾಗಿದ್ದು, ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಲಾಗುತ್ತಿದೆ’ ಎಂದು ವಿಮಾನಯಾನ ಸಂಸ್ಥೆ ತಿಳಿಸಿದೆ. ಸುಮಾರು 160 ಪ್ರಯಾಣಿಕರಿದ್ದ ವಿಮಾನವು ರಾತ್ರಿ 9.30ರ ವೇಳೆಗೆ ಲ್ಯಾಂಡ್ ಆಗಿದೆ.

ಸರಸ್ವತಿ, ಸದಾಶಿವಯ್ಯಗೆ ಪ್ರಶಸ್ತಿ



ಸದಾಶಿವಯ್ಯ



ದು. ಸರಸ್ವತಿ

ಬೆಂಗಳೂರು: ಕನ್ನಡ ಸಂಘರ್ಷ ಸಮಿತಿ ನೀಡುವ 2026ನೇ ಸಾಲಿನ ‘ಡಾ. ಅನುಪಮಾ ನಿರಂಜನ ಪ್ರಶಸ್ತಿ’ಗೆ ಸಾಮಾಜಿಕ ಕಾರ್ಯಕರ್ತೆ ದು.ಸರಸ್ವತಿ ಹಾಗೂ ‘ಡಾ.ಕೋ.ವೆಂ.ರಾ. ಕನ್ನಡ ಪರಿಚಾರಕ ಪ್ರಶಸ್ತಿ’ಗೆ ಕನ್ನಡ ಕಾರ್ಯಕರ್ತ ಆರ್. ಸದಾಶಿವಯ್ಯ ಜರಗನಹಳ್ಳಿ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ತಲಾ ₹5 ಸಾವಿರ ನಗದು, ಪ್ರಶಸ್ತಿ ಪತ್ರ ಹಾಗೂ ಫಲಕ ಒಳಗೊಂಡಿದೆ. ಜೂನ್ 14ರಂದು ಕನ್ನಡ ಸಾಹಿತ್ಯ ಪರಿಷತ್ತಿನ ಕುವೆಂಪು ಸಭಾಂಗಣದಲ್ಲಿ ಜರುಗಲಿರುವ ಅನುಪಮಾ ನಿರಂಜನ ಹಾಗೂ ಕೋ.ವೆಂ.ರಾಮಕೃಷ್ಣೇಗೌಡ ಅವರ ಜನ್ಮದಿನದ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ ಅವರು ಕಾರ್ಯಕ್ರಮ ಉದ್ಘಾಟಿಸಿ, ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಕರ್ನಾಟಕ ಲೇಖಕಿಯರ ಸಂಘದ ಮಾಜಿ ಅಧ್ಯಕ್ಷೆ ಎಚ್.ಎಲ್. ಪುಷ್ಪ ಅವರು ಅಧ್ಯಕ್ಷತೆ ವಹಿಸಲಿದ್ದಾರೆ. ಪತ್ರಕರ್ತ ರಾಮಣ್ಣ ಎಚ್. ಕೋಡಿಹೊಸಹಳ್ಳಿ ಅವರು ಅತಿಥಿಯಾಗಿ ಭಾಗವಹಿಸಲಿದ್ದಾರೆ ಎಂದು ಸಮಿತಿ ಅಧ್ಯಕ್ಷ ಎ.ಎಸ್.ನಾಗರಾಜಸ್ವಾಮಿ ತಿಳಿಸಿದ್ದಾರೆ.

ಕೃಷಿ ನವೋದ್ಯಮ ಸಮಾವೇಶ 26ಕ್ಕೆ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಅಗ್ರಿ ಇನೊವೇಶನ್ ಸೆಂಟರ್‌ನಿಂದ ಮೇ 26ರಂದು ‘ಕೃಷಿ ನವೋದ್ಯಮಗಳ ಸಮಾವೇಶವನ್ನು ಜಿಕೆವಿಕೆ ಆವರಣದ ಬೆಂಗಳೂರು ಉತ್ತರ ಬ್ಲಾಕ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಸಮಾವೇಶವನ್ನು ಉದ್ಘಾಟಿಸಲಿದ್ದಾರೆ’ ಎಂದು ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ ತಿಳಿಸಿದ್ದಾರೆ.

‘ಸುಸ್ಥಿರ ಕೃಷಿ ಉದ್ಯಮ, ಮಾರುಕಟ್ಟೆ ಅವಕಾಶಗಳ ಕುರಿತ ಗೋಷ್ಠಿ, ನೆಟ್‌ವರ್ಕಿಂಗ್, ಸಹಭಾಗಿತ್ವ, ತಂತ್ರಜ್ಞಾನ ಪ್ರದರ್ಶನ ಹಾಗೂ ಪ್ರಮುಖ ನವೋದ್ಯಮಗಳು, ಹೂಡಿಕೆದಾರರು, ಕೈಗಾರಿಕೆಗಳ ಭಾಗೀದಾರರೊಂದಿಗೆ ಸಂವಾದ ನಡೆಸಲು ಅವಕಾಶ ಒದಗಿಸಲಾಗುತ್ತದೆ. ಸಮಾವೇಶಕ್ಕೆ ಉಚಿತ ಪ್ರವೇಶವಿದ್ದು, ನೋಂದಣಿ ಕಡ್ಡಾಯವಾಗಿದೆ. 97390 55445, 95381 64928 ಅಥವಾ 84313 32653 ಸಂಪರ್ಕಿಸಿ ನೋಂದಣಿ ಮಾಡಿಕೊಳ್ಳಬಹುದು.

ಅಮೆರಿಕ ಪ್ರಜೆಗಳಿಗೆ ವಂಚನೆ

ಹೊರ ರಾಜ್ಯದ ಇಬ್ಬರ ಬಂಧನ, ನಾಲ್ಕು ಖಾತೆಗಳಲ್ಲಿ ₹40 ಕೋಟಿ ವರ್ಗ

ಪ್ರಜಾವಾಣಿ ವಾರ್ತೆ


ಆಕಾಶ್


ಪ್ರಶಾಂತ್

ಅಪರಾಧ ಸುದ್ದಿ

ಬೆಂಗಳೂರು: ಅಮೆರಿಕದ ಪ್ರಸಿದ್ಧ ಲೆಕ್ಕಪತ್ರ ಸಂಸ್ಥೆ 'ಎಂ.ಎಸ್. ಕ್ವಿಕ್ ಬುಕ್' ಹೆಸರಿನಲ್ಲಿ ನಗರದ ಆಗ್ನೇಯ ವಿಭಾಗದಲ್ಲಿ ತೆರೆಯಲಾಗಿದ್ದ ನಾಲ್ಕು ನಕಲಿ ಕಾಲ್ ಸೆಂಟರ್‌ಗಳ ಮೇಲೆ ದಾಳಿ ನಡೆಸಿರುವ ಸೈಬರ್ ಕಮಾಂಡ್ ಸೆಂಟರ್‌ನ ಅಧಿಕಾರಿಗಳು, ಅಂದಾಜು ₹40 ಕೋಟಿ ಅಕ್ರಮವನ್ನು ಬಯಲಿಗೆ ಎಳೆದಿದ್ದಾರೆ. ಜತೆಗೆ, ಹೊರ ರಾಜ್ಯದ ಇಬ್ಬರನ್ನು ಬಂಧಿಸುವಲ್ಲಿ ಸೈಬರ್ ಪೊಲೀಸರು ಯಶಸ್ವಿ ಆಗಿದ್ದಾರೆ.

ದೆಹಲಿಯ ಪ್ರಶಾಂತ್ (35) ಹಾಗೂ ಉತ್ತರ ಪ್ರದೇಶದ ಆಕಾಶ್ (40) ಬಂಧಿತರು. ಪ್ರಕರಣದ ಪ್ರಮುಖ ಆರೋಪಿ ತಲೆಮರೆಸಿಕೊಂಡಿದ್ದು, ಬಂಧನಕ್ಕೆ ಶೋಧ ಕಾರ್ಯ ನಡೆಸಲಾಗುತ್ತಿದೆ ಎಂದು ಕಮಾಂಡ್ ಸೆಂಟರ್‌ನ ಮೂಲಗಳು ತಿಳಿಸಿವೆ.

ಆರೋಪಿಗಳು ವಿವಿಧ ಬ್ಯಾಂಕ್‌ನಲ್ಲಿ ತೆರೆದಿದ್ದ ನಾಲ್ಕು ಖಾತೆಗಳ ಪರಿಶೀಲನೆ ನಡೆಸಲಾಗುತ್ತಿದೆ. ಈ ಖಾತೆಗಳಲ್ಲಿ ಅಂದಾಜು ₹40 ಕೋಟಿ ವರ್ಗಾವಣೆ ಆಗಿರುವುದು ಪತ್ತೆಯಾಗಿದೆ ಎಂದು ಸೈಬರ್ ಪೊಲೀಸರು ಹೇಳಿದರು.

ಕಾಲ್ ಸೆಂಟರ್‌ಗಳಿಂದ 44 ಎಸ್‌ಎಸ್‌ಡಿಗಳು (ಸಾಲಿಡ್ ಸ್ಟೇಟ್ ಡ್ರೈವ್ಸ್), ಎರಡು ಮೊಬೈಲ್, ಎರಡು ಲ್ಯಾಪ್‌ಟಾಪ್, ಒಂಬತ್ತು ಸಿಪಿಯುಗಳು, ಸ್ಕ್ರಿಪ್ಟ್ ನೋಟ್‌ಬುಕ್ ಹಾಗೂ ಇತರೆ ಎಲೆಕ್ಟ್ರಾನಿಕ್ ಉಪಕರಣ ಜಪ್ತಿ ಮಾಡಲಾಗಿದೆ ಎಂದು ಸೈಬರ್ ಕಮಾಂಡ್ ಸೆಂಟರ್‌ನ ಡಿಜಿಪಿ ಪ್ರಣವ್ ಮೊಹಾಂತಿ ತಿಳಿಸಿದರು.

ಖಚಿತ ಮಾಹಿತಿ ಆಧರಿಸಿ, ಆಗ್ನೇಯ ವಿಭಾಗದ ಸೈಬರ್ ಅಪರಾಧ ಠಾಣೆ ಹಾಗೂ ವಿಶೇಷ ಸೈಬರ್ ಸೆಲ್‌ನ ಸಿಬ್ಬಂದಿ, ನಗರದ ಚೂಡಸಂದ್ರ ಹಾಗೂ ಪರಪ್ಪನ ಅಗ್ರಹಾರ ವ್ಯಾಪ್ತಿಯಲ್ಲಿ ತಲಾ ಒಂದು, ಕೋರಮಂಗಲದ ಎರಡು ನಕಲಿ ಕಾಲ್ ಸೆಂಟರ್ ಮೇಲೆ ದಾಳಿ ನಡೆಸಿದರು ಎಂದು ಮಾಹಿತಿ ನೀಡಿದರು.

ಉದ್ಯೋಗ ಹುಡುಕಿಕೊಂಡು ನಗರಕ್ಕೆ ಬಂದಿದ್ದ ಪ್ರಶಾಂತ್ ಹಾಗೂ ಆಕಾಶ್, ಪ್ರಮುಖ ಆರೋಪಿಯ ಜತೆಗೆ ನಕಲಿ ಕಾಲ್ ಸೆಂಟರ್‌ಗಳನ್ನು ಆರಂಭಿಸಿದ್ದರು. ಪ್ರತಿ ಕೇಂದ್ರದಲ್ಲಿ 25ರಿಂದ 30 ಮಂದಿಯನ್ನು ಕೆಲಸಕ್ಕೆ ನೇಮಿಸಿಕೊಂಡಿದ್ದರು. ಕಾಲ್ ಸೆಂಟರ್‌ನಲ್ಲಿದ್ದ ಉದ್ಯೋಗಿಗಳು, ಅಮೆರಿಕದ ನಾಗರಿಕರಿಗೆ ಕರೆ ಮಾಡುತ್ತಿದ್ದರು. ತೆರಿಗೆ ಸಲಹೆ, ಪರವಾನಗಿ ನವೀಕರಣ ಸೇರಿದಂತೆ ಬೇರೆ ಬೇರೆ ಸೇವೆಗಳನ್ನು ಕಲ್ಪಿಸುವ ನೆಪದಲ್ಲಿ ವಂಚನೆ ನಡೆಸುತ್ತಿದ್ದರು ಎಂದು ಮಾಹಿತಿ ನೀಡಿದರು.

ಮೂಲ ಕಂಪನಿ ಸಂಪರ್ಕ

ಅಮೆರಿಕದ ಎಂ.ಎಸ್ ಕ್ವಿಕ್ ಬುಕ್ ಸಂಸ್ಥೆಯನ್ನು ಸಂಪರ್ಕಿಸಿದಾಗ ಬೆಂಗಳೂರಿನಲ್ಲಿ ಯಾವುದೇ ಶಾಖೆಯನ್ನು ತೆರೆದಿಲ್ಲ ಎಂಬುದು ಗೊತ್ತಾಯಿತು. ಅದಾದ ಮೇಲೆ ನಾಲ್ಕು ಸ್ಥಳಗಳ ಮೇಲೆ ದಾಳಿ ನಡೆಸಲಾಯಿತು ಎಂದು ಮೂಲಗಳು ಹೇಳಿವೆ.

ಮಾತುಕತೆಗೆ ಸ್ಕ್ರಿಪ್ಟ್

'ಅಮೆರಿಕದ ಅಧಿಕಾರಿಗಳ ಹೆಸರು ಹೋಲುವ ನಕಲಿ ಹೆಸರುಗಳನ್ನೇ ನಕಲಿ ಕಾಲ್ ಸೆಂಟರ್ ಉದ್ಯೋಗಿಗಳು ಬಳಕೆ ಮಾಡಿ ಕರೆ ಮಾಡುತ್ತಿದ್ದರು. ಅದಕ್ಕೂ ಮುನ್ನ ಅಮೆರಿಕದ ಪ್ರಜೆಯನ್ನು ಗುರುತಿಸಿ ಇ-ಮೇಲ್ ಮಾಡುತ್ತಿದ್ದರು. ಮೊದಲೇ ಸ್ಕ್ರಿಪ್ಟ್ ರಚಿಸಿ, ಅದರಂತೆಯೇ ಅಮೆರಿಕದ ಪ್ರಜೆಗಳ ಜತೆಗೆ ಚರ್ಚಿಸುತ್ತಿದ್ದರು. ಅಮೆರಿಕದ ಪ್ರಜೆಗಳ ಜತೆಗೆ ಹೇಗೆ ಚರ್ಚಿಸಬೇಕು? ಹೇಗೆ ಅವರ ಮನವೊಲಿಸಬೇಕೆಂದು ಉದ್ಯೋಗಿಗಳಿಗೆ ಆರೋಪಿಗಳು ತರಬೇತಿ ನೀಡುತ್ತಿದ್ದರು. ನಕಲಿ ಕಾಲ್ ಸೆಂಟರ್‌ನಲ್ಲಿದ್ದ 100ಕ್ಕೂ ಹೆಚ್ಚು ಸಿಬ್ಬಂದಿ ವಿಚಾರಣೆ ನಡೆಸಲಾಗುತ್ತಿದೆ. ಈ ಪ್ರಕರಣದಲ್ಲಿ ಅವರ ಪಾತ್ರ ಏನು ಎಂಬುದನ್ನು ಪತ್ತೆ ಮಾಡಲಾಗುತ್ತಿದೆ' ಎಂದು ಮೂಲಗಳು ಹೇಳಿವೆ.

ಜಿಎಸ್‌ಟಿ ಪಾವತಿ

ನಕಲಿ ಕಾಲ್ ಸೆಂಟರ್ ಅನ್ನು ಆರೋಪಿಗಳು ನಡೆಸುತ್ತಿದ್ದರೂ ಪೊಲೀಸರಿಗೆ ಯಾವುದೇ ಅನುಮಾನ ಬರಬಾರದೆಂದು ಎಲ್ಲವನ್ನೂ ಅಧಿಕೃತ ಎಂಬಂತೆ ತೋರಿಸಿಕೊಳ್ಳುತ್ತಿದ್ದರು. ಸಿಬ್ಬಂದಿಗೆ ಸರಿಯಾದ ಸಮಯಕ್ಕೆ ಸಂಬಳ ಪಾವತಿ ಮಾಡುತ್ತಿದ್ದರು. ಜಿಎಸ್‌ಟಿ ಸಹ ಪಾವತಿಸುತ್ತಿದ್ದರು. ಹೊರನೋಟಕ್ಕೆ ಕಾನೂನುಬದ್ಧ ಕಂಪನಿ ಎಂಬಂತೆ ಬಿಂಬಿಸಿಕೊಳ್ಳುತ್ತಿದ್ದರು ಎಂದು ಮೂಲಗಳು ಹೇಳಿವೆ.

ಗೃಹಲಕ್ಷ್ಮಿ ಬಾಕಿ: ರಾಜ್ಯ ಸರ್ಕಾರಕ್ಕೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳಿಗೆ 2025ರ ಫೆಬ್ರುವರಿ ಹಾಗೂ ಮಾರ್ಚ್ ತಿಂಗಳ ಹಿಂಬಾಕಿ ಬಿಡುಗಡೆ ಮಾಡಲು ಆದೇಶಿಸಬೇಕು' ಎಂದು ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಬೆಂಗಳೂರಿನ ಬಸವೇಶ್ವರ ನಗರದ ಆರ್.ಗಂಗಾ ಮತ್ತು ನಂದಿನಿ ಲೇಔಟ್‌ನ ಜಿ.ಡಿ.ಪವಿತ್ರಾ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ರಜಾಕಾಲದ ನ್ಯಾಯಮೂರ್ತಿ ಸೂರಜ್ ಗೋವಿಂದ ರಾಜ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರ ವಾದ ಆಲಿಸಿದ ನ್ಯಾಯಪೀಠ, ಪ್ರತಿವಾದಿಗಳಾದ ರಾಜ್ಯ ಹಣಕಾಸು ಇಲಾಖೆಯ ಪ್ರಧಾನ ಕಾರ್ಯದರ್ಶಿ, ಪಂಚಾಯತ್ ರಾಜ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿತು.

ಅತ್ಯಾಚಾರಕ್ಕೆ ಯತ್ನ: ಆರೋಪಿ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾರ್ಟಿಗೆ ತೆರಳಿದ್ದ ಯುವತಿ ಮೇಲೆ ಅತ್ಯಾಚಾರಕ್ಕೆ ಯತ್ನಿಸಿರುವ ಘಟನೆ ಮಡಿವಾಳ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಕೇರಳದ 20 ವರ್ಷದ ವಿದ್ಯಾರ್ಥಿನಿ ನೀಡಿದ ದೂರಿನ ಮೇಲೆ ಹೈನಾಸ್ ಮತ್ತು ಸುರೇಶ್ ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಾಗಿದೆ.

ಆರೋಪಿಗಳ ಪೈಕಿ ಹೈನಾಸ್ ಎಂಬಾತನನ್ನು ವಶಕ್ಕೆ ಪಡೆಯಲಾಗಿದೆ. ಮೇ 11ರಂದು ತಡರಾತ್ರಿ ಘಟನೆ ನಡೆದಿದೆ ಎಂದು ಪೊಲೀಸರು ಹೇಳಿದರು.

ನಗರದ ಖಾಸಗಿ ಕಾಲೇಜಿನಲ್ಲಿ ಕೇರಳದ ಯುವತಿ ವ್ಯಾಸಂಗ ಮಾಡುತ್ತಿದ್ದಾರೆ. ಬಿಡುವಿನ ವೇಳೆ ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿದ್ದರು. ಹೋಟೆಲ್ ಮಾಲೀಕ ಅತುಲ್ ಗೋಶ್ ಅವರು ಮದ್ಯದ ಪಾರ್ಟಿ ಆಯೋಜಿಸಿದ್ದರು. ಮೇ 11ರಂದು ರಾತ್ರಿ ಹೋಟೆಲ್ ಮಾಲೀಕರು, ಯುವತಿ, ಆರೋಪಿ ಸೇರಿ ನಾಲ್ವರು ಪಾರ್ಟಿ ಮಾಡಿದ್ದಾರೆ. ಈ ವೇಳೆ ಊಟ ತರಲು ಸಂತ್ರಸ್ತೆ ಹಾಗೂ ಹೈನಾಸ್ ತೆರಳಿದ್ದರು. ಈ ವೇಳೆ ಸಂತ್ರಸ್ತೆ ಜತೆ ಆರೋಪಿ ಅನುಚಿತವಾಗಿ ವರ್ತಿಸಿದ್ದಾನೆ ಎಂದು ದೂರು ನೀಡಲಾಗಿದೆ.

ಈ ಬಗ್ಗೆ ದೂರು ನೀಡಲು ಹೋದಾಗ ಅತ್ಯಾಚಾರಕ್ಕೆ ಯತ್ನಿಸಿದ್ದ ಹೈನಾಸ್ ಮತ್ತು ಆತನ ನೆರವಿಗೆ ಬಂದ ಸುರೇಶ್, ಹೋಟೆಲ್ ಮಾಲೀಕರು ಹಾಗೂ ಸಂತ್ರಸ್ತೆಗೆ ಜೀವ ಬೆದರಿಕೆ ಹಾಕಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಬಾಟಲ್ ಹಿಡಿದು ಬೆದರಿಕೆ

ಪಾರ್ಟಿ ಸ್ಥಳಕ್ಕೆ ಬಂದ ಮೇಲೆ ಆರೋಪಿ, ಸಂತ್ರಸ್ತೆ ಮೇಲೆ ಅತ್ಯಾಚಾರಕ್ಕೆ ಯತ್ನಿಸಿದ್ದಾನೆ. ಸ್ಥಳಕ್ಕೆ ಬಂದ ಹೋಟೆಲ್ ಮಾಲೀಕ ಹಾಗೂ ಇತರರು, ಆರೋಪಿ ಮೇಲೆ ಹಲ್ಲೆ ನಡೆಸಿ ಯುವತಿಯನ್ನು ರಕ್ಷಿಸಿದ್ದಾರೆ. ಅದಕ್ಕೆ ಕೆರಳಿದ್ದ ಆರೋಪಿ ಮದ್ಯದ ಬಾಟಲ್ ಹಿಡಿದು ಕೊಲೆ ಮಾಡುವುದಾಗಿ ಬೆದರಿಸಿದ್ದಾನೆ ಎಂದು ಸಂತ್ರಸ್ತೆ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ಈಜೀಪುರ ಮೇಲ್ಸೇತುವೆ ಅಕ್ಟೋಬರ್‌ಗೆ ಪೂರ್ಣಗೊಳಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೆಚ್ಚುವರಿ ಸಿಬ್ಬಂದಿ, ಕಾರ್ಮಿಕರನ್ನು ನಿಯೋಜಿಸಿ ಅಂತಿಮ ಗಡುವಿನೊಳಗೆ ಈಜೀಪುರ ಮೇಲ್ಸೇತುವೆ ಕಾಮಗಾರಿ ಪೂರ್ಣಗೊಳಿಸಬೇಕು' ಎಂದು ಜಿಬಿಎ ಮುಖ್ಯ ಆಯುಕ್ತ ಎಂ.ಮಹೇಶ್ವರರಾವ್ ಸೂಚನೆ ನೀಡಿದರು.

ದಕ್ಷಿಣ ನಗರಪಾಲಿಕೆ ವ್ಯಾಪ್ತಿಯಲ್ಲಿ ಕೈಗೆತ್ತಿಕೊಂಡಿರುವ ಈಜೀಪುರ ಮೇಲ್ಸೇತುವೆ ಕಾಮಗಾರಿಗೆ ಸಂಬಂಧಿಸಿ ಅಧಿಕಾರಿಗಳು, ಗುತ್ತಿಗೆದಾರರ ಜೊತೆ ಗುರುವಾರ ನಡೆದ ಸಭೆಯಲ್ಲಿ ಅವರು ಮಾತನಾಡಿದರು.

'ಈಜೀಪುರ ಸಿಗ್ನಲ್ ಕಡೆಯಲ್ಲಿ ನಾಲ್ಕು ಗರ್ಡರ್ ಅಳವಡಿಸುವ ಕೆಲಸವನ್ನು ಬುಧವಾರ ಆರಂಭಿಸಿದ್ದು, 2 ತಿಂಗಳಲ್ಲಿ ಪೂರ್ಣಗೊಳಿಸಬೇಕು. 5 ಪೋರ್ಟಲ್ ಫ್ರೇಮ್ ಕಾರ್ಯವನ್ನು ತ್ವರಿತವಾಗಿ ಮಾಡುವ ಮೂಲಕ ಅಕ್ಟೋಬರ್ ಅಂತ್ಯದೊಳಗೆ ಕಾಮಗಾರಿ ಪೂರ್ಣಗೊಳಿಸಬೇಕು' ಎಂದರು.

'ಮಳೆಗಾಲ ಆರಂಭವಾಗುತ್ತಿದ್ದು, ಎರಡೂ ಬದಿಯ ಚರಂಡಿಗಳಲ್ಲಿ ಹೂಳು ತೆಗೆದು ನೀರು ಸರಾಗವಾಗಿ ಹರಿಯುವಂತೆ ನೋಡಿಕೊಳ್ಳಬೇಕು. ಮಳೆಗಾಲದ ವೇಳೆ ಯಾವ ಭಾಗದಲ್ಲಿಯೂ ಜಲಾವೃತವಾಗದಂತೆ ಕ್ರಮವಹಿಸಬೇಕು' ಎಂದರು.

'ಮಡಿವಾಳ ಕಡೆಯ ಸೈಡ್‌ರ್‍ಯಾಂಪ್ ಕಾಮಗಾರಿ ಸ್ಥಳದಲ್ಲಿ ಬೆಸ್ಕಾಂನ ಆರ್‌ಎಂಯು ಅನ್ನು ಶುಕ್ರವಾರ ಸ್ಥಳಾಂತರ ಮಾಡಬೇಕು. ಆ ಬಳಿಕ ಕೇಂದ್ರೀಯ ಸದನ ಎದುರಿನ ಮೂರು ಮರಗಳನ್ನು ನಾಲ್ಕು ದಿನಗಳ ಒಳಗೆ ಕಟಾವು ಮಾಡಿ ರ್‍ಯಾಂಪ್ ಕಾಮಗಾರಿ ಕೈಗೆತ್ತಿಕೊಳ್ಳಿ' ಎಂದು ಸೂಚಿಸಿದರು.

'ದೊಮ್ಮಲೂರು ಕಡೆಯ ಡೌನ್ ರ್‍ಯಾಂಪ್ ಕಾಮಗಾರಿ ಶೇ 70ರಷ್ಟು ಪೂರ್ಣಗೊಂಡಿದ್ದು, 15 ದಿನದ ಒಳಗೆ ಬಾಕಿ ಇರುವ ಕಾಮಗಾರಿ ಪೂರ್ಣಗೊಳಿಸಬೇಕು. ಬಳಿಕ ಸರ್ಜಾಪುರ ಕಡೆಯ ಡೌನ್ ರ್‍ಯಾಂಪ್ ಕಾಮಗಾರಿ ಆರಂಭಿಸಬೇಕು' ಎಂದು ಸೂಚನೆ ನೀಡಿದರು.

'2.59 ಕಿ.ಮೀ. ಉದ್ದದ ಈಜೀಪುರ ಮೇಲ್ಸೇತುವೆ ನಿರ್ಮಾಣ ಮಾಡುತ್ತಿದ್ದು, ಒಟ್ಟು 762 ಸೆಗ್ಮೆಂಟ್‌ಗಳ ಪೈಕಿ 731 ಸೆಗ್ಮೆಂಟ್‌ಗಳನ್ನು ಈಗಾಗಲೇ ಅಳವಡಿಸಲಾಗಿದೆ. ಜೂನ್ ಅಂತ್ಯದೊಳಗೆ ಸೆಗ್ಮೆಂಟ್‌ಗಳ ಅಳವಡಿಕೆ ಪೂರ್ಣಗೊಳ್ಳಲಿದೆ ಎಂದು ಮಾಹಿತಿ ನೀಡಲಾಯಿತು.


ಈಜೀಪುರ ಮೇಲ್ಸೇತುವೆಯ ಕಾಮಗಾರಿ

> **ಕಾಮಗಾರಿ ನಡೆಯುತ್ತಿರುವ ರಸ್ತೆ ಭಾಗದಲ್ಲಿ ಎಲ್ಲಿಯೂ ಗುಂಡಿಗಳು ಇಲ್ಲದಂತೆ ನೋಡಿಕೊಳ್ಳಿ. ಎಲ್ಲೆಲ್ಲಿ ಗುಂಡಿಗಳು ಬಿದ್ದಿವೆ ಎನ್ನುವುದನ್ನು ಗುರುತಿಸಿ ಕೂಡಲೇ ಮುಚ್ಚಬೇಕು**
> **ಎಂ.ಮಹೇಶ್ವರರಾವ್,** ಜಿಬಿಎ ಮುಖ್ಯ ಆಯುಕ್ತ

ಆತ್ಮಹತ್ಯೆಗೆ ಯತ್ನಿಸಿದ ಬಾಲಕಿ ರಕ್ಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಮಮೂರ್ತಿ ನಗರ ಪೊಲೀಸ್ ಠಾಣಾ ವ್ಯಾಪ್ತಿಯ ಎನ್‌ಆರ್‌ಐ ಲೇಔಟ್‌ನಲ್ಲಿ ಐದು ಅಂತಸ್ತಿನ ಕಟ್ಟಡದ ಮೇಲೇರಿ ಆತ್ಮಹತ್ಯೆಗೆ ಯತ್ನಿಸಿದ್ದ 16 ವರ್ಷದ ಬಾಲಕಿಯನ್ನು ಹೊಯ್ಸಳ ಪೊಲೀಸರು ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ರಕ್ಷಿಸಿದ್ದಾರೆ.

ಗುರುವಾರ ಮಧ್ಯಾಹ್ನ ಕಟ್ಟಡದ ಮೇಲೇರಿದ ಬಾಲಕಿ 'ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ' ಎಂದು ಜೋರಾಗಿ ಕಿರುಚಿದ್ದಳು. ಅದನ್ನು ಗಮನಿಸಿದ್ದ ಸ್ಥಳೀಯರು, ಹೊಯ್ಸಳ ಸಿಬ್ಬಂದಿಗೆ ಕರೆ ಮಾಡಿ ಮಾಹಿತಿ ನೀಡಿದ್ದರು. ತಕ್ಷಣವೇ ಅಗ್ನಿಶಾಮಕ ಸಿಬ್ಬಂದಿಗೂ ಮಾಹಿತಿ ನೀಡಿದ್ದ ಹೊಯ್ಸಳ ಸಿಬ್ಬಂದಿ ಸ್ಥಳಕ್ಕೆ ಬಂದರು.

ರಾಮಮೂರ್ತಿ ನಗರ ಠಾಣೆ ಪೊಲೀಸರು, ಅಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ಸಾರ್ವಜನಿಕರು ಜಂಟಿಯಾಗಿ ಕಾರ್ಯಾಚರಣೆ ನಡೆಸಿ ಬಾಲಕಿಯನ್ನು ರಕ್ಷಿಸಿದರು. ಕಾರ್ಯಾಚರಣೆಯ ವಿಡಿಯೊವನ್ನು ಪೂರ್ವ ವಿಭಾಗದ ಡಿಸಿಪಿ ತಮ್ಮ 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡಿದ್ದಾರೆ. ಸಿಬ್ಬಂದಿ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಬಾಲಕಿಗೆ ಪ್ರಾಥಮಿಕ ಚಿಕಿತ್ಸೆ ನೀಡಿ ನಿಮ್ಹಾನ್ಸ್ ಆಸ್ಪತ್ರೆಗೆ ಕಳುಹಿಸಲಾಗಿದೆ. ಬಾಲಕಿ ಯಾವ ಕಾರಣಕ್ಕೆ ಆತ್ಮಹತ್ಯೆಗೆ ಯತ್ನಿಸಿದ್ದಳು ಎಂಬುದು ತಿಳಿದುಬಂದಿಲ್ಲ. ಪೋಷಕರಿಗೂ ಮಾಹಿತಿ ನೀಡಲಾಗಿದೆ ಎಂದು ಪೊಲೀಸರು ಹೇಳಿದರು.

ತಮಿಳುನಾಡಿನ ವ್ಯಕ್ತಿ ಅನುಮಾನಾಸ್ಪದ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಡಿವಾಳದ ಬಳಿಯ ಮಾರುತಿನಗರದ ಲಾಡ್ಜ್‌ವೊಂದರಲ್ಲಿ ವಾಸ್ತವ್ಯ ಮಾಡಿದ್ದ ತಮಿಳುನಾಡಿನ ವ್ಯಕ್ತಿ ಅನುಮಾನಾಸ್ಪದವಾಗಿ ಮೃತಪಟ್ಟಿದ್ದಾರೆ.

ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯ ಮುರುಗನ್ ಮಧು (35) ಮೃತಪಟ್ಟವರು. ಅವಿವಾಹಿತರಾಗಿದ್ದ ಮಧು ತಾಯಿಯೊಂದಿಗೆ ವಾಸವಾಗಿದ್ದರು. ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುತ್ತಿದ್ದರು. ಕೆಲಸದ ನಿಮಿತ್ತ ಎರಡು ದಿನಗಳ ಹಿಂದೆ ಬೆಂಗಳೂರಿಗೆ ಬಂದಿದ್ದರು ಎಂದು ಪೊಲೀಸರು ಹೇಳಿದರು.

'ಮೇ 18ರಂದು ನಗರಕ್ಕೆ ಬಂದಿದ್ದ ಮಧು, ಮಾರುತಿನಗರದ ಗೋಲ್ಡನ್ ನೆಕ್ಸ್ಟ್ ಲಾಡ್ಜ್‌ನಲ್ಲಿ ತಂಗಿದ್ದರು. ಎರಡು ದಿನವಾದರೂ ಅವರು ಕೊಠಡಿಯಿಂದ ಹೊರಗೆ ಬಂದಿರಲಿಲ್ಲ. ಇದರಿಂದ ಅನುಮಾನಗೊಂಡ ಲಾಡ್ಜ್ ಸಿಬ್ಬಂದಿ, ಠಾಣೆಗೆ ಕರೆ ಮಾಡಿ ಮಾಹಿತಿ ನೀಡಿದರು. ಕೊಠಡಿ ಬಾಗಿಲು ಒಡೆದು ಪರಿಶೀಲಿಸಿದಾಗ ಹಾಸಿಗೆಯ ಮೇಲೆ ಮೃತದೇಹ ಪತ್ತೆಯಾಯಿತು' ಎಂದು ಪೊಲೀಸರು ಹೇಳಿದರು.

ಮೂತ್ರಪಿಂಡ ಸಮಸ್ಯೆಯಿಂದ ಬಳಲುತ್ತಿದ್ದ ಮಧು ಅವರಿಗೆ ಈ ಹಿಂದೆ ಎರಡು ಬಾರಿ ಲಘು ಹೃದಯಾಘಾತವಾಗಿತ್ತು ಎಂದು ಗೊತ್ತಾಗಿದೆ. ಹೀಗಾಗಿ, ಅವರು ಹೃದಯಾಘಾತದಿಂದಲೇ ಮೃತಪಟ್ಟಿರುವ ಶಂಕೆ ಇದೆ. ಮರಣೋತ್ತರ ಪರೀಕ್ಷೆಯ ವರದಿ ಬಂದ ನಂತರ ಸಾವಿನ ನಿಖರ ಕಾರಣ ಗೊತ್ತಾಗಲಿದೆ. ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡು ಹೆಚ್ಚಿನ ತನಿಖೆ ನಡೆಸಲಾಗುತ್ತಿದೆ ಎಂದು ಮಡಿವಾಳ ಪೊಲೀಸರು ಮಾಹಿತಿ ನೀಡಿದ್ದಾರೆ.

ಕೋಟ್ಯಂತರ ಮಹಿಳೆಯರ ಬಾಳಿಗೆ ಆಸರೆಯಾದ ಸರ್ಕಾರದ ಉಚಿತ ಬಸ್ ಪಯಣ

ಪ್ರಯಾಣದ ಸ್ವಾತಂತ್ರ್ಯ ತಂದ ಶಕ್ತಿ ಯೋಜನೆ



ಅಂಕಿ-ಅಂಶ

₹18,943 ಕೋಟಿ
ಈವರೆಗೆ 'ಶಕ್ತಿ'ಗೆ ವ್ಯಯಿಸಲಾದ ಮೊತ್ತ

726 ಕೋಟಿಗೂ ಅಧಿಕ
ವಿತರಿಸಲಾದ ಒಟ್ಟು ಉಚಿತ ಟಿಕೆಟ್‌ಗಳು

ಗ್ಯಾರಂಟಿ ವಾರ್ತೆ

ಬೆಂಗಳೂರು: 2023ರಲ್ಲಿ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರವು ಪ್ರಕಟಿಸಿದ ಪಂಚ ಗ್ಯಾರಂಟಿ ಯೋಜನೆಗಳಲ್ಲಿ ಶಕ್ತಿ ಯೋಜನೆ ಮೊದಲನೆಯದಾಗಿದೆ. ರಾಜ್ಯದಾದ್ಯಂತ ಮಹಿಳೆಯರಿಗೆ ಮತ್ತು ವಿದ್ಯಾರ್ಥಿನಿಯರಿಗೆ ಸರ್ಕಾರಿ ಬಸ್‌ಗಳಲ್ಲಿ ಉಚಿತ ಪ್ರಯಾಣ ಕಲ್ಪಿಸುವ ಈ ಯೋಜನೆಗೆ 2023ರ ಜೂನ್ 11ರಂದು ಅಧಿಕೃತವಾಗಿ ಚಾಲನೆ ನೀಡಲಾಗಿತ್ತು. ಕಳೆದ ಮೂರು ವರ್ಷಗಳ ಅವಧಿಯಲ್ಲಿ, ಈ ಮಹತ್ವಾಕಾಂಕ್ಷಿ ಯೋಜನೆಯು ರಾಜ್ಯದಲ್ಲಿ ಕೋಟ್ಯಂತರ ಮಹಿಳೆಯರಿಗೆ ಪ್ರಯಾಣದ ಸ್ವಾತಂತ್ರ್ಯ ಕಲ್ಪಿಸಿ ಕ್ರಾಂತಿಕಾರಿ ಬದಲಾವಣೆಯನ್ನು ತಂದಿದೆ.

ದಿನನಿತ್ಯ ದುಡಿಮೆಗೆ ಹೋಗುವ ಗಾರ್ಮೆಂಟ್ಸ್ ಕಾರ್ಮಿಕರು, ಪೌರಕಾರ್ಮಿಕರು ಹಾಗೂ ಕೆಳ-ಮಧ್ಯಮ ವರ್ಗದ ಮಹಿಳೆಯರಿಗೆ ಪ್ರತಿ ತಿಂಗಳು ಸುಮಾರು 1,500 ರಿಂದ 2,000 ರೂಪಾಯಿಗಳವರೆಗೆ ಉಳಿತಾಯವಾಗುತ್ತಿದೆ. ಈ ಹಣವನ್ನು ಅವರು ಮಕ್ಕಳ ಶಿಕ್ಷಣ, ದಿನಸಿ ಖರ್ಚಿಗೆ, ಔಷಧಿ ಖರೀದಿ ಸೇರಿದಂತೆ ಇನ್ನಿತರ ಸಣ್ಣಪುಟ್ಟ ಉಳಿತಾಯ ಖಾತೆಗಳಲ್ಲೂ ತೊಡಗಿಸುತ್ತಿದ್ದಾರೆ. ಗ್ರಾಮೀಣ ಪ್ರದೇಶದ ವಿದ್ಯಾರ್ಥಿನಿಯರು ಯಾವುದೇ ಆರ್ಥಿಕ ಹೊರೆಯಿಲ್ಲದೆ ಕಾಲೇಜು ಮತ್ತು ಉನ್ನತ ಶಿಕ್ಷಣಕ್ಕಾಗಿ ನಗರ ಪ್ರದೇಶಗಳಿಗೆ ಪ್ರಯಾಣಿಸಲು ಶಕ್ತಿ ನೆರವಾಗಿದೆ. ಯೋಜನೆಯ ಜಾರಿಯ ನಂತರ ರಾಜ್ಯದ ಪ್ರಮುಖ ದೇವಸ್ಥಾನಗಳು ಮತ್ತು ಪ್ರವಾಸಿ ತಾಣಗಳಿಗೆ ಭೇಟಿ ನೀಡುವ ಮಹಿಳಾ ಭಕ್ತರ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿರುವುದು, ಧಾರ್ಮಿಕ ಪ್ರವಾಸೋದ್ಯಮಕ್ಕೂ ಉತ್ತೇಜನ ನೀಡಿದಂತಾಗಿದೆ.



726 ಕೋಟಿಗೂ ಅಧಿಕ ಪ್ರಯಾಣ

ಸರ್ಕಾರದ ಅಂಕಿ-ಅಂಶಗಳ ಪ್ರಕಾರ, ಯೋಜನೆ ಜಾರಿಯಾದಾಗಿನಿಂದ ಈವರೆಗೆ 726 ಕೋಟಿಗೂ ಅಧಿಕ ಬಾರಿ ಮಹಿಳಾ ಪ್ರಯಾಣಿಕರು 'ಶಕ್ತಿ' ಯೋಜನೆಯಲ್ಲಿ ಉಚಿತವಾಗಿ ಪ್ರಯಾಣಿಸಿದ್ದಾರೆ. ಇದಕ್ಕಾಗಿ ಸರ್ಕಾರವು ಈವರೆಗೆ 18,943 ಕೋಟಿ ರೂಪಾಯಿಗಳಿಗೂ ಅಧಿಕ ಮೌಲ್ಯದ ಟಿಕೆಟ್‌ಗಳನ್ನು ವಿತರಿಸಿದ್ದು, ಸಾರಿಗೆ ಸಂಸ್ಥೆಗಳಿಗೆ ಸಕಾಲದಲ್ಲಿ ಅನುದಾನ ಬಿಡುಗಡೆ ಮಾಡುತ್ತಿದೆ. ಹೆಚ್ಚುತ್ತಿರುವ ಪ್ರಯಾಣಿಕರ ಒತ್ತಡವನ್ನು ನಿಭಾಯಿಸಲು ಸಾವಿರಾರು ಹೊಸ ಬಸ್‌ಗಳನ್ನು ಸಾರಿಗೆ ಸಂಸ್ಥೆಗಳಿಗೆ ಸೇರ್ಪಡೆಗೊಳಿಸಲಾಗಿದೆ. ಯೋಜನೆಯನ್ನು ಇನ್ನಷ್ಟು ಸುಗಮಗೊಳಿಸಲು ಮತ್ತು ದುರುಪಯೋಗ ತಡೆಯಲು ಸರ್ಕಾರವು ಮಹಿಳೆಯರಿಗೆ 'ಶಕ್ತಿ ಸ್ಮಾರ್ಟ್ ಕಾರ್ಡ್' (Smart Card) ವಿತರಿಸುವ ಪ್ರಕ್ರಿಯೆಯನ್ನು ಕೂಡ ಶೀಘ್ರದಲ್ಲೇ ಜಾರಿಗೊಳಿಸುವತ್ತ ಹೆಜ್ಜೆ ಇಟ್ಟಿದೆ.

ಇತರೆ ರಾಜ್ಯಗಳಿಗೆ ಮಾದರಿ

ಕರ್ನಾಟಕದ ಈ 'ಶಕ್ತಿ' ಯೋಜನೆ ಕೇವಲ ಉಚಿತ ಬಸ್ ಪ್ರಯಾಣಕ್ಕೆ ಸೀಮಿತವಾಗಿರದೆ, ಮಹಿಳೆಯರ ಪ್ರಯಾಣವನ್ನು ಹೆಚ್ಚಿಸುವ ಮೂಲಕ ಅವರಲ್ಲಿ ಹೊಸ ಆತ್ಮವಿಶ್ವಾಸವನ್ನು ತುಂಬಿದೆ. ಕರ್ನಾಟಕದ ಈ ಯಶಸ್ವಿ ಮಾದರಿಯನ್ನು ನೋಡಿ ದೇಶದ ಇತರೆ ರಾಜ್ಯಗಳು ಕೂಡ ಇಂತಹದೇ ಯೋಜನೆಗಳನ್ನು ಜಾರಿಗೆ ತರಲು ಮುಂದಾಗುತ್ತಿರುವುದು ಇದರ ಯಶಸ್ಸಿಗೆ ಸಾಕ್ಷಿಯಾಗಿದೆ. ಈಗಾಗಲೇ ತೆಲಂಗಾಣದಲ್ಲಿ 'ಮಹಾಲಕ್ಷ್ಮೀ', ಆಂಧ್ರಪ್ರದೇಶದಲ್ಲಿ 'ಸ್ತ್ರೀ ಶಕ್ತಿ' ಹಾಗೂ ಕೇರಳದಲ್ಲೂ ಕೂಡ ಈ ಯೋಜನೆಯನ್ನು ಜಾರಿಗೆ ತರಲಾಗಿದೆ. ಪಶ್ಚಿಮ ಬಂಗಾಳದಲ್ಲಿ ಕೂಡ ಈ ಯೋಜನೆಯನ್ನು ಘೋಷಿಸಿ, ಅನುಷ್ಠಾನಕ್ಕೂ ಮುಂದಾಗಿದೆ.

3 ವರ್ಷಗಳ ಸಾಧನೆ, 'ಗ್ಯಾರಂಟಿ ಹಬ್ಬ' ಘೋಷಣೆ

ಗ್ಯಾರಂಟಿ ಹಬ್ಬ
4ನೇ ವರ್ಷಕ್ಕೆ ಪಾದಾರ್ಪಣೆ

ಜನಪರ ಆಡಳಿತದ ಯಶಸ್ವಿ ನಾಲ್ಕನೇ ವರ್ಷಕ್ಕೆ ಹೆಜ್ಜೆ ಇಡುತ್ತಿರುವ ರಾಜ್ಯ ಸರ್ಕಾರವು 3 ವರ್ಷಗಳ ಸಾಧನಾ ಸಮಾವೇಶವನ್ನು ಮೇ 19ರಂದು ತುಮಕೂರಿನಲ್ಲಿ ಯಶಸ್ವಿಯಾಗಿ ನಡೆಸಿದ್ದು, ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ತಿಂಗಳು ಪೂರ್ತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದಾಗಿ ಘೋಷಿಸಿದ್ದರು. ಅದರಂತೆ ರಾಜ್ಯ ಸರ್ಕಾರವು 'ಗ್ಯಾರಂಟಿ ಹಬ್ಬ' ಹೆಸರಿನಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಿದ್ದು, ತಿಂಗಳು ಪೂರ್ತಿ ವಿವಿಧ ಅಭಿಯಾನಗಳು ನಡೆಯಲಿವೆ.



> ನಮ್ಮ ಹಳ್ಳೀಲಿ ದಿನವೂ ಕೆಲಸ ಸಿಗುತ್ತಿರಲಿಲ್ಲ, ಒಮ್ಮೆ ಕೆಲಸವಿದ್ದರೆ ಮತ್ತೊಮ್ಮೆ ಇರುತ್ತಿರಲಿಲ್ಲ. ಅಂತಹದ್ರಲ್ಲಿ ಆಸ್ಪತ್ರೆಗೆ ಹೋಗಬೇಕೆಂದರೆ ಬಸ್ ಚಾರ್ಜ್‌ಗೇ ಪರದಾಡಬೇಕಿತ್ತು. ಈಗ ಶಕ್ತಿ ಯೋಜನೆಯಿಂದಾಗಿ ಫ್ರೀ ಬಸ್ ಬಂದಿದ್ದರಿಂದ ಆಸ್ಪತ್ರೆಗೆ ಹೋಗಿ ಬರಲು ಅನುಕೂಲವಾಗಿದೆ. ಅಷ್ಟೇ ಅಲ್ಲ, ಮನಸ್ಸಿನ ಬೇಸರ ಕಳೆಯಲು ಧರ್ಮಸ್ಥಳಕ್ಕೂ ಹೋಗಿ ಬಂದೆ. ಬಸ್ ಚಾರ್ಜ್‌ನಿಂದ ಉಳಿತಾಯವಾಗುತ್ತಿರುವ ಹಣದಲ್ಲೇ ಅನಾರೋಗ್ಯ ಬಿದ್ದಾಗ ಗುಳಿಗೆಗಳನ್ನು ಕೊಂಡುಕೊಳ್ಳುತ್ತಿದ್ದೇನೆ.
>
> ◦ **ಹನುಮವ್ವ, ಹಾವೇರಿ**



> ಮನೆಯ ಪರಿಸ್ಥಿತಿ ತೀರಾ ಹದಗೆಟ್ಟಿತ್ತು. ತವರು ಮನೆಗೆ ಹೋಗಬೇಕೆಂದರೂ ಬಸ್ ಚಾರ್ಜ್‌ಗೆ ದುಡ್ಡಿಲ್ಲದೆ, ಕಾಲಿನಲ್ಲಿ ಗುಳ್ಳೆಗಳು ಏಳುವಂತೆ ಮೈಲುಗಟ್ಟಲೆ ನಡೆದುಕೊಂಡು ಹೋಗುತ್ತಿದ್ದೆವು. ಬಡತನ ನಮ್ಮ ಕಾಲಿಗೆ ಬೇಡಿ ಹಾಕಿತ್ತು. ಆದರೆ ಇಂದು ಫ್ರೀ ಬಸ್ ಇರುವುದರಿಂದ ಮೈಸೂರಿನಲ್ಲಿರುವ ನನ್ನ ಮಗಳನ್ನು, ಮನಸ್ಸಿಗೆ ಬೇಸರವಾದಾಗ ದೇವರನ್ನು ನೋಡಿ ಬರುವ ಶಕ್ತಿ ನನಗೆ ಸಿಕ್ಕಿದೆ.
>
> ◦ **ಲಕ್ಷ್ಮಮ್ಮ, ಕೊಪ್ಪಳ**



> ಬಂಡವಾಳದ ಕೊರತೆಯಿಂದಾಗಿ ಕಸೂತಿ ಉದ್ಯಮವನ್ನು ನಡೆಸಲಾಗದೆ ಕಂಗಾಲಾಗಿದ್ದೆ. ಕಸೂತಿ ಕೆಲಸಕ್ಕೆ ಬೇಕಾದ ಕಚ್ಚಾ ವಸ್ತುಗಳನ್ನು ತರಲು ಪೇಟೆಗೆ ಹೋಗಿ ಬರಲು ಬಸ್ ಟಿಕೆಟ್ ದುಡ್ಡೇ ದೊಡ್ಡ ಹೊರೆಯಾಗಿತ್ತು. ಆದರೆ, ಸರ್ಕಾರದ 'ಶಕ್ತಿ' ಯೋಜನೆಯ ಉಚಿತ ಬಸ್ ಸೌಲಭ್ಯ ಸಿಕ್ಕ ಮೇಲೆ ನಂಗೆ ಬಸ್ ಓಡಾಟದ ಖರ್ಚಿನ ಚಿಂತೆ ದೂರವಾಗಿದೆ.
>
> ◦ **ಜಮಲಾ ಬಾಯಿ, ಯಾದಗಿರಿ**

ಮಹಿಳಾ ಸಬಲೀಕರಣವೇ ಸಮೃದ್ಧ ಕರ್ನಾಟಕದ ಬುನಾದಿ



'ಶಕ್ತಿ' ಯೋಜನೆಯು ಕೇವಲ ಉಚಿತ ಸಾರಿಗೆ ಸೌಲಭ್ಯವಲ್ಲ; ಇದು ರಾಜ್ಯದ ಪ್ರತಿಯೊಬ್ಬ ಮಹಿಳೆಯ ಗೌರವ, ಸಮಾನತೆ ಮತ್ತು ಪ್ರಗತಿಗಾಗಿ ನಮ್ಮ ಸರ್ಕಾರ ಹೊಂದಿರುವ ಅಚಲ ಬದ್ಧತೆಯ ಸಂಕೇತವಾಗಿದೆ. ಕಳೆದ ಮೂರು ವರ್ಷಗಳಲ್ಲಿ ಕೋಟ್ಯಂತರ ಉಚಿತ ಪ್ರಯಾಣಗಳು ಮಹಿಳೆಯರಿಗೆ ಯಾವುದೇ ಆರ್ಥಿಕ ಅಡೆತಡೆಗಳಿಲ್ಲದೆ ಶಿಕ್ಷಣ, ಉದ್ಯೋಗ ಹಾಗೂ ಆರೋಗ್ಯ ಸೇವೆಗಳನ್ನು ಪಡೆದುಕೊಳ್ಳಲು ನೆರವಾಗಿವೆ. ಸಬಲ ಮಹಿಳೆಯೇ ಬಲಿಷ್ಠ ಕುಟುಂಬದ ಆಧಾರಸ್ತಂಭ, ಆ ಬಲಿಷ್ಠ ಕುಟುಂಬಗಳೇ ಸಮೃದ್ಧ ಕರ್ನಾಟಕದ ಬುನಾದಿ. ಸರ್ವರನ್ನೂ ಒಳಗೊಳ್ಳುವ ಇಂತಹ ಪ್ರಗತಿಪರ ಅಭಿವೃದ್ಧಿಗೆ ನಮ್ಮ ಸರ್ಕಾರ ಸದಾ ಕಟಿಬದ್ಧವಾಗಿದೆ.

• ಸಿದ್ದರಾಮಯ್ಯ, ಮುಖ್ಯಮಂತ್ರಿಗಳು

ಸ್ವತಂತ್ರ ಪ್ರಯಾಣ: ಮಹಿಳಾ ಸಬಲೀಕರಣದ ಹೊಸ ಆಯಾಮ



ಮುಕ್ತ ಪ್ರಯಾಣವು ಮಹಿಳೆಯರ ಸಬಲೀಕರಣದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಇದರಿಂದಾಗಿ ಅವರಿಗೆ ಉದ್ಯೋಗ, ಶಿಕ್ಷಣ ಹಾಗೂ ಮಾರುಕಟ್ಟೆಯ ಅವಕಾಶಗಳು ಕೈಗೆಟುಕುತ್ತವೆ. ಶಕ್ತಿ ಯೋಜನೆಯು ಕುಟುಂಬಗಳ ಆರ್ಥಿಕ ಹೊರೆಯನ್ನು ಕಡಿಮೆ ಮಾಡಿದ್ದಲ್ಲದೆ, ಕರ್ನಾಟಕದ ಸಾಮಾಜಿಕ-ಆರ್ಥಿಕ ಪ್ರಗತಿಯಲ್ಲಿ ಮಹಿಳೆಯರ ಸಕ್ರಿಯ ಭಾಗವಹಿಸುವಿಕೆಯನ್ನು ದ್ವಿಗುಣಗೊಳಿಸಿದೆ. ನಮ್ಮ ಆಡಳಿತದ ನಾಲ್ಕನೇ ವರ್ಷಕ್ಕೆ ಹೆಜ್ಜೆ ಇಡುತ್ತಿರುವ ಈ ಸುಸಂದರ್ಭದಲ್ಲಿ, ಹೆಚ್ಚು ಸಮಾನತೆಯ ಮತ್ತು ಸಬಲ ಕರ್ನಾಟಕದ ನಿರ್ಮಾಣಕ್ಕೆ ನಾವು ಮತ್ತೊಮ್ಮೆ ಸಂಕಲ್ಪ ತೊಡುತ್ತೇವೆ.

• ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿಗಳು

ಪ್ರಗತಿಯ ಪಥದಲ್ಲಿ ಸಾರ್ವಜನಿಕ ಸಾರಿಗೆ



ಶಕ್ತಿ ಯೋಜನೆಯು ಕರ್ನಾಟಕದ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಮಹಿಳಾ ಪ್ರಗತಿಯ ಶಕ್ತಿಶಾಲಿ ವಾಹನವನ್ನಾಗಿ ಪರಿವರ್ತಿಸಿದೆ. ನಮ್ಮ ಸಾರಿಗೆ ಸಂಸ್ಥೆಗಳ ಬಸ್ಸುಗಳಲ್ಲಿ ವಿತರಿಸಲಾಗುವ ಪ್ರತಿಯೊಂದು ಉಚಿತ ಟಿಕೆಟ್ ಸಹ ರಾಜ್ಯದ ಮಹಿಳೆಯರ ಹಕ್ಕು, ಆರ್ಥಿಕ ಉಳಿತಾಯ ಮತ್ತು ಆತ್ಮವಿಶ್ವಾಸದ ಪ್ರತೀಕವಾಗಿದೆ. ಗ್ರಾಮೀಣ ಭಾಗದಿಂದ ಹಿಡಿದು ಮಹಾನಗರಗಳವರೆಗೆ ಮಹಿಳೆಯರು ಇಂದು ಎಂದಿಗಿಂತಲೂ ಹೆಚ್ಚು ಧೈರ್ಯದಿಂದ ಮತ್ತು ಸ್ವತಂತ್ರವಾಗಿ ಪ್ರಯಾಣಿಸುತ್ತಿದ್ದಾರೆ. ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಲು ಮತ್ತು ಈ ಐತಿಹಾಸಿಕ ಯೋಜನೆಯ ಲಾಭ ನಿರಂತರವಾಗಿ ಸಿಗುವಂತೆ ಮಾಡಲು ನಮ್ಮ ಇಲಾಖೆ ಬದ್ಧವಾಗಿದೆ.

•ರಾಮಲಿಂಗಾರೆಡ್ಡಿ, ಸಾರಿಗೆ ಹಾಗೂ ಮುಜರಾಯಿ ಸಚಿವರು

ಕರ್ನಾಟಕ ವಾರ್ತೆ

ಗ್ಲಾಮರ್ ಹಿಂದೆ ಎಂದೂ ಬಿದ್ದಿಲ್ಲ: ಪ್ರಿಯಾಂಕಾ



ಪ್ರಿಯಾಂಕಾ ಉಪೇಂದ್ರ ನಟನೆಯ ‘ಸೆಪ್ಟೆಂಬರ್ 21’ ಚಿತ್ರ ಇಂದು (ಮೇ 22) ತೆರೆ ಕಾಣುತ್ತಿದೆ. ನಟಿಯಾಗಿ 50ಕ್ಕೂ ಹೆಚ್ಚು ಸಿನಿಮಾಗಳನ್ನು ಪೂರೈಸಿರುವ ಅವರು, ಹೊಸ ಚಿತ್ರದ ವಿಶೇಷತೆ, ತಮ್ಮ ಸಿನಿ ಪಯಣ ಮತ್ತು ಭವಿಷ್ಯದ ಕನಸುಗಳ ಕುರಿತು ಮಾತನಾಡಿದ್ದಾರೆ.

• ವಿನಾಯಕ ಕೆ.ಎಸ್.

• ‘ಸೆಪ್ಟೆಂಬರ್ 21’ ಚಿತ್ರ ಈಗಾಗಲೇ ಕಾನ್ ಚಿತ್ರೋತ್ಸವದಲ್ಲಿ ಪ್ರದರ್ಶನಗೊಂಡಿದೆ. ಈ ಸಿನಿಮಾ ಇತರ ಚಿತ್ರಗಳಿಗಿಂತ ಹೇಗೆ ಭಿನ್ನವಾಗಿದೆ?

ಇದು ಒಂದು ಕಲಾತ್ಮಕ ಚಿತ್ರ. ಅಲ್ಝೈಮರ್ ಕಾಯಿಲೆಯಿಂದ ಬಳಲುವ ವ್ಯಕ್ತಿ ಮತ್ತು ಆತನ ಆರೈಕೆ ಮಾಡುವವರ ಜೀವನದ ಸುತ್ತ ಕಥೆ ಸಾಗುತ್ತದೆ. ಅಲ್ಝೈಮರ್ ಎಷ್ಟು ಗಂಭೀರ ಕಾಯಿಲೆ, ಅದು ಕುಟುಂಬದ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬುದನ್ನು ಭಾವನಾತ್ಮಕವಾಗಿ ಹೇಳಿದ್ದೇವೆ. ಆರೈಕೆ ಮಾಡುವವರ ನೋವು ಮತ್ತು ಸಂಕಷ್ಟಗಳನ್ನೂ ಚಿತ್ರದಲ್ಲಿ ತೋರಿಸಿದ್ದೇವೆ. ನಾನು ಮನೆಯ ಕೆಲಸದಾಕೆಯ ಪಾತ್ರದಲ್ಲಿ ನಟಿಸಿದ್ದೇನೆ. ಇದು ನಮ್ಮ ದಿನನಿತ್ಯದ ಬದುಕಿಗೆ ಹತ್ತಿರವಾಗುವ ಕಥೆ; ಜೊತೆಗೆ ಒಂದು ಸಾಮಾಜಿಕ ಸಂದೇಶವನ್ನೂ ಹೊತ್ತಿದೆ.

• ಕಮರ್ಷಿಯಲ್ ಸಿನಿಮಾಗಳ ನಾಯಕಿಯಾಗಿದ್ದ ನೀವು ಈಗ ಕಲಾತ್ಮಕ ಸಿನಿಮಾಗಳತ್ತ ಹೊರಳಿದ್ದೇಕೆ?

ನನಗೆ ಯಾವಾಗಲೂ ಇಂತಹ ಕಥೆಗಳೇ ಇಷ್ಟ. ನಟಿಯಾಗಿ ಎಲ್ಲ ರೀತಿಯ ಪಾತ್ರಗಳನ್ನು ಎದುರು ನೋಡುತ್ತೇನೆ. ಆದರೆ ಇಂಥ ಅವಕಾಶಗಳು ಇದುವರೆಗೆ ಬಂದಿರಲಿಲ್ಲ. ಈ ಸಿನಿಮಾ ಬಂದಾಗ ನಾನು ಆ ಪಾತ್ರಕ್ಕೆ ಭಾವನಾತ್ಮಕವಾಗಿ ಸಿದ್ಧವಾಗಿದ್ದೆ. ಇಂತಹ ಪಾತ್ರಗಳಿಗೆ ಒಂದು ರೀತಿಯ ಪಕ್ವತೆ ಬೇಕಾಗುತ್ತದೆ.

ನನ್ನ ಕುಟುಂಬದಲ್ಲಿಯೂ ಅಲ್ಝೈಮರ್ ಸಮಸ್ಯೆ ಅನುಭವಿಸಿದವರು ಇದ್ದಾರೆ. ಅವರನ್ನು ಹತ್ತಿರದಿಂದ ನೋಡಿದ್ದೇನೆ. ಅದೂ ಈ ಪಾತ್ರವನ್ನು ಒಪ್ಪಿಕೊಳ್ಳಲು ಕಾರಣವಾಯಿತು. ಮತ್ತೊಂದು ಕಾರಣ, ಈ ಕಥೆಯನ್ನು ಜನರಿಗೆ ಹೇಳಲೇಬೇಕು ಅನ್ನಿಸಿತು. ವಯಸ್ಸಾದವರಿಗೆ ಮಾತ್ರವಲ್ಲ, ಯುವಕರಿಗೂ ಈ ಸಮಸ್ಯೆ ಕಾಣಿಸಿಕೊಳ್ಳಬಹುದು. ನಾವು ಮರೆವನ್ನು ಸಾಮಾನ್ಯವಾಗಿ ತೆಗೆದುಕೊಳ್ಳುತ್ತೇವೆ. ವಿಶೇಷವಾಗಿ ಅನೇಕ ಮಹಿಳೆಯರಿಗೆ 40 ವರ್ಷದ ನಂತರ ಮರೆವು ಹೆಚ್ಚಾಗುತ್ತದೆ. ಹೀಗಾಗಿ ಈ ಕಥೆಯಲ್ಲಿ ಒಂದು ಸತ್ವ ಇದೆ ಎಂದು ಅನ್ನಿಸಿತು.

• ಕೋಲ್ಕತ್ತದಿಂದ ಸ್ಯಾಂಡಲ್‌ವುಡ್‌ವರೆಗಿನ ನಿಮ್ಮ ಪಯಣ ಹೇಗಿತ್ತು?

ಬಂಗಾಳಿ ಸೇರಿದಂತೆ ಹಲವು ಭಾಷೆಗಳಲ್ಲಿ ನಟಿಸಿ ಈಗ 50ಕ್ಕೂ ಹೆಚ್ಚು ಸಿನಿಮಾಗಳನ್ನು ಪೂರೈಸಿದ್ದೇನೆ. ನಾನು ನಟಿಯಾಗುತ್ತೇನೆ ಎಂದು ಎಂದಿಗೂ ಅಂದುಕೊಂಡಿರಲಿಲ್ಲ. ನನ್ನ ತಾಯಿ ನಟಿಯಾಗಿದ್ದರು. ಆದರೆ ಅವರು ಚಿತ್ರರಂಗದಲ್ಲಿ ಹೆಚ್ಚು ಮುಂದುವರಿಯಲಿಲ್ಲ. ಅವರ ಕನಸನ್ನು ನಾನು ನನಸಾಗಿಸಿದೆ ಎನ್ನಬಹುದು.

ಮದುವೆ ಮತ್ತು ಮಕ್ಕಳಾದ ನಂತರ ನಾನು ಸಿನಿಮಾದಲ್ಲಿ ಮುಂದುವರಿಯುತ್ತೇನೆ ಎಂಬ ಕಲ್ಪನೆಯೇ ಇರಲಿಲ್ಲ. ಆದರೆ ಅವಕಾಶಗಳು ಬಂದವು. ಇವತ್ತಿಗೂ ನನಗೆ ಕುಟುಂಬವೇ ಮೊದಲ ಆದ್ಯತೆ. ಅದರ ಜತೆಗೆ ನಟನೆಯನ್ನೂ ಸಮತೋಲನದಲ್ಲಿ ಮುಂದುವರಿಸಲು ಸಾಧ್ಯವಾಗಿದೆ.

• ನಾಯಕಿಯಾಗಿ ಇಷ್ಟು ವರ್ಷಗಳ ಕಾಲ ನೆಲೆ ನಿಲ್ಲುವುದು ಎಷ್ಟು ಸವಾಲಿನ ಕೆಲಸ?

ಇವತ್ತು ನಾಯಕ–ನಾಯಕಿ ಎಂಬ ಕಲ್ಪನೆಗಿಂತ ಪಾತ್ರ ಮತ್ತು ಕಥೆಯೇ ಮುಖ್ಯವಾಗಿದೆ. ಕಮರ್ಷಿಯಲ್ ಸಿನಿಮಾಗಳಲ್ಲಿ ಮಾತ್ರ ಆ ಪರಿಕಲ್ಪನೆ ಹೆಚ್ಚು ಕಾಣಿಸುತ್ತದೆ. ನಾನು ಎಂದಿಗೂ ಗ್ಲಾಮರ್ ಹಿಂದೆ ಹೋಗಲಿಲ್ಲ. ಪಾತ್ರದ ತೂಕವನ್ನೇ ಮೊದಲಿಗೆ ನೋಡುತ್ತೇನೆ.

ನನ್ನನ್ನು ಹುಡುಕಿಕೊಂಡು ಸಿನಿಮಾ ಬಂದಾಗ ಖುಷಿಯಾಗುತ್ತದೆ. ನಾನು ವರ್ತಮಾನದಲ್ಲಿ ಬದುಕುವವಳು. ಹೊಸ ರಿಸ್ಕ್ ತೆಗೆದುಕೊಳ್ಳುತ್ತೇನೆ. ಪ್ರತಿಯೊಂದು ಪಾತ್ರವೂ ಭಿನ್ನವಾಗಿರಬೇಕು ಎನ್ನುವುದು ನನ್ನ ಆಸೆ.

ಕಾಲಕ್ರಮೇಣ ಮಹಿಳೆಯರ ದೇಹದ ಸ್ವರೂಪ, ಬದುಕಿನ ಹಂತಗಳು ಬದಲಾಗುತ್ತವೆ. ಹೀಗಾಗಿ 20 ವರ್ಷಗಳ ಹಿಂದೆ ಮಾಡಿದ ಪಾತ್ರಗಳನ್ನು ಈಗ ಮಾಡಲಾಗುವುದಿಲ್ಲ ಎಂಬ ಅರಿವು ನನಗಿದೆ. ಸಮಾಜದಲ್ಲಿ ಮಹಿಳೆಯರು ಹಲವಾರು ಕ್ಷೇತ್ರಗಳಲ್ಲಿ ಸಾಧನೆ ಮಾಡುತ್ತಿದ್ದಾರೆ. ಆ ಕಥೆಗಳು ಸಿನಿಮಾಗಳಲ್ಲೂ ಕಾಣಿಸಬೇಕು.

• ಒಂದೊಮ್ಮೆ ನಟಿಯಾಗದೇ ಇದ್ದರೆ ಯಾವ ಕ್ಷೇತ್ರದಲ್ಲಿ ಇರುತ್ತಿದ್ದಿರಿ?

ನಾನು ವಾಣಿಜ್ಯ ವಿದ್ಯಾರ್ಥಿನಿ. ಲಂಡನ್‌ನಲ್ಲಿ ಎಂಬಿಎ ಮಾಡುವ ಕನಸಿತ್ತು. ನನ್ನ ತಂದೆ ಎಂಜಿನಿಯರ್. ಬಾಲ್ಯದ ಬಹುಭಾಗ ವಿದೇಶದಲ್ಲೇ ಕಳೆದಿದ್ದೆ. ಸಿನಿಮಾದಲ್ಲಿ ಅವಕಾಶ ಸಿಗದಿದ್ದರೆ ಆ ಕ್ಷೇತ್ರದಲ್ಲೇ ಮುಂದುವರಿಯುತ್ತಿದ್ದೆ.

ರೂಪದರ್ಶಿಯಾಗಿ ಕೆಲಸ ಆರಂಭಿಸಿದ್ದೆ. ಅಲ್ಲಿಂದ ಅದೃಷ್ಟವಶಾತ್ ಸಿನಿಮಾಕ್ಕೆ ಬಂದೆ. ಅಮ್ಮ ತುಂಬ ಬೆಂಬಲ ಕೊಟ್ಟರು. ನಾನು ಚಿತ್ರರಂಗಕ್ಕೆ ಬರದೇ ಇದ್ದರೆ ಉಪೇಂದ್ರ ಅವರನ್ನು ಭೇಟಿಯಾಗುತ್ತಿರಲಿಲ್ಲ; ಈ ನಾಡಿನ ಪರಿಚಯವೂ ಆಗುತ್ತಿರಲಿಲ್ಲ.

• ಚಿತ್ರರಂಗದಲ್ಲಿ ಇನ್ನೂ ಯಾವ ಕನಸು ಉಳಿದಿದೆ?

ನಿರ್ದೇಶಕಿಯಾಗುವ ಕನಸಿದೆ. ಕೆಲವೊಮ್ಮೆ ‘ಇಷ್ಟು ಸಾಕು, ಈಗ ಆರಾಮವಾಗಿ ಇರೋಣ’ ಎಂದು ಅನಿಸುತ್ತಿತ್ತು. ಆದರೆ ಕಾನ್ ಚಿತ್ರೋತ್ಸವಕ್ಕೆ ಹೋಗಿ ಬಂದ ನಂತರ ಸಿನಿಮಾದಲ್ಲಿ ಇನ್ನೂ ಸಾಕಷ್ಟು ಸಾಧ್ಯತೆಗಳಿವೆ ಅನ್ನಿಸಿತು.

ಒಳ್ಳೆಯ ಸಿನಿಮಾಗಳನ್ನು ನಿರ್ಮಿಸಬೇಕು ಎನ್ನುವ ಆಸೆಯಿದೆ. ಈಗಾಗಲೇ ನಿರ್ಮಾಣ ಕ್ಷೇತ್ರದಲ್ಲೂ ಕೈಹಾಕಿದ್ದೇನೆ. ನಿರ್ದೇಶನ ಕಲಿಯಬೇಕು, ಉಪೇಂದ್ರ ಅವರ ಜೊತೆ ಕೆಲಸ ಮಾಡಬೇಕು ಎಂಬ ಹಂಬಲ ಇದೆ.

• ಹೊಸಬರಿಗೆ ಏನು ಹೇಳಲು ಬಯಸುತ್ತೀರಿ?

ಮೊದಲಿಗೆ ನಮ್ಮ ಮೂಲಸತ್ವವನ್ನು ನಾವು ಅರಿತುಕೊಳ್ಳಬೇಕು. ಗುರುತಿಸಿಕೊಳ್ಳಬೇಕೆಂಬ ಹಂಬಲದಲ್ಲಿ ನಮ್ಮತನ ಕಳೆದುಕೊಳ್ಳಬಾರದು. ಚಿತ್ರರಂಗದಲ್ಲಿ ಏರಿಳಿತಗಳು ಸಹಜ. ಅದನ್ನು ಸಮತೋಲನದಿಂದ ಸ್ವೀಕರಿಸುವ ಮನೋಭಾವ ಬೆಳೆಸಿಕೊಳ್ಳಬೇಕು. ಅವಕಾಶ ಸಿಕ್ಕಾಗ ಶ್ರಮಪಟ್ಟು ನಮ್ಮ ಪ್ರತಿಭೆಯನ್ನು ಸಾಬೀತುಪಡಿಸಬೇಕು.

‘ಕೀರ್ತಿ ಐ ಲವ್ ಯು’ ಹಾಡು ಬಿಡುಗಡೆ



ನಿಧಿ

ಬಹುತೇಕ ಹೊಸಬರಿಂದಲೇ ಕೂಡಿರುವ ‘ಕೀರ್ತಿ ಐ ಲವ್ ಯು’ ಚಿತ್ರದ ‘ಮುದ್ದಾದ ಮೂಗುತಿ’ ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಪ್ರೇಮಕಥೆ ಹೊಂದಿರುವ ಚಿತ್ರಕ್ಕೆ ನಿರಂಜನ್ ಆರಾಧ್ಯ ಆ್ಯಕ್ಷನ್–ಕಟ್ ಹೇಳಿದ್ದಾರೆ.

ಈ ಹಾಡಿಗೆ ಅಭಿರಾಮ್ ಸಂಗೀತ ನೀಡಿದ್ದು, ಅರುಣ್ ಕುಮಾರ್ ಸಾಹಿತ್ಯವಿದೆ. ಆಫ್ರಾಜ್ ಉಲ್ಲಾಳ್ ಧ್ವನಿಯಾಗಿದ್ದಾರೆ. ಪ್ರಜ್ಯೋತ್ ಎಸ್ ರಾವ್‌ಗೆ ನಿಧಿ ಗೌಡ ಜೋಡಿಯಾಗಿದ್ದಾರೆ.

‘ನೃತ್ಯ ಕಲಾವಿದನಾಗಿರುವ ನನಗೆ ಮೊದಲಿನಿಂದಲೂ ನಿರ್ದೇಶನದ ಬಗ್ಗೆ ಆಸಕ್ತಿಯಿತ್ತು. ಇದು ನನ್ನ ಮೊದಲ ನಿರ್ದೇಶನದ ಚಿತ್ರ. ಪ್ರೀತಿಯ ಕುರಿತು ಹಲವು ಚಿತ್ರಗಳು ಬಂದಿವೆಯಾದರೂ, ನಾವು ಈ ಚಿತ್ರದಲ್ಲಿ ಪ್ರೀತಿ ಕುರಿತು ನೀಡಿರುವ ವ್ಯಾಖ್ಯಾನವೇ ಬೇರೆ. ಅದರಲ್ಲೂ ಈಗಂತೂ ಚಿಕ್ಕವಯಸ್ಸಿನಲ್ಲೇ ಲವ್, ಡೇಟಿಂಗ್ ಎನ್ನುತ್ತಾರೆ. ಅದೆಲ್ಲ ತಪ್ಪು ಎಂದು ಯುವಜನತೆಗೆ ಜಾಗೃತಿ ಮೂಡಿಸುವ ಚಿತ್ರವೂ ಹೌದು. ಜುಲೈನಲ್ಲಿ ಚಿತ್ರ ತೆರೆಗೆ ಬರಲಿದೆ’ ಎಂದರು ನಿರ್ದೇಶಕ.

ಪೂಜಿತಾ ಎಸ್ ರಾವ್ ಈ ಚಿತ್ರಕ್ಕೆ ಬಂಡವಾಳ ಹಾಕಿದ್ದಾರೆ. ಅಭಿಷೇಕ್ ಛಾಯಾಚಿತ್ರಗ್ರಹಣವಿದೆ.



ರಮೇಶ್ ಭಟ್ ಜತೆ ಚಿತ್ರತಂಡ

‘ನೀನಿದ್ದರೆ’ ಎಂದ ಹೊಸಬರು

ಸಿನಿಮಾ ಸೆಟ್ಟೇರುವ ಮೊದಲೇ ಟೀಸರ್, ಹಾಡುಗಳನ್ನು ಚಿತ್ರೀಕರಿಸಿ ಬಿಡುಗಡೆ ಮಾಡುವುದು ಇತ್ತೀಚೆಗೆ ವಾಡಿಕೆಯಂತಾಗಿದೆ. ಇದು ಸಿನಿಮಾ ಪೂರ್ವತಯಾರಿ ಕೂಡ. ಅದೇ ರೀತಿ ಹೊಸಬರ ತಂಡವೊಂದು ಸಿನಿಮಾ ನಿರ್ಮಾಣದ ಪೂರ್ವತಯಾರಿಯಾಗಿ ‘ನೀನಿದ್ದರೆ’ ಎಂಬ ಹಾಡನ್ನು ಬಿಡುಗಡೆಗೊಳಿಸಿದೆ.

ವಿನ್ಸೆಂಟ್ ಫರ್ನಾಂಡಿಸ್ ಕಾಸ್ಸಿಯಾ ನಿರ್ದೇಶನದ ಈ ಹಾಡನ್ನು ಸಿರಿ ಮ್ಯೂಸಿಕ್ ಸಂಸ್ಥೆ ಹೊರತಂದಿದೆ. ನಟ ರಮೇಶ್ ಭಟ್ ಹಾಡನ್ನು ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು. ಟೆನ್ನಿಸ್ ಕೃಷ್ಣ ಮತ್ತು ಸಿರಿ ಮ್ಯೂಸಿಕ್‌ನ ಸುರೇಶ್ ಚಿಕ್ಕಣ್ಣ ಅವರಿಗೆ ಸಾಥ್ ನೀಡಿದರು.

‘ಸಿನಿಮಾ ಪೂರ್ವತಯಾರಿಯಾಗಿ ಈ ಹಾಡನ್ನು ಹೊರತಂದಿದ್ದೇವೆ. ಮೊದಲು ಒಂದು ಹಾಡು ಮಾಡುವುದೆಂದು ಯೋಜನೆ ಹಾಕಲಾಗಿತ್ತು. ಬಳಿಕ ಇದನ್ನೇ ಏಕೆ ಸಿನಿಮಾ ಮಾಡಬಾರದು ಎಂಬ ಆಲೋಚನೆ ಬಂದಿತು. ಅದಕ್ಕೆ ನಿರ್ಮಾಪಕರಿಂದ ಹಸಿರು ನಿಶಾನೆ ಸಿಕ್ಕಿದೆ. ಎಲ್ಲ ಅಂದುಕೊಂಡಂತೆ ಆದರೆ, ಮೂರು ತಿಂಗಳಲ್ಲಿ ಸಿನಿಮಾ ಸೆಟ್ಟೇರಲಿದೆ’ ಎಂದರು ನಿರ್ದೇಶಕ.

ಅನಿವಾಸಿ ಭಾರತೀಯ ನೂರ್ ಬರ್ಟ್ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ನಾಯಕನಾಗಿ ಅವಿಲ್ ರೋಡ್ರಿಗಸ್, ನಾಯಕಿಯಾಗಿ ಕೆರನ್ ಪಿಂಟೋ ಹಾಗೂ ನಾಯಕನ ಹಳೆಯ ಪ್ರೇಯಸಿಯಾಗಿ ಸ್ಮಿತಾ ಪಿಂಟೋ ಅಭಿನಯಿಸಿದ್ದಾರೆ. ಈ ಗೀತೆಗೆ ನಿರ್ದೇಶಕರೇ ಸಂಗೀತ, ಸಾಹಿತ್ಯ ಒದಗಿಸಿದ್ದಾರೆ. ಲಕ್ಷೀಕಾಂತ್ ಛಾಯಾಚಿತ್ರಗ್ರಹಣ, ರಾಜೇಶ್ ಚೌಹಾಣ್ ಸಂಕಲನವಿದೆ.

ಐದು ಸಿನಿಮಾಗಳು ತೆರೆಗೆ



ಲಾಕ್‌ಡೌನ್

ಉತ್ತರ ಕರ್ನಾಟಕ ಭಾಷೆಯ ಸೊಗಡನ್ನು ಹೊಂದಿರುವ ಚಿತ್ರವಿದು. ಜಾವೇದ್ ತಿಪ್ಪನಹಟ್ಟಿ ಸಿನಿಮಾಕ್ಕೆ ಚಿತ್ರಕಥೆ ಬರೆದು, ನಿರ್ದೇಶನ ಮಾಡಿದ್ದಾರೆ.

‘ಲಾಕ್‌ಡೌನ್’ ಪದ ಕೇಳಿದರೆ ಹಲವರಿಗೆ ಈಗಲೂ ಭಯವಾಗುತ್ತದೆ.ಈ ಅವಧಿ ಕೆಲವರಿಗೆ ಖುಷಿ ತಂದುಕೊಟ್ಟಿದೆ. ಹೀಗಾಗಿಯೇ ಚಿತ್ರಕ್ಕೆ ವಿಷಾದ ಆ್ಯಂಡ್ ರಂಜನೆ ಎಂಬ ಅಡಿಬರಹವಿದೆ. ಬಳ್ಳಾರಿಯಲ್ಲಿ ನಡೆದ ಒಂದಷ್ಟು ಕಹಿ ಘಟನೆಗಳನ್ನು ಇಟ್ಟುಕೊಂಡು ಚಿತ್ರ ಸಿದ್ಧಗೊಂಡಿದೆ. ಜತೆಗೆ ಯುವ ಪ್ರೇಮಿಗಳು ಹಾಗೂ ಮಧ್ಯ ವಯಸ್ಕ ದಂಪತಿಯ ಹಾಸ್ಯ ಸನ್ನಿವೇಶಗಳಿವೆ’ ಎಂದಿದ್ದಾರೆ ನಿರ್ದೇಶಕ.

ಅಭಿನವ ಪ್ರೊಡಕ್ಷನ್ ಅಡಿಯಲ್ಲಿ ಮಂಜು ಮುದ್ಗಲ್ ಚಿತ್ರ ನಿರ್ಮಾಣ ಮಾಡುವ ಜತೆಗೆ, ಪ್ರಮುಖ ಪಾತ್ರಕ್ಕೆ ಬಣ್ಣ ಹಚ್ಚಿದ್ದಾರೆ. ವಿಜಯ್ ವಿಘ್ನೇಶ್ ನಾಯಕ. ದಾವಣಗೆರೆ ಮೂಲದ ವಾಣಿಶ್ರೀ ಶ್ರೀನಿವಾಸ್ ನಾಯಕಿ. ಇವರೊಂದಿಗೆ ಶ್ರಾವಣಿ, ಅಶ್ವಿನಿ ಮುದ್ಗಲ್, ಮಮತಾ, ಗೋವಿಂದರಾಜು-ವೈಲಾ ಮುಂತಾದವರು ನಟಿಸಿದ್ದಾರೆ. ನಿರ್ದೇಶಕರೇ ಸಾಹಿತ್ಯ ಬರೆದು, ಸಂಗೀತ ಸಂಯೋಜಿಸಿದ್ದಾರೆ. ಶರಣಪ್ಪ ಸುಗ್ಗನಹಳ್ಳಿ ಛಾಯಾಚಿತ್ರಗ್ರಹಣ, ಶಿವರಾಜ್ ಮೆಹೂ ಸಂಕಲನ ಚಿತ್ರಕ್ಕಿದೆ.

ಸೆಪ್ಟೆಂಬರ್ 21

ಈಗಾಗಲೇ ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಗಮನ ಸೆಳೆದಿರುವ ಕಲಾತ್ಮಕ ಚಿತ್ರವಿದು. ಕರೆನ್ ಕ್ರಿಸ್ಟಿ ಸುವರ್ಣ ನಿರ್ದೇಶನದ ಈ ಚಿತ್ರ ಕಾನ್ ಚಿತ್ರೋತ್ಸವದ ಮಾರಾಟ ವಿಭಾಗದಲ್ಲಿಯೂ ಪ್ರದರ್ಶನಗೊಂಡಿದೆ.

ಈ ಚಿತ್ರದಲ್ಲಿ ಪ್ರಿಯಾಂಕಾ ಉಪೇಂದ್ರ ಮೊದಲ ಬಾರಿಗೆ ಮಧ್ಯಮ ವರ್ಗದ ಮಹಿಳೆಯ ಪಾತ್ರ ಮಾಡಿದ್ದಾರೆ. 22ರ ಹರೆಯದ ಕರೆನ್ ಕ್ರಿಸ್ಟಿ ಅವರ ಚೊಚ್ಚಲ ನಿರ್ದೇಶನದ ಸಿನಿಮಾವಿದು. ಮುಖ್ಯ ಪಾತ್ರದಲ್ಲಿ ಪ್ರವೀಣ್ ಸಿಂಗ್ ಸಿಸೋಡಿಯ, ಝರಿನ ವಾಹಬ್, ಅಮಿತ್ ಬೇಲ್, ಅಜಿತ್ ಶಿದಾಯೆ, ಸಚಿನ್ ಪಾಟೇಕರ್ ನಟಿಸಿದ್ದಾರೆ.

‘ರೋಗಿಗಿಂತ ಅವನ ಪಾಲನೆ ಮಾಡುವವರು ತೆಗೆದುಕೊಳ್ಳುವ ನಿರ್ಧಾರ ತುಂಬಾ ಮುಖ್ಯ’ ಎಂಬುದು ಚಿತ್ರದ ಅಡಿಬರಹವಾಗಿದೆ. ರಾಜಶೇಖರ್ ಕಥೆ, ವಿನಯ್ ಚಂದ್ರ ಸಂಗೀತವಿದ್ದು, ಅನಿಲ್ ಕುಮಾರ್ ಛಾಯಾಚಿತ್ರಗ್ರಹಣವಿದೆ.

ಅಸುರನ ಕೈಯಲ್ಲಿ ಪಾರಿಜಾತ

ಪ್ರಮೋದ್ ಶೆಟ್ಟಿ ಹಾಗೂ ಪ್ರದೀಪ್ ಪೂಜಾರಿ ಚಿತ್ರದ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ನಾಯಕರಾಗಿ ಕಾರ್ತಿಕ್, ಯಶ್ ಶೆಟ್ಟಿ ನಟಿಸಿದ್ದಾರೆ. ತೇಜಸ್ವಿ ವಿಘ್ನೇಶ್ ಕಥೆ ಬರೆದು ನಿರ್ದೇಶಿಸಿದ್ದಾರೆ. ಮೀಕ್ಷಾ ಪಿಕ್ಚರ್ ಸಂಸ್ಥೆ ನಿರ್ಮಾಣ ಮಾಡಿದೆ.

‘ಅಸುರರ ಕೈಯಲ್ಲಿ ಪಾರಿಜಾತ ಎಂಬ ಜೀವನದ ಹೂವು ಹೇಗೆ ಸಿಲುಕಿಕೊಳ್ಳುತ್ತದೆ ಎನ್ನುವುದೇ ಚಿತ್ರದ ಕಥೆ. ಮನುಷ್ಯ ಜೀವನದಲ್ಲಿ ತನಗೆ ಬೇಕಾದ ವಸ್ತು ಸಿಗದೇ ಇದ್ದಾಗ ಯಾವ ರೀತಿ ಮನುಷ್ಯತ್ವವನ್ನು ಮರೆತು ರಾಕ್ಷಸ ಗುಣವನ್ನು ತಾಳುತ್ತಾನೆ ಎಂಬುದನ್ನು ಚಿತ್ರದಲ್ಲಿ ಹೇಳಿದ್ದೇವೆ’ ಎಂದಿದ್ದಾರೆ ನಿರ್ದೇಶಕ.

ರಜನಿ ನಾಯಕಿಯಾಗಿ ನಟಿಸಿದ್ದಾರೆ. ಕೆ.ಎಸ್. ಶ್ರೀಧರ್, ಮಂಜುನಾಥ್ ಹೆಗಡೆ, ಮಮತಾ, ಡಾಕ್ಟರ್ ಲೀಲಾ ಮೋಹನ್, ವಿಮರ್ಶ ಗೌಡ ಮುಂತಾದವರು ತಾರಾಬಳಗದಲ್ಲಿದ್ದಾರೆ.

ರಾಕೇಶ್ ಸಿ ತಿಲಕ್ ಛಾಯಾಚಿತ್ರಗ್ರಹಣ, ಕ್ರಿಸ್ಟೋಫರ್ ಜಾಯ್ಸನ್ ಸಂಗೀತವಿದೆ. ಇವುಗಳೊಂದಿಗೆ ‘ಉಗ್ರಮರ್ದಿನಿ’, ‘ಕುಚುಕು’ ಸಿನಿಮಾಗಳೂ ತೆರೆ ಕಾಣಲಿವೆ.



ರಜನಿ, ಯಶ್ ಶೆಟ್ಟಿ

ಶ್ರೇಷ್ಠರನ್ನು ಗೌರವಿಸುವ ‘ಸಿನಿ ಸಮ್ಮಾನ’

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ



ಕರ್ನಾಟಕದ ಸಮೃದ್ಧ ಸಿನಿಮಾ ಪರಂಪರೆಯನ್ನು ಸಂಭ್ರಮಿಸುವ ಹಾಗೂ ಚಂದನವನದ ಪ್ರತಿಭೆಗಳನ್ನು ಗುರುತಿಸುವ ‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ದ ನಾಲ್ಕನೇ ಆವೃತ್ತಿಯ ಸಮಾರಂಭ ಜೂನ್ 19ರಂದು ನಡೆಯಲಿದೆ.

ಕನ್ನಡ ಚಿತ್ರರಂಗಕ್ಕೆ ಬದುಕನ್ನೇ ಮುಡಿಪಾಗಿಟ್ಟ ಹಿರಿಯ ಕಲಾವಿದರು ಮತ್ತು ತಂತ್ರಜ್ಞರನ್ನು ಗೌರವಿಸುವ ‘ಜೀವಮಾನ ಸಾಧನೆ’ ಪುರಸ್ಕಾರವು ‘ಸಿನಿ ಸಮ್ಮಾನ’ದ ಅತ್ಯಂತ ಹೆಮ್ಮೆಯ ಘಟ್ಟಗಳಲ್ಲಿ ಒಂದಾಗಿದೆ. ಕಳೆದ ಐದಾರು ದಶಕಗಳಿಂದ ಚಿತ್ರರಂಗದಲ್ಲಿ ಅಚ್ಚಳಿಯದ ಛಾಪು ಮೂಡಿಸಿರುವ ಸಾಧಕರನ್ನು ಈ ವಿಭಾಗದಲ್ಲಿ ಸನ್ಮಾನಿಸಲಾಗುತ್ತಿದೆ. ಮೊದಲ ಆವೃತ್ತಿಯಲ್ಲಿ ನಟ ಅನಂತನಾಗ್ ಈ ಗೌರವಕ್ಕೆ ಪಾತ್ರರಾಗಿದ್ದರು. ಎರಡನೇ ಆವೃತ್ತಿಯಲ್ಲಿ ಬಹುಭಾಷಾ ನಟಿ ಸರೋಜಾ ದೇವಿ ಅವರಿಗೆ ಪುರಸ್ಕಾರ ಲಭಿಸಿತ್ತು. ಮೂರನೇ ಆವೃತ್ತಿಯಲ್ಲಿ ನಟ ಶ್ರೀನಾಥ್ ಈ ಗೌರವ ಸ್ವೀಕರಿಸಿದ್ದರು. ಈ ವರ್ಷವೂ ಚಿತ್ರರಂಗಕ್ಕೆ ಅಪಾರ ಕೊಡುಗೆ ನೀಡಿರುವ ಮತ್ತೊಬ್ಬ ಶ್ರೇಷ್ಠ ಸಾಧಕನಿಗೆ ಈ ಪುರಸ್ಕಾರ ಪ್ರದಾನವಾಗಲಿದೆ.

ನಾಲ್ಕನೇ ಆವೃತ್ತಿಗೆ 2025ರಲ್ಲಿ ಬಿಡುಗಡೆಯಾದ ಸಿನಿಮಾಗಳನ್ನು ಪರಿಗಣಿಸಲಾಗಿದೆ. 150ಕ್ಕೂ ಅಧಿಕ ಸಿನಿಮಾಗಳು ಪ್ರಶಸ್ತಿಗಾಗಿ ಸ್ಪರ್ಧಿಸಿದ್ದು, ತೀರ್ಪುಗಾರರು ನಾಮನಿರ್ದೇಶನಗಳನ್ನು ಅಂತಿಮಗೊಳಿಸಿದ್ದಾರೆ. ಇವುಗಳಿಗೆ ‘ಸಿನಿ ಸಮ್ಮಾನ’ದ ಮುಖ್ಯ ತೀರ್ಪುಗಾರರು ಅಂತಿಮ ಮುದ್ರೆ ಒತ್ತಲಿದ್ದಾರೆ. ಮಾಸಾಂತ್ಯದೊಳಗೆ ನಾಮನಿರ್ದೇಶಿತರ ಪಟ್ಟಿ ಪ್ರಕಟವಾಗಲಿದೆ.

ನಾಮನಿರ್ದೇಶಿತರ ಪೈಕಿ ವಿಜೇತರ ಆಯ್ಕೆಗಾಗಿ ಚಿತ್ರರಂಗದ ಸಾವಿರಕ್ಕೂ ಹೆಚ್ಚು ಮಂದಿ ಮತದಾನದಲ್ಲಿ ಭಾಗವಹಿಸಲಿದ್ದಾರೆ. ಚಿತ್ರರಂಗದ ಪ್ರಮುಖ ಸಂಘ–ಸಂಸ್ಥೆಗಳ ಸದಸ್ಯರು ತಮ್ಮ ಮತದಾನದ ಮೂಲಕ ನಾಮನಿರ್ದೇಶಿತರಲ್ಲಿ ಶ್ರೇಷ್ಠರನ್ನು ಆಯ್ಕೆ ಮಾಡಲಿದ್ದಾರೆ.

‘ಸಿನಿ ಸಮ್ಮಾನ’ದಲ್ಲಿ ‘ಪ್ರತಿಭಾನ್ವಿತ ಕಲಾವಿದರು’ ವಿಭಾಗದಲ್ಲಿ 15 ಪ್ರಶಸ್ತಿಗಳು, ‘ಜನಮೆಚ್ಚಿದ ವಿಭಾಗ’ದಲ್ಲಿ ನಾಲ್ಕು ಪ್ರಶಸ್ತಿಗಳು, ‘ಚಿತ್ರೋದ್ಯಮಕ್ಕೆ ದಿಕ್ಸೂಚಿಯಾಗಬಲ್ಲ ಸಿನಿಮಾಗಳು’ ವಿಭಾಗದಲ್ಲಿ ನಾಲ್ಕು ಪ್ರಶಸ್ತಿಗಳು ಹಾಗೂ ‘ಜೀವಮಾನ ಸಾಧನೆ’ ಪುರಸ್ಕಾರ ಇರಲಿವೆ. ಜೊತೆಗೆ ಸಂಪಾದಕೀಯ ಆಯ್ಕೆ ವಿಭಾಗದಲ್ಲಿ ‘ಸಿನಿ ಧ್ರುವತಾರೆ’, ‘ನವತಾರೆ’ (ನಟ–ನಟಿ) ಮತ್ತು ‘ವರ್ಷದ ಅತ್ಯುತ್ತಮ ಸಾಧನೆ’ ಸೇರಿದಂತೆ ನಾಲ್ಕು ವಿಶೇಷ ಪ್ರಶಸ್ತಿಗಳನ್ನು ನೀಡಲಾಗುತ್ತದೆ.



‘ಜೀವಮಾನ ಸಾಧನೆ’ ಪುರಸ್ಕೃತ ಬಿ. ಸರೋಜಾದೇವಿ ಅವರೊಂದಿಗೆ ಗಣ್ಯರು



ಅನಂತನಾಗ್ ಜತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತುಕತೆ



ಪ್ರಶಸ್ತಿ ಖುಷಿಯಲ್ಲಿ ಶ್ರೀನಾಥ್



ಅನಿತಾ ಭಟ್

‘ಚಿಕ್ಕವರು ಕೋಣರಲ್ಲ’ ಶೀಘ್ರದಲ್ಲಿ ತೆರೆಗೆ

ಮಕ್ಕಳ ಕಥೆಯನ್ನು ಹೊಂದಿರುವ ‘ಚಿಕ್ಕವರು ಕೋಣರಲ್ಲ’ ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಪ್ರಕಾಶ್ ಚಿನ್ನಪ್ಪ ಸಿನಿಮಾಕ್ಕೆ ಕಥೆ ಬರೆದು ನಿರ್ದೇಶಿಸಿದ್ದಾರೆ. ಜತೆಗೆ ಬಂಡವಾಳವನ್ನೂ ಹೂಡಿದ್ದಾರೆ.

‘ಐದರಿಂದ ಹನ್ನೊಂದು ವರ್ಷದವರೆಗಿನ ಮಕ್ಕಳಲ್ಲಿ ಸಾಕಷ್ಟು ಬದಲಾವಣೆಗಳು ಆಗುತ್ತವೆ. ಆ ವಯಸ್ಸಿನ ಮಕ್ಕಳು ತುಂಬ ಬುದ್ಧಿಶಾಲಿಗಳು. ಅವರ ಚಿಂತನೆ, ರೀತಿ, ನೀತಿ ವಿಭಿನ್ನ. ಅವರಿಗೆ ಇಪ್ಪತ್ತು ವರ್ಷಗಳಾದಾಗ ಜಗತ್ತು ಯಾವ ರೀತಿ ಬದಲಾಗಿರುತ್ತದೆ ಎಂಬುದೇ ಕಥೆ. ಚಿತ್ರ ಬಿಡುಗಡೆಗೆ ಸಿದ್ಧವಿದೆ. ಸಾಗರ, ಹೊಸಬಾಳೆ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ’ ಎಂದರು ನಿರ್ದೇಶಕ.

ಬಾಲ ನಟರಾದ ಸೆಹರಿ, ತಿಷ್ಯ, ಹನ್ಸಿಕಾ, ಶ್ರೀವಾಸ್, ವಿಯಾನ್, ಶ್ರೀಗೌರಿ ಮತ್ತು ಶ್ರೀವಾಸ್, ರಮೇಶ್ ಭಟ್, ಸುಂದರ ರಾಜ್ ಹಾಗೂ ಅನಿತಾ ಭಟ್ ಪ್ರಮುಖ ಪಾತ್ರಗಳಲ್ಲಿದ್ದಾರೆ. ಪ್ರಸನ್ನ, ಚಂದ್ರಶೇಖರ ಭಟ್ ಸಾಹಿತ್ಯದ ಎರಡು ಹಾಡುಗಳಿಗೆ ಉತ್ತಮ್ ಕುಮಾರ್ ಸಂಗೀತ ಸಂಯೋಜಿಸಿದ್ದಾರೆ. ರಿಷಿಕೇಶ್ ಛಾಯಾಚಿತ್ರಗ್ರಹಣ-ಸಂಕಲನವಿದೆ.

ನಿರ್ದೇಶನದತ್ತ ಅಲ್ಲು ರಘು



ಅಲ್ಲು ರಘು

ಸಾಮಾಜಿಕ ಜಾಲತಾಣಗಳಲ್ಲಿ ಜನಪ್ರಿಯರಾಗಿರುವ ಅಲ್ಲು ರಘು ಸಿನಿಮಾ ನಿರ್ದೇಶನದತ್ತ ಹೊರಳಿದ್ದಾರೆ. ತಮ್ಮ ಚೊಚ್ಚಲ ಸಿನಿಮಾ ಶೀಘ್ರದಲ್ಲಿ ಸೆಟ್ಟೇರಲಿದೆ ಎಂದು ಅವರು ತಿಳಿಸಿದ್ದಾರೆ.

‘ಹತ್ತು ವರ್ಷಗಳ ಹಿಂದೆ ಸಿನಿಮಾದ ಕನಸಿನೊಂದಿಗೆ ಸಾಮಾಜಿಕ ಜಾಲತಾಣದ ಪಯಣ ಪ್ರಾರಂಭಿಸಿದ್ದೆ. ಸಾಕಷ್ಟು ಏಳು, ಬೀಳುಗಳ ಬಳಿಕ ಸಿನಿಮಾದ ಕನಸು ನನಸಾಗುತ್ತಿದೆ. ನಮ್ಮ ಚಿತ್ರದ ಪೂರ್ವತಯಾರಿ ಪ್ರಾರಂಭವಾಗಿದೆ. ಸಂಗೀತದ ಕೆಲಸ ಮುಗಿದಿದೆ. ಶೀಘ್ರದಲ್ಲಿ ಉಳಿದ ಮಾಹಿತಿ ನೀಡುತ್ತೇವೆ’ ಎಂದರು ರಘು.

‘ಹಾಸ್ಯಮಯ ಜಾನರ್‌ನ ಸಿನಿಮಾವಿದು. ಕಾಲ್ಪನಿಕ ಕಥೆ. ಹಾಸ್ಯಮಯ ಪಾತ್ರಗಳಿಂದ ಗುರುತಿಸಿಕೊಂಡ ನಟರೊಬ್ಬರ ಜತೆ ಮಾತುಕತೆ ನಡೆಯುತ್ತಿದೆ. ಅವರಿಂದ ಹಸಿರು ನಿಶಾನೆ ದೊರೆತರೆ ಶೀಘ್ರದಲ್ಲಿ ಚಿತ್ರ ಸೆಟ್ಟೇರಲಿದೆ. ಬೆಂಗಳೂರು, ಮೈಸೂರು ಸುತ್ತಮುತ್ತ ಚಿತ್ರೀಕರಣ ನಡೆಸುವ ಆಲೋಚನೆಯಿದೆ. ಎ.ಆರ್. ರೆಹಮಾನ್ ತಂಡದಲ್ಲಿದ್ದ ಸಂಗೀತ ನಿರ್ದೇಶಕರೊಬ್ಬರು ಚಿತ್ರಕ್ಕೆ ಸಂಗೀತ ನೀಡುತ್ತಿದ್ದಾರೆ. ನಾವೇ ಒಂದಷ್ಟು ಗೆಳೆಯರು ಸೇರಿ ಈ ಚಿತ್ರವನ್ನು ನಿರ್ಮಿಸುತ್ತಿದ್ದೇವೆ’ ಎಂದು ಅವರು ಹೇಳಿದರು.

‘ಮಹಾನ್’ನಲ್ಲಿ ಕಿರಣ್ ಶ್ರೀನಿವಾಸ್



ನಟ ಕಿರಣ್ ಶ್ರೀನಿವಾಸ್, ಪಿ.ಸಿ.ಶೇಖರ್ ನಿರ್ದೇಶನದ ‘ಮಹಾನ್’ ಚಿತ್ರತಂಡವನ್ನು ಸೇರಿಕೊಂಡಿದ್ದಾರೆ. ವಿಜಯ ರಾಘವೇಂದ್ರ ನಾಯಕರಾಗಿ ನಟಿಸುತ್ತಿರುವ ಚಿತ್ರ ಚಿತ್ರೀಕರಣದ ಹಂತದಲ್ಲಿದೆ.

‘ಚಿತ್ರದಲ್ಲಿ ತುಂಬ ವಿಭಿನ್ನವಾದ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದೇನೆ. ನಿರ್ದೇಶಕರು ಕಥೆ ಹೇಳಿದಾಗಲೇ ನನ್ನ ಪಾತ್ರ ಮನಸ್ಸಿಗೆ ಬಹಳ ಹತ್ತಿರವಾಗಿತ್ತು. ದೇಶದ ಬೆನ್ನೆಲುಬಾದ ರೈತನ ಕುರಿತಾದ ಕಥೆ ಹೊಂದಿರುವ ಚಿತ್ರದಲ್ಲಿ ಭಾಗವಾಗಿರುವುದಕ್ಕೆ ಹೆಮ್ಮೆ ಇದೆ’ ಎಂದಿದ್ದಾರೆ ಕಿರಣ್.

ಆಕಾಶ್ ಪಿಕ್ಚರ್ಸ್ ಲಾಂಛನದಲ್ಲಿ ಪ್ರಕಾಶ್ ಬುದ್ದೂರು ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ರಾಧಿಕಾ ನಾರಾಯಣ್, ಮಿತ್ರ, ನಮ್ರತಾ ಗೌಡ, ವರ್ಷ ಬೊಳ್ಳಮ್ಮ ಮುಂತಾದವರು ತಾರಾಬಳಗದಲ್ಲಿದ್ದಾರೆ.

‘ಅರಣ್ಯ ಒತ್ತುವರಿ ತಡೆಯಲು ಬೇಲಿ’

ನಗರ, ಪಟ್ಟಣಕ್ಕೆ ಹೊಂದಿರುವ ಅರಣ್ಯ ಪ್ರದೇಶ ರಕ್ಷಣೆಗೆ ಕ್ರಮ: ಸಚಿವ ಖಂಡ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರ ಮತ್ತು ಪಟ್ಟಣಕ್ಕೆ ಹೊಂದಿಕೊಂಡಿರುವ ನೂರಾರು ಕೋಟಿ ಮೌಲ್ಯದ ಅರಣ್ಯ ಪ್ರದೇಶ ಒತ್ತುವರಿ ಆಗದಂತೆ ತಡೆಯಲು ಬೇಲಿ ಹಾಕಬೇಕು’ ಎಂದು ಇಲಾಖೆಯ ಅಧಿಕಾರಿಗಳಿಗೆ ಅರಣ್ಯ ಸಚಿವ ಈಶ್ವರ ಖಂಡ್ರೆ ಸೂಚನೆ ನೀಡಿದರು.

ಹಿರಿಯ ಅಧಿಕಾರಿಗಳ ಜೊತೆ ಗುರುವಾರ ಸಭೆ ನಡೆಸಿದ ಅವರು, ‘ಅರಣ್ಯೀಕರಣ ಪರಿಹಾರ ನಿಧಿ ನಿರ್ವಹಣೆ ಮತ್ತು ಯೋಜನಾ ಪ್ರಾಧಿಕಾರದ (ಕಾಂಪಾ) ನಿಧಿಯಲ್ಲಿ ಅರಣ್ಯ ಭೂಮಿ ರಕ್ಷಣೆಗೆ ಹಣ ಒದಗಿಸಲು ಅವಕಾಶವಿದೆ’ ಎಂದರು.

‘ಹಾಸನ ನಗರಕ್ಕೆ ಹೊಂದಿಕೊಂಡಿರುವ ಮಡೆನೂರು ಅರಣ್ಯ ಪ್ರದೇಶಕ್ಕೆ ಇತ್ತೀಚೆಗೆ ಭೇಟಿ ನೀಡಿದಾಗ, ಇಲಾಖೆಯ ಹೆಸರಿನಲ್ಲಿ ಆರ್‌ಟಿಸಿ ಇದ್ದರೂ ಅಲ್ಲಿ ಅರಣ್ಯ ಬೆಳೆಸದಿರುವುದು ಗಮನಕ್ಕೆ ಬಂದಿದೆ. ಹೀಗಾಗಿ, ಒತ್ತುವರಿ ನಡೆದಿದೆ. ಇಂತಹ ಭೂಮಿಯನ್ನು ತಕ್ಷಣ ಗುರುತಿಸಿ ಬೇಲಿ ಹಾಕಿ, ಸ್ಥಳೀಯ ಪ್ರಭೇದದ ಸಸಿಗಳನ್ನು ನೆಟ್ಟು ನೆಡುತೋಪು ಅಭಿವೃದ್ಧಿಪಡಿಸಬೇಕು’ ಎಂದು ಸಚಿವರು ಸೂಚಿಸಿದರು.

ಕೂಡಲೇ ಮ್ಯುಟೇಷನ್ ಮಾಡಿ: ‘ಸರ್ಕಾರದಿಂದ ಮತ್ತು ಹಿಂದೆ ರಾಜರ ಕಾಲದಲ್ಲಿ ‘ಅರಣ್ಯ’ ಎಂದು ಗೆಜೆಟ್ ಅಧಿಸೂಚನೆಯಾಗಿ ಅರಣ್ಯ ಸ್ವರೂಪ ಇದ್ದರೂ ಕೆಲವು ಕಡೆ ಇನ್ನೂ ಅರಣ್ಯ ಎಂದು ಮ್ಯುಟೇಷನ್ (ಇಂಡೀಕರಣ) ಆಗಿಲ್ಲ. ಆರ್‌ಟಿಸಿಯಲ್ಲಿ ಅರಣ್ಯ ಎಂದು ದಾಖಲಾಗದ ಕಾರಣ ಅಕ್ರಮ ಮಂಜೂರಾತಿ, ಒತ್ತುವರಿ ನಡೆಯುತ್ತಿದೆ. ಕೂಡಲೇ ಮ್ಯುಟೇಷನ್ ಮಾಡಲು ಕ್ರಮ ತೆಗೆದುಕೊಳ್ಳಬೇಕು’ ಎಂದು ಖಂಡ್ರೆ ನಿರ್ದೇಶನ ನೀಡಿದರು.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಅರಣ್ಯ ಕಾರ್ಯಪಡೆ ಮುಖ್ಯಸ್ಥರಾದ ಮೀನಾಕ್ಷಿ ನೇಗಿ, ಮುಖ್ಯ ವನ್ಯಜೀವಿ ಪರಿಪಾಲಕರಾದ ಕುಮಾರ್ ಪುಷ್ಕರ್, ಕಾಂಪಾ ವಿಭಾಗದ ಪಿಸಿಸಿಎಫ್ ರಾಧಾದೇವಿ ಸಭೆಯಲ್ಲಿ ಇದ್ದರು.

ತುಮಕೂರಿಗೆ ಪ್ರತ್ಯೇಕ ಚಿರತೆ ಕಾರ್ಯಪಡೆ


ಈಶ್ವರ ಖಂಡ್ರೆ

‘ತುಮಕೂರು ಜಿಲ್ಲೆಯಲ್ಲಿ ಜನವಾಸ ಇರುವ ಪ್ರದೇಶಗಳಿಗೆ ಚಿರತೆಗಳು ಬರುತ್ತಿವೆ. ಹೀಗಾಗಿ, ಚಿರತೆಗಳನ್ನು ಹಿಡಿದು ಕಾಡಿಗೆ ಮರಳಿಸಲು ಅಥವಾ ಪುನರ್ವಸತಿ ಕೇಂದ್ರಗಳಿಗೆ ಸ್ಥಳಾಂತರಿಸಲು ಚಿರತೆ ಕಾರ್ಯಪಡೆ ರಚಿಸಬೇಕು’ ಎಂದು ಖಂಡ್ರೆ ಸೂಚನೆ ನೀಡಿದರು.

‘ಚಿರತೆಗಳು ನಾಡಿಗೆ ಬಂದಾಗ ಜನರು ಭಯಭೀತರಾಗುತ್ತಾರೆ. ಹೀಗಾಗಿ ತಕ್ಷಣ ಸ್ಪಂದಿಸುವ ಅಗತ್ಯವಿದೆ. ಅವುಗಳನ್ನು ಸೆರೆ ಹಿಡಿಯಲು ಸಿಬ್ಬಂದಿಗೆ ಸುರಕ್ಷತಾ ಉಪಕರಣಗಳು, ಬೋನುಗಳು ಮತ್ತು ವಾಹನ ಒದಗಿಸಬೇಕು’ ಎಂದು ಅಧಿಕಾರಿಗಳಿಗೆ ನಿರ್ದೇಶನ ಹೇಳಿದರು.

1ನೇ ತರಗತಿ ಪ್ರವೇಶ: ವಯೋಮಿತಿ ಸಡಿಲಿಕೆ ಮರು ಪರಿಶೀಲನೆಗೆ ಸೂಚನೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ಇದೇ ಶೈಕ್ಷಣಿಕ ಸಾಲಿನಲ್ಲಿ ಒಂದನೇ ತರಗತಿಗೆ ದಾಖಲು ಮಾಡುವ ಮಕ್ಕಳ ವಯೋಮಿತಿ ಸಡಿಲಿಕೆ ವಿಚಾರವನ್ನು ಮರು ಪರಿಶೀಲಿಸಿ ಸೂಕ್ತ ಆದೇಶ ಹೊರಡಿಸಿ’ ಎಂದು ಶಾಲಾ ಶಿಕ್ಷಣ ಇಲಾಖೆಗೆ ಹೈಕೋರ್ಟ್ ನಿರ್ದೇಶನ ನೀಡಿದೆ.

ನಗರದ ಕೃಷ್ಣ ಗಣೇಶ್ ಸೇರಿದಂತೆ 6 ಜನರ ಪರವಾಗಿ ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿದ ರಜಾ ಕಾಲದ ನ್ಯಾಯಮೂರ್ತಿ ಎಸ್.ಆರ್. ಕೃಷ್ಣಕುಮಾರ್ ಅವರ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ವಯೋಮಿತಿ ವಿಚಾರದಲ್ಲಿ ವಿದ್ಯಾರ್ಥಿಗಳು ಹಾಗೂ ಪೋಷಕರು ತೊಂದರೆ ಎದುರಿಸುತ್ತಿದ್ದಾರೆ. ಈ ಸಂಬಂಧ ಒಂದು ವಾರದೊಳಗೆ ಎಲ್ಲಾ ಆಯಾಮಗಳಲ್ಲೂ ಪರಿಶೀಲಿಸಿ ಆದೇಶ ಹೊರಡಿಸಿ’ ಎಂದು ನ್ಯಾಯಪೀಠ ಸರ್ಕಾರಕ್ಕೆ ನಿರ್ದೇಶಿಸಿದೆ.

ಮನವಿ: ‘ಕಳೆದ ಶೈಕ್ಷಣಿಕ ವರ್ಷದ ಮಾದರಿಯಲ್ಲೇ 2026-27ನೇ ಶೈಕ್ಷಣಿಕ ಸಾಲಿನಲ್ಲಿ ಒಂದನೇ ತರಗತಿ ಪ್ರವೇಶಕ್ಕೂ ಕನಿಷ್ಠ ವಯೋಮಿತಿಯಲ್ಲಿ ಸಡಿಲಿಕೆ ನೀಡಿ 5 ವರ್ಷ 5 ತಿಂಗಳ ಮಕ್ಕಳಿಗೆ ಪ್ರವೇಶ ಅವಕಾಶ ಕಲ್ಪಿಸಬೇಕು’ ಎಂದು ಅರ್ಜಿದಾರರು ಮನವಿ ಮಾಡಿದ್ದಾರೆ.

ಬಸ್ ಮುಷ್ಕರ: ನಿರ್ಬಂಧ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆ ನಡೆಯುತ್ತಿರುವ ಈ ಸಮಯದಲ್ಲಿ ಮುಷ್ಕರ ಸರಿಯಲ್ಲ. ಸರ್ಕಾರ ಮತ್ತು ನೌಕರರ ಜಗಳದಲ್ಲಿ ಜನ ಸಾಮಾನ್ಯರಿಗೆ ತೊಂದರೆಯಾಗಬಾರದು ಎಂಬ ಮೌಖಿಕ ಅಭಿಪ್ರಾಯ ವ್ಯಕ್ತಪಡಿಸಿರುವ ಹೈಕೋರ್ಟ್, ಸಾರಿಗೆ ನಿಗಮಗಳ ನೌಕರರ ಜಂಟಿ ಕ್ರಿಯಾ ಸಮಿತಿ ಕರೆ ಕೊಟ್ಟಿರುವ ಮುಷ್ಕರಕ್ಕೆ ವಿಧಿಸಿದ್ದ ನಿರ್ಬಂಧವನ್ನು ವಿಸ್ತರಿಸಿದೆ.

ಮುಷ್ಕರವನ್ನು ಆಕ್ಷೇಪಿಸಿ ನಗರದ ಮನೆ ಕೆಲಸಗಾರ್ತಿ ಸಿ.ವೇದಾವತಿ ಹಾಗೂ ಕಟ್ಟಡ ಕಾರ್ಮಿಕ ಎಚ್.ವಿ. ಶ್ರೀಧರ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದ ರಾಜ್ ನೇತೃತ್ವದ ರಜಾಕಾಲದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ಹೆಚ್ಚುವರಿ ಅಡ್ವೊಕೇಟ್ ಜನರಲ್ ತಾರಾನಾಥ ಪೂಜಾರಿ, ‘ಬಹುತೇಕ ಸಾರಿಗೆ ಸಂಘಟನೆಗಳು ವೇತನ ಏರಿಕೆಗೆ ಒಪ್ಪಿಕೊಂಡಿವೆ. ಈಗ ಮುಷ್ಕರಕ್ಕೆ ಕರೆ ಕೊಟ್ಟಿರುವವರು ಕಾರ್ಮಿಕರನ್ನು ಪ್ರತಿನಿಧಿಸುವುದಿಲ್ಲ. ಆದಾಗ್ಯೂ ಕಾರ್ಮಿಕ ಇಲಾಖೆ ಆಯುಕ್ತರ ಜೊತೆಗಿನ ರಾಜಿ ಸಂಧಾನದ ಮಾತುಕತೆ ಇದೇ 25ಕ್ಕೆ ನಿಗದಿಯಾಗಿದೆ’ ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ರಾಜಿ ಸಂಧಾನದಲ್ಲಿ ಭಾಗಿಯಾಗಲು ಸಂಘಟನೆಗಳ ವಕೀಲರು ಒಪ್ಪಿಗೆ ಸೂಚಿಸಿದ ಹಿನ್ನೆಲೆಯಲ್ಲಿ ಮುಷ್ಕರಕ್ಕೆ ವಿಧಿಸಿದ್ದ ನಿರ್ಬಂಧ ಆದೇಶವನ್ನು ವಿಸ್ತರಿಸಿದ ನ್ಯಾಯಪೀಠ ವಿಚಾರಣೆಯನ್ನು ಜೂನ್ 2ಕ್ಕೆ ಮುಂದೂಡಿತು.

ಪುತ್ರಿಯ ಮಾನಸಿಕ ಆರೋಗ್ಯ ತಪಾಸಣೆ: ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಸ್ಲಿಂ ಪ್ರಿಯಕರನ ಜೊತೆ ಬದುಕಲು ನಿಶ್ಚಯಿಸಿರುವ ನನ್ನ 21 ವರ್ಷದ ಪುತ್ರಿಯ ಮಾನಸಿಕ ಆರೋಗ್ಯ ಮೌಲ್ಯಮಾಪನ ನಡೆಸಲು ನಿರ್ದೇಶಿಸಬೇಕು’ ಎಂದು ಕೋರಿದ್ದ ತಾಯಿಯೊಬ್ಬರ ಮನವಿಯನ್ನು ಹೈಕೋರ್ಟ್ ತಿರಸ್ಕರಿಸಿದೆ.

‘ನಾಪತ್ತೆಯಾಗಿರುವ ಪುತ್ರಿಯನ್ನು ಪತ್ತೆ ಮಾಡಲು ಪೊಲೀಸರಿಗೆ ನಿರ್ದೇಶಿಸಬೇಕು’ ಎಂದು ಕೋರಿ ಸಿಖ್ ಸಮುದಾಯದ ಯುವತಿಯ ತಾಯಿ ಸಲ್ಲಿಸಿದ್ದ ಹೇಬಿಯಸ್ ಕಾರ್ಪಸ್ ಅರ್ಜಿಯನ್ನು ರಜಾಕಾಲದ ನ್ಯಾಯಮೂರ್ತಿ ಸೂರಜ್ ಗೋವಿಂದ ರಾಜ್ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ನ್ಯಾಯಾಲಯಕ್ಕೆ ಖುದ್ದು ಹಾಜರಾಗಿದ್ದ ಯುವತಿ, ‘ನನ್ನ ಪೋಷಕರು ಮತ್ತು ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಕೆಲವರು ಒತ್ತಡ ಹೇರಿದ್ದ ಹಿನ್ನೆಲೆಯಲ್ಲಿ ನನ್ನ ಪ್ರಿಯತಮ ಅತ್ಯಾಚಾರ ಎಸಗಿ, ಮತಾಂತರಕ್ಕೆ ಒತ್ತಾಯಿಸಿದ್ದಾನೆ ಎಂದು ಪತ್ರ ಬರೆದಿದ್ದೆ’ ಎಂದರು.

‘ಪತ್ರದಲ್ಲಿ ಬರೆದಿರುವ ಮತಾಂತರ ಮತ್ತು ಅತ್ಯಾಚಾರ ಆರೋಪಗಳು ಸತ್ಯ ಅಲ್ಲ. ನನಗೆ ಬೆದರಿಕೆ ಹಾಕಿ, ಆ ಪತ್ರ ಬರೆಯುವಂತೆ ಮಾಡಲಾಗಿತ್ತು’ ಎಂದು ವಿವರಿಸಿದರು.

ಇದನ್ನು ಪರಿಗಣಿಸಿದ ನ್ಯಾಯಪೀಠ, ‘ಯುವತಿ ಸ್ವ ಇಚ್ಛೆಯಿಂದ ತನ್ನ ಪ್ರಿಯತಮನ ಜೊತೆ ವಾಸ ಮಾಡುತ್ತಿರುವುದಾಗಿ ಸ್ಪಷ್ಟಪಡಿಸಿದ್ದಾರೆ. ವಯಸ್ಕ ಯುವತಿಯ ಒಪ್ಪಿಗೆಗೆ ವಿರುದ್ಧವಾಗಿ ಮಾನಸಿಕ ಆರೋಗ್ಯ ಮೌಲ್ಯಮಾಪನ ನಡೆಸಲಾಗದು. ಅಂತೆಯೇ, ಈ ವಿಷಯದಲ್ಲಿ ನ್ಯಾಯಾಲಯ ಮಧ್ಯಪ್ರವೇಶ ಮಾಡಲು ಬಯಸುವುದಿಲ್ಲ’ ಎಂದು ಆದೇಶಿಸಿತು. ತಾಯಿಯ ಪರ ಹೈಕೋರ್ಟ್ ವಕೀಲ ಪಿ.ರಾಹುಲ್ ಕೃಷ್ಣಾರೆಡ್ಡಿ ವಾದ ಮಂಡಿಸಿದರು.

ರಾಜ್ ಠಾಕ್ರೆ ಆರೋಪ ಮುಕ್ತ

ಪ್ರಜಾವಾಣಿ ವಾರ್ತೆ

ಮುಂಬೈ: ರೈಲ್ವೆ ನೇಮಕಾತಿ ಪರೀಕ್ಷೆ ವೇಳೆ ಹಿಂಸಾಚಾರ ನಡೆಸಿ ಆಕಾಂಕ್ಷಿಗಳ ಮೇಲೆ ದಾಳಿ ನಡೆಸಿದ ಎರಡು ದಶಕದ ಹಳೆಯ ಪ್ರಕರಣದಿಂದ ಎಂಎನ್‌ಎಸ್ ಸ್ಥಾಪಕ ರಾಜ್ ಠಾಕ್ರೆ ಅವರ ಹೆಸರನ್ನು ಕೈಬಿಡಲಾಗಿದೆ. ಈ ಮೂಲಕ ಮಹಾರಾಷ್ಟ್ರ ರಾಜಕಾರಣದಲ್ಲಿ ಭಾರಿ ಚರ್ಚೆಗೆ ಗ್ರಾಸವಾಗಿದ್ದ ಘಟನೆಗೆ ಕಾನೂನಾತ್ಮಕ ತೆರೆ ಬಿದ್ದಂತಾಗಿದೆ.

‘ಉತ್ತರಾಧಿಕಾರಿ ಹೊರಗಿಟ್ಟ ಮಾತ್ರಕ್ಕೆ ವಿಲ್ ಅಮಾನ್ಯವಲ್ಲ’

ನವದೆಹಲಿ (ಪಿಟಿಐ): ‘ಕಾನೂನುಬದ್ಧ ಉತ್ತರಾಧಿಕಾರಿಗಳನ್ನು ಹೊರಗಿಟ್ಟ ಮಾತ್ರಕ್ಕೆ ವಿಲ್ ಅಮಾನ್ಯವಾಗುವುದಿಲ್ಲ’ ಎಂದು ಸುಪ್ರೀಂ ಕೋರ್ಟ್ ಗುರುವಾರ ಪ್ರಕರಣವೊಂದರ ವಿಚಾರಣೆ ವೇಳೆ ಹೇಳಿದೆ.

ಕರ್ನಾಟಕದಲ್ಲಿರುವ ತನ್ನ ಆಸ್ತಿಯನ್ನು, ದಿವಂಗತ ಬಿ.ಶೀನಾ ನಾಯರಿ ತಮ್ಮ ಸಹೋದರಿ ಲಕ್ಷ್ಮೀ ನಾಯರ್ಥಿಗೆ ದಾನ ಮಾಡಿದ್ದ ವಿಲ್‌ನ ಸಿಂಧುತ್ವ ಪ್ರಶ್ನಿಸಿ ಶೀನಾ ನಾಯರಿ ಅವರ ಪತ್ನಿ ಮತ್ತು ಮಕ್ಕಳು ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿಗಳಾದ ಉಜ್ಜಲ್ ಭುಯಾನ್ ಮತ್ತು ವಿಜಯ್ ಬಿಷ್ಣೋಯ್ ಅವರ ಪೀಠವು ಗುರುವಾರ ವಜಾಗೊಳಿಸಿತು. ‘ವಿಲ್ ಅಧಿಕೃತವಾದದ್ದು’ ಎಂಬ ವಿಚಾರಣಾ ನ್ಯಾಯಾಲಯ, ಮೇಲ್ಮನವಿ ನ್ಯಾಯಾಲಯ ಮತ್ತು ಕರ್ನಾಟಕ ಹೈಕೋರ್ಟ್‌ನ ಆದೇಶವನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿದೆ.

ವಿಲ್ ಬರೆದವರು ತಮ್ಮ ಹೆಂಡತಿ, ಮಕ್ಕಳು ಅಥವಾ ಇತರೆ ಸಂಬಂಧಿಕರಿಗೆ ಯಾವುದೇ ಅನ್ಯಾಯ ಮಾಡಿಲ್ಲ ಎನ್ನುವುದು ಸ್ಪಷ್ಟವಾಗಿದೆ. ಜತೆಗೆ, ಅವರು ಮುಂಬೈನಲ್ಲಿ ವಾಸಿಸುತ್ತಿರುವ ತಮ್ಮ ಪತ್ನಿ ಮತ್ತು ಮಕ್ಕಳಿಗೆ ಸಾಕಷ್ಟು ಆಸ್ತಿಯನ್ನು ನೀಡಿದ್ದಾರೆ. ಹೀಗಿರುವಾಗ ನೈಸರ್ಗಿಕ ಉತ್ತರಾಧಿಕಾರಿಗಳನ್ನು ಹೊರಗಿಟ್ಟಿರುವುದನ್ನು, ವಿಲ್ ಅಮಾನ್ಯಗೊಳಿಸಲು ಅನುಮಾನಾಸ್ಪದ ಸನ್ನಿವೇಶ ಎಂದು ಪರಿಗಣಿಸಲು ಆಗುವುದಿಲ್ಲ’ ಎಂದು ನ್ಯಾಯಪೀಠ ಹೇಳಿದೆ.

THE FEDERAL BANK LIMITED
Regd. Office: Aluva, Kerala.

ZONAL OFFICE: 2nd Floor, Halcyon Complex, No.9, St Marks Road, Bangalore-560 001.
e-mail: bgrr-cpc@federalbank.co.in Phone: 080-22074610/604/613/624/625

PUBLIC NOTICE FOR AUCTION OF GOLD 20/05/2026

NOTICE is hereby given to the general public and in particular to the borrowers that the borrowers have failed to repay the gold loans mentioned below and redeem the gold jewellery pledged within the stipulated time in spite of several reminders. Borrowers are hereby required to remit the entire dues together with applicable interest, costs and other charges due to the Bank under the respective gold loan accounts on or before 20.06.2026 and redeem the gold jewellery, failing which the Bank will be constrained to auction the gold jewellery pledged, without further notice/intimation to the borrowers. (*In cases where the Borrower is deceased, the obligations under the loan shall apply to the legal heirs of the Borrower). This notice is issued without prejudice to the other legal rights and remedies available to the Federal Bank Ltd. The details of defaulted gold loan accounts with total outstanding as on 30.04.2026 are as follows:

Br. Hunsur: BM Road, Opp. Vijaya Bank, Hunsur, Mysore District, Karnnataka- 571105 Ph. 08222-252968 :-

Borrower's Name	Loan Account No.	Total Due
PRASANNA KUMAR	19896900001751	56154
PRASANNA KUMAR	19896400085247	231000
Prajwal	19896400083044	416127
Prajwal	19896400083234	1705277
Kumara	19896400078788	257261

Br. Nanjangud: PID #34-4-111, Bazaar Street, Ward No. 5, Nanjangud, Mysore, Karnataka- 571 301.

Borrower's Name	Loan Account No.	Total Due
Sushmitha	26236400002176	625157
Sushmitha	26236400002168	301951
Sushmitha	26236400002184	821129
Manimaran N	26236400001145	352771
Mahadevaswamy M	26236400002192	1108420
Mahadevaswamy M	26236400001640	45514
Mahadevaswamy M	26236400002200	189089

Br. Banashankari: Sudhama, No.299, 100ft.Ring Road, 4th Phase, Banashankari 3rd Stage, Bangalore-560 085. Ph. 080-26691593 :-

Borrower's Name	Loan Account No.	Total Due
SIDDAMARAIAH	17816400090452	649113.75
CHANDRA SHEKAR REDDY M	17816400091815	814160
VINAY N	17816900005976	225523
VINAY N	17816900007477	23454
RAVEENDAR C GHALI	17816900006628	210989.71
GOLLAHALLI LOKESH	17816100364892	100840
JAYAMMA H	17816900006487	52847
JAYAMMA H	17816100365154	84948
DODDAVVA .	17816900001850	92970
RAVIKUMAR C T	17816400092227	2338324
MANI H B	17816900004912	58519
ALLOORI MUNI LAKSHMI	17816400092920	1090615
ALLOORI MUNI LAKSHMI	17816400092508	2129311

Br. Mangalore Kankanady : The Vintage, Kankanady, Dakshina Kannad, Mangalore, Karnataka- 575 002 Ph. 0824-2430152 :-

Borrower's Name	Loan Account No.	Total Due
HUSAIN P	17706400042787	1267500.82
HAIRUNISA ABDUL KHADAR	17706900002802	30,82,069.50
ABDUL RAZAK	17706900002661	225355
RIZWAN	17706900001374	194067
RAZIYA FARHEEN RAYEES AHMED LANKA	17706900004303	303092
RAZIYA FARHEEN RAYEES AHMED LANKA	17706900003826	642032
SACHIN MATHEW	17706900003818	151580

Br. Bangalore/R T Nagar : No.20, 1st Main Road, 108 'B' Bus Station, Ganga Nagar, R T Nagar P O, Bangalore- 560 032. Ph. 91-80-23434258:-

Borrower's Name	Loan Account No.	Total Due
NISHATH FATHIMA	14726900006887	324405
PAVANI M	14726400087197	423,137.28
RADHAMMA	14726400086488	2593440.72
SUBHASHINI N	14726400087866	881091.84
ASHA RAGHAVENDRA	14726900009618	1273147
ASHA RAGHAVENDRA	14726900009626	658624
ASHA RAGHAVENDRA	14726900009600	1960770.73
VENUKRISHNAN U	14726100222664	221937.45
VENUKRISHNAN U	14726100222672	339373
SHASHIKALA LAKKANNAVAR	14726900008495	200509
ABDUL REHMAN	14726900007943	34722
ABDUL REHMAN	14726900006895	393841
ABDUL REHMAN	14726900006341	814799.96
ZAMEER SHARIFF	14726800080594	186711
ZAMEER SHARIFF	14726800092581	552036

Br. Handpost: Sy. No. 34/1A, Yerahalli Taluk, HD Kote, Mysore -District, Karnataka- 571 114. Ph. 08228-255225 :-

Borrower's Name	Loan Account No.	Total Due
KEERTHI PRASAD R K	21726900011854	106680
MAHADEVASWAMY B	21726900019972	79000
MAHADEVASWAMY B	21726400225780	312434
NASEER AHAMED	21726900006227	80000
NASEER AHAMED	21726900012639	74808
NASEER AHAMED	21726900010930	151031
SANNA THAYAMMA	21726400234519	360000
SANNA THAYAMMA	21726900010666	160960

Br. Hoskote: Gangamma Gudi Road, M V Extension, Hoskote, Bangalore Rural- 562 114. Ph. 91-80-27933430,91-80-27905942 :-

Borrower's Name	Loan Account No.	Total Due
CHANDRASHEKAR M	15855500001466	299832
M SUNIL KUMAR .	15855500001474	300000
ARAVIND S	15856400056329	116363
ARAVIND S	15856400056360	577400.46
ARAVIND S	15856400058069	588000
ARAVIND S	15856400058945	550000
ARAVIND S	15856400058978	660000

Br. Kodathi Gate: St. Patrick Academy Campus, Sarjapur Road, Carmelaram P O, Bangalore, Karnataka- 560 035 Ph. 080-28441020 :-

Borrower's Name	Loan Account No.	Total Due
MOHAN KUMAR V	21716400135923	1462000
ANIT K	21716400131609	521518
ANIT K	21716100039045	284281
ANIT K	21716100031844	137937
ANIT K	21716100034954	206786
RESHMA	21716100032255	149291
PRAVEEN A	21716100031943	50990
PRAVEEN A	21716100033063	22952
PRAVEEN A	21716100033311	38615
PRAVEEN A	21716100032099	102577
ZIILONI KRIINA	21716100031240	115186

Br.Rama Murthy Nagar:Ground Floor,V Tower, T C Palya Main Road, Bangalore, Karnnataka- 560 016. Ph. No: 080 2656 7001:-

Borrower's Name	Loan Account No.	Total Due
SHANKAR S	26146900001711	255479
SHANKAR S	26146900000887	317483
SHANKAR S	26146900001976	359000
SHANKAR S	26146900000929	383566

Br.Doddaballapura: D Cross Road, Doddaballapur, BangaloreRural, Karnataka-561 203 Ph. 080-27622105 :-

Borrower's Name	Loan Account No.	Total Due
RAMALAKSHMAMMA	16316400133650	670502
RAMALAKSHMAMMA	16316400120509	276869

Br. Bidadi: Site No. 342/370, Nelligudda Tank Road, Bidadi, Banngalore South, Karnataka- 562 109. Ph. 91-80-27282383 :-

Borrower's Name	Loan Account No.	Total Due
SONA RAM	16706900003306	73727.45
SONA RAM	16706100067929	100633
SONA RAM	16706900004668	11895
PRASAD G	16706400114769	949090
PRASAD G	16706400114736	366832
PRASAD G	16706400115055	943661
SANDEEP CHOWKAHALLI SADANANDA	16705500019209	309430
SANDEEP CHOWKAHALLI SADANANDA	16706400119172	797507
SANDEEP CHOWKAHALLI SADANANDA	16706400100115	41685.36
SANDEEP CHOWKAHALLI SADANANDA	16706400119164	495885
ASHA	16706400116574	270088.50
SHIVARAJU	16706100068380	115222
SHIVARAJU	16706900004882	196602.12
RENUKAMMA K M	16706900004437	449960.26
SHARADAMMA	16706100067150	94971
NABILA KHANUM	16706400118794	233276.84
NABILA KHANUM	16706400115287	345021.50
NABILA KHANUM	16706400116780	336335
NAGARATHNA	16706400117424	695527
NAGARATHNA	16706400117457	1272718.22
JAYANNA	16706400116707	775953
JAYANNA	16706400116699	273354

Br. Thokottu: R E B Complex, Opp. Thokottu bus Stand, NH 17, Permannur Pothokkottu JN. Thokottu, Ullal- 575 017 Ph. 0824-2462013 :-

Borrower's Name	Loan Account No.	Total Due
OMANA P	20136900001668	143993.06

Br. Mysore/ Hebbal : #416, Dr. Sridhar Murthy Road, Hebbal, Mysore, Karnataka- 570 016 Ph. 9741294072 :-

Borrower's Name	Loan Account No.	Total Due
TEJASWINI H	24516800000041	2123202

Br. Kadur: Dr. Vishwanath Building, Maravanji Circle Road, Kadur, Chikamagalur, Karnataka- 577 548. Ph. 08267-221244:-

Borrower's Name	Loan Account No.	Total Due
LOKESHA BABU K	18936400075482	100615
SHAILAJA AP	18936400065780	148961

Br. Mysore: The Variety Mansion, Bangalore Nilgiri Road, Lashkar -Mohalia, Mysore, Karnataka- 570 001. Ph. 0821-2520055:-

Borrower's Name	Loan Account No.	Total Due
SANDEEP S S	12816400068404	310827
SANDEEP S S	12816400068032	306248
SANDEEP S S	12816100306047	315546

Br. Hirandahalli: Sy. No.81/1, Hirandahalli Main Road, Opp. Aswathakatte, Virgonagar P O. Bangalore, Karnataka- 560 049. Ph. 080-28473033:-

Borrower's Name	Loan Account No.	Total Due
Soubhagya Ranjan Nayak	21636400113144	1102897
Soubhagya Ranjan Nayak	21636900006459	425000
Bhagya	21636900004231	152729
Mallikarjuna M	21636100021548	164674

Br. Kushalnagar: HRS Mansion, BM Road, Kushal Nagar, Kodagu District, Karnataka-571 234. Ph. 08276-274084 :-

Borrower's Name	Loan Account No.	Total Due
ISMAIL	19316100166130	13563
UMMAR M	19316400117379	1232188
UMMAR M	19316400117361	806057
UMMAR M	19316400117387	287512
BHUNDA RAM	19316100165801	221368.18

Br. Hebri: Spatika Plaza, Kuchoor Road, Hebri, Karkala Taluk, Udupi District, Karnataka- 576 112. Ph. 08253-250045 :-

Borrower's Name	Loan Account No.	Total Due
K J CHARIYANA	18966100006982	45000
SHAJI	18966400037919	102500
AJITH KUMAR	18966400038255	746000

Br. Bangalore/GandhiNagar: PB No. 9981, No. 24, 2nd Cross, Gandhi -Nagar, Bangalore- 560 009. Ph. 91-80-22385208, 91-80-22253222 :-

Borrower's Name	Loan Account No.	Total Due
PANEER SELVAM C	11896900004753	470858.52
RAHAMATHULLA KHAN	11895600005805	6192573
NATARAJA GUPTA K V	11896100138484	600603
CHANDRASHEKHAR ACHARI S	11895600005714	510000
CHANDRASHEKHAR ACHARI S	11896900006709	3000000
JAISHANKAR K S	11895600005946	1040000
UMA DEVI V	11896900006139	36000
UMA DEVI V	11896900006048	123000
UMA DEVI V	11895600005847	2820411
UMA DEVI V	11895600005862	401406
M SUJATHA	11895600005888	5019084
M SUJATHA	11895600005821	1236550
M SUJATHA	11896100136124	1287713
JAYANTHI S	11895600005904	878975
JAYANTHI S	11895600005896	1695063
RUPALI DIPAK MOLE	11896900005131	412644.63
SENTHIL K	11896900005420	1127130
RUPALI DIPAK MOLE	11896900006030	410000

Br. Bangalore/Indiranagar: 315/1, 100 Feet Road, Opp Post Office, Indiranagar, Bangalore, Karnataka- 560 038. Ph. 91-80-25212341:-

Borrower's Name	Loan Account No.	Total Due
C P JESEENA	15356900004416	324673
C P JESEENA	15356900008391	153007
C P JESEENA	15356900004168	3,24,627.62
C P JESEENA	15356900007542	373000
C P JESEENA	15356900007575	290000
KUMAR M	15356400063136	346966
POOJA JAVA	15356900007955	1153662
VIMAL CHANDRA GAUR	15356900000638	316954

Br. Belthangadi: Suvarna Arcade, Belthangadi, Dakshin Kannad-574214 :-

Borrower's Name	Loan Account No.	Total Due
NOWFAL	19016400110651	325093.89
IRSHANA A	19016900001988	35974

Br. Karwar: 451/G-1 Suprabha Green Street, Karwar, Karnataka - 581 301 Phone no. 91-8382-222842 :-

Borrower's Name	Loan Account No.	Total Due
Mohan Balachandra Pagi Talapankar	16286100019154	90445.27
ABHISHEK SADANAND BANDEKAR	16286100019329	60882

Br. Chikodi: No. 3450, Sadguru Premnivas, Indiranagar, Chikodi-591201:-

Borrower's Name	Loan Account No.	Total Due
BABU KAMATE	19396400022589	95000

Bangalore 20-05-2026 — Vice President & Zonal Head

ಮಂಗಳೂರು ಮಹಾನಗರಪಾಲಿಕೆ

MCC/EE1/TC2/2026-27 ದಿನಾಂಕ: 20-05-2026

ಪ್ರಕಟಣೆ E-PROCUREMENT OF KARNATAKA

ಮಂಗಳೂರು ಮಹಾನಗರಪಾಲಿಕೆಯ ಸಾಮಾನ್ಯ ನಿಧಿಯಲ್ಲಿ ಕಾಮಗಾರಿಗಳನ್ನು ನಿರ್ವಹಿಸುವ ಬಗ್ಗೆ ಈ ಕಛೇರಿ ಟೆಂಡರ್ ಸಂಖ್ಯೆ: **DMA/2026-27/WORK INDENT NO. 58501, 58479, 58433, 58438, 58420, 58481, 58480, 58412, 58502, 58503, 58485, 58454, 58457, 58459, 58416, 58417, 58499, 58421, 58463, 58464, 58509, 58510, 58506, 58508** ದಿನಾಂಕ 15.05.2026 ರಂದು ಟೆಂಡರ್ ಆಹ್ವಾನಿಸಲಾಗಿದ್ದು, ಸದ್ರಿ 24 ಕಾಮಗಾರಿಗಳ ಟೆಂಡರನ್ನು ತಾಂತ್ರಿಕ ಕಾರಣಗಳಿಂದ ರದ್ದುಗೊಳಿಸಲಾಗಿದೆ.

ಸಹಿ/- ಕಾರ್ಯಪಾಲಕ ಅಭಿಯಂತರರು,
ಮಂಗಳೂರು ಮಹಾನಗರಪಾಲಿಕೆ

DIPR/DK/KSMCA/252/26-27 dt: 21.05.2026

ಬೆಂಗಳೂರು ಸ್ಮಾರ್ಟ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್

B-Smile

ಯೋಜನೆ ಅಭಿಯಂತರರ–07 ಕಚೇರಿ, ಬೆಂಗಳೂರು ಸ್ಮಾರ್ಟ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್, ನೆಲಮಹಡಿ ಅನೆಕ್ಸ್–2 ಕಟ್ಟಡ, ಜಿಬಿಎ ಮುಖ್ಯ ಕಚೇರಿ ನರಸಿಂಹರಾಜ ಚೌಕ, ಬೆಂಗಳೂರು – 560002.

ಸಂಖ್ಯೆ: ಬಿ–ಸ್ಮೈಲ್/ಯೋಅ–07/ಟೆಂಡರ್/01/2026–27 ದಿನಾಂಕ: 21–05–2026

ತಿದ್ದುಪಡಿ–1

ಕಾಮಗಾರಿಯ ಹೆಸರು ತುಮಕೂರು ರಸ್ತೆಯಲ್ಲಿ ಆರ್‌ಎಸ್‌ಎಸ್ ಶಾಂತಿನಿಕೇತನ ಮುಂಭಾಗ ಎಂಇಐ ಜಂಕ್ಷನ್‌ನಲ್ಲಿ (ಉದ್ದ 0.50 ಕಿಲೋ ಮೀಟರ್) ಇಂಜಿನಿಯರಿಂಗ್, ಪ್ರೊಕ್ಯೂರ್‌ಮೆಂಟ್ ಮತ್ತು ನಿರ್ಮಾಣ (ಇಪಿಸಿ) ಮಾದರಿ ಅಡಿಯಲ್ಲಿ ಒಪ್ಪುವ ದರ ಏರಿಕೆಯೊಂದಿಗೆ ಲಂಪ್‌ಸಮ್, ಟರ್ನ್‌ಕೀ ಮೇಲೆ 10 ವರ್ಷಗಳ ನಿರ್ವಹಣೆ ಒಳಗೊಂಡಂತೆ ವಿಭಜಿತ ಮೇಲ್ಸೇತುವೆ ನಿರ್ಮಾಣ ಮಾಡುವುದು.

ಟೆಂಡರ್ ಪ್ರಕಟಣೆಯ ಕಚೇರಿಯ ಸಂಖ್ಯೆ: ಬಿ–ಸ್ಮೈಲ್/ಯೋಅ–07/ಟೆಂಡರ್/01/2026–27 ದಿನಾಂಕ 20–05–2026

ಬಿಡ್ಡಿಂಗ್ ದಾಖಲೆಯ ಉಲ್ಲೇಖ–ಐಎಫ್‌ಟಿ

ಟೆಂಡರ್ ಪ್ರಕಟಣೆಯ ಪ್ರಕಾರ	ಓದಿಕೊಳ್ಳಬೇಕಾಗಿರುವುದು
ಇಎಂಡಿ	ಇಎಂಡಿ
₹.4.05 ಕೋಟಿಗಳು (₹.1.00 ಲಕ್ಷ ಇ–ಪಾವತಿ ಮೂಲಕ ಶ್ಯೂರಿಟಿ ಬಾಂಡ್/ಇ–ಬಿಜಿ/ಎಫ್‌ಡಿಆರ್ ಮೂಲಕ)	₹.40.50 ಲಕ್ಷಗಳು (₹.1.00 ಲಕ್ಷ ಇ–ಪಾವತಿ ಮೂಲಕ ಶ್ಯೂರಿಟಿ ಬಾಂಡ್/ಇ–ಬಿಜಿ/ಎಫ್‌ಡಿಆರ್ ಮೂಲಕ)

ಸಹಿ/– ಯೋಜನೆ ಅಭಿಯಂತರರು–07
ಬೆಂಗಳೂರು ಸ್ಮಾರ್ಟ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್

ಕರ್ನಾಟಕ ಸರಕಾರ (ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ

ನಂ.ಲೋ.ಇ./ಚಿ.ವಿ./ಸ.ಇಂ.–1/ಟೆಂಡರ/2026–27/998 ದಿನಾಂಕ: 20/05/2026

ಅಲ್ಪಾವಧಿ ಇ–ಟೆಂಡರ್/ಮರುಟೆಂಡರ್ ಪ್ರಕಟಣೆ (Acll-1 & Call-2)

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2025–26 ನೇ ಸಾಲಿನ ಲೆಕ್ಕ ಶೀರ್ಷಿಕೆ 4059–80–051–0–32–386 ನ್ಯಾಯಾಲಯ ಕಟ್ಟಡಗಳ ನಿರ್ಮಾಣ ಅಡಿ 1 ಕಾಮಗಾರಿ, 5054– ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ – ಬಂಡವಾಳ ವೆಚ್ಚ ಅಡಿ 2 ಕಾಮಗಾರಿಗಳು, 4059–80–051–0–29–386 ಲೋಕೋಪಯೋಗಿ ಇಲಾಖಾ ಕಟ್ಟಡಗಳು ಅಡಿ 1 ಕಾಮಗಾರಿ, ಹೀಗೆ ಒಟ್ಟು 4 ಕಾಮಗಾರಿಗಳು ಇದ್ದು, ಗುತ್ತಿಗೆಗೆ ಇಟ್ಟ ಕನಿಷ್ಠ ಮೊತ್ತ ರೂ. 160.00 ಲಕ್ಷ ಹಾಗೂ ಗರಿಷ್ಠ ಮೊತ್ತ ರೂ. 280.00 ಲಕ್ಷ ಇರುವ ಕಾಮಗಾರಿಗಳಿಗೆ ಟೆಂಡರ್/ಮರುಟೆಂಡರ್ ಆವ್ಹಾನಿಸಲಾಗಿದೆ.

ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು

1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ : 05–06–2026 ರಂದು (11.00 ಗಂಟೆಗೆ) 2)ಆಕ್ಷೇಪಣೆ – ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ : 06–06–2026 (ಸಾಯಂಕಾಲ 5.30 ಗಂಟೆಯವರೆಗೆ) 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 08–06–2026 (ಸಾಯಂಕಾಲ 5.00 ಗಂಟೆಯವರೆಗೆ) 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 10–06–2026 (ಸಾಯಂಕಾಲ 4.30 ಗಂಟೆಗೆ) 5) ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): “ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ” 6) ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ–ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.

ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ kppp.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

DIPR/BGM/RO-NO-287/KSMCA/2026-27

ಜಿಲ್ಲಾ ಪಂಚಾಯತ್ ಕೋಲಾರ
ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೋಲಾರ–563101. ದೂರವಾಣಿ ಸಂಖ್ಯೆ: 08152–222570, ಇ–ಮೇಲ್ ವಿಳಾಸ: eepredkolar1@gmail.com

ಅಲ್ಪಾವಧಿ ದ್ವಿ–ಲಕೋಟೆ ಟೆಂಡರ್ ಇ–ಪ್ರಕ್ಯೂರ್‌ಮೆಂಟ್
ಪ್ರಕಟಣೆ ಸಂಖ್ಯೆ: 02/2026–27 ದಿನಾಂಕ: 07.05.2026

ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ KW-IV ರ ನಿಬಂಧನೆಗೊಳಪಟ್ಟಂತೆ ಟೆಂಡರ್‌ಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಐಟಂವಾರು ಇ–ಪ್ರಕ್ಯೂರ್‌ಮೆಂಟ್ ಅಲ್ಪಾವಧಿ ದ್ವಿ–ಲಕೋಟೆ ಪದ್ಧತಿಯಲ್ಲಿ **(Two Cover System)** ಸೂಕ್ತ ದರ್ಜೆಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿದ್ದು, ಅಧಿಕೃತ ಗುತ್ತಿಗೆದಾರರಿಂದ ಕೋಲಾರ ಜಿಲ್ಲೆ ಕೋಲಾರ, ಮಾಲೂರು, ಕೆ.ಜಿ.ಎಫ್. ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳಿಗಾಗಿ ಮಾನ್ಯ ಮುಖ್ಯ ಮಂತ್ರಿಗಳ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಯಡಿಯಲ್ಲಿ ದ್ವಿ–ಲಕೋಟೆಯಲ್ಲಿ ಟೆಂಡರ್ ಆಹ್ವಾನಿಸಲಾಗಿದ್ದು, ಕೆ.ಡಬ್ಲ್ಯೂ–4 ರಡಿ ಇಂಡೆಂಟ್ ಸಂಖ್ಯೆ: RDPR/2026-27/RD/WORK_INDENT25950 ಆಗಿದ್ದು, ಟೆಂಡರಗಿಟ್ಟ ಮೊತ್ತ ರೂ:. 368.90 ಲಕ್ಷಗಳು, RDPR/2025-26/RD/WORK_INDENT24197 ಆಗಿದ್ದು, ಟೆಂಡರಗಿಟ್ಟ ಮೊತ್ತ ರೂ:. 125.90 ಲಕ್ಷಗಳು, RDPR/2026-27/RD/WORK_INDENT25911 ಆಗಿದ್ದು, ಟೆಂಡರಗಿಟ್ಟ ಮೊತ್ತ ರೂ:. 208.96 ಲಕ್ಷಗಳು, RDPR/2025-26/RD/WORK_INDENT25666 ಆಗಿದ್ದು, ಟೆಂಡರಗಿಟ್ಟ ಮೊತ್ತ ರೂ:. 304.34 ಲಕ್ಷಗಳು, RDPR/2025-26/RD/WORK_INDENT25668 ಆಗಿದ್ದು, ಟೆಂಡರಗಿಟ್ಟ ಮೊತ್ತ ರೂ:. 410.76 ಲಕ್ಷಗಳು, ಟೆಂಡರಗಳನ್ನು ಆಹ್ವಾನಿಸಲಾಗಿದ್ದು, ಸದರಿ ಕಾಮಗಾರಿಗೆ ಕರ್ನಾಟಕ ಸರ್ಕಾರದ ಅಧಿಕೃತ ವೆಬ್‌ಸೈಟ್: **https://kppp.karnataka.gov.in/** ಮುಖಾಂತರ ಇ–ಟೆಂಡರನಲ್ಲಿ ಭಾಗವಹಿಸಲು ಕೋರಲಾಗಿದೆ. ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್–ಬಿಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಅಫ್‌ಲೋಡ್ ಮಾಡುವ **ಕೊನೆಯ ದಿನಾಂಕ : 10.06.2026 ರ ಸಂಜೆ: 4.00** ರವರೆಗೆ ಗುತ್ತಿಗೆದಾರರು ಟೆಂಡರುಗಳನ್ನು ವೆಭ್‌ಸೈಟ್‌ನಲ್ಲಿ ಅಫ್‌ಲೋಡ್ ಮಾಡಬಹುದಾಗಿರುತ್ತದೆ. (2) ಟೆಂಡರನ ತಾಂತ್ರಿಕ ಬಿಡ್ಡನ್ನು ತೆರೆಯುವ **ದಿ: 11.06.2026 ರಂದು 4.00 ಗಂಟೆಗೆಂದು ನಿಗದಿ ಪಡಿಸಲಾಗಿದೆ.** (3) ತಾಂತ್ರಿಕ ಬಿಡ್ಡನಲ್ಲಿ ಅರ್ಹರಾದ ಗುತ್ತಿಗೆದಾರರಿಗೆ ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕವನ್ನು ಪ್ರತ್ಯೇಕವಾಗಿ ತಿಳಿಸಲಾಗುವುದು. ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಇ–ಪ್ರಕ್ಯೂರ್‌ಮೆಂಟ್ ಪೋರ್ಟಾಲ್ **(Viz., https://kppp.karnataka.gov.in/)** ಸಂಪರ್ಕಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ವಿಭಾಗ ಕಛೇರಿಯ ಕೆಲಸದ ದಿನಗಳಂದು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಟೆಂಡರ್ ಡೌನ್‌ಲೋಡ್ ಮತ್ತು ಅಪ್‌ಲೋಡ್‌ಗೆ ಸಂಬಂಧಿಸಿದಂತೆ ಇ–ಪ್ರಕ್ಯೂರ್‌ಮೆಂಟ್ ಸಹಾಯವಾಣಿ ದೂರವಾಣಿ ಸಂಖ್ಯೆ: **91 9240214000 & +91 9240214001.** ಅನ್ನು **ಸಂಪರ್ಕಿಸಲು ಕೋರಲಾಗಿದೆ.**

ಸಹಿ/– ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:78/ಕೆಎಸ್‌ಎಂಸಿಎ/2026–27

ಭಾರಿ ಮಳೆ: ಧರೆಗುರುಳಿದ ಮರಗಳು

ರಸ್ತೆಯಲ್ಲೇ ನೀರು ನಿಂತಿದ್ದರಿಂದ ವಾಹನ ಸಂಚಾರಕ್ಕೆ ತೊಡಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಗುರುವಾರ ಸಂಜೆ ಹಾಗೂ ರಾತ್ರಿ ಗಾಳಿ ಸಹಿತ ಸುರಿದ ಮಳೆಯಿಂದಾಗಿ ಹಲವು ಕಡೆಗಳಲ್ಲಿ ಮರಗಳು ಮುರಿದು ಬಿದ್ದವು. ನಮ್ಮ ಮೆಟ್ರೊ ನೇರಳೆ ಮಾರ್ಗದಲ್ಲಿ ಸಂಚಾರವನ್ನು ನಿಧಾನಗೊಳಿಸಲಾಯಿತು. ರಸ್ತೆಯಲ್ಲೇ ನೀರು ಹರಿದ ಕಾರಣ ವಾಹನಗಳು ಮಂದಗತಿಯಲ್ಲಿ ಸಂಚರಿಸಿದವು.

ಇಂದಿರಾನಗರ ಸುತ್ತಮುತ್ತ ನಾಲ್ಕು ಮರಗಳು, ಮಡಿವಾಳ ಬಿಟಿಎಂ ಬಡಾವಣೆ, ಮಹಾಲಕ್ಷ್ಮಿ ಲೇಔಟ್ ಸಹಿತ ಅನೇಕ ಕಡೆಗಳಲ್ಲಿ ಮರಗಳು ಮುರಿದು ರಸ್ತೆ ಮೇಲೆ ಬಿದ್ದಿದ್ದರಿಂದ ವಾಹನ ಸಂಚಾರಕ್ಕೆ ತೊಡಕುಂಟಾಯಿತು. ಶಾಂತಲಾ ನಗರದಲ್ಲಿ ಬ್ರಿಗೇಡ್ ರಸ್ತೆ ಬಳಿ ಪಾರ್ಕಿಂಗ್ ಸ್ಥಳದಲ್ಲಿ ಮರದ ಕೊಂಬೆ ಮುರಿದು ಬಿದ್ದು ಕಾರು ಹಾಗೂ ಹಲವು ದ್ವಿಚಕ್ರವಾಹನಗಳಿಗೆ ಹಾನಿಯಾಗಿದೆ. ರಾಜಾಜಿನಗರದಲ್ಲಿ ಕಾರಿನ ಮೇಲೆ ಮರ ಮುರಿದು ಬಿದ್ದಿದೆ. ಶಿವಾನಂದ ಸರ್ಕಲ್ ಸಹಿತ ಕೆಲವೆಡೆ ಆಲಿಕಲ್ಲು ಮಳೆಯಾಗಿದೆ.

ಹಲವು ಕಡೆಗಳಲ್ಲಿ ಪರ್ಯಾಯ ರಸ್ತೆಗಳಲ್ಲಿ ವಾಹನಗಳು ಸಂಚರಿಸುವಂತಾಯಿತು. ಮುಖ್ಯ ರಸ್ತೆ ಬಿಟ್ಟು ಸ್ವಾಮಿ ವಿವೇಕಾನಂದ ರಸ್ತೆ ಮೆಟ್ರೊ ನಿಲ್ದಾಣದಿಂದ ಸಿಎಂಎಚ್ ಆಸ್ಪತ್ರೆ ಮೂಲಕ ಸಾಗಿದವು. ಬಾಣಸವಾಡಿ-ಹೊರಮಾವು ಕಡೆ ಸೇತುವೆಯಿಂದ ಕಲ್ಯಾಣ್ ನಗರ ಕಡೆಗೆ, ರಿಚರ್ಡ್ಸ್ ರಸ್ತೆ ಪಾರ್ಕ್ ಕಡೆಯಿಂದ ಡೇವಿಸ್ ರಸ್ತೆಯ ಕಡೆಗೆ ಹಾಗೂ ಮಚಲಿಬೆಟ್ಟ ಜಂಕ್ಷನ್‌ನಿಂದ ಐಟಿಸಿ ಲಿಮಿಟೆಡ್ ಕಡೆಗೆ ವಾಹನಗಳು ಬದಲಿ ರಸ್ತೆಗಳಲ್ಲಿ ಸಾಗಿದವು.

ಚರಂಡಿ ವ್ಯವಸ್ಥೆ ಸರಿ ಇಲ್ಲದೇ ಹಲವು ಕಡೆಗಳಲ್ಲಿ ರಸ್ತೆಯಲ್ಲಿ ನೀರು ನಿಂತಿತ್ತು. ಕೆಲವು ಕಡೆ ವಾಹನಗಳು ನೀರಿನ ಮೇಲೆಯೇ ಸಾಗಿದವು. ಕೆಲವೆಡೆ ಪರ್ಯಾಯ ಮಾರ್ಗಗಳಲ್ಲಿ ಸಂಚರಿಸಬೇಕಾಯಿತು. ವಿಂಡ್ಸರ್ ಮ್ಯಾನರ್ ಸೇತುವೆಯಿಂದ ಪ್ಯಾಲೇಸ್ ಕ್ರಾಸ್ ಕಡೆಗೆ ಸಾಗುವ ರಸ್ತೆಯಲ್ಲಿ ನೀರು ನಿಂತಿತ್ತು. ಮೈಸೂರು ರಸ್ತೆಯ ಎರಡೂ ಬದಿಗಳಿಂದ ಪಶುವೈದ್ಯಕೀಯ ಜಂಕ್ಷನ್ ಕಡೆಗೆ ಜಲಾವೃತವಾಗಿತ್ತು. ಬ್ರಿಗೇಡ್ ರಸ್ತೆಯಿಂದ ಒಪೆರಾ ಜಂಕ್ಷನ್ ಕಡೆಗೆ, ಮೆಜೆಸ್ಟಿಕ್ ಹಾಗೂ ಲುಲು ಮಾಲ್ ಕಡೆಯಿಂದ ಖೋಡೆ ಜಂಕ್ಷನ್ ಕಡೆಗೆ, ಅನಿಲ್ ಕುಂಬ್ಳೆ ವೃತ್ತದಿಂದ ಕ್ವೀನ್ಸ್ ಜಂಕ್ಷನ್ ಕಡೆಗೆ, ಪೈ ಲೇಔಟ್‌ನಿಂದ ನಗರದ ಕಡೆಗೆ, ಗರುಡಾಚಾರ್ ಪಾಳ್ಯದಿಂದ ನಗರದ ಕಡೆಗೆ, ಸುಲ್ತಾನ್‌ಪೇಟೆಯಿಂದ ಸುಲ್ತಾನ್‌ಪೇಟೆ ಕ್ರಾಸ್ ಕಡೆಗೆ, ಲಾಲ್‌ಬಾಗ್ ಪೂರ್ವ ದ್ವಾರದಿಂದ ಲಾಲ್‌ಬಾಗ್ ಮುಖ್ಯ ದ್ವಾರದ ಕಡೆಗೆ, ಎಸ್‌ಜೆಪಿ ರಸ್ತೆಯಿಂದ ಟೌನ್ ಹಾಲ್ ಕಡೆಗೆ ಸಾಗುವ ರಸ್ತೆಗಳಲ್ಲಿ ನೀರು ನಿಂತು ಸಂಚಾರಕ್ಕೆ ತೊಡಕಾಯಿತು.



ಶೇಷಾದ್ರಿ ರೈಲ್ವೆ ಅಂಡರ್ ಪಾಸ್ ಬಳಿ ನೀರು ನಿಂತಿದ್ದ ದೃಶ್ಯ ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ನೆಲಕ್ಕುರುಳಿದ ಬೃಹತ್ ಮರ: ಸಂಚಾರಕ್ಕೆ ತೊಂದರೆ

ಕೆ.ಆರ್.ಪುರ: ಗಾಳಿ ಸಹಿತ ಸುರಿದ ಮಳೆಗೆ ವಿದ್ಯುತ್ ಕಂಬ ಹಾಗೂ ಬೃಹತ್ ಗಾತ್ರದ ಮರವೊಂದು ಹೋಲಿ ಫ್ಯಾಮಿಲಿ ಚರ್ಚ್ ಎದುರು ರಾಮಮೂರ್ತಿನಗರ ಮುಖ್ಯರಸ್ತೆಗೆ ಉರುಳಿದ್ದು ದ್ವಿಚಕ್ರ ವಾಹನ ಸವಾರರು ಕೂದಲೆಳೆಯ ಅಂತರದಲ್ಲಿ ಪಾರಾಗಿದ್ದಾರೆ. ಗುರುವಾರ ಸಂಜೆ 5.30 ಸಮಯದಲ್ಲಿ ವಿದ್ಯುತ್ ಕಂಬ ಹಾಗೂ ಮರ ಉರುಳಿ ಬಿದ್ದಿದೆ. ದ್ವಿಚಕ್ರ ವಾಹನಗಳು ಅದರ ಅಡಿಯಲ್ಲಿ ಸಿಲುಕಿವೆ. ಅದೃಷ್ಟವಶಾತ್ ಯಾವುದೇ ಸವಾರರಿಗೆ ತೊಂದರೆಯಾಗಿಲ್ಲ. ಎರಡು ದ್ವಿಚಕ್ರ ವಾಹನಗಳಿಗೆ ಹಾನಿಯಾಗಿದೆ.



ನಗರದಲ್ಲಿ ಗುರುವಾರ ಸುರಿದ ಮಳೆಯಿಂದಾಗಿ ರಾಜಾಜಿನಗರದ ಮೋದಿ ಆಸ್ಪತ್ರೆ ಬಳಿ ಬೃಹತ್ ಮರ ಕಾರಿನ ಮೇಲೆ ಬಿದ್ದಿತ್ತು

ಮಳೆ ವಿವರ

ಚಾಮರಾಜಪೇಟೆಯಲ್ಲಿ 3.1 ಸೆಂ.ಮೀ., ಕಾಟನ್ ಪೇಟೆಯಲ್ಲಿ 3.1 ಸೆಂ.ಮೀ., ವಿಶ್ವೇಶ್ವರಪುರದಲ್ಲಿ 2.8 ಸೆಂ.ಮೀ., ಹಂಪಿನಗರದಲ್ಲಿ 2.1 ಸೆಂ.ಮೀ., ನಾಗಪುರದಲ್ಲಿ 1.8 ಸೆಂ.ಮೀ., ಸಂಪಂಗಿರಾಮ ನಗರದಲ್ಲಿ 1.5 ಸೆಂ.ಮೀ., ಪೀಣ್ಯ ಕೈಗಾರಿಕಾ ವಲಯದಲ್ಲಿ 1.5 ಸೆಂ.ಮೀ., ದೊಡ್ಡ ಬಿದರಕಲ್ಲು 1.5 ಸೆಂ.ಮೀ., ರಾಜಾಜಿನಗರದಲ್ಲಿ 1.5 ಸೆಂ.ಮೀ., ಚೊಕ್ಕಸಂದ್ರದಲ್ಲಿ 1.3 ಸೆಂ.ಮೀ., ಆರ್‌ಆರ್ ನಗರದಲ್ಲಿ 1.2 ಸೆಂ.ಮೀ., ಕೊಟ್ಟಿಗೆಪಾಳ್ಯದಲ್ಲಿ 1.1 ಸೆಂ.ಮೀ., ದಯಾನಂದ ನಗರದಲ್ಲಿ 1 ಸೆಂ.ಮೀ., ಹಗದೂರಿನಲ್ಲಿ 1 ಸೆಂ.ಮೀ. ಮಳೆ ದಾಖಲಾಗಿದೆ.



ಮಳೆಯಿಂದಾಗಿ ಶಿವಾನಂದ ವೃತ್ತದ ಬಳಿ ವಾಹನ ದಟ್ಟಣೆ ಕಂಡು ಬಂತು
ಪ್ರಜಾವಾಣಿ ಚಿತ್ರ: ಎಂ.ಎಸ್. ಮಂಜುನಾಥ್

ಮೆಟ್ರೊ: ಪೋರ್ಟಲ್, ಪಿಲ್ಲರ್‌ನಲ್ಲಿ ಜಾಹೀರಾತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟಿಕೆಟ್‌ಯೇತರ ಆದಾಯ ಹೆಚ್ಚಿಸಿಕೊಳ್ಳಲು ಮುಂದಾಗಿರುವ 'ಬೆಂಗಳೂರು ಮೆಟ್ರೊ ರೈಲು ಕಾರ್ಪೊರೇಷನ್ ಲಿಮಿಟೆಡ್' (ಬಿಎಂಆರ್‌ಸಿಎಲ್) ಆಯ್ದ ಪಿಲ್ಲರ್‌ಗಳು ಮತ್ತು ಪೋರ್ಟಲ್‌ಗಳಲ್ಲಿ ಜಾಹೀರಾತುಗಳನ್ನು ಪ್ರದರ್ಶಿಸಲು ಟೆಂಡರ್ ಆಹ್ವಾನಿಸಿದೆ.

ಮೆಟ್ರೊ ರೈಲು ಸಂಚರಿಸುತ್ತಿರುವ ನೇರಳೆ, ಹಸಿರು ಮತ್ತು ಹಳದಿ ಮಾರ್ಗಗಳಲ್ಲಿ ಮತ್ತಲ್ಲದೇ, ಶೀಘ್ರದಲ್ಲಿಯೇ ಸಂಚಾರ ಆರಂಭಗೊಳ್ಳಲಿರುವ ಗುಲಾಬಿ ಮತ್ತು ನೀಲಿ ಮಾರ್ಗಗಳಲ್ಲಿ ಜಾಹೀರಾತು ಫಲಕಗಳ ವಿನ್ಯಾಸ, ಅಭಿವೃದ್ಧಿ, ಅಳವಡಿಕೆ ಮತ್ತು ನಿರ್ವಹಣೆಗಾಗಿ ಜಾಹೀರಾತು ಸಂಸ್ಥೆಗಳಿಂದ ಪ್ರಸ್ತಾವಗಳನ್ನು ಸಲ್ಲಿಸಲು ಕೋರಲಾಗಿದೆ.

'ಜಾಹೀರಾತು ನಿಯಮಗಳನ್ನು ಅನುಸರಿಸಿಕೊಂಡು ಕಲಾತ್ಮಕವಾಗಿ ವಿನ್ಯಾಸಗೊಳಿಸಲಾಗುತ್ತದೆ. ಸ್ಥಿರ ಮತ್ತು ಡಿಜಿಟಲ್ ಜಾಹೀರಾತು ಫಲಕಗಳನ್ನು ಪರಿಚಯಿಸಲು ಯೋಜಿಸಲಾಗಿದೆ' ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಬಿಎಂಆರ್‌ಸಿಎಲ್ ಟಿಕೆಟ್‌ಯೇತರ ಮೂಲಗಳಿಂದ ಆದಾಯ ಗಳಿಸುವ ಯೋಜನೆಗೆ ಇದು ಪೂರಕವಾಗಿದೆ. ಮೆಟ್ರೊ ಕಾರಿಡಾರ್‌ಗಳ ಉದ್ದಕ್ಕೂ ಅವಕಾಶ ಇರುವ ಕಡೆಗಳಲ್ಲಿ ಜಾಹೀರಾತು ಪ್ರದರ್ಶನಕ್ಕೆ ಅವಕಾಶ ನೀಡಲಾಗುತ್ತದೆ. ಆಕರ್ಷಕ ದೃಶ್ಯರೂಪದಲ್ಲಿಯೂ ಜಾಹೀರಾತುಗಳು ಪ್ರದರ್ಶನಗೊಳ್ಳಲಿವೆ. ಪಿಲ್ಲರ್‌ಗಳ ಮೇಲೆ ಬಹುತೇಕ ಜಾಹೀರಾತು ಫಲಕಗಳು 9X4 ಚದರ ಅಡಿ ಹಾಗೂ ಪೋರ್ಟಲ್ ಜಾಹೀರಾತುಗಳು 8X15 ಚದರ ಅಡಿ ಅಳತೆ ಇರಲಿವೆ. ಈ ಯೋಜನೆಗೆ ಬಿಎಂಆರ್‌ಸಿಎಲ್ ಜಿಎಸ್‌ಟಿ ಸೇರಿದಂತೆ ವಾರ್ಷಿಕವಾಗಿ ₹83.03 ಕೋಟಿ ಶುಲ್ಕವನ್ನು ನಿಗದಿಪಡಿಸಿದೆ.



ಮೆಟ್ರೊ ಕಾರಿಡಾರ್	ಪಿಲ್ಲರ್ ಮತ್ತು ಪೋರ್ಟಲ್	ಜಾಹೀರಾತು ಫಲಕಗಳು
ನೇರಳೆ ಮಾರ್ಗ	1,384	2,538
ಹಸಿರು ಮಾರ್ಗ	1,191	2,022
ಹಳದಿ ಮಾರ್ಗ	740	1,355
ನೀಲಿ ಮಾರ್ಗ	1,595	2,960

ಆದಾಯ ಹೆಚ್ಚಳ

ಬಿಎಂಆರ್‌ಸಿಎಲ್‌ನ ಟಿಕೆಟ್‌ಯೇತರ ಆದಾಯವು 2024-25ರಲ್ಲಿ ₹54 ಕೋಟಿ ಇತ್ತು. 2025-26ರಲ್ಲಿ ₹145 ಕೋಟಿಗೆ ಏರಿಕೆಯಾಗಿದೆ. ಜಾಹೀರಾತು ಫಲಕ ಅಳವಡಿಕೆಯಾದರೆ ಈ ವರ್ಷ ಇನ್ನಷ್ಟು ವರಮಾನ ಹೆಚ್ಚಳ ಆಗಲಿದೆ ಎಂದು ಮಾಹಿತಿ ನೀಡಿದ್ದಾರೆ.

7 ವರ್ಷ: ಒಪ್ಪಂದದ ಅವಧಿಯನ್ನು ಏಳು ವರ್ಷಗಳಿಗೆ ನಿಗದಿಪಡಿಸಲಾಗಿದೆ. ಪರಸ್ಪರ ಒಪ್ಪಂದದ ಆಧಾರದ ಮೇಲೆ ಇನ್ನೂ ಮೂರು ವರ್ಷಗಳವರೆಗೆ ವಿಸ್ತರಿಸಲು ಅವಕಾಶ ಇದೆ.

ಜಾಹೀರಾತು ಅಳವಡಿಸುವವರು ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಮತ್ತು ಸಂಬಂಧಿತ ಇಲಾಖೆಗಳಿಂದ ಅನುಮೋದನೆ ಪಡೆದಿರಬೇಕು. ವಿದ್ಯುತ್ ಮತ್ತು ಅಗ್ನಿ ಸುರಕ್ಷತೆ ಪಾಲನೆಯನ್ನು ಖಚಿತಪಡಿಸಿಕೊಳ್ಳಬೇಕು. ಜಾಹೀರಾತು ಅಳವಡಿಸಿದ ಬಳಿಕ ನಿರ್ವಹಣೆಯನ್ನೂ ಮಾಡಬೇಕು ಎನ್ನುವ ಷರತ್ತುಗಳನ್ನು ವಿಧಿಸಲಾಗಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಯುಪಿಎಸ್‌ಸಿ: 24ಕ್ಕೆ ಮೆಟ್ರೊ ಬೇಗ ಸಂಚಾರ


ಬೆಂಗಳೂರು: ಕೇಂದ್ರ ಲೋಕಸೇವಾ ಆಯೋಗದ (ಯುಪಿಎಸ್‌ಸಿ) ಸಿವಿಲ್ ಸರ್ವಿಸ್ (ಪ್ರಾಥಮಿಕ) ಪರೀಕ್ಷೆ ಮೇ 24ರಂದು ನಡೆಯಲಿರುವುದರಿಂದ ಪರೀಕ್ಷಾರ್ಥಿಗಳ ಅನುಕೂಲಕ್ಕಾಗಿ ಅಂದು ಬೆಳಿಗ್ಗೆ 7ರ ಬದಲು 6ಕ್ಕೆ ಮೆಟ್ರೊ ಸಂಚಾರ ಆರಂಭಗೊಳ್ಳಲಿದೆ.

ನೇರಳೆ ಮಾರ್ಗದ ವೈಟ್‌ಫೀಲ್ಡ್ ಮತ್ತು ಚಲ್ಲಘಟ್ಟ, ಹಸಿರು ಮಾರ್ಗದ ಮಾದಾವರ ಮತ್ತು ರೇಷ್ಮೆ ಸಂಸ್ಥೆ, ಹಳದಿ ಮಾರ್ಗದ ಬೊಮ್ಮಸಂದ್ರ ಮತ್ತು ಆರ್.ವಿ. ರಸ್ತೆ ಟರ್ಮಿನಲ್‌ಗಳಿಂದ ಸಾಮಾನ್ಯವಾಗಿ ಪ್ರತಿ ಭಾನುವಾರ ಬೆಳಿಗ್ಗೆ 7ಕ್ಕೆ ಮೆಟ್ರೊ ಸಂಚಾರ ಶುರುವಾಗುತ್ತಿತ್ತು. ಈ ಭಾನುವಾರ ಮಾತ್ರ ಒಂದು ತಾಸು ಮುಂಚಿತವಾಗಿ ಸಂಚಾರ ಆರಂಭಗೊಳ್ಳಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಸೈಕ್ಲಿಂಗ್ ಅಭಿಯಾನ

ಬೆಂಗಳೂರು: ವೆಲೋಕೋಫಿ ವತಿಯಿಂದ ನಾಲ್ಕನೇ ಆವೃತ್ತಿಯ '7 ಕಾಫಿ 100 ಮೈಲಿ' ವಿಶೇಷ ಸೈಕ್ಲಿಂಗ್ ಅಭಿಯಾನ ನಡೆಯುತ್ತಿದ್ದು, ಇದೇ 23ಕ್ಕೆ ಕೊನೆಗೊಳ್ಳಲಿದೆ.



ಈ ಅಭಿಯಾನದಲ್ಲಿ ಭಾಗವಹಿಸಿರುವ ಸೈಕ್ಲಿಸ್ಟ್‌ಗಳು ಒಟ್ಟು 100 ಮೈಲಿ (ಸುಮಾರು 160 ಕಿ.ಮೀ) ಸೈಕ್ಲಿಂಗ್ ಗುರಿಯನ್ನು ಇಟ್ಟುಕೊಂಡಿದ್ದು, ಪ್ರತಿದಿನ ಸರಾಸರಿ 23 ಕಿ.ಮೀ. ಸವಾರಿ ಮಾಡುವ ಮೂಲಕ ಪೂರ್ಣಗೊಳಿಸಲಿದ್ದಾರೆ. ಪ್ರತಿದಿನ ಬೆಳಿಗ್ಗೆ ನಗರದ ವಿವಿಧ ಪ್ರದೇಶಗಳಲ್ಲಿ ಕಾಫಿ ಕೇಂದ್ರಗಳಲ್ಲಿ ಸೇರುವ ಮೂಲಕ ಸೈಕ್ಲಿಂಗ್ ಸಮುದಾಯವು ಆರೋಗ್ಯಕರ ಜೀವನಶೈಲಿ, ನಿಯಮಿತ ವ್ಯಾಯಾಮದ ಮಹತ್ವದ ಕುರಿತು ಜಾಗೃತಿ ಮೂಡಿಸುತ್ತಿದ್ದಾರೆ.

ಪ್ರತಿಯೊಬ್ಬ ಸೈಕ್ಲಿಸ್ಟ್‌ಗೆ ಉಚಿತ ಕಾಫಿ ನೀಡಲಾಗುತ್ತಿದ್ದು, ಹೊಸಬರೊಂದಿಗೆ ಸ್ನೇಹ, ಹೊಸ ಮಾರ್ಗಗಳು ಹಾಗೂ ಸಮುದಾಯ ಬಂಧವನ್ನು ಈ ಅಭಿಯಾನದ ಮೂಲಕ ಬಲಪಡಿಸಲಾಗುತ್ತಿದೆ ಎಂದು ಪ್ರಕಟಣೆ ತಿಳಿಸಿದೆ.

ಟಿಕೆಟ್ ಇಲ್ಲದ 4,462 ಜನರಿಗೆ ದಂಡ

ಬೆಂಗಳೂರು: ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಏಪ್ರಿಲ್ ತಿಂಗಳಲ್ಲಿ ಟಿಕೆಟ್ ರಹಿತವಾಗಿ ಪ್ರಯಾಣಿಸುತ್ತಿದ್ದ 4,462 ಪ್ರಯಾಣಿಕರಿಂದ ₹ 8.67 ಲಕ್ಷ ದಂಡ ವಸೂಲಿ ಮಾಡಲಾಗಿದೆ.

ಕೆಎಸ್‌ಆರ್‌ಟಿಸಿ ತನಿಖಾ ತಂಡದಲ್ಲಿನ ಅಧಿಕಾರಿಗಳು ಏಪ್ರಿಲ್‌ನಲ್ಲಿ 41,308 ಬಸ್‌ಗಳಲ್ಲಿ ತನಿಖೆ ನಡೆಸಿದ್ದರು. ನಿಗಮದ ಆದಾಯದಲ್ಲಿ ₹1.32 ಲಕ್ಷ ಸೋರಿಕೆ ಪತ್ತೆಯಾಗಿತ್ತು. ಅದನ್ನು ದಂಡ ಸಹಿತ ವಸೂಲಿ ಮಾಡಲಾಗಿದೆ. ಪ್ರಯಾಣಿಕರು ಟಿಕೆಟ್ ಇಲ್ಲವೇ ಬಸ್ ಪಾಸ್ ಪಡೆದು ಪ್ರಯಾಣಿಸಬೇಕು ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

'ಗೋಹತ್ಯೆ, ಅಕ್ರಮ ಸಾಗಣೆ ತಡೆಗೆ ಕ್ರಮ ಕೈಗೊಳ್ಳಿ'

ಬೆಂಗಳೂರು: ಬಕ್ರೀದ್ ಹಬ್ಬದ ಸಂದರ್ಭದಲ್ಲಿ ಗೋವುಗಳ ಅಕ್ರಮ ಸಾಗಾಣಿಕೆ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಗೋಹತ್ಯೆ ತಡೆಗಟ್ಟಲು ಕಠಿಣ ಕ್ರಮ ಕೈಗೊಳ್ಳಬೇಕು ಎಂದು ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಆಗ್ರಹಿಸಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಿಎಚ್‌ಪಿಯ ಸದಸ್ಯರಾದ ಸುನಿಲ್ ದುಗಾರ್, ಶಿವಕುಮಾರ್, ಮೋಹನ್, ಕಿರಣ್, ಗೋವರ್ಧನ್, 'ಅಕ್ರಮ ಕಸಾಯಿಖಾನೆಗಳನ್ನು ಗುರುತಿಸಿ, ದಾಳಿ ನಡೆಸುವ ಮೂಲಕ ಶಾಶ್ವತವಾಗಿ ಮುಚ್ಚಬೇಕು. ಜಾನುವಾರು ಹತ್ಯೆ ನಡೆದ ಮನೆ, ಕಟ್ಟಡ, ಖಾಲಿ ಜಮೀನುಗಳನ್ನು ಜಪ್ತಿ ಮಾಡಿ ಮುಟ್ಟುಗೋಲು ಹಾಕಬೇಕು' ಎಂದು ಒತ್ತಾಯಿಸಿದರು.

'ಪೊಲೀಸರು ಗೋಹತ್ಯೆಯ ಎಲ್ಲ ಪ್ರಕರಣಗಳನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ವಾಹನಗಳಲ್ಲಿ ಅಕ್ರಮವಾಗಿ ಗೋಸಾಗಾಟ ಆಗದಂತೆ ಎಚ್ಚರಿಕೆ ವಹಿಸಬೇಕು. ಅಕ್ರಮ ಗೋವುಗಳ ವ್ಯವಹಾರದ ಜಾಲವನ್ನು ಪತ್ತೆಹಚ್ಚಿ, ಆರೋಪಿಗಳನ್ನು ಬಂಧಿಸಬೇಕು. ಇಂತಹ ಆರೋಪಿಗಳಿಗೆ 5 ವರ್ಷ ಶಿಕ್ಷೆ ಹಾಗೂ ಜಾನುವಾರು ವಧೆ ಅಥವಾ ವಧೆ ಪ್ರಯತ್ನಕ್ಕೆ ದಂಡ ವಿಧಿಸಬೇಕು. ಅನಧಿಕೃತ ಸ್ಥಳಗಳಲ್ಲಿ ಕಟ್ಟಿ ಹಾಕಿದ ಜಾನುವಾರುಗಳನ್ನು ವಧೆಗೆ ತಯಾರಿ ಎಂದು ಪರಿಗಣಿಸಿ, ವಶಪಡಿಸಿಕೊಂಡು ಸರ್ಕಾರಿ ಗೋಶಾಲೆಗೆ ಹಸ್ತಾಂತರಿಸಬೇಕು' ಎಂದು ಆಗ್ರಹಿಸಿದರು.

'ಬಕ್ರೀದ್ ಹಬ್ಬದ ಸಂದರ್ಭದಲ್ಲಿ ಬೆಂಗಳೂರು ನಗರ ಸೇರಿದಂತೆ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಗೋಹತ್ಯೆ (ಕುರ್ಬಾನಿ) ಆಗದಂತೆ ವಿವಿಧ ಇಲಾಖೆಗಳ ಜೊತೆಗೆ ಸಮನಯ್ವದಿಂದ ಕೆಲಸ ಮಾಡಬೇಕು. ಗೋಹತ್ಯೆ ಮುಕ್ತ ಬಕ್ರೀದ್ ಆಚರಿಸುವ ಮೂಲಕ ಸೌಹಾರ್ದತೆ ಕಾಪಾಡಬೇಕು' ಎಂದು ಒತ್ತಾಯಿಸಿದರು.

ಬಡಗನಾಡು ಮಹಾಸಭಾಗೆ ಆಡಳಿತಾಧಿಕಾರಿ ನೇಮಕ

ಬೆಂಗಳೂರು: ಶೇಷಾದ್ರಿಪುರಂ ಬಡಗನಾಡು ಬ್ರಾಹ್ಮಣ ಮಹಾಸಭಾದ ಆಡಳಿತ ಮಂಡಳಿಯನ್ನು ರಾಜ್ಯ ಸರ್ಕಾರ ವಜಾ ಮಾಡಿದ್ದು ಆಡಳಿತಾಧಿಕಾರಿಯಾಗಿ ಸಹಕಾರ ಇಲಾಖೆ ಅಧಿಕಾರಿ ಎನ್. ಚಂದ್ರಶೇಖರ್ ಅವರನ್ನು ನೇಮಕ ಮಾಡಿ ಆದೇಶ ಹೊರಡಿಸಿದೆ.

ಬಡಗನಾಡು ಬ್ರಾಹ್ಮಣ ಮಹಾಸಭಾದಲ್ಲಿ ಅವ್ಯವಹಾರ ನಡೆಯುತ್ತಿರುವ ಕುರಿತು ಎಲ್.ಮುರಳಿ ಮೋಹನ್ ಹಾಗೂ ಜಿ.ಆರ್.ಪ್ರಕಾಶ್ ಅವರು ನೀಡಿದ ದೂರಿನ ಮೇರೆಗೆ ವಿಚಾರಣೆಗೆ ಆದೇಶಿಸಲಾಗಿತ್ತು. ವಿಚಾರಣೆ ವೇಳೆ 8 ಆರೋಪಗಳಲ್ಲಿ 7 ಆರೋಪ ಸಾಬೀತಾಗಿದ್ದರಿಂದ ಆಡಳಿತಾಧಿಕಾರಿ ನೇಮಿಸಲು ವಿಚಾರಣಾಧಿಕಾರಿ ಶಿಫಾರಸು ಮಾಡಿದ್ದರು.

'ಸಂಘದ ಅವಧಿಯು ಮುಗಿದಿರುವುದರಿಂದ ಆರು ತಿಂಗಳ ಅವಧಿಗೆ ಆಡಳಿತಾಧಿಕಾರಿ ನೇಮಕ ಮಾಡಲಾಗಿದೆ. ಸಂಘದ ನ್ಯೂನತೆ ಸರಿಪಡಿಸಿ ಆಡಳಿತಾಧಿಕಾರಿಯು ಆಡಳಿತ ಮಂಡಳಿಗೆ ಚುನಾವಣೆ ನಡೆಸಬೇಕು' ಎಂದು ಸಹಕಾರ ಇಲಾಖೆ ಪ್ರಕಟಣೆ ತಿಳಿಸಿದೆ.

ಭೂಮಿಕಾಗೆ 'ಆರ್ಯಭಟ ಪ್ರಶಸ್ತಿ'

ಬೆಂಗಳೂರು: ಆರ್ಯಭಟ ಕಲ್ಚರಲ್ ಆರ್ಗನೈಸೇಷನ್ ನೀಡುವ 'ಆರ್ಯಭಟ ಅಂತರರಾಷ್ಟ್ರೀಯ ಪ್ರಶಸ್ತಿ'ಗೆ ಗಾಯಕಿ ಭೂಮಿಕಾ ಎಲ್. ಮಧುಸೂದನ್ ಆಯ್ಕೆಯಾಗಿದ್ದಾರೆ.



ಭೂಮಿಕಾ

ಇದೇ 23ರಂದು ಸಂಜೆ 6 ಗಂಟೆಗೆ ಜೆ.ಸಿ. ರಸ್ತೆಯಲ್ಲಿರುವ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ನಗರದಲ್ಲಿ ಇಂದು

'ಅಡ್ವಾನ್ಸ್ ಮಟಿರಿಯಲ್ಸ್ ಫಾರ್ ಎನರ್ಜಿ, ಎನ್ವಿರಾನ್‌ಮೆಂಟ್ ಆ್ಯಂಡ್ ಬಯೋಮೆಡಿಕಲ್ ಅಪ್ಲಿಕೇಷನ್ಸ್' ರಾಷ್ಟ್ರೀಯ ಸಮ್ಮೇಳನ: ಆಯೋಜನೆ ಮತ್ತು ಸ್ಥಳ: ಜೆಎಸ್‌ಎಸ್ ಅಕಾಡೆಮಿ ಆಫ್ ಟೆಕ್ನಿಕಲ್ ಎಜುಕೇಷನ್, ಡಾ.ವಿಷ್ಣುವರ್ಧನ್ ರಸ್ತೆ, ಬೆಳಿಗ್ಗೆ 10ರಿಂದ

ಉದ್ಯೋಗ ಮೇಳ: ಅತಿಥಿಗಳು: ಕೆ. ರಾಮಕೃಷ್ಣ ರೆಡ್ಡಿ, ಸಿ. ಜಗನ್ನಾಥ, ಎಸ್. ಪದ್ಮನಾಭ, ಸುದರ್ಶನ್ ರೆಡ್ಡಿ, ಅಧ್ಯಕ್ಷತೆ: ಮೋಹನ್ ಕುಮಾರ್ ಬಿ.ಕೆ., ಆಯೋಜನೆ ಮತ್ತು ಸ್ಥಳ: ನೃಪತುಂಗ ವಿಶ್ವವಿದ್ಯಾಲಯ, ನೃಪತುಂಗ ರಸ್ತೆ, ಬೆಳಿಗ್ಗೆ 10

'ಕನ್ನಡದಲ್ಲಿ ಅನುವಾದ ಪರಂಪರೆ' ತಿಂಗಳ ಉಪನ್ಯಾಸ: ಡಿ. ಡೊಮಿನಿಕ್, ಅಧ್ಯಕ್ಷತೆ: ಚನ್ನಪ್ಪ ಕಟ್ಟಿ, ಆಯೋಜನೆ ಮತ್ತು ಸ್ಥಳ: ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಆವರಣ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 5

'ಕಾರ್ಯಕರ್ತ ವಿಕಾಸ ವರ್ಗ ಪ್ರಥಮ (ಸಾಮಾನ್ಯ)' ಸಮಾರೋಪ ಸಮಾರಂಭ: ಅತಿಥಿ: ಬಿ.ಎಸ್. ರಾಜು, ಉಪಸ್ಥಿತಿ: ಎಂ. ಜಯಪ್ರಕಾಶ್, ಆಯೋಜನೆ: ರಾಷ್ಟ್ರೀಯ ಸ್ವಯಂಸೇವಕ ಸಂಘ, ಸ್ಥಳ: ಜನಸೇವಾ ವಿದ್ಯಾಕೇಂದ್ರ, ಚನ್ನೇನಹಳ್ಳಿ, ಮಾಗಡಿ ರಸ್ತೆ, ಸಂಜೆ 5.30

ಭಾಗವತರು ಸಂಸ್ಥೆಯ ಬೆಳ್ಳಿ ಹಬ್ಬದ ಸಮಾರೋಪ ಸಮಾರಂಭ: ಉದ್ಘಾಟನೆ: ಎಲ್.ಹನುಮಂತಯ್ಯ, ರಂಗ ಗೌರವ ಪ್ರದಾನ: ಎಂ.ವೀರಪ್ಪ ಮೊಯಿಲಿ, 'ಭಾಗವತರು-ಬೆಳ್ಳಿ ಪಯಣ' ಪುಸ್ತಕ ಬಿಡುಗಡೆ: ವಿ.ಆರ್. ಸುದರ್ಶನ್, 'ರಂಗಲೋಕ' ಪುಸ್ತಕ ಬಿಡುಗಡೆ: ಎಸ್.ಜಿ. ಸಿದ್ಧರಾಮಯ್ಯ, 'ರಂಗಲೋಕ' ಪುಸ್ತಕದ ಕುರಿತು: ಹಿ.ಚಿ. ಬೋರಲಿಂಗಯ್ಯ, ಅಧ್ಯಕ್ಷತೆ: ಶ್ರೀನಿವಾಸ್ ಜಿ. ಕಪ್ಪಣ್ಣ, ಉಪಸ್ಥಿತಿ: ರಾಜು ಮಳವಳ್ಳಿ, ಕೆ. ರೇವಣ್ಣ, ಆಯೋಜನೆ: ಭಾಗತವರು, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಪೊಲೀಸ್ ಅಧಿಕಾರಿ, ಸಿಬ್ಬಂದಿ ವಿರುದ್ಧ ತನಿಖೆಗೆ ಆದೇಶ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ನಗರ ಪೊಲೀಸ್ ಕಮಿಷನರ್‌ಗೆ ಗೃಹ ಸಚಿವ ಜಿ. ಪರಮೇಶ್ವರ ಆದೇಶ
- 'ಆರೋಪ ಸಾಬೀತಾದರೆ ಕಠಿಣ ಕ್ರಮ'

ಬೆಂಗಳೂರು: ವಂಚನೆ ಆರೋಪಿಯಿಂದ ಜಪ್ತಿ ಮಾಡಿಕೊಂಡಿದ್ದ ಆಭರಣಗಳನ್ನು ದೂರುದಾರರಿಗೆ ಹಸ್ತಾಂತರಿಸದೇ ವಂಚಿಸಿದ್ದ ಎಚ್‌ಎಸ್‌ಆರ್ ಲೇಔಟ್ ಸೈಬರ್ ಅಪರಾಧ ಠಾಣೆಯ ಅಧಿಕಾರಿ–ಸಿಬ್ಬಂದಿ ವಿರುದ್ಧ ತನಿಖೆ ನಡೆಸಿ, ವರದಿ ಸಲ್ಲಿಸುವಂತೆ ಗೃಹ ಸಚಿವ ಜಿ.ಪರಮೇಶ್ವರ ಅವರು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಅವರಿಗೆ ಗುರುವಾರ ಆದೇಶಿಸಿದ್ದಾರೆ.

ಈ ಕುರಿತು ನಗರದಲ್ಲಿ ಗುರುವಾರ ಮಾತನಾಡಿದ ಅವರು, 'ಇಲಾಖೆಯಲ್ಲಿ ಇಂತಹ ಕೆಲಸಗಳು ಆದಾಗ ಕೂಡಲೇ ಅವರ ವಿರುದ್ಧ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ. ಮೇಲ್ನೋಟಕ್ಕೆ ತಪ್ಪು ಕಂಡು ಬಂದ ಕೂಡಲೇ ಅಂತಹ ಅಧಿಕಾರಿಗಳನ್ನು ಅಮಾನತು ಮಾಡಲಾಗುತ್ತದೆ. ಇಲಾಖೆ ತನಿಖೆ ಪೂರ್ಣವಾದ ಮೇಲೆ ಆರೋಪ ಸಾಬೀತಾದರೆ ಎಫ್‌ಐಆರ್ ದಾಖಲಿಸಿ ಕಠಿಣ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಸಮಿತಿ ತಿಳಿಸಿದಂತೆ ಶಿಕ್ಷೆಯನ್ನು ನೀಡಲಾಗುತ್ತದೆ. ಅದೇ ರೀತಿ ಆಭರಣ ವಂಚಿಸಿದ್ದ ಪ್ರಕರಣದಲ್ಲೂ ತನಿಖೆ ನಡೆಸುವಂತೆ ನಗರ ಪೊಲೀಸ್ ಕಮಿಷನರ್‌ಗೆ ಸೂಚಿಸಲಾಗಿದೆ' ಎಂದರು.

'ಹಿರಿಯ ಪೊಲೀಸ್ ಅಧಿಕಾರಿಗಳ ಸಭೆಯಲ್ಲೂ ಕಟ್ಟುನಿಟ್ಟಿನ ಸೂಚನೆಯನ್ನು ಈಗಾಗಲೇ ನೀಡಿದ್ದೇನೆ. ಪೊಲೀಸರು ರಿಯಲ್ ಎಸ್ಟೇಟ್ ವ್ಯವಹಾರ ಸೇರಿ ಇತರೆ ವ್ಯವಹಾರಗಳಲ್ಲಿ ತೊಡಗಬಾರದೆಂದು ಸೂಚನೆ ನೀಡಲಾಗಿದೆ. ಆದರೂ, ಯಾರೋ ಒಬ್ಬ ಅಧಿಕಾರಿ ಈ ರೀತಿ ಮಾಡುತ್ತಾರೆ. ಅಂತಹವರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುತ್ತಿದೆ' ಎಂದರು.

ಮಹಿಳೆಯೊಬ್ಬರು ಪರಿಚಯಸ್ಥರಿಂದ ಚಿನ್ನಾಭರಣ ಅಡಮಾನ ಇರಿಸಿಕೊಂಡು ಶೇ 15ರಿಂದ 20ರಷ್ಟು ಬಡ್ಡಿಗೆ ಹಣ ನೀಡುತ್ತಿದ್ದರು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು, ಮಹಿಳೆಯಿಂದ ಬಂಗಾರ ಜಪ್ತಿ ಮಾಡಿದ್ದರು. ಆದರೆ, ಆ ಬಂಗಾರವನ್ನು ದೂರುದಾರರಿಗೆ ಹಸ್ತಾಂತರಿಸದೇ ವಂಚಿಸಲಾಗಿದೆ ಎಂಬ ಆರೋಪವು ಈ ಹಿಂದೆ ಎಚ್‌ಎಸ್‌ಆರ್ ಲೇಔಟ್ ಸೈಬರ್ ಅಪರಾಧ ಠಾಣೆಯಲ್ಲಿ ಕೆಲಸ ಮಾಡುತ್ತಿದ್ದ ಅಧಿಕಾರಿ, ಸಿಬ್ಬಂದಿಯ ಮೇಲಿದ್ದು ತನಿಖೆಗೆ ಆದೇಶಿಸಲಾಗಿದೆ.

'ಜನರ ಜೀವನ ಮಟ್ಟ ಸುಧಾರಿಸಿ'

ನವದೆಹಲಿ (ಪಿಟಿಐ): 'ಜನರ ಜೀವನವು 2047ರ ವೇಳೆಗೆ ಇನ್ನಷ್ಟು ಆರಾಮದಾಯಕ ಆಗುವಂತೆ ಗುರಿಗಳನ್ನು ನಿಗದಿಪಡಿಸಿ' ಎಂದು ಪ್ರಧಾನಿ ನರೇಂದ್ರ ಮೋದಿ ತಮ್ಮ ಸಂಪುಟದ ಸಹೋದ್ಯೋಗಿಗಳಿಗೆ ಸೂಚಿಸಿದರು.

ಗುರುವಾರ ಇಲ್ಲಿ ನಡೆದ ಕೇಂದ್ರ ಮಂತ್ರಿ ಪರಿಷತ್ ಸಭೆಯಲ್ಲಿ ಮಾತನಾಡಿದ ಪ್ರಧಾನಿ, 'ಹೊಸ ತಲೆಮಾರಿನ ಸುಧಾರಣಾ ಕ್ರಮಗಳಿಗೆ ಆದ್ಯತೆ ನೀಡಬೇಕು. ಇದರಿಂದ 2047ರಲ್ಲಿ ಭಾರತವು ಸ್ವಾತಂತ್ರ್ಯದ ಶತಮಾನೋತ್ಸವ ಆಚರಿಸುವ ಹೊತ್ತಿಗೆ ಸರ್ವತೋಮುಖ ಅಭಿವೃದ್ಧಿ ಸಾಧಿಸಬಹುದು' ಎಂದರು.

'ಜನರ ಜೀವನದಲ್ಲಿ ಯಾವುದೇ ಹಸ್ತಕ್ಷೇಪ ಮಾಡದೆ, ಅವರ ಜೀವನ ಮಟ್ಟ ಸುಧಾರಿಸಲು ಮತ್ತು ಜೀವನ ಸುಗಮಗೊಳಿಸುವುದರ ಕುರಿತು ಗುರಿಗಳನ್ನು ನಿಗದಿಪಡಿಸಬೇಕು ಎಂದು ಪುನರುಚ್ಚರಿಸಿದ ಪ್ರಧಾನಿ, 2047ರ ವೇಳೆಗೆ ದೇಶವು ಅಭಿವೃದ್ಧಿ ಸಾಧಿಸಲು ಕೈಗೊಳ್ಳಬೇಕಿರುವ ಸುಧಾರಣಾ ಉಪ ಕ್ರಮಗಳ ಬಗ್ಗೆ ಸಭೆಯಲ್ಲಿ ಸ್ಪಷ್ಟ ಮುನ್ನೋಟ ನೀಡಿದರು ಎಂದು ಮೂಲಗಳು ಹೇಳಿವೆ.

'ಹಿಂದೆ ಏನು ಮಾಡಲಾಗಿದೆ ಎನ್ನುವುದರ ಬಗ್ಗೆ ಯೋಚಿಸದೆ, ಮುಂದೆ ಏನು ಮಾಡಬೇಕು ಎನ್ನುವುದರ ಬಗ್ಗೆ ಯೋಚಿಸಿ, ಸರ್ಕಾರದ ಕಲ್ಯಾಣ ಕಾರ್ಯಕ್ರಮಗಳ ಗರಿಷ್ಠ ಪ್ರಯೋಜನವನ್ನು ಜನರು ಪಡೆಯುವಂತೆ ಕ್ರಮ ಕೈಗೊಳ್ಳಿ' ಎಂದು ಸಚಿವರಿಗೆ ಸೂಚಿಸಿದರು.

ಮೋದಿ ಅವರ ಐದು ರಾಷ್ಟ್ರಗಳ ಪ್ರವಾಸದ ಬಗ್ಗೆ ವಿದೇಶಾಂಗ ಸಚಿವ ಎಸ್. ಜಯಶಂಕರ್ ವಿವರಿಸಿದರು.

ಪುಲ್ವಾಮಾ ದಾಳಿಯ ಸಂಚುಕೋರ ಗುಂಡಿಗೆ ಬಲಿ

ಲಾಹೋರ್ (ಪಿಟಿಐ): ಪುಲ್ವಾಮಾ ದಾಳಿಯ ಪ್ರಮುಖ ಸಂಚುಕೋರ ಹಂಝಾ ಬುರ್ಹಾನ್‌ನನ್ನು ಅಪರಿಚಿತ ಬಂದೂಕುಧಾರಿಯೊಬ್ಬ ಗುರುವಾರ ಪಾಕ್ ಆಕ್ರಮಿತ ಕಾಶ್ಮೀರದಲ್ಲಿ (ಪಿಒಕೆ) ಹತ್ಯೆ ಮಾಡಿದ್ದಾಗಿ ಮೂಲಗಳು ಹೇಳಿವೆ.

ಅಲ್ ಬದ್ರ್ ಭಯೋತ್ಪಾದಕ ಗುಂಪಿನ ಕಮಾಂಡರ್ ಆಗಿದ್ದ ಬುರ್ಹಾನ್ ಅಲಿಯಾಸ್ ಅರ್ಜುಮಂದ್ ಗುಲ್ಜಾರ್ ದಾರ್ ಅಲಿಯಾಸ್ ಡಾಕ್ಟರ್, 2019ರ ಪುಲ್ವಾಮಾ ದಾಳಿಯ ನಂತರ ಪಿಒಕೆಯಲ್ಲಿ ಖಾಸಗಿ ಕಾಲೇಜಿನ ಪ್ರಾಂಶುಪಾಲನಾಗಿ ಕಾರ್ಯನಿರ್ವಹಿಸುತ್ತಿದ್ದ.

'ಗುರುವಾರ ಬೆಳಿಗ್ಗೆ ಕಾಲೇಜಿನಿಂದ ಹೊರಬರುವಾಗ ಗುಂಡಿನ ದಾಳಿ ನಡೆದಿದೆ. ಗಂಭೀರವಾಗಿ ಗಾಯಗೊಂಡಿದ್ದ ಆತ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾನೆ' ಎಂದು ಪೊಲೀಸ್ ಮೂಲಗಳು ಖಚಿತಪಡಿಸಿವೆ.

ಬಂದೂಕುಧಾರಿಯನ್ನು ವಶಕ್ಕೆ ಪಡೆಯಲಾಗಿದೆ. ಕೃತ್ಯದ ಬಳಿಕ ಆರೋಪಿಯು ಬೈಕ್‌ನಲ್ಲಿ ಪರಾರಿಯಾಗಲು ಯತ್ನಿಸಿದಾಗ ಸ್ಥಳೀಯರು ಆತನನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದರು ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದ್ದಾರೆ.

SANSERA ideas@work

SANSERA ENGINEERING LIMITED

CIN: L34103KA1981PLC004542
Registered Address: Plant-7, No.143/A, Jigani Link Road, Bommasandra Industrial Area, Bengaluru - 560105
Phone: 080 27839081/82/83; **Fax:** 080 27839309; **Email:** rajesh.modi@sansera.in; **Website:** www.sansera.in

AUDITED FINANCIAL RESULTS FOR THE QUARTER AND YEAR ENDED MARCH 31, 2026

The Board of Directors at its meeting which started on May 20, 2026 and ended on May 21, 2026 approved the audited financial results of the Company for the quarter and year ended March 31, 2026.

The results along with Auditor's Report have been posted on the Company's website: www.sansera.in and can be accessed by scanning the QR code.

Place: Bengaluru
Date: 21-05-2026

On Behalf of the Board
Sd/-
S Sekhar Vasan
Chairman & Managing Director

Note: The above information is in accordance with Regulation 33 read with Regulation 47(1) of the SEBI (Listing Obligations and Disclosure Requirements) Regulations 2015.

ಐಸಿಎಆರ್–ರಾಷ್ಟ್ರೀಯ ಪಶು ಪೋಷಣೆ ಮತ್ತು ಶರೀರ ಕ್ರಿಯಾ ವಿಜ್ಞಾನ ಸಂಸ್ಥೆ
ಆಡುಗೋಡಿ, ಬೆಂಗಳೂರು–560 030
ಕೃಷಿ ಸಂಶೋಧನೆ ಮತ್ತು ಶಿಕ್ಷಣ ಇಲಾಖೆ, ಭಾರತ ಸರ್ಕಾರ

ನೇರ ಸಂದರ್ಶನ – ಎನ್‌ಐಎಎನ್‌ಪಿ/ಎಡಿವಿ–06–ಸಿಡಿಎನ್/2026

ಪಿಎಂಇ ಸೆಲ್ ಅಡಿಯಲ್ಲಿ **ಯಂಗ್ ಪ್ರೊಫೆಷನಲ್–1 ಹುದ್ದೆಗೆ (ಮಾಸಿಕ ಕ್ರೋಢೀಕೃತ ವೇತನ ರೂ. 30,000/–)** ತಾತ್ಕಾಲಿಕ ಆಧಾರದಲ್ಲಿ ಒಂದು ವರ್ಷದ ಅವಧಿಗಾಗಿ ಆಯ್ಕೆ ಮಾಡಿಕೊಳ್ಳಲು 10.06.2026 ರಂದು (ಬುಧವಾರ) ಬೆಳಗ್ಗೆ 10:30 ಗಂಟೆಗೆ ನೇರ ಸಂದರ್ಶನ ಕೈಗೊಳ್ಳಲಾಗಿದೆ. ವಿವರವಾದ ಜಾಹೀರಾತನ್ನು ಪರಿಶೀಲಿಸಲು, ದಯವಿಟ್ಟು ಸಂಸ್ಥೆಯ **www.nianp.res.in** ವೆಬ್‌ಸೈಟ್‌ಗೆ ಭೇಟಿ ಕೊಡಿ. **ಸಹಿ/– ಆಡಳಿತಧಿಕಾರಿ**

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜನೀಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ–562101
ದೂರವಾಣಿ ಸಂಖ್ಯೆ: ಕಛೇರಿ: 08156–295427
ಫ್ಯಾಕ್ಸ್: 08156–295427 ಇಮೇಲ್-eemidcbpura@gmail.com

ಮರು ಟೆಂಡರ್ ಅಧಿಸೂಚನೆ

ಸಂಖ್ಯೆ:ಕಾಸಬ/ತಾಂಶಾ/ತಾಂಸ/ಮರು ಟೆಂಡರ್/1212/2026–27 ದಿ:18/05/2026.

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ : 27/2025–26, ದಿನಾಂಕ: 20/02/2026. ರಲ್ಲಿ ಕೆಟಿಪಿಪಿ ನಿಯಮಾವಳಿ ಅನ್ವಯ ಆಕ್ಷನ್ ಟೆಂಡರ್ ಪದ್ಧತಿಯಲ್ಲಿ ಚಿಕ್ಕಬಳ್ಳಾಪುರ, ಗೌರಿಬಿದನೂರು, ಶಿಡ್ಲಘಟ್ಟ, ಮತ್ತು ಬಾಗೇಪಲ್ಲಿ ತಾಲ್ಲೂಕುಗಳಲ್ಲಿ 2026–27ನೇ ಸಾಲಿನಿಂದ 2030–31ರ ವರೆಗೆ ಮೀನುಗಾರಿಗೆ ನಡೆಸಲು ಗುತ್ತಿಗೆ ಆಧಾರದ ಮೇಲೆ ಮೀನು ಪಾಶುವಾರು ಹಕ್ಕನ್ನು ಇ–ಆಕ್ಷನ್ ಮೂಲಕ ವಿಲೇವಾರಿ ಮಾಡಲು ಆಹ್ವಾನಿಸಲಾಗಿದ್ದ 5 ಕೆರೆಗಳಲ್ಲಿ ಬಿಡ್ಡುದಾರರು ಅತೀ ಕಡಿಮೆ ಧರ ನಮೂದಿಸಿರುವುದರಿಂದ ಮತ್ತು 2 ಕೆರೆಗಳಲ್ಲಿ ಬಿಡ್ಡುದಾರರು ಕರಾರು ಮಾಡಿಕೊಳ್ಳದೇ ಇರುವುದರಿಂದ ಮರು ಇ–ಆಕ್ಷನ್ ಕರೆಯಲಾಗಿರುತ್ತದೆ. ಆಕ್ಷನ್ ದಾಸ್ತಾವೇಜುಗಳನ್ನು ದಿನಾಂಕ : 19/05/2026 ರ ಬೆಳಿಗ್ಗೆ 11.00 ಗಂಟೆಯಿಂದ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ. ದಿನಾಂಕಗಳು ಈ ಕೆಳಕಂಡಂತೆ ಇರುತ್ತದೆ.

1	ಟೆಂಡರ್‌ಗೆ ಸಂಬಂಧಿಸಿದ Queries ಸಲ್ಲಿಸಲು ಕೊನೆಯ ದಿನಾಂಕ :	**06/06/2026 ಸಂಜೆ: 5.30 ಗಂಟೆಯವರೆಗೆ.**
2	ಟೆಂಡ್‌ರ್‌ನಲ್ಲಿ ಭಾಗವಹಿಸಿ, ಇ.ಎಂ.ಡಿ ಮತ್ತು ಟೆಂಡರ್ ಪ್ರೋಸೆಸಿಂಗ್ ಫೀ ಸಲ್ಲಿಸಲು ಕೊನೆಯ ದಿನಾಂಕ:	**08/06/2026 ಸಂಜೆ: 4.30 ಗಂಟೆಯವರೆಗೆ.**
3	ಟೆಂಡ್‌ರ್‌ನಲ್ಲಿ ಭಾಗವಹಿಸಿ, ಇ.ಎಂ.ಡಿ ಮತ್ತು ಟೆಂಡರ್ ಪ್ರೋಸೆಸಿಂಗ್ ಫೀ ಸಲ್ಲಿಸಿ ಲೈವ್ ಬಿಡ್ ಆಕ್ಷನ್‌ನಲ್ಲಿ ಭಾಗವಹಿಸುವ ದಿನಾಂಕ:	**09/06/2026 ಬೆಳಿಗ್ಗೆ 11.00 ಗಂಟೆ ಯಿಂದ 12/06/2026 ಸಂಜೆ: 4.30 ಗಂಟೆಯವರೆಗೆ.**

ಉಳಿದ ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಹೆಚ್ಚಿನ ಮಾಹಿತಿಗಾಗಿ www.kppp.karnataka.gov.in ಅಂತರ್ಜಲ ತಾಣದಲ್ಲಿ ಅಥವಾ ಈ ಕಛೇರಿಯ ದೂರವಾಣಿ ಸಂಖ್ಯೆ – 08156–295427 ಈ ಕಛೇರಿಯ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು ಮತ್ತು ಕೆ.ಪಿ.ಪಿ ಪೋರ್ಟಲ್ ಸಹಾಯವಾಣಿ ದೂರವಾಣಿ ಸಂಖ್ಯೆ: 91–8068948777 ಮತ್ತು 91–8046010000 ರಿಂದ ಪಡೆಯಬಹುದು. ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ಅನುಮೋದಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಕಾರ್ಯಪಾಲಕ ಇಂಜನಿಯರ್,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ.

ನಿವೃತ್ತ ನ್ಯಾಯಮೂರ್ತಿ ಆರ್.ಎಂ.ಲೋಧಾ ಸಮಿತಿ
(ಪಿಎಸಿಎಲ್ ಲಿಮಿಟೆಡ್ ವಿಷಯದಲ್ಲಿ)

ಸಾರ್ವಜನಿಕ ಪ್ರಕಟಣೆ

ಒಡಿಶಾದ ಗಂಜಾಂ, ಗುಜರಾತ್‌ನ ಅಹ್ಮದಾಬಾದ್‌ನಲ್ಲಿ, ಪಶ್ಚಿಮ ಬಂಗಾಳದ ಕೋಲ್ಕತಾದಲ್ಲಿ, ಆಂಧ್ರಪ್ರದೇಶದ ಪ್ರಕಾಶಂನಲ್ಲಿ, ಮಹಾರಾಷ್ಟ್ರದ ನಾಗಪುರದಲ್ಲಿ ಮತ್ತು ಕರ್ನಾಟಕದ ಚಿಕ್ಕಬಳ್ಳಾಪುರದಲ್ಲಿರುವ ಪಿಎಸಿಎಲ್ ಲಿಮಿಟೆಡ್‌ನ ಸ್ವತ್ತುಗಳ ಇ–ಹರಾಜು

1. ಪಿಎಸಿಎಲ್ ಲಿಮಿಟೆಡ್‌ನ ಜಮೀನು ವಿಲೇವಾರಿ ಮಾಡಿ, ಅದರಿಂದ ಸಂದಾಯವಾಗುವ ಮಾರಾಟ ಮೌಲ್ಯವನ್ನು ಪಿಎಸಿಎಲ್ ಹೂಡಿಕೆದಾರರಿಗೆ ಪಾವತಿಸುವುದಕ್ಕೆ ಸಂಬಂಧಿಸಿದಂತೆ, ಸುಬ್ರತಾ ಭಟ್ಟಾಚಾರ್ಯ ವಿರುದ್ಧ ಸೆಬಿ ಮತ್ತು ಇನ್ನಿತರರು ಹಾಗೂ ಇನ್ನೂ ಕೆಲವು ಸಂಬಂಧಿತ ವಿಷಯಗಳ ಶೀರ್ಷಿಕೆಯುಳ್ಳ, ಸಿವಿಲ್ ಅಪೀಲ್ ನಂ. 13301/2015 ಪ್ರಕರಣಕ್ಕೆ ಸಂಬಂಧಿಸಿದಂತೆ, ಮಾನ್ಯ ಭಾರತೀಯ ಸರ್ವೋಚ್ಚ ನ್ಯಾಯಾಲವು ದಿನಾಂಕ ಫೆಬ್ರವರಿ 02 2016 ರಂದು ಹೊರಡಿಸಿದ ಆದೇಶದ ಅಡಿಯಲ್ಲಿ ಮತ್ತು ಆದೇಶದ ಮೂಲಕ, ನಿವೃತ್ತ ನ್ಯಾಯಮೂರ್ತಿ ಆರ್.ಎಂ. ಲೋಧಾ ಸಮಿತಿ (ಪಿಎಸಿಎಲ್ ಲಿಮಿಟೆಡ್ ವಿಷಯದಲ್ಲಿ) ರಚಿಸಲಾಗಿದ್ದು, ಇದೀಗ ಮಾನ್ಯ ಭಾರತೀಯ ಸರ್ವೋಚ್ಚ ನ್ಯಾಯಾಲಯದ ದಿನಾಂಕ ಆಗಸ್ಟ್ 08, 2024ರ ಆದೇಶಕ್ಕೆ ಅನುಗುಣವಾಗಿ, ಸದರಿ ಸಮಿತಿಯು **ಒಡಿಶಾದ ಗಂಜಾಂ, ಗುಜರಾತ್‌ನ ಅಹ್ಮದಾಬಾದ್‌ನಲ್ಲಿ, ಪಶ್ಚಿಮ ಬಂಗಾಳದ ಕೋಲ್ಕತಾದಲ್ಲಿ, ಆಂಧ್ರಪ್ರದೇಶದ ಪ್ರಕಾಶಂನಲ್ಲಿ, ಮಹಾರಾಷ್ಟ್ರದ ನಾಗಪುರದಲ್ಲಿ ಮತ್ತು ಕರ್ನಾಟಕದ ಚಿಕ್ಕಬಳ್ಳಾಪುರದಲ್ಲಿ** ಸ್ಥಿತಗೊಂಡಿರುವ ಪಿಎಸಿಎಲ್ ಲಿಮಿಟೆಡ್‌ನ ಸ್ವತ್ತುಗಳನ್ನು ಇ–ಹರಾಜು ಮುಖಾಂತರ ವಿಲೇ ಮಾಡುವ ಪ್ರಕ್ರಿಯೆಯನ್ನು ಪ್ರಾರಂಭಿಸಲು ನಿರ್ಧರಿಸಿದ್ದು, ಇದಕ್ಕೆ ಸಂಬಂಧಿಸಿದಂತೆ ಪ್ರಸ್ತಾವಣೆ ಮನವಿಗಳನ್ನು (ಆರ್‌ಎಫ್‌ಪಿ) ಆಹ್ವಾನಿಸಿರುತ್ತಾರೆ ಮತ್ತು ಸದರಿ ಆರ್‌ಎಫ್‌ಪಿಗಳನ್ನು ಇಲ್ಲಿ ಪರಿಶೀಲಿಸಬಹುದು: https://www.sebi.gov.in/ notice-for-eoi-proposals.html, https://www.bank eauctions.com ಮತ್ತು https://www.bankeauctionwizard.com.
2. ಸ್ವತ್ತಿನ ದಾಖಲಾತಿಗಳನ್ನು ಇಲ್ಲಿ ಪರಿಶೀಲಿಸಬಹುದು: https://sebipaclproperties.com, https://www.bankeauctions.com ಮತ್ತು https://www.bankeauctionwizard.com.
3. ಸದರಿ ಇ–ಹರಾಜು ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವ ವಿಧಾನ ವಿವರಗಳು ಆರ್‌ಎಫ್‌ಪಿ ದಸ್ತಾವೇಜಿನಲ್ಲಿ ಲಭ್ಯವಿರುತ್ತದೆ. ಆರ್‌ಎಫ್‌ಪಿ ಸಂಬಂಧಿತ ಪ್ರಮುಖ ದಿನಾಂಕಗಳು ಕೆಳಗಿನಂತಿರುತ್ತವೆ:

- **ಆರ್‌ಎಫ್‌ಪಿ ಪ್ರಕಟಣೆಯ ದಿನಾಂಕ – ಮೇ 22, 2026**
- **ಬಿಡ್ ಸಲ್ಲಿಸುವ ಆರಂಭಿಕ ದಿನಾಂಕ – ಮೇ 22, 2026**
- **ಬಿಡ್ ಡ್ಯೂ ದಿನಾಂಕ ಮತ್ತು ಸಮಯ – ಜೂನ್ 29, 2026 (17:00 ಗಂಟೆ)**
- **ಇ–ಹರಾಜು ಆರಂಭ ದಿನಾಂಕ – ಜುಲೈ 13, 2026 (11:00 ಗಂಟೆ)**

ಅನ್ವಯಿಕ ಷರತ್ತುಗಳು:

4. ಎಲ್ಲಾ ಸ್ವತ್ತುಗಳನ್ನು "ಹೇಗಿದೆಯೊ, ಎಲ್ಲಿದೆಯೊ, ಏನೇನಿದೆಯೊ" ಆಧಾರದಲ್ಲಿ ಮಾರಾಟ ಮಾಡಲಾಗುತ್ತದೆ ಮತ್ತು ಅವುಗಳಿಗೆ ಸಂಬಂಧಿತ ಯಾವುದೇ ಕ್ಲೇಮ್‌ಗಳಿಗೆ, ಹೊಣೆಗಾರಿಕೆಗಳಿಗೆ ಮತ್ತು/ಅಥವಾ ಋಣಭಾರಗಳಿಗೆ ಖರೀದಿದಾರರೇ ಜವಾಬ್ದಾರರಾಗುತ್ತಾರೆ.
5. ಸದರಿ ಪ್ರಕಟಣೆಯಲ್ಲಿ ಮತ್ತು ಸದರಿ ಟೆಂಡರ್ ದಸ್ತಾವೇಜಿನ ಅಡಿಯಲ್ಲಿನ ಆರ್‌ಎಫ್‌ಪಿ'ಯಲ್ಲಿ ನೀಡಲಾಗಿರುವ ಸ್ವತ್ತುಗಳ ವಿವರಗಳು ಮಾರಾಟಗಾರರಿಗೆ ಲಭ್ಯವಾಗಿರುವ ವಿವರಗಳಂತೆಯೇ ಇರುತ್ತವೆ ಹಾಗೂ ಯಾವುದೋ ಕಾರಣದಿಂದಾಗಿ ಸ್ವತ್ತುಗಳ ವಿಸ್ತೀರ್ಣದಲ್ಲಿ ಯಾವುದೇ ರೀತಿಯ ವ್ಯತ್ಯಾಸಗಳು ಕಂಡುಬಂದಲ್ಲಿ, ಅಂತಹುದಕ್ಕೆ ಮಾರಾಟಗಾರರಾಗಲಿ ಅಥವಾ ಸಂಸ್ಥೆಯಾಗಲಿ, ಯಾವುದೇ ರೀತಿಯಲ್ಲಿ ಹೊಣೆಯಾಗಿರುವುದಿಲ್ಲ.
6. ಸ್ವತ್ತುಗಳಿಗೆ ಸಂಬಂಧಿಸಿದಂತೆ ಅಥವಾ ಅವುಗಳ ಹಕ್ಕುಪತ್ರಗಳಿಗೆ ಸಂಬಂಧಿಸಿದಂತೆ ಯಾವುದೇ ವ್ಯತ್ಯಾಸಗಳಿದ್ದಲ್ಲಿ, ಅಂತಹವುಗಳಿಗೆ ಸಂಬಂಧಿಸಿದಂತೆ ಸದರಿ ಸಮಿತಿಯು ಯಾವುದೇ ರೀತಿಯಲ್ಲಿ ಹೊಣೆಯಾಗಿರುವುದಿಲ್ಲ. ಆಸಕ್ತಿಯುಳ್ಳ ಬಿಡ್‌ದಾರರು, ಸ್ವತ್ತುಗಳ ಹಕ್ಕು, ಅಧಿಕಾರ, ವಿಸ್ತೀರ್ಣಕ್ಕೆ ಸಂಬಂಧಿಸಿದಂತೆ ಸ್ವತಂತ್ರವಾಗಿ ಪರಿಶೀಲಿಸಿಕೊಂಡ ಬಳಿಕವಷ್ಟೆ ತಮ್ಮ ಬಿಡ್‌ಗಳನ್ನು ಸಲ್ಲಿಸಬೇಕೆಂದು ಕೋರಲಾಗಿದೆ.

CBC15204/11/0015/2627

ತಾತ್ಕಾಲಿಕ ವಿದ್ಯುತ್: ದುಪ್ಪಟ್ಟು ಶುಲ್ಕದ ಬರೆ

ಸುಮಾರು ಮೂರೂವರೆ ಲಕ್ಷ ಮನೆಗಳಿಗೆ ತಾತ್ಕಾಲಿಕ ವಿದ್ಯುತ್ ಸಂಪರ್ಕ

• ಎ.ಎಂ.ಸುರೇಶ

ಬೆಂಗಳೂರು: ವರ್ಷದ ಹಿಂದೆಯೇ ಮನೆಗಳ ನಿರ್ಮಾಣ ಪೂರ್ಣಗೊಂಡಿದ್ದರೂ ಸ್ವಾಧೀನಾನುಭವ ಪ್ರಮಾಣ ಪತ್ರ (ಒ.ಸಿ) ಇಲ್ಲದ ಕಾರಣ ಇದುವರೆಗೂ ವಿದ್ಯುತ್ ಸಂಪರ್ಕ ನೀಡಿಲ್ಲ. ಹೀಗಾಗಿ, ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆದಿರುವ ಅಂದಾಜು ಮೂರೂವರೆ ಲಕ್ಷ ಗ್ರಾಹಕರು ಪ್ರತಿ ತಿಂಗಳು ದುಪ್ಪಟ್ಟು ಶುಲ್ಕ ಪಾವತಿಸುವಂತಾಗಿದೆ.

ಗೃಹ ಬಳಕೆಯ ಗ್ರಾಹಕರು ತಾವು ಬಳಸುವ ಪ್ರತಿ ಯೂನಿಟ್ ವಿದ್ಯುತ್‌ಗೆ ₹5.80 ಪಾವತಿಸುತ್ತಾರೆ. ಆದರೆ, ತಾತ್ಕಾಲಿಕ ಸಂಪರ್ಕ ಪಡೆದಿರುವ ಗ್ರಾಹಕರು ಪ್ರತಿ ಯೂನಿಟ್ ವಿದ್ಯುತ್‌ಗೆ ₹10.50 ನೀಡಬೇಕು. ಅಲ್ಲದೆ ಕಾಯಂ ಸಂಪರ್ಕದಾರರಿಗೆ ಒಂದು ಕಿಲೋವಾಟ್‌ಗೆ ₹150 ನಿಗದಿತ ಶುಲ್ಕ ಇದ್ದರೆ, ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆದಿರುವ ಗ್ರಾಹಕರು ಕಿಲೋವಾಟ್‌ಗೆ ₹200 ಶುಲ್ಕ ಕಟ್ಟಬೇಕು.

ಇದರ ಜೊತೆಗೆ ಯೂನಿಟ್‌ಗೆ 0.35 ಪೈಸೆ ಸರ್‌ಚಾರ್ಜ್ ಹಾಗೂ 0.25 ಪೈಸೆ ಇಂಧನ ಹೊಂದಾಣಿಕೆ ಶುಲ್ಕ ಪಾವತಿಸಬೇಕು. ಈ ಶುಲ್ಕಗಳೆಲ್ಲ ಸೇರಿದರೆ ತಾತ್ಕಾಲಿಕ ಸಂಪರ್ಕಕ್ಕೆ ಪ್ರತಿ ಯೂನಿಟ್‌ಗೆ ಸುಮಾರು ₹12 ಪಾವತಿಸಬೇಕು. ಇದು ತುಂಬಾ ದುಬಾರಿಯಾಗಿದ್ದು, ವಿದ್ಯುತ್ ಬಿಲ್ ಪಾವತಿಗಾಗಿಯೇ ತಿಂಗಳಿಗೆ ₹7 ಸಾವಿರದಿಂದ ₹8 ಸಾವಿರ ವೆಚ್ಚ ಮಾಡುತ್ತಿದ್ದೇವೆ ಎಂದು 'ಪ್ರಜಾವಾಣಿ'ಯೊಂದಿಗೆ ಮಾತನಾಡಿದ ಗ್ರಾಹಕರು ಅಳಲು ತೋಡಿಕೊಂಡರು.

'10 ಕಿಲೋವಾಟ್ ವಿದ್ಯುತ್ ಸಂಪರ್ಕ ಪಡೆದಿದ್ದರೆ, ಪ್ರತಿ ತಿಂಗಳು ಎರಡು ಸಾವಿರ ರೂಪಾಯಿ ನಿಗದಿತ ಶುಲ್ಕ ಪಾವತಿಸಬೇಕು. 500 ಯೂನಿಟ್ ವಿದ್ಯುತ್ ಬಳಕೆ ಮಾಡಿದರೆ ಅದಕ್ಕೆ ₹5,250 ಪಾವತಿಸಬೇಕು. ಇದರೊಂದಿಗೆ ಹೊಂದಾಣಿಕೆ ವೆಚ್ಚ ₹125 ಹಾಗೂ ಸರ್‌ಚಾರ್ಜ್ ₹175 ಪಾವತಿಸಬೇಕು. ಇದೆಲ್ಲ ಸೇರಿ ಒಟ್ಟು ₹7,550 ಆಗುತ್ತದೆ. ಒಂದು ವೇಳೆ ಕಾಯಂ ಸಂಪರ್ಕ ನೀಡಿದ್ದರೆ ಒಟ್ಟು ₹3,700 ಬಿಲ್ ಬರುತ್ತಿತ್ತು' ಎಂದು ಇಂದಿರಾನಗರದ ನಿವಾಸಿ ನಾಗರಾಜ್ ವಿವರಿಸಿದರು.

'ಮನೆಯ ನಿರ್ಮಾಣ ಪೂರ್ಣಗೊಂಡಿದ್ದು, ಕಾಯಂ ವಿದ್ಯುತ್ ಸಂಪರ್ಕ ಪಡೆಯಲು ಹಣವನ್ನೂ ಪಾವತಿಸಿದ್ದೇವೆ. ಆದರೆ, ಒ.ಸಿ ಇಲ್ಲ ಎಂಬ ಕಾರಣಕ್ಕೆ ವಿದ್ಯುತ್ ಸಂಪರ್ಕ ನೀಡುತ್ತಿಲ್ಲ. ಅನಿವಾರ್ಯವಾಗಿ ತಾತ್ಕಾಲಿಕ ವಿದ್ಯುತ್ ಸಂಪರ್ಕವನ್ನೇ ಅವಲಂಬಿಸಿದ್ದೇವೆ. ಆದರೆ, ಇದಕ್ಕೆ ನಿಗದಿಪಡಿಸಿರುವ ದರ ಹೆಚ್ಚಾಗಿದೆ. ಸುಮಾರು ಒಂದು ವರ್ಷದಿಂದ ದುಬಾರಿ ವಿದ್ಯುತ್ ಶುಲ್ಕ ಪಾವತಿಸುತ್ತಿದ್ದೇವೆ' ಎಂದರು.

'ಮನೆ ನಿರ್ಮಿಸುವಾಗ ತಾತ್ಕಾಲಿಕ ಸಂಪರ್ಕ ಪಡೆಯಲಾಗಿತ್ತು. ನಿರ್ಮಾಣ ಮುಕ್ತಾಯವಾಗುವ ವೇಳೆಗೆ ಕಾಯಂ ಸಂಪರ್ಕ ಪಡೆಯಲು ಅರ್ಜಿ ಜತೆ ಹಣ ಪಾವತಿಸಿದ್ದೇವೆ. ವಿದ್ಯುತ್ ಸಂಪರ್ಕ ನೀಡಲು ಒ.ಸಿ ಬೇಕು ಎಂದು ಕೇಳುತ್ತಿದ್ದಾರೆ. ಆದರೆ, ನಮ್ಮ ಬಳಿ ಒ.ಸಿ ಇಲ್ಲ. ಈಗ ಏನು ಮಾಡಬೇಕು ಎಂದು ದಿಕ್ಕೇ ತೋಚದಂತಾಗಿದೆ' ಎಂದು ಕೆ.ಆರ್.ಪುರದ ನಿವಾಸಿ ಮಂಜುನಾಥ್ ಬೇಸರ ವ್ಯಕ್ತಪಡಿಸಿದರು.

ಹೆಚ್ಚಿನ ಉಪಯೋಗ ಆಗಿಲ್ಲ: '2025ರ ನವೆಂಬರ್ ವೇಳೆಗೆ ವಿದ್ಯುತ್ ಸಂಪರ್ಕಕ್ಕಾಗಿ ಸಲ್ಲಿಸಿದ್ದ ಅರ್ಜಿಗಳ ಸಂಖ್ಯೆ 4.50 ಲಕ್ಷ ಇತ್ತು. 1,200 ಚದರ ಅಡಿ ವಿಸ್ತೀರ್ಣದ ಒಳಗಿನ ನಿವೇಶನಗಳಲ್ಲಿ ನಿರ್ಮಿಸಿರುವ ವಸತಿ ಕಟ್ಟಡಗಳಿಗೆ ಸ್ವಾಧೀನಾನುಭವ ಪ್ರಮಾಣಪತ್ರ (ಒ.ಸಿ) ಪಡೆಯುವುದರಿಂದ ವಿನಾಯಿತಿ ನೀಡಿದ ಬಳಿಕ ಕೆಲವು ಮನೆಗಳಿಗೆ ವಿದ್ಯುತ್ ಸಂಪರ್ಕ ನೀಡಲಾಗಿದೆ. ಆದರೆ, ಇದರಿಂದ ಹೆಚ್ಚಿನ ಗ್ರಾಹಕರಿಗೆ ಉಪಯೋಗ ಆಗಿಲ್ಲ' ಎಂದು ಇಂಧನ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

2024ರಲ್ಲಿ ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆದು ಮನೆ ನಿರ್ಮಿಸಲಾಗಿದೆ. ಗೃಹ ಪ್ರವೇಶವೂ ಆಗಿದೆ. ಆದರೆ, ಇನ್ನೂ ಕಾಯಂ ಸಂಪರ್ಕ ನೀಡಿಲ್ಲ. ಹೀಗಾಗಿ ತೊಂದರೆ ಆಗಿದೆ.
ಎಂ.ಎನ್.ಪವನ್
ನಾಗರಬಾವಿ, ಬೆಂಗಳೂರು

ಕಂಪನಿ ಹೆಸರು	ತಾತ್ಕಾಲಿಕ ವಿದ್ಯುತ್ ಸಂಪರ್ಕಗಳ ಸಂಖ್ಯೆ
ಬೆಸ್ಕಾಂ	1,54,567
ಚೆಸ್ಕಾಂ	36,000
ಮೆಸ್ಕಾಂ	36,000
ಜೆಸ್ಕಾಂ	30,239
ಹೆಸ್ಕಾಂ	83,992
ಒಟ್ಟು	3,40,798

ಬೆಸ್ಕಾಂ ವ್ಯಾಪ್ತಿಯಲ್ಲೇ ಅಧಿಕ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ) ವ್ಯಾಪ್ತಿಯಲ್ಲಿ 1,54,567 ಮನೆಗಳಿಗೆ ತಾತ್ಕಾಲಿಕ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಬೇರೆ ಕಂಪನಿಗಳಿಗೆ ಹೋಲಿಸಿದರೆ ಬೆಸ್ಕಾಂ ವ್ಯಾಪ್ತಿಯಲ್ಲೇ ಹೆಚ್ಚು ತಾತ್ಕಾಲಿಕ ವಿದ್ಯುತ್ ಸಂಪರ್ಕಗಳಿವೆ.

ಸುಪ್ರೀಂ ಕೋರ್ಟ್ ಆದೇಶದಂತೆ 2025ರ ಏಪ್ರಿಲ್‌ನಿಂದ ನೀರು ಹಾಗೂ ವಿದ್ಯುತ್ ಸಂಪರ್ಕಕ್ಕೆ ಒ.ಸಿ ಕಡ್ಡಾಯಗೊಳಿಸಲಾಗಿದೆ. ವಿದ್ಯುತ್ ಸಂಪರ್ಕ ಕೋರಿ ಅರ್ಜಿ ಸಲ್ಲಿಸಿದವರ ಬಳಿ ಒ.ಸಿ ಇಲ್ಲದಿರುವುದರಿಂದ 13 ತಿಂಗಳಿಂದ ಹೊಸ ವಿದ್ಯುತ್ ಸಂಪರ್ಕ ನೀಡುವುದು ಬಹುತೇಕ ಸ್ಥಗಿತಗೊಂಡಿದೆ.

ಜಿಬಿಎ ವ್ಯಾಪ್ತಿಯಲ್ಲಿ 77,112 ಹಾಗೂ ಬೆಸ್ಕಾಂ ವ್ಯಾಪ್ತಿಯ ಉಳಿದ ಜಿಲ್ಲೆಗಳಲ್ಲಿ 77,455 ಮನೆಗಳಿಗೆ ತಾತ್ಕಾಲಿಕ ವಿದ್ಯುತ್ ಸಂಪರ್ಕ ನೀಡಲಾಗಿದೆ. ಈ ಪೈಕಿ ಬಹುತೇಕ ಮನೆಗಳ ವಿಸ್ತೀರ್ಣ 1,200 ಚದರ ಅಡಿಗಿಂತ ಹೆಚ್ಚಾಗಿದೆ ಎಂದು ಮೂಲಗಳು ತಿಳಿಸಿವೆ.

ಸುದ್ದಿ 2 ನಿಮಿಷ

ಲೆಕ್ಕ ಕೊಡಿ ಅಭಿಯಾನ ತಾತ್ಕಾಲಿಕ ಮುಂದೂಡಿಕೆ

ಕೊಟ್ಟೂರು (ವಿಜಯನಗರ ಜಿಲ್ಲೆ): 'ಹರಿಹರ ಪಂಚಮಸಾಲಿ ಪೀಠದ ಪರ ಇರುವ ಭಕ್ತರು ಕೊಟ್ಟೂರಿನಿಂದ ಈ ವಾರ ಹಮ್ಮಿಕೊಳ್ಳಲು ಉದ್ದೇಶಿಸಿದ್ದ ಲೆಕ್ಕ ಕೊಡಿ ಅಭಿಯಾನವನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದೆ' ಎಂದು ಹರಿಹರದ ಮಾಜಿ ಶಾಸಕ ಎಚ್.ಎಸ್.ಶಿವಶಂಕರ್ ತಿಳಿಸಿದರು.

'ಹುಬ್ಬಳ್ಳಿಯಲ್ಲಿ ಈಚೆಗೆ ನಡೆದ ಸಭೆಯಲ್ಲಿ ಬಸನಗೌಡ ಪಾಟೀಲ ಯತ್ನಾಳ್, ಮುರುಗೇಶ್ ನಿರಾಣಿ, ಬಿ.ಸಿ.ಪಾಟೀಲ್, ಅರವಿಂದ ಬೆಲ್ಲದ್ ಮುಂತಾದ ಮುಖಂಡರ ಸಮ್ಮುಖದಲ್ಲಿ ಲೆಕ್ಕ ಕೊಡಿ ಸಮಿತಿ ಮತ್ತು ಟ್ರಸ್ಟ್ ಮಧ್ಯ ರಾಜಿ ಮಾಡಿಸಲಾಗಿದೆ. ಶೀಘ್ರವೇ ದಿನಾಂಕ ಗೊತ್ತುಪಡಿಸಿ ಲೆಕ್ಕ ನೀಡುವುದಾಗಿ ಟ್ರಸ್ಟ್ ಪದಾಧಿಕಾರಿಗಳು ತಿಳಿಸಿರುವ ಕಾರಣ ಅಭಿಯಾನ ಮುಂದೂಡಲಾಗಿದೆ' ಎಂದು ಅವರು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಲೆಕ್ಕ ಕೊಡಿ ಸಮಿತಿ ಅಧ್ಯಕ್ಷ ಹೊಳೆಸಿರಿಗೆರೆ ಪರಮೇಶ್ವರಗೌಡ, ಮಾಜಿ ಶಾಸಕ ನಂದಿಹಳ್ಳಿ ಹಾಲಪ್ಪ, ಬಾದಾಮಿ ಮೃತ್ಯುಂಜಯ ಇದ್ದರು.

ಕೈಕೈ ಮಿಲಾಯಿಸಿದ ಬಿಜೆಪಿ ಕಾಂಗ್ರೆಸ್ ಕಾರ್ಯಕರ್ತರು



ಚಿಕ್ಕಮಗಳೂರು: ರಸ್ತೆ ಅಭಿವೃದ್ಧಿ ವಿಚಾರದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಜಟಾಪಟಿ ನಡೆದು, ಕಾರ್ಯಕರ್ತರು ಕೈ ಕೈ ಮಿಲಾಯಿಸಿ ಪರಸ್ಪರ ಧಿಕ್ಕಾರ ಕೂಗಿದರು.

ನಗರ ಹೊರ ವಲಯದ ರಾಂಪುರ ಬಳಿ ರಸ್ತೆ ಅಭಿವೃದ್ಧಿ ಕಾಮಗಾರಿ ಆರಂಭ ವಿಚಾರದಲ್ಲಿ ಶಾಸಕ ಎಚ್.ಡಿ.ತಮ್ಮಯ್ಯ ಮತ್ತು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ನಡುವೆ ಜಟಾಪಟಿ ಆರಂಭವಾಗಿದೆ. ಗುರುವಾರ ರಸ್ತೆ ಕಾಮಗಾರಿ ವೀಕ್ಷಿಸಲು ತೆರಳಿದ್ದ ಸಿ.ಟಿ.ರವಿ ಅವರನ್ನು ಅಡ್ಡಗಟ್ಟಿದ ಕಾಂಗ್ರೆಸ್ ಕಾರ್ಯಕರ್ತರು ಘೋಷಣೆ ಕೂಗಿದರು. '20 ವರ್ಷ ಶಾಸಕರಾಗಿದ್ದ ಅವಧಿಯಲ್ಲಿ ರಸ್ತೆ ಅಭಿವೃದ್ಧಿ ಮಾಡಲಿಲ್ಲ. ಈಗ ಕಾಂಗ್ರೆಸ್ ಶಾಸಕ ಎಚ್.ಡಿ.ತಮ್ಮಯ್ಯ ಆಸಕ್ತಿಯಿಂದ ಕಾಮಗಾರಿ ಕಾರ್ಯಾದೇಶವಾಗಿದೆ. ಈಗಲೂ ಕಾಮಗಾರಿ ಆರಂಭಿಸಲು ವಿಳಂಬ ಮಾಡಲಾಗುತ್ತಿದ್ದು, ಇದಕ್ಕೆ ಸಿ.ಟಿ.ರವಿ ಕಾರಣ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಕಾಮಗಾರಿಗೆ ಮಂಜೂರಾತಿ ಕೊಡಿಸಿರುವುದು ನಾನು. ಆರಂಭವಾಗಲು ವಿಳಂಬ ಆಗುವುದಕ್ಕೆ ಕಾಂಗ್ರೆಸ್ ಕಾರಣ' ಎಂದು ಸಿ.ಟಿ.ರವಿ ಹೇಳಿದರು. ನೂಕಾಟ, ತಳ್ಳಾಟ ನಡುವೆ ಕೈ ಕೈ ಮಿಲಾಯಿಸಿದರು. ಸ್ಥಳಕ್ಕೆ ಬಂದ ಪೊಲೀಸರು ಪರಿಸ್ಥಿತಿ ನಿಭಾಯಿಸಲು ಪರದಾಡಿದರು.

ಮನೆ ಚಾವಣಿ ಕುಸಿದು ಮಹಿಳೆ ಸಾವು



ಮಹಾದೇವಿ ವಾರದ

ವಿಜಯಪುರ: ಜಿಲ್ಲೆಯ ನಿಡಗುಂದಿ ಪಟ್ಟಣದ ಗೌರೀಶ್ವರ ದೇವಸ್ಥಾನ ಬಳಿ ಮನೆಯೊಂದರ ಚಾವಣಿ ಕುಸಿದು ಮಹಾದೇವಿ ವಾರದ (55) ಎಂಬುವರು ಮೃತಪಟ್ಟಿದ್ದಾರೆ. ಈಚೆಗೆ ಸುರಿದ ಮಳೆಗೆ ಹಳೆ ಮನೆಯ ಚಾವಣಿ ನೆನೆದಿತ್ತು.

ಮನೆಯ ಹೊರಗೆ ಮಲಗಿದ್ದ ಮಹಾದೇವಿ ಅವರ ಪತಿ ಶಿವಾನಂದ ಅಪಾಯದಿಂದ ಪಾರಾಗಿದ್ದಾರೆ. ಮೃತರ ಕುಟುಂಬದವರಿಗೆ ವಿಪತ್ತು ಪರಿಹಾರ ನಿಧಿಯಡಿ ₹5 ಲಕ್ಷ ಪರಿಹಾರ ನೀಡಲಾಗುವುದು' ಎಂದು ನಿಡಗುಂದಿ ತಹಶೀಲ್ದಾರ್ ತಿಳಿಸಿದರು.

ಲಂಚ; ಬಿಲ್ ಕಲೆಕ್ಟರ್ 'ಲೋಕಾ' ಬಲೆಗೆ

ಪ್ರಜಾವಾಣಿ ವಾರ್ತೆ



ಹರೀಶ್

ಹಾಸನ: ಇ-ಸ್ವತ್ತು ನೀಡಲು ಗ್ರಾಮ ಪಂಚಾಯಿತಿ ಕಚೇರಿಯಲ್ಲೇ ₹48 ಸಾವಿರ ಲಂಚ ಪಡೆಯುತ್ತಿದ್ದ ಅರಕಲಗೂಡು ತಾಲ್ಲೂಕಿನ ಮಲ್ಲಿಪಟ್ಟಣದ ಬಿಲ್ ಕಲೆಕ್ಟರ್ ಹರೀಶ್ ಅವರನ್ನು ಲೋಕಾಯುಕ್ತ ಪೊಲೀಸರು ಗುರುವಾರ ವಶಕ್ಕೆ ಪಡೆದರು.

ಜಮೀನಿನ –ಇ ಸ್ವತ್ತು ನೀಡಲು ಲಂಚ ಕೇಳಿದ್ದಾರೆ ಎಂದು ಅರ್ಜಿದಾರ ಸೋಮಶೇಖರ್ ದೂರು ನೀಡಿದ್ದರು. ಅದನ್ನು ಆಧರಿಸಿ ಲೋಕಾಯುಕ್ತ ಇನ್‌ಸ್ಪೆಕ್ಟರ್ ಶಿಲ್ಪಾ ನೇತೃತ್ವದ ತಂಡ ಕಾರ್ಯಾಚರಣೆ ನಡೆಸಿತು. ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಬಿರುಗಾಳಿ ಸಹಿತ ಮಳೆ ಅಬ್ಬರ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ನಗರದಲ್ಲಿ ಗುರುವಾರ ಸಂಜೆ ಸುರಿದ ಬಿರುಗಾಳಿ ಸಹಿತ ಭಾರಿ ಮಳೆ ಜನಜೀವನವನ್ನು ಅಸ್ತವ್ಯಸ್ತಗೊಳಿಸಿತು. ತಗ್ಗು ಪ್ರದೇಶಗಳಲ್ಲಿ ಇರುವ ಮನೆಗಳಿಗೆ ನೀರು ನುಗ್ಗಿ ನಾಗರಿಕರು ಸಮಸ್ಯೆ ಅನುಭವಿಸಿದರು. ರಸ್ತೆಗಳು ಜಲಾವೃತಗೊಂಡು ಕೆರೆಗಳಂತೆ ಭಾಸವಾಗುತ್ತಿದ್ದವು.

ಸಂಜೆಯವರೆಗೂ ವಾತಾವರಣದಲ್ಲಿ ಉಷ್ಣಾಂಶ ಹೆಚ್ಚಾಗಿತ್ತು, ಏಕಾಏಕಿ ದಟ್ಟ ಮೋಡ ಕವಿದು ಗಾಳಿಯ ಅಬ್ಬರದೊಂದಿಗೆ ಮಳೆ ಆರಂಭವಾಗಿ ಅರ್ಧತಾಸಿಗೂ ಹೆಚ್ಚು ಕಾಲ ಬಿಡುವಿಲ್ಲದೆ ಸುರಿಯಿತು. ಭುವನೇಶ್ವರಿ ವೃತ್ತದಲ್ಲಿ ಹಲವು ಅಂಗಡಿ ಮಳಿಗೆಗಳಿಗೆ ನೀರು ನುಗ್ಗಿತು. ಚರಂಡಿಯಲ್ಲಿ ಪ್ಲಾಸ್ಟಿಕ್ ಸಹಿತ ತ್ಯಾಜ್ಯಗಳು ತುಂಬಿಕೊಂಡಿದ್ದರಿಂದ ನೀರು ಸರಾಗವಾಗಿ ಹರಿಯಲಾಗದೆ ರಸ್ತೆಗಳಲ್ಲಿ ತುಂಬಿಕೊಂಡಿತು. ವಾಹನಗಳ ಚಕ್ರಗಳು ಅರ್ಧದಷ್ಟು ಮುಳುಗಿದವು.



ಚಾಮರಾಜನಗರದ ಪಚ್ಚಪ್ಪ ಸರ್ಕಲ್‌ನಲ್ಲಿ ಅಂಗಡಿಗೆ ನುಗ್ಗಿದ್ದ ಮಳೆಯ ನೀರನ್ನು ಮಾಲೀಕರು ಹೊರ ಚೆಲ್ಲಿದರು

ಬಿ.ರಾಚಯ್ಯ ಜೋಡಿ ರಸ್ತೆ, ದೊಡ್ಡ ಅಂಗಡಿ, ಚಿಕ್ಕ ಅಂಗಡಿ ಬೀದಿ, ಚಾಮರಾಜೇಶ್ವರ ದೇವಸ್ಥಾನ ಹಿಂಭಾಗದ ರಸ್ತೆಗಳಲ್ಲಿ ನೀರು ತುಂಬಿಕೊಂಡಿತ್ತು

ಕಲಬುರಗಿ ವರದಿ: ನಗರದಲ್ಲಿ ಗುರುವಾರ ರಾತ್ರಿ ಉತ್ತಮ ಮಳೆ ಸುರಿಯಿತು. ಬಿಸಿಲಿನಿಂದ ತತ್ತರಿಸಿದ್ದ ಇಳೆಗೆ ತಂಪೆರೆಯಿತು. ಬಿಸಿಲಿನ ಬೇಗೆಗೆ ಬೇಸತ್ತಿದ್ದ ಜನರ ಮೊಗದಲ್ಲಿ ಮಂದಹಾಸ ಮೂಡಿಸಿತು.

ದಿನವಿಡೀ ವಿಪರೀತ ಬಿಸಿಲು ಹಾಗೂ ಸೆಕೆಯ ವಾತಾವರಣ ಇತ್ತು. ರಾತ್ರಿ 8 ಗಂಟೆ ಹೊತ್ತಿಗೆ ಜಿಟಿಜಿಟಿಯಾಗಿ ಶುರುವಾದ ಮಳೆ ಬಳಿಕ ಬಿರುಸು ಪಡೆಯಿತು. ರಸ್ತೆ ಮೇಲೆ ನೀರು ಹರಿಯಿತು. ರಸ್ತೆಗಳಲ್ಲಿ ಸಂಚರಿಸುತ್ತಿದ್ದ ದ್ವಿಚಕ್ರ ವಾಹನಗಳ ಸವಾರರು ಅಲ್ಲಲ್ಲಿ ಗಿಡ, ಕಾಂಪ್ಲೆಕ್ಸ್‌ಗಳಡಿ ನಿಂತು ಆಶ್ರಯ ಪಡೆದ ದೃಶ್ಯ ಕಂಡು ಬಂತು.

ಮಳೆಕಾವ್ಯ...

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್



ಕಲಬುರಗಿ ನಗರದಲ್ಲಿ ಗುರುವಾರ ರಾತ್ರಿ ಸುರಿದ ಮಳೆಯು ರಸ್ತೆಯ ಮೇಲೆ ದೃಶ್ಯಕಾವ್ಯವನ್ನೇ ಸೃಷ್ಟಿಸಿತ್ತು

ಎಂಜಿನಿಯರಿಂಗ್‌ಗೆ ಪ್ರತ್ಯೇಕ ಕೌನ್ಸೆಲಿಂಗ್

ಒಂದನೇ ಪುಟದಿಂದ...

ಪರೀಕ್ಷೆಯ ಫಲಿತಾಂಶದ ನಂತರ ಸಿದ್ಧಪಡಿಸುವ ಅರ್ಹತಾ ಪಟ್ಟಿಯ ಆಧಾರದಲ್ಲಿ ವೈದ್ಯಕೀಯ ಕೌನ್ಸೆಲಿಂಗ್ ಪರಿಷತ್ತು (ಎಂಸಿಸಿ) ದೇಶದಲ್ಲಿ ಲಭ್ಯವಿರುವ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್‌ಗಳ ಒಟ್ಟು ಸೀಟುಗಳಲ್ಲಿ ಶೇ 15ರಷ್ಟು ಹಂಚಿಕೆ ಮಾಡುತ್ತದೆ. ಅದೇ ನೀಟ್ ಅರ್ಹತಾ ಪಟ್ಟಿಯನ್ನು ಇಟ್ಟುಕೊಂಡು ರಾಜ್ಯ ಕೋಟಾದ ಶೇ 85ರಷ್ಟು ಸೀಟುಗಳನ್ನು ಆಯಾ ರಾಜ್ಯಗಳಲ್ಲಿ ಹಂಚಿಕೆ ಮಾಡಲಾಗುತ್ತದೆ. ಕೆಇಎ ಈ ಕಾರ್ಯ ನಡೆಸುತ್ತದೆ.

ಎಂಜಿನಿಯರಿಂಗ್, ಪಶು ವೈದ್ಯಕೀಯ, ಕೃಷಿ ವಿಜ್ಞಾನ ಸೇರಿದಂತೆ ಇತರ ವೃತ್ತಿ ಶಿಕ್ಷಣ ಪದವಿ ಕೋರ್ಸ್‌ಗಳಿಗೆ ಕೆಇಎ ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಸುತ್ತದೆ. ಸಿಇಟಿ ಅರ್ಹತಾ ಅಂಕಗಳ ಆಧಾರದಲ್ಲಿ ಸೀಟು ಹಂಚಿಕೆ ಮಾಡಲಾಗುತ್ತದೆ. ವೈದ್ಯಕೀಯ ಕೋರ್ಸ್‌ಗಳಿಗೆ ಪ್ರತ್ಯೇಕ ಪರೀಕ್ಷೆ ನಡೆಸದಿದ್ದರೂ ನೀಟ್ ಅಂಕಗಳ ಆಧಾರದ ಮೇಲೆ ರಾಜ್ಯ ಕೋಟಾದ ಸೀಟುಗಳನ್ನು ಹಂಚಿಕೆ ಮಾಡುತ್ತದೆ.

ದ್ವಿತೀಯ ಪಿಯು ಪೂರೈಸಿದ ಬಹುತೇಕ ವಿದ್ಯಾರ್ಥಿಗಳು ನೀಟ್ ಹಾಗೂ ಸಿಇಟಿ ಬರೆಯುತ್ತಾರೆ. ಹಾಗಾಗಿ, ಪ್ರತಿ ವರ್ಷ ಮೊದಲ 10 ಸಾವಿರದವರೆಗಿನ ರ‍್ಯಾಂಕ್ ಪಡೆದವರು ಬಹುತೇಕ ನೀಟ್ ಹಾಗೂ ಸಿಇಟಿಯಲ್ಲೂ ಸ್ಥಾನ ಪಡೆಯುತ್ತಾರೆ. ಮೊದಲು ನೀಟ್ ಕೌನ್ಸೆಲಿಂಗ್ ನಡೆಸಿದರೆ ಅರ್ಹತಾ ಪಟ್ಟಿಯಲ್ಲಿ ಉನ್ನತ ಸ್ಥಾನ ಪಡೆದವರು ವೈದ್ಯಕೀಯ ಕಾಲೇಜುಗಳಿಗೆ ಪ್ರವೇಶ ಪಡೆಯುತ್ತಾರೆ. ಅವರಿಗಿಂತ ಕಡಿಮೆ ಅಂಕ ಪಡೆದವರು ಸಿಇಟಿ ಕೌನ್ಸೆಲಿಂಗ್ ವೇಳೆಗೆ ಉನ್ನತ ಸ್ಥಾನಕ್ಕೆ ಬಂದು ಎಂಜಿನಿಯರಿಂಗ್ ಸೇರಿದಂತೆ ಇತರೆ ಕೋರ್ಸ್‌ಗಳಲ್ಲಿ ತಾವು ಬಯಸಿದ ಕಾಲೇಜು, ಕೋರ್ಸ್‌ಗಳ ಆಯ್ಕೆಗೆ ಅನುಕೂಲವಾಗುತ್ತದೆ. ಹಾಗಾಗಿ, ಕೆಇಎ ಕೆಲ ವರ್ಷಗಳಿಂದ ಮೊದಲು ವೈದ್ಯಕೀಯ, ನಂತರ ಎಂಜಿನಿಯರಿಂಗ್ ಸೀಟುಗಳನ್ನು ಹಂಚಿಕೆ ಮಾಡುತ್ತಾ ಬಂದಿದೆ.

ನೀಟ್‌ಗೂ ಮೊದಲು ಪ್ರತ್ಯೇಕವಾಗಿ ಸಿಇಟಿ ಕೌನ್ಸೆಲಿಂಗ್ ನಡೆಸಿದರೆ ವೈದ್ಯಕೀಯ ಸೀಟು ಆಕಾಂಕ್ಷಿಗಳೂ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರವೇಶ ಪಡೆದು ನಂತರ ನೀಟ್ ಕೌನ್ಸೆಲಿಂಗ್‌ನಲ್ಲಿ ವೈದ್ಯಕೀಯ ಸೀಟು ಸಿಕ್ಕರೆ ಎಂಜಿನಿಯರಿಂಗ್ ಪ್ರವೇಶ ರದ್ದು ಮಾಡಿಕೊಳ್ಳುತ್ತಾರೆ. ಇದರಿಂದ ಎಂಜಿನಿಯರಿಂಗ್ ಸೀಟುಗಳು ಖಾಲಿ ಉಳಿಯಬಹುದು. ಉಳಿದ ಸೀಟುಗಳನ್ನು ಮತ್ತೆ ಭರ್ತಿ ಮಾಡಲು ಸಿಇಟಿ ಕೌನ್ಸೆಲಿಂಗ್ ಪ್ರಕ್ರಿಯೆ ಮುಕ್ತಾಯವಾಗಿರುತ್ತದೆ. ಬೇಡಿಕೆ ಕೋರ್ಸ್‌ಗಳನ್ನು ಹೆಚ್ಚಿನ ಹಣಕ್ಕೆ ಖಾಸಗಿ ಕಾಲೇಜುಗಳು ಮಾರಿಕೊಳ್ಳಬಹುದು. ಇಲ್ಲವೇ ಖಾಲಿ ಉಳಿಯುವ ಸಾಧ್ಯತೆ ಇದೆ. ಅತ್ತ ನೀಟ್‌ಗಾಗಿ ಕಾದವರಿಗೆ ವೈದ್ಯಕೀಯ ಸೀಟು ಸಿಗದಿದ್ದರೆ ಒಂದು ವರ್ಷ ಮತ್ತೆ ಕಾಯಬೇಕಾಗುತ್ತದೆ.

ಪಿಯು ಪರೀಕ್ಷೆ–2: ಶೇ 45.65 ಫಲಿತಾಂಶ

ಒಂದನೇ ಪುಟದಿಂದ...

ಪರೀಕ್ಷೆ–2ರಲ್ಲೂ ಬಾಲಕಿಯರು ಮೇಲುಗೈ ಸಾಧಿಸಿದ್ದು, ಶೇ 47 ಫಲಿತಾಂಶ ಪಡೆದಿದ್ದಾರೆ. ಬಾಲಕರ ಉತ್ತೀರ್ಣ ಪ್ರಮಾಣ ಶೇ 45 ಇದೆ. ಏಪ್ರಿಲ್ 30ರಿಂದ ಮೇ 13ರವರೆಗೆ ರಾಜ್ಯದ 253 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ–2 ನಡೆಸಲಾಗಿತ್ತು.

62 ವಿದ್ಯಾರ್ಥಿಗಳು ಉನ್ನತ ಶ್ರೇಣಿ, 8,086 ಪ್ರಥಮ ದರ್ಜೆ ಹಾಗೂ 16,940 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಗಣಿತದಲ್ಲಿ 315 ವಿದ್ಯಾರ್ಥಿಗಳು ಪೂರ್ಣ ಅಂಕ ಪಡೆದಿದ್ದಾರೆ. ರಸಾಯನಶಾಸ್ತ್ರದಲ್ಲಿ 75, ಭೌತಶಾಸ್ತ್ರದಲ್ಲಿ 61, ಜೀವಶಾಸ್ತ್ರದಲ್ಲಿ 36 ಮತ್ತು ಕಂಪ್ಯೂಟರ್ ವಿಜ್ಞಾನದಲ್ಲಿ 48, ಕನ್ನಡದಲ್ಲಿ 60 ವಿದ್ಯಾರ್ಥಿಗಳು 100ಕ್ಕೆ 100 ಗಳಿಸಿದ್ದಾರೆ.

ಮೇ 25 ಕೊನೆಯ ದಿನ: ದ್ವಿತೀಯ ಪಿಯು ಪರೀಕ್ಷೆ–2 ಉತ್ತರ ಪತ್ರಿಕೆಗಳ ಸ್ಕ್ಯಾನ್ ಪ್ರತಿಗಳಿಗಾಗಿ ಅರ್ಜಿ ಸಲ್ಲಿಸಲು ಮೇ 23 ಕೊನೆಯ ದಿನ. ಮೇ 22ರಿಂದ 24ರವರೆಗೆ ಸ್ಕ್ಯಾನ್ ಪ್ರತಿ ಡೌನ್‌ಲೋಡ್‌ಗೆ ಅವಕಾಶ ಇರಲಿದೆ. ಮರುಮೌಲ್ಯಮಾಪನ ಹಾಗೂ ಮರು ಎಣಿಕೆಗೆ ಅರ್ಜಿ ಸಲ್ಲಿಸಲು ಮೇ 25 ಕೊನೆಯ ದಿನ.

ಹಿಂದುಳಿದ ವಿದ್ಯಾರ್ಥಿಗಳಿಗೆ ನೀಟ್ ತರಬೇತಿ

ಬೆಂಗಳೂರು: ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡಿ ಪರೀಕ್ಷಾ ಮಂಡಳಿ ನಡೆಸುವ ಪರೀಕ್ಷೆಯಲ್ಲಿ ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ ಅತಿ ಹೆಚ್ಚು ಅಂಕಗಳನ್ನು ಗಳಿಸಿದ ಹಿಂದುಳಿದ ವಿದ್ಯಾರ್ಥಿಗಳಿಗೆ ನೀಟ್, ಜೆಇಇ ಮತ್ತು ಸಿಇಟಿ ಪರೀಕ್ಷಾ ಪೂರ್ವ ತರಬೇತಿ ನೀಡಲು ಸರ್ಕಾರ ನಿರ್ಧರಿಸಿದೆ.

ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ. 'ಪ್ರತಿ ಜಿಲ್ಲೆಗೆ 15 ರಂತೆ ಒಟ್ಟು 500 ವಿದ್ಯಾರ್ಥಿಗಳಿಗೆ ಈ ಸೌಲಭ್ಯ ಸಿಗಲಿದೆ' ಎಂದು ಕಾನೂನು ಮತ್ತು ಸಂಸದೀಯ ಸಚಿವ ಎಚ್.ಕೆ. ಪಾಟೀಲ ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಇದಕ್ಕಾಗಿ ₹15 ಕೋಟಿ ವೆಚ್ಚದಲ್ಲಿ 2 ವರ್ಷಗಳ ವಸತಿ ಸಹಿತ ಪ್ರಥಮ ಪಿಯು ಮತ್ತು ದ್ವಿತೀಯ ಪಿಯು ವಿಜ್ಞಾನ ವಿಭಾಗದಲ್ಲಿ ಶಿಕ್ಷಣದೊಂದಿಗೆ ಪರೀಕ್ಷಾ ಪೂರ್ವ ತರಬೇತಿ ನೀಡಲಾಗುವುದು ಎಂದರು.

ಪ್ರಮುಖ ನಿರ್ಣಯಗಳು

- ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಶಾಲಾ ಪೂರ್ವ ಶಿಕ್ಷಣ ಕಿಟ್‌ಗಳನ್ನು ಪ್ರತಿ ಕೇಂದ್ರಕ್ಕೆ ₹3,000 ಘಟಕ ವೆಚ್ಚದಲ್ಲಿ 69,922 ಅಂಗನವಾಡಿಗಳಿಗೆ ಒಟ್ಟು ₹20.98 ಕೋಟಿ ವೆಚ್ಚದಲ್ಲಿ ಖರೀದಿಸಲಾಗುವುದು.
- ಎಡಿಬಿ ನೆರವಿನ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿವರ್ತನೆ ಯೋಜನೆಯಡಿ ಕೇಂದ್ರದ ಆರ್ಥಿಕ ವ್ಯವಹಾರಗಳ ಇಲಾಖೆಯ ಸಾಲದ ಮಾತುಕತೆ ಸಿದ್ದತೆಯ ಮಾನದಂಡಗಳ ಅನ್ವಯ 53 ಸರ್ಕಾರಿ ಪದವಿ ಕಾಲೇಜುಗಳು, 14 ಸರ್ಕಾರಿ ಪಾಲಿಟೆಕ್ನಿಕ್‌ಗಳು, 5 ಉತ್ಕೃಷ್ಟತಾ ಕೇಂದ್ರಗಳು ಹಾಗೂ ಯೋಜನಾ ನಿರ್ವಹಣಾ ಘಟಕಕ್ಕೆ ₹802 ಕೋಟಿ ಮೊತ್ತದ ವಸ್ತುಗಳ ಮುಂಗಡ ಖರೀದಿಗೆ ಅನುಮೋದನೆ
- ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (ಜಿಟಿಟಿಸಿ)ಗಳಲ್ಲಿ ಹೊಸ ಯಂತ್ರೋಪಕರಣಗಳು ಮತ್ತು ಸಲಕರಣೆಗಳನ್ನು ₹90 ಕೋಟಿ ಮೊತ್ತದಲ್ಲಿ ಖರೀದಿಸಲು ಆಡಳಿತಾತ್ಮಕ ಅನುಮೋದನೆ
- ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ 52 ಕ್ರಿಮಿನಲ್ ಮೊಕದ್ದಮೆಗಳನ್ನು ಹಿಂಪಡೆಯಲು ತೀರ್ಮಾನ
- ಬೆಂಗಳೂರು ಕೇಂದ್ರ, ಧಾರವಾಡ ಕೇಂದ್ರ, ಬೆಳಗಾವಿ ಮತ್ತು ಬಳ್ಳಾರಿ ಕೇಂದ್ರ ಕಾರಾಗೃಹಗಳ ಆವರಣದಲ್ಲಿ ಕಾರಾಗೃಹ ಇಲಾಖೆಗೆ ಸೇರಿದ ಜಮೀನುಗಳಲ್ಲಿ ಪೆಟ್ರೋಲ್ ಪಂಪ್ ಮತ್ತು ಮಾರಾಟ ಮಳಿಗೆ ಸ್ಥಾಪಿಸಲು ಒಪ್ಪಿಗೆ
- ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ಶ್ರೀಕಂಠೇಶ್ವರ ದೇವಾಲಯದ ಸ್ನಾನಘಟ್ಟದ ಹತ್ತಿರ ಕಬಿನಿ ನದಿಗೆ ಅಡ್ಡಾಗಿ ವಿಯರ್ ನಿರ್ಮಾಣ ಮಾಡುವ ₹15 ಕೋಟಿ ಕಾಮಗಾರಿಗೆ ಅನುಮೋದನೆ
- ರಾಯಚೂರು ಜಿಲ್ಲೆ ರಾಯಚೂರು ಮತ್ತು ಮಾನ್ವಿ ತಾಲ್ಲೂಕು ವ್ಯಾಪ್ತಿಗೆ ಬರುವ ₹182.70 ಕೋಟಿ ವೆಚ್ಚದ ಮಟಮಾರಿ ವೀರಭದ್ರೇಶ್ವರ ಏತ ನೀರಾವರಿ ಯೋಜನೆಗೆ ಆಡಳಿತಾತ್ಮಕ ಅನುಮೋದನೆ

ಪಿಯು, ಎಸ್‌ಎಸ್‌ಎಲ್‌ಸಿ: ಡಿಜಿಟಲ್ ವರ್ಗಾವಣೆ ಪತ್ರ

ಬೆಂಗಳೂರು: ದ್ವಿತೀಯ ಪಿಯು, ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಮೊದಲ ಬಾರಿ ಡಿಜಿಟಲ್ ಅಂಕಪಟ್ಟಿ ಜತೆಗೆ ಡಿಜಿಟಲ್ ವರ್ಗಾವಣೆ ಪತ್ರವನ್ನೂ ಶಾಲಾ ಶಿಕ್ಷಣ ಇಲಾಖೆ ನೀಡುತ್ತಿದೆ.

ದ್ವಿತೀಯ ಪಿಯು ತೇರ್ಗಡೆಯಾದ ಹೊಸ ವಿದ್ಯಾರ್ಥಿಗಳಿಗೆ ಈ ಬಾರಿ ಪ್ರಾಯೋಗಿಕವಾಗಿ ಡಿಜಿಟಲ್ ವರ್ಗಾವಣೆ ಪ್ರಮಾಣ ಪತ್ರ ನೀಡಲು ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಅನುಮತಿ ನೀಡಿ ಶಾಲಾ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ.

ಕೆಎಸ್‌ಇಎಬಿ ಫಲಿತಾಂಶದ ದತ್ತಾಂಶವನ್ನು ಬಳಸಿಕೊಂಡು ಸ್ವಯಂಚಾಲಿತವಾಗಿ ಡಿಜಿಟಲ್ ವರ್ಗಾವಣೆ ಪತ್ರವನ್ನು ಸೃಜಿಸಲಾಗುತ್ತದೆ. ವಿದ್ಯಾರ್ಥಿಗಳು ನೇರವಾಗಿ ತಮ್ಮ ಡಿಜಿಲಾಕರ್ ಖಾತೆಯ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಹೊಸ ಡಿಜಿಟಲ್ ವರ್ಗಾವಣೆ ಪತ್ರದಲ್ಲಿ ಹಳೆಯ ನಮೂನೆಯಲ್ಲಿದ್ದ ಅನಗತ್ಯ ಮಾಹಿತಿಗಳನ್ನು ಕೈಬಿಡಲಾಗಿದೆ. ಶುಲ್ಕ ಬಾಕಿ, ವಿದ್ಯಾರ್ಥಿ ವೇತನ ಹಾಗೂ ಹಾಜರಾತಿ ಲೆಕ್ಕಾಚಾರದಂತಹ ಕಾಲಂಗಳನ್ನು ತೆಗೆದುಹಾಕಲಾಗಿದೆ. ವಿದ್ಯಾರ್ಥಿಯ ಶೈಕ್ಷಣಿಕ ದಾಖಲೆಗಳ ಜತೆಗೆ ಪರೀಕ್ಷಾ ನೋಂದಣಿ ಸಂಖ್ಯೆ, ಅಪಾರ್ ಐಡಿ ಹಾಗೂ ವಿದ್ಯಾರ್ಥಿ ಸಾಮರ್ಥ್ಯ ನಿಗಾ ವ್ಯವಸ್ಥೆ (ಎಸ್‌ಎಟಿಎಸ್) ನಂಬರ್‌ಗಳನ್ನು ನಮೂದಿಸಲಾಗುತ್ತದೆ.

ಪ್ರಾಂಶುಪಾಲರು ನಿಗದಿತ ದಿನಾಂಕದೊಳಗೆ ಯಾವುದೇ ನಕಾರಾತ್ಮಕ ಅಂಶ ದಾಖಲಿಸದಿದ್ದರೆ, ತಂತ್ರಾಂಶವು ಸ್ವಯಂಚಾಲಿತವಾಗಿ ನಡತೆಯನ್ನು 'ಉತ್ತಮ' ಎಂದು ಮುದ್ರಿಸುವ ವ್ಯವಸ್ಥೆ ಮಾಡಲಾಗಿದೆ. ಪ್ರಾಂಶುಪಾಲರ ಭೌತಿಕ ಸಹಿಗಾಗಿ ವಿದ್ಯಾರ್ಥಿಗಳು ಕಾಲೇಜುಗಳಿಗೆ ಅಲೆಯುವುದು ತಪ್ಪುತ್ತದೆ. ಭೌತಿಕವಾಗಿ ವರ್ಗಾವಣೆ ಪತ್ರ ಬಯಸುವ ವಿದ್ಯಾರ್ಥಿಗಳು ಈ ಹಿಂದಿನಂತೆ ಪ್ರಾಂಶುಪಾಲರಿಗೆ ಅರ್ಜಿ ಸಲ್ಲಿಸಿ, ಕಾಲೇಜು ಹಂತದಲ್ಲಿ ವರ್ಗಾವಣೆ ಪತ್ರ ಪಡೆಯಬಹುದು.

ಮತ ಹಕ್ಕು ರಕ್ಷಣೆ: ಸರ್ಕಾರ ಚಿತ್ತ

ಒಂದನೇ ಪುಟದಿಂದ...

'ಎಸ್‌ಐಆರ್‌ನಲ್ಲಿ ಪಾರದರ್ಶಕತೆ ಇರಬೇಕು ಎಂಬ ಕಾರಣಕ್ಕಾಗಿ ಬಿಹಾರದಲ್ಲಿ ನ್ಯಾಯಮಂಡಳಿ ರಚಿಸಲಾಗಿತ್ತು. ಆದರೆ, ಅದು ಸರಿಯಾಗಿ ಕಾರ್ಯ ನಿರ್ವಹಿಸಲಿಲ್ಲ. ಹೀಗಾಗಿ ನಮ್ಮ ರಾಜ್ಯದಲ್ಲಿ ಈ ಪ್ರಕ್ರಿಯೆ ಪಾರದರ್ಶಕವಾಗಿ ನಡೆಯಬೇಕು ಎಂಬುದು ಚುನಾವಣಾ ಆಯೋಗಕ್ಕೆ ನಮ್ಮ ಸಂದೇಶ' ಎಂದು ಅವರು ಹೇಳಿದರು.

ಮುಖ್ಯಮಂತ್ರಿಗೆ ಮನವಿ: ಎಸ್‌ಐಆರ್ ಅನ್ನು ಈಗಿನ ಸ್ವರೂಪದಲ್ಲಿ ಜಾರಿಗೆ ಅವಕಾಶ ಕೊಡಬಾರದು ಎಂದು ಒತ್ತಾಯಿಸಿ ಹಲವು ಸಾಮಾಜಿಕ ಕಾರ್ಯಕರ್ತರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದ್ದರು. 'ನನ್ನ ಮತ, ನನ್ನ ಹಕ್ಕು' ಸಂಘಟನೆಯ ನಿಯೋಗವು ಮನವಿ ಸಲ್ಲಿಸಿ, 'ಈಗಿನ ಸ್ವರೂಪದಲ್ಲಿ, ಅಕ್ಷರ ತಪ್ಪು ಮತ್ತು ಇತರರ ಆಕ್ಷೇಪದ ಆಧಾರದಲ್ಲಿ ಅರ್ಹ ಮತದಾರರನ್ನೂ ಕೈಬಿಡಲು ಅವಕಾಶವಿದೆ. ಇದನ್ನು ತಪ್ಪಿಸಬೇಕು. ಸರ್ಕಾರವು ಎಸ್‌ಐಆರ್ ವಿರುದ್ಧ ಜನಾಂದೋಲನ ರೂಪಿಸಬೇಕು' ಎಂದು ಒತ್ತಾಯಿಸಿತ್ತು.

ಬೆಂಗಳೂರಿನ ನಿಮ್ಹಾನ್ಸ್‌ನಲ್ಲಿ ಶಸ್ತ್ರಚಿಕಿತ್ಸೆ: ಆಲ್ದೂರಿನ ರವಿ ಚೇತರಿಕೆ

ಚಿಕಿತ್ಸೆಗೆ ಅಲೆದಾಟ: ತನಿಖೆಗೆ ಸಂಸದರ ಪತ್ರ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಆಲ್ದೂರು ಸಮೀಪದ ಅರೇನೂರು ಗ್ರಾಮದ ಬಳಿ ಅಪಘಾತದಲ್ಲಿ ಗಾಯಗೊಂಡಿದ್ದ ರವಿ ಅವರಿಗೆ ಚಿಕಿತ್ಸೆ ಸಿಗದೆ ಪರದಾಡಿದ ಪ್ರಕರಣದ ಬಗ್ಗೆ ತನಿಖೆ ನಡೆಸುವಂತೆ ಸಂಸದ ಕೋಟ ಶ್ರೀನಿವಾಸ ಪೂಜಾರಿ ಅವರು ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗೆ ಪತ್ರ ಬರೆದಿದ್ದಾರೆ.

ಇದೊಂದು ಅಮಾನವೀಯ ಘಟನೆ. ವೆನ್ಲಾಕ್ ರೀತಿಯ ಆಸ್ಪತ್ರೆಯಲ್ಲಿ ಹಾಸಿಗೆ ಸಿಗದೇ ಖಾಸಗಿ ಆಸ್ಪತ್ರೆಗೆ ಶಿಫಾರಸು ಮಾಡಿದರೂ ಚಿಕಿತ್ಸೆ ಸಿಗದಿರುವುದು ನೋವಿನ ಸಂಗತಿ. ಈ ಪ್ರಕರಣದ ಬಗ್ಗೆ ಕೂಲಂಕಷ ಪರಿಶೀಲನೆ ನಡೆಸಬೇಕು ಎಂದು ಪತ್ರದಲ್ಲಿ ತಿಳಿಸಿದ್ದಾರೆ.

'ವಿಷಯ ತಿಳಿದ ಕೂಡಲೇ ನಿಮ್ಹಾನ್ಸ್‌ನಲ್ಲಿ ಅವರಿಗೆ ಚಿಕಿತ್ಸೆ ಕೊಡಿಸಲು ವ್ಯವಸ್ಥೆ ಮಾಡಲಾಯಿತು. ಸರ್ಕಾರಿ ಆಸ್ಪತ್ರೆಯಿಂದ ಶಿಫಾರಸು ಮಾಡಿದರೆ ಖಾಸಗಿ ಆಸ್ಪತ್ರೆಯವರು ಚಿಕಿತ್ಸೆ ನೀಡಬೇಕಾಗುತ್ತದೆ. ಆದರೆ, ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಏಕೆ ದೊರೆತಿಲ್ಲ ಎಂಬುದು ಗೊತ್ತಾಗಬೇಕಿದೆ. ಅದಕ್ಕಾಗಿ ಜಿಲ್ಲಾಧಿಕಾರಿಗೆ ಪತ್ರ ಬರೆದಿದ್ದೇನೆ' ಎಂದು 'ಪ್ರಜಾವಾಣಿ'ಗೆ ತಿಳಿಸಿದರು.

ಘಟನೆಯ ಹಿನ್ನೆಲೆ

ಅಪಘಾತ ಸಂಭವಿಸಿದ ಕೂಡಲೇ ಮಂಗಳವಾರ ಬೆಳಿಗ್ಗೆ 8 ಗಂಟೆಗೆ ಆಲ್ದೂರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕರೆತಂದು ಪ್ರಾಥಮಿಕ ಚಿಕಿತ್ಸೆ ನೀಡಿ ಚಿಕ್ಕಮಗಳೂರು ಜಿಲ್ಲಾಸ್ಪತ್ರೆಗೆ ರವಾನಿಸಲಾಗಿತ್ತು. ವೈದ್ಯರ ಸಲಹೆ ಮೇರೆಗೆ ಮಂಗಳೂರು ವೆನ್ಲಾಕ್ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಅಲ್ಲಿಯೂ ಐಸಿಯು ವಾರ್ಡ್ ಖಾಲಿ ಇಲ್ಲದ ಕಾರಣ ಚಿಕಿತ್ಸೆ ದೊರಕಿರಲಿಲ್ಲ. ನಾಲ್ಕು ಖಾಸಗಿ ಆಸ್ಪತ್ರೆಗಳನ್ನು ಸುತ್ತಿ, ಹಣ ಪಾವತಿಸಲು ಸಾಧ್ಯವಾಗದೆ ವಾಪಸ್ ಆಲ್ದೂರಿಗೆ ಸಂಬಂಧಿಕರು ಕರೆ ತಂದಿದ್ದರು. ಬಳಿಕ ಗ್ರಾಮಸ್ಥರು ಹಣ ಸಂಗ್ರಹಿಸಿ ಆಂಬುಲೆನ್ಸ್ ಮೂಲಕ ಬೆಂಗಳೂರಿಗೆ ಕಳುಹಿಸಿಕೊಟ್ಟಿದ್ದರು.

ಅಪಘಾತದಲ್ಲಿ ಗಾಯಗೊಂಡಿದ್ದ ರವಿ ಅವರಿಗೆ ಬೆಂಗಳೂರಿನ ನಿಮ್ಹಾನ್ಸ್‌ನಲ್ಲಿ ಗುರುವಾರ ಶಸ್ತ್ರಚಿಕಿತ್ಸೆ ನಡೆದಿದ್ದು, ಆರೋಗ್ಯದಲ್ಲಿ ಚೇತರಿಕೆ ಕಂಡಿದೆ. ಶುಕ್ರವಾರ ವಾರ್ಡ್‌ಗೆ ಸ್ಥಳಾಂತರ ಮಾಡುವುದಾಗಿ ವೈದ್ಯರು ತಿಳಿಸಿದ್ದಾರೆ ಎಂದು ರವಿ ಕುಟುಂಬದವರು ತಿಳಿಸಿದರು.

ವಿದೇಶಿ ಡ್ರಗ್ ಪೆಡ್ಲರ್‌ಗಳ ಗಡಿಪಾರು

ಪ್ರಕರಣ ದಾಖಲು ಬದಲು, ಹೊಸ ಉಪಕ್ರಮಕ್ಕೆ ಮುಂದಾದ ಪೊಲೀಸರು


• ಆದಿತ್ಯ ಕೆ.ಎ.

ಬೆಂಗಳೂರು: ಮಾದಕ ವಸ್ತುಗಳ ಪೂರೈಕೆ, ಸಾಗಣೆ ಹಾಗೂ ಮಾರಾಟ ಪ್ರಕರಣಗಳಲ್ಲಿ ಸಿಕ್ಕಿ ಹಾಕಿಕೊಳ್ಳುವ ವಿದೇಶಿ ಪ್ರಜೆಗಳ ಮೇಲೆ ಪ್ರಕರಣ ದಾಖಲಿಸುವ ಬದಲಿಗೆ ಆರೋಪಿಗಳನ್ನು ಗಡಿಪಾರು ಮಾಡುವ ಮೂಲಕ ಡ್ರಗ್ಸ್ ದಂಧೆಗೆ ಕಡಿವಾಣ ಹಾಕಲು ರಾಜ್ಯದ ಪೊಲೀಸರು ಮುಂದಾಗಿದ್ದಾರೆ.

ಬೆಂಗಳೂರು, ದಕ್ಷಿಣ ಕನ್ನಡ, ಉತ್ತರ ಕನ್ನಡ, ಬೆಳಗಾವಿ, ಹುಬ್ಬಳ್ಳಿ–ಧಾರವಾಡ, ಬೆಂಗಳೂರು ದಕ್ಷಿಣ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಹಾಗೂ ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಡ್ರಗ್ಸ್ ವಿರುದ್ಧದ ವಿಶೇಷ ಕಾರ್ಯಾಚರಣೆ ನಡೆಸಲಾಗುತ್ತಿದೆ. ಈ ವೇಳೆ ನೈಜೀರಿಯಾ, ತಾಂಜಾನಿಯಾ, ಸೆನೆಗಲ್, ಥಾಯ್ಲೆಂಡ್, ಬಾಂಗ್ಲಾದೇಶ ಸೇರಿದಂತೆ ವಿವಿಧ ದೇಶಗಳ ಪ್ರಜೆಗಳನ್ನು ವಶಕ್ಕೆ ಪಡೆಯಲಾಗುತ್ತಿದೆ. ಗಂಭೀರ ಅಪರಾಧ ಪ್ರಕರಣಗಳನ್ನು ಬಿಟ್ಟು ಮಾದಕ ವಸ್ತುಗಳ ಮಾರಾಟ ಪ್ರಕರಣಗಳಲ್ಲಿ ಸಿಕ್ಕಿ ಬೀಳುವ ವಿದೇಶಿಯರನ್ನು ಒಂದು ವಾರದಲ್ಲಿಯೇ ಗಡಿಪಾರು ಮಾಡಿ, ದಂಧೆಗೆ ಕಡಿವಾಣ ಹಾಕಲು ಪ್ರಯತ್ನಿಸಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ.

> ವಿದೇಶಿ 'ಡ್ರಗ್ ಪೆಡ್ಲರ್'ಗಳ ವಿರುದ್ಧ ಪ್ರಕರಣ ದಾಖಲಿಸಿದರೆ, ತನಿಖೆ ಮುಗಿಯುವವರೆಗೆ ರಾಜ್ಯದಲ್ಲಿಯೇ ಇಟ್ಟುಕೊಳ್ಳಬೇಕಾಗುತ್ತದೆ. ಮಾದಕ ವಸ್ತುಗಳನ್ನು ನಿಯಂತ್ರಿಸುವ ಸಲುವಾಗಿ ತಕ್ಷಣವೇ ಗಡಿಪಾರು ಮಾಡಲಾಗುತ್ತಿದೆ
> **ಜಿ.ಪರಮೇಶ್ವರ,** ಗೃಹ ಸಚಿವ

ವಿವಿಧ ದೇಶಕ್ಕೆ ಗಡಿಪಾರು ಮಾಡಲಾದ ವಿದೇಶಿಯರ ವಿವರ



'ಕೊಲೆ, ಸುಲಿಗೆ, ಅತ್ಯಾಚಾರದಂತಹ ಪ್ರಕರಣಗಳ ಆರೋಪಿ ವಿದೇಶಿ ಪ್ರಜೆಯಾಗಿದ್ದರೆ, ಆತನನ್ನು ಗಡಿಪಾರು ಮಾಡಲಾಗದು. ನ್ಯಾಯಾಲಯದ ವಿಚಾರಣೆ ಮುಕ್ತಾಯವಾದ ಮೇಲಷ್ಟೇ ಆರೋಪಿಯ ವಿರುದ್ಧ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಡ್ರಗ್ಸ್ ಪ್ರಕರಣಗಳಲ್ಲಿ ವಿದೇಶಿ ಪೆಡ್ಲರ್‌ಗಳ ವಿರುದ್ಧ ಪ್ರಕರಣ ದಾಖಲಿಸಿದರೆ, ಖುಲಾಸೆ ಆಗುವವರೆಗೂ ಇಲ್ಲಿಯೇ ಇರಬೇಕಾಗುತ್ತದೆ. ಅಂತಹದ್ದೇ ಕೃತ್ಯದಲ್ಲಿ ಭಾಗಿಯಾಗುವ ಅಪಾಯವೂ ಇರುತ್ತದೆ' ಎಂದು ಅಧಿಕಾರಿಯೊಬ್ಬರು ಹೇಳಿದರು.

'ಡ್ರಗ್ಸ್ ವಿರುದ್ಧದ ಕಾರ್ಯಾಚರಣೆಗಳಲ್ಲಿ ವಿದೇಶಿ ಪ್ರಜೆಗಳ ಪಾತ್ರ ಇದ್ದಾಗ, ಆಯಾ ದೇಶದ ರಾಯಭಾರ ಕಚೇರಿಗಳಿಗೆ ಮಾಹಿತಿ ನೀಡಿ ಗಡಿಪಾರು ಪ್ರಕ್ರಿಯೆಯನ್ನು ಕಳೆದ ಎರಡು ತಿಂಗಳಿಂದ ಚುರುಕುಗೊಳಿಸಲಾಗಿದೆ. ವೀಸಾ ಅವಧಿ ಮುಕ್ತಾಯ, ಅಕ್ರಮ ವಲಸೆ ಹಾಗೂ ಮಾದಕ ವಸ್ತುಗಳ ಮಾರಾಟ ಪ್ರಕರಣಗಳಲ್ಲಿ ಸಿಕ್ಕಿ ಬಿದ್ದ 427 ವಿದೇಶಿಯರನ್ನು 2026ರ ಜನವರಿ 1ರಿಂದ ಮೇ 15ರ ವರೆಗೆ ಗಡಿಪಾರು ಮಾಡಲಾಗಿದೆ. ಆ ಪೈಕಿ, 210 ಮಂದಿ 'ಡ್ರಗ್ ಪೆಡ್ಲಿಂಗ್'ನಲ್ಲಿಯೇ ಸಿಕ್ಕಿಬಿದ್ದಿದ್ದರು' ಎಂದು ಮೂಲಗಳು ಹೇಳಿವೆ.

'ಕಳೆದ ಎರಡೂವರೆ ವರ್ಷಗಳಲ್ಲಿ ಒಟ್ಟು 1,167 ವಿದೇಶಿಯರನ್ನು ಅವರ ದೇಶಕ್ಕೆ ವಾಪಸ್ ಕಳುಹಿಸಲಾಗಿದೆ. ಆ ಪೈಕಿ, ಶೇ 50ರಷ್ಟು ಮಂದಿ ಮಾದಕ ವಸ್ತುಗಳ ಮಾರಾಟದಲ್ಲಿ ಸಿಕ್ಕಿಬಿದ್ದಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬೆಂಗಳೂರಿಗೆ ಹೆಚ್ಚಿನ ಪ್ರಮಾಣದಲ್ಲಿ ಸಿಂಥೆಟಿಕ್ ಮಾದರಿಯ ಡ್ರಗ್ಸ್ ವಿದೇಶಗಳಿಂದಲೇ ಪೂರೈಕೆ ಆಗುತ್ತಿದೆ. ಕಳ್ಳ ಸಾಗಣೆಯ ಮೂಲಕ ನಗರಕ್ಕೆ ಡ್ರಗ್ಸ್ ತಂದು, ಇಲ್ಲಿಂದ ದೇಶದ ಬೇರೆ ಬೇರೆ ನಗರಗಳಿಗೆ ಪೂರೈಸಲಾಗುತ್ತಿದೆ. ಶಿಕ್ಷಣ ಹಾಗೂ ಪ್ರವಾಸಿ ವೀಸಾದ ಮೇಲೆ ನೈಜೀರಿಯಾ, ಥಾಯ್ಲೆಂಡ್‌ನ ಪ್ರಜೆಗಳು ದೆಹಲಿ, ಬೆಂಗಳೂರಿಗೆ ಬಂದು ವೀಸಾ ಅವಧಿ ಮುಕ್ತಾಯವಾದ ಮೇಲೆ ಡ್ರಗ್ಸ್ ಮಾರಾಟ ದಂಧೆಯಲ್ಲಿ ತೊಡಗಿದ್ದಾರೆ ಎಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಸಿಸಿಬಿ ಮೂಲಗಳು ಹೇಳಿವೆ.

ಬಾಂಗ್ಲಾದವರ ಹಸ್ತಾಂತರ

ಚಿಕ್ಕಮಗಳೂರು, ಶಿವಮೊಗ್ಗ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಹಾಸನ ಜಿಲ್ಲೆಯಲ್ಲಿ ನೆಲಸಿರುವ ಬಾಂಗ್ಲಾದೇಶದ ಅಕ್ರಮ ವಲಸಿಗರನ್ನು ಪತ್ತೆಹಚ್ಚುವ ಪ್ರಕ್ರಿಯೆಯನ್ನು ಈ ವರ್ಷ ಚುರುಕುಗೊಳಿಸಲಾಗಿದೆ. ಆಯಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಸೂಚನೆಯನ್ನೂ ನೀಡಲಾಗಿದೆ. ಬಾಂಗ್ಲಾದೇಶದ ಅಕ್ರಮ ವಲಸಿಗರು ರಾಜ್ಯದಲ್ಲಿ ಪತ್ತೆಯಾದರೆ ಅವರನ್ನು ವಿಮಾನದಲ್ಲಿ ಸಮೀಪದ ನಿಲ್ದಾಣಕ್ಕೆ ಕರೆದೊಯ್ದು ಗಡಿಭದ್ರತಾ ಪಡೆಯ ಸಿಬ್ಬಂದಿಗೆ ಹಸ್ತಾಂತರ ಮಾಡಲಾಗುತ್ತಿದೆ. ಅಲ್ಲಿಂದ ಬಾಂಗ್ಲಾದೇಶಕ್ಕೆ ಕಳುಹಿಸಲಾಗುತ್ತಿದೆ' ಎಂದು ಮೂಲಗಳು ಹೇಳಿವೆ.

ಉತ್ತರ ಪ್ರದೇಶ: ವಿ.ವಿ, ಕಾಲೇಜು ವಿದ್ಯಾರ್ಥಿಗಳಿಗೆ ಸಮವಸ್ತ್ರ ಕಡ್ಡಾಯ

ಲಖನೌ (ಪಿಟಿಐ): ಉತ್ತರ ಪ್ರದೇಶ ರಾಜ್ಯಪಾಲರಾದ ಆನಂದಿಬೆನ್ ಪಟೇಲ್ ಅವರು ರಾಜ್ಯದ ಎಲ್ಲ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳಲ್ಲಿ ಸಮವಸ್ತ್ರವನ್ನು ಕಡ್ಡಾಯಗೊಳಿಸಿದ್ದಾರೆ.

ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳ ಕುಲಪತಿಗಳ ಜೊತೆ ಜನಭವನದಲ್ಲಿ ಬುಧವಾರ ಸಭೆ ನಡೆಸಿದ್ದ ಅವರು ಈ ಬಗ್ಗೆ ನಿರ್ದೇಶನ ನೀಡಿದ್ದಾರೆ. ಆದರೆ ಈ ಕುರಿತು ಅಧಿಕೃತ ಆದೇಶ ಹೊರಡಿಸಿಲ್ಲ.

ಈ ಬಗ್ಗೆ ಮಾಹಿತಿ ನೀಡಿದ ರಾಜ್ಯದ ಹಣಕಾಸು ಸಚಿವ ಸುರೇಶ್ ಕುಮಾರ್ ಖನ್ನಾ ಅವರು, 'ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ರಾಜ್ಯಪಾಲರು ಈ ನಿರ್ಧಾರವನ್ನು ಕೈಗೊಂಡಿದ್ದಾರೆ' ಎಂದು ಹೇಳಿದ್ದಾರೆ.

'ವೃತ್ತಿಯ ಘನತೆ ಮತ್ತು ಪ್ರತಿಷ್ಠೆಗೆ ತೊಡಕಾಗುವಂತಹ ಯಾವುದೇ ಕೃತ್ಯದಲ್ಲಿ ಭಾಗಿಯಾಗದಂತೆ ಎಲ್ಲ ಪ್ರಾಧ್ಯಾಪಕರು ಮತ್ತು ಉಪನ್ಯಾಸಕರಿಗೆ ರಾಜ್ಯಪಾಲರು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ' ಎಂದು ತಿಳಿಸಿದ್ದಾರೆ.

ಬಿತ್ತನೆ ಬೀಜಕ್ಕೆ ರೈತರ ಪರದಾಟ

ಒಂದನೇ ಪುಟದಿಂದ...

'ಸಮರ್ಪಕವಾಗಿ ಬೀಜ ನೀಡುತ್ತಿಲ್ಲ' ಎಂದು ಆರೋಪಿಸಿ ಬಂಕಾಪುರದಲ್ಲಿ ರೈತರು ದಿಢೀರ್ ಪ್ರತಿಭಟನೆ ನಡೆಸಿದರು. ಕರ್ಜಗಿ ಮತ್ತು ಹಾವೇರಿ ಕೇಂದ್ರದಲ್ಲೂ ರೈತರು, ಬೀಜಕ್ಕಾಗಿ ಪೊಲೀಸರ ಕಾವಲಿನಲ್ಲಿ ಆಕ್ರೋಶ ಹೊರಹಾಕಿದರು.

ಜಿಲ್ಲೆಯಲ್ಲಿ 3.14 ಲಕ್ಷ ಹೆಕ್ಟೇರ್ ಬಿತ್ತನೆ ಪ್ರದೇಶವಿದೆ. ಮಳೆಯಾಶ್ರಿತ ಪ್ರದೇಶ 2.50 ಲಕ್ಷ ಹೆಕ್ಟೇರ್ ಇದ್ದರೆ, ನೀರಾವರಿ ಪ್ರದೇಶ 63,769 ಹೆಕ್ಟೇರ್ ಇದೆ. ಬಹುತೇಕರು ಮೆಕ್ಕೆಜೋಳ ಬಿತ್ತನೆಗೆ ಸಿದ್ಧತೆ ನಡೆಸಿದ್ದು, ಆ ಬೀಜಕ್ಕೆ ಹೆಚ್ಚಿನ ಬೇಡಿಕೆಯಿದೆ.

'ಶೇಂಗಾ, ಸೋಯಾಬೀನ್ ಬೀಜಕ್ಕೂ ಬೇಡಿಕೆಯಿದೆ. ಆದರೆ, ಕೃಷಿ ಇಲಾಖೆ ಅಧಿಕಾರಿಗಳು ರೈತ ಸಂಪರ್ಕ ಕೇಂದ್ರಕ್ಕೆ ಒಂದೇ ಕೌಂಟರ್ ಮಾಡಿದ್ದಾರೆ. ಪ್ರತಿ ದಿನ ರೈತರ ದಟ್ಟಣೆ ಆಗುತ್ತಿರುವ ಕಾರಣ ಬೀಜ ಪಡೆಯಲು ನೂಕುನುಗ್ಗಲು ಉಂಟಾಗುತ್ತಿದೆ. ಬೀಜ ಖರೀದಿಯ ಮುನ್ಸೂಚನೆ ಇದ್ದರೂ ಹೆಚ್ಚಿನ ಕೌಂಟರ್ ತೆರೆದಿಲ್ಲ' ಎಂದು ಹಾವೇರಿಯ ರೈತ ಬಸವಂತಪ್ಪ ಬಾಣದಕೇರಿ ಹೇಳಿದರು.

ಆನ್‌ಲೈನ್ ಪ್ರಕ್ರಿಯೆ ವಿಳಂಬ: 'ಆನ್‌ಲೈನ್ ಮೂಲಕ ಪ್ರತಿಯೊಬ್ಬ ರೈತರ ಜಮೀನಿನ ಆರ್‌ಟಿಸಿ ಪರಿಶೀಲಿಸಿ, ರಶೀದಿ ಸಮೇತ ಬೀಜ ನೀಡಬೇಕು. ಇದಕ್ಕೆ ಕನಿಷ್ಠ ಐದು ನಿಮಿಷ ಬೇಕು. ಹೀಗಾಗಿ, ಬೀಜ ವಿತರಣೆ ವಿಳಂಬ ಆಗುತ್ತಿದೆ. ರೈತರ ಸಂಖ್ಯೆ ಹೆಚ್ಚಿರುವ ಕಾರಣ ನಿಯಂತ್ರಣ ಸಾಧ್ಯವಾಗುತ್ತಿಲ್ಲ' ಎಂದು ಆರ್‌ಎಸ್‌ಕೆ ಕೇಂದ್ರದ ಸಿಬ್ಬಂದಿ ಹೇಳಿದರು.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ




ಓದು ದೊಡ್ಡದು ಸರಿ. ಆದರೆ, ಮನುಷ್ಯ ಓದಿ ಕಲಿಯುವುದಕ್ಕಿಂತ ಹೆಚ್ಚಿನ ಸಂಗತಿಯನ್ನು ತಾನೇ ಬದುಕಿ ಕಲಿಯುತ್ತಾನೆ.

–ಮಾಸ್ತಿ ವೆಂಕಟೇಶ ಅಯ್ಯಂಗಾರ್

ಸಂಪಾದಕೀಯ

ವ್ಯವಸ್ಥೆಯ ವೈಫಲ್ಯದಿಂದ ಸಮಸ್ಯೆ ಕಳವಳಕಾರಿ 'ಸುಪ್ರೀಂ' ಪರಿಹಾರ

ಸಾರ್ವಜನಿಕ ಸ್ಥಳಗಳಿಂದ ಬೀದಿನಾಯಿಗಳನ್ನು ತೆರವುಗೊಳಿಸುವ ಕುರಿತು 2025ರಲ್ಲಿ ನೀಡಿದ್ದ ತನ್ನದೇ ತೀರ್ಪನ್ನು ಸಮರ್ಥಿಸಿಕೊಂಡಿರುವ ಸುಪ್ರೀಂ ಕೋರ್ಟ್, ಆ ತೀರ್ಪಿನ ಮುಂದುವರಿಕೆಯಂತೆ ಆಕ್ರಮಣಕಾರಿ ಸ್ವಭಾವದ ಹಾಗೂ ಸ್ಪಷ್ಟವಾಗಿ ಅಪಾಯಕಾರಿಯಾಗಿ ಕಾಣಿಸುವ ನಾಯಿಗಳಿಗೆ ದಯಾಮರಣ ನೀಡಲು ಅವಕಾಶ ಕಲ್ಪಿಸಿದೆ. ಸಾರ್ವಜನಿಕರ ಆರೋಗ್ಯ ಮತ್ತು ಸುರಕ್ಷತೆಯನ್ನು ತನ್ನ ತೀರ್ಪಿಗೆ ಕಾರಣವನ್ನಾಗಿ ನೀಡಿದೆ. ಬಸ್ಸು ಹಾಗೂ ರೈಲ್ವೆ ನಿಲ್ದಾಣ, ಆಸ್ಪತ್ರೆ ಮತ್ತು ಹೆದ್ದಾರಿಗಳಂತಹ ಸಾರ್ವಜನಿಕ ಪ್ರದೇಶಗಳಲ್ಲಿನ ಬೀದಿನಾಯಿಗಳನ್ನು ಆಶ್ರಯತಾಣಗಳಿಗೆ ಸ್ಥಳಾಂತರಿಸಬೇಕು ಎನ್ನುವ ಸುಪ್ರೀಂ ಕೋರ್ಟ್ ತೀರ್ಪು ಅಪಾರ ಹೂಡಿಕೆ ಮತ್ತು ನಿರ್ವಹಣೆಯ ಸವಾಲುಗಳನ್ನು ಒಳಗೊಂಡಿದ್ದುದರಿಂದ, ಅದನ್ನು ಜಾರಿಗೊಳಿಸುವುದು ಅವಾಸ್ತವಿಕವೆಂದು ಕಂಡುಬಂದಿತ್ತು. ಲಸಿಕೆ ನೀಡುವಿಕೆ ಮತ್ತು ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆಯ ನಂತರವೂ ನಾಯಿಗಳನ್ನು ಅವುಗಳ ಮೂಲ ಸ್ಥಳಕ್ಕೆ ತಂದು ಬಿಡಬಾರದು ಎಂದೂ ಸುಪ್ರೀಂ ಕೋರ್ಟ್‌ನ ಆದೇಶ ಹೇಳಿದೆ. ಆದರೆ, ದೇಶದ ಪೌರಾಡಳಿತ ಸಂಸ್ಥೆಗಳು ಬೀದಿನಾಯಿಗಳನ್ನು ಆಶ್ರಯತಾಣಗಳಲ್ಲಿ ಇರಿಸಿಕೊಂಡು ನಿರ್ವಹಿಸಲು ಅಗತ್ಯವಾದ ಮೂಲ ಸೌಕರ್ಯಗಳನ್ನು ಹೊಂದದಿರುವುದನ್ನು ಗಮನಿಸಬೇಕು.



ಅಪಾಯಕಾರಿ ಬೀದಿನಾಯಿಗಳಿಗೆ ದಯಾಮರಣ ಕಲ್ಪಿಸಬಹುದು ಎನ್ನುವ ಸುಪ್ರೀಂ ಕೋರ್ಟ್ ತೀರ್ಪು, ನಾಯಿಗಳನ್ನು ಮನಬಂದಂತೆ ಕೊಲ್ಲುವ ಪರಿಸ್ಥಿತಿಗೆ ಕಾರಣ ಆಗಬಹುದು.

ಗುಣಪಡಿಸಲು ಸಾಧ್ಯವಾಗದಿರುವಷ್ಟು ಅನಾರೋಗ್ಯ ಹೊಂದಿರುವ, ಕ್ರೋಧೋನ್ಮತ್ತ ಸ್ವಭಾವದ ಹಾಗೂ ಆಕ್ರಮಣಕಾರಿ ವರ್ತನೆ ಸ್ಪಷ್ಟವಾಗಿ ಕಾಣಿಸುವ ನಾಯಿಗಳನ್ನು ದಯಾಮರಣ ಸೇರಿದಂತೆ ಕಾನೂನು ಅನುಮತಿಸುವ ಕ್ರಮಗಳ ಮೂಲಕ ಕೊಲ್ಲಬಹುದಾಗಿದೆ ಎಂದು ಸಂಬಂಧಿಸಿದ ಪ್ರಾಧಿಕಾರಗಳಿಗೆ ಕೋರ್ಟ್ ತಿಳಿಸಿದೆ. ಆದರೆ, ಅರ್ಹ ಪಶುವೈದ್ಯ ತಜ್ಞರ ಅಭಿಪ್ರಾಯಗಳನ್ನು ಆಧರಿಸಿಯೇ ತೀರ್ಮಾನ ಕೈಗೊಳ್ಳಬೇಕು ಎನ್ನುವ ನ್ಯಾಯಾಲಯದ ನಿಬಂಧನೆ ಪ್ರಾಯೋಗಿಕವಾಗಿ ಪಾಲನೆ ಆಗದಿರುವ ಸಾಧ್ಯತೆಯೇ ಹೆಚ್ಚಾಗಿದೆ. ಸುಪ್ರೀಂ ಕೋರ್ಟ್ ತೀರ್ಪನ್ನು ಬಳಸಿಕೊಂಡು ಪೌರಾಡಳಿತದ ಸಿಬ್ಬಂದಿಯೇ ನ್ಯಾಯಾಧೀಶರಂತೆ ವರ್ತಿಸುತ್ತ, ಬೀದಿನಾಯಿಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಕೊನೆಗಾಣಿಸುವ ಸಂದರ್ಭ ರೂಪುಗೊಳ್ಳುವ ಅಪಾಯವೂ ಇದೆ. ನಾಯಿಗಳನ್ನು ಕೊಲ್ಲುವುದು ಸುಲಭ ಹಾಗೂ ಕಾನೂನುಸಮ್ಮತ ಎಂದು ಭಾವಿಸುವ ಮನಃಸ್ಥಿತಿಯೂ ಹೆಚ್ಚಾಗಬಹುದು. ಬೀದಿನಾಯಿಗಳ ಸಂಖ್ಯೆಯನ್ನು ನಿಯಂತ್ರಿಸಲು ಅಗತ್ಯವಾದ ಮೂಲ ಸೌಕರ್ಯಗಳನ್ನು ವಿಸ್ತರಿಸುವ ಹಾಗೂ ಬಲಪಡಿಸುವ ದೀರ್ಘಕಾಲಿಕ ಸುಸಂಬದ್ಧ ಪ್ರಯತ್ನಗಳ ಕೊರತೆಯಿದೆ ಎಂದು ನ್ಯಾಯಾಲಯವೇ ಅಭಿಪ್ರಾಯಪಟ್ಟಿದ್ದು, ಆ ಪರಿಸ್ಥಿತಿ ಇನ್ನು ಮುಂದೆಯೂ ಮುಂದುವರಿಯಬಹುದು. ಶಸ್ತ್ರಚಿಕಿತ್ಸಾ ಸೌಲಭ್ಯ, ತರಬೇತಿ ಪಡೆದ ಸಿಬ್ಬಂದಿಯೊಂದಿಗೆ ಅಗತ್ಯ ಮೂಲ ಸೌಕರ್ಯಗಳನ್ನು ಹೊಂದಿರುವ ಜನನ ನಿಯಂತ್ರಣ ಕೇಂದ್ರಗಳನ್ನು ಪ್ರತಿ ಜಿಲ್ಲೆಯಲ್ಲಿಯೂ ಸ್ಥಾಪಿಸಬೇಕೆಂದು ಕೋರ್ಟ್ ಆದೇಶಿಸಿದೆ. ಆದರೆ, ಈ ಕೇಂದ್ರಗಳ ಸ್ಥಾಪನೆಗೆ ಕಾಲಮಿತಿಯ ಕುರಿತು ಹಾಗೂ ಉಳಿದ ವಿವರಗಳ ಬಗ್ಗೆ ತೀರ್ಪಿನಲ್ಲಿ ಸ್ಪಷ್ಟತೆಯಿಲ್ಲ. ಒಂದಂತೂ ಸ್ಪಷ್ಟ: ಈಗ ನಮ್ಮ ಪರಿಸರದಲ್ಲಿರುವ ಬಹುತೇಕ ನಾಯಿಗಳು ಆ ಕೇಂದ್ರಗಳನ್ನು ನೋಡುವವರೆಗೆ ಜೀವಿಸಿರುವುದಿಲ್ಲ.

ಜನರು ಮತ್ತು ನಾಗರಿಕ ಸಂಸ್ಥೆಗಳು ಸೃಷ್ಟಿಸಿಕೊಂಡಿರುವ ಸಮಸ್ಯೆಗೆ ಪರಿಹಾರ ಹುಡುಕಲು ಪ್ರಯತ್ನಿಸುತ್ತಿರುವುದಾಗಿ ಸುಪ್ರೀಂ ಕೋರ್ಟ್ ಇತ್ತೀಚಿನ ತೀರ್ಪಿನಲ್ಲಿ ಹೇಳಿತ್ತು. ಆಡಳಿತಾತ್ಮಕ ವೈಫಲ್ಯಗಳೇ ಬೀದಿನಾಯಿ ಸಮಸ್ಯೆ ಉಲ್ಬಣಗೊಳ್ಳಲು ಕಾರಣವಾಗಿವೆ. 2023ರ ಪ್ರಾಣಿ ಜನನ ನಿಯಂತ್ರಣ (ಎಬಿಸಿ) ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವುದು, ಲಸಿಕೆ ಹಾಕುವುದು ಹಾಗೂ ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆಗೆ ಆದ್ಯತೆ ನೀಡುವುದು ಈ ಸಮಸ್ಯೆಗೆ ಪ್ರಾಯೋಗಿಕ ಪರಿಹಾರವಾಗಿವೆ. ಜನರ ಆರೋಗ್ಯ ಮತ್ತು ಕಲ್ಯಾಣಕ್ಕೆ ಸಾರ್ವಜನಿಕ ನೀತಿಗಳು ಆದ್ಯತೆ ಕೊಡಬೇಕು ಎನ್ನುವುದರಲ್ಲಿ ಅನುಮಾನವೇ ಇಲ್ಲ. ಆದರೆ, ಈ ನೀತಿಗಳು ಜೀವವಿರೋಧಿ ಆಗಿರಬಾರದು; ಮಾನವೀಯತೆಯಿಂದಲೂ ಕರುಣೆಯಿಂದಲೂ ಕೂಡಿರಬೇಕು. ಭೂಮಿ ಮನುಷ್ಯರಿಗೆ ಮಾತ್ರ ಸೇರಿದ್ದಲ್ಲ ಎನ್ನುವ ಪ್ರಕೃತಿಯ ಮೂಲತತ್ತ್ವವನ್ನು ವ್ಯವಸ್ಥೆಯ ನೀತಿಗಳು ಉಲ್ಲಂಘಿಸಬಾರದು. ಮನುಷ್ಯನ ಅಸ್ತಿತ್ವ, ಹಿತಾಸಕ್ತಿ ಗಮನದಲ್ಲಿ ಇರಿಸಿಕೊಂಡು ರೂಪುಗೊಂಡ ಕಾನೂನು ಮತ್ತು ನೀತಿಗಳು ಉಳಿದ ಜೀವಿಗಳ ಹಕ್ಕುಗಳನ್ನು ಕಸಿದುಕೊಳ್ಳಬಾರದು.

ಜಾಲತಾಣ

ಯುವಜನರ ಸಿಟ್ಟು ಮತ್ತು ಭವಿಷ್ಯ



ದೇಶದ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಯುವಜನರಲ್ಲಿ ಅಸಮಾಧಾನದ ಕಿಡಿಯೊಂದು ಸುಪ್ತವಾಗಿ ಬೆಳೆಯುತ್ತಿದೆ. ಆ ಅಸಮಾಧಾನದ ಸಿಟ್ಟು ಸಕಾರಾತ್ಮಕವಾಗಿ ಬಳಕೆಯಾದರೆ, ಕ್ರಾಂತಿಕ ಆಸ್ಫೋಟವಾಗಿ ಸಮಾಜವನ್ನು ಸುಟ್ಟು ಮತ್ತೆ ತಣ್ಣಗಾಗಿ ಕಾಣೆಯಾದರೆ, ಭವಿಷ್ಯ ಈಗಿರುವುದಕ್ಕಿಂತಲೂ ಭೀಕರವಾಗಲಿದೆ.

ಮಂಸೋರೆ, ನಿರ್ದೇಶಕ, 'ಫೇಸ್‌ಬುಕ್'ನಿಂದ

ಕಿಡಿನುಡಿ



ಪ್ರಧಾನಿ ನರೇಂದ್ರ ಮೋದಿಯವರು ಭಾರತೀಯರಿಗೆ ಕೊಟ್ಟಿರುವ ಘೋಷಣೆಗಳೇ ಚಾಕೊಲೇಟ್ ಹಲವಾರು! ಪ್ರತಿ ಚುನಾವಣೆಗೊಂದು ಘೋಷಣೆ, ಪ್ರತಿ ವರ್ಷಕ್ಕೊಂದು ಘೋಷಣೆ, ಪ್ರತಿ ವೈಫಲ್ಯಕ್ಕೊಂದು ಘೋಷಣೆ; ಇವುಗಳು ವಾಸ್ತವವಾಗಿದ್ದು ಮಾತ್ರ ಸೊನ್ನೆ.

ಪ್ರಿಯಾಂಕ್ ಖರ್ಗೆ, ಐಟಿ-ಬಿಟಿ ಸಚಿವ

25 ವರ್ಷಗಳ ಹಿಂದೆ

ಮಂಗಳವಾರ, 22-5-2001

• ಮಣಿಪುರ: ಮೂರು ತಿಂಗಳ ಸಮತಾ ಸರ್ಕಾರ ಪತನ

ಇಂಫಾಲ್, ಮೇ 21 (ಪಿಟಿಐ)– ಸಮತಾ ಪಕ್ಷದ ರಾಧಾಬಿನೋದ ಕೊಯಿಜಾಮ್ ನೇತೃತ್ವದ ಮೂರು ತಿಂಗಳಷ್ಟೆ ಹಳೆಯದ ಪೀಪಲ್ಸ್ ಫ್ರಂಟ್ ಸರ್ಕಾರಕ್ಕೆ ಇಂದು ಮಣಿಪುರ ರಾಜ್ಯ ವಿಧಾನಸಭೆಯಲ್ಲಿ ಸೋಲು ಉಂಟಾಯಿತು.

ಮುಖ್ಯಮಂತ್ರಿ ಕೊಯಿಜಾಮ್ ಮಂಡಿಸಿದ್ದ ವಿಶ್ವಾಸಮತ ಗೊತ್ತುವಳಿ ಪರವಾಗಿ 17 ಶಾಸಕರು ಮತ್ತು ಅದನ್ನು ವಿರೋಧಿಸಿ 36 ಶಾಸಕರು ಮತ ಚಲಾಯಿಸಿದರು ಎಂದು ವಿಧಾನ ಸಭಾಧ್ಯಕ್ಷ ಸಪಂ ಧನಂಜಯ್ ಅವರು ಸದನದಲ್ಲಿ ಪ್ರಕಟಿಸಿದರು.

• ಲಾರಿ–ಕಾರು ಡಿಕ್ಕಿ: ಐಜಿಪಿ ಬಿದರಿ ಅಪಾಯದಿಂದ ಪಾರು

ಮೈಸೂರು, ಮೇ 21: ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದ ಗಣಂಗೂರು ಗ್ರಾಮದ ಬಳಿ ಇಂದು ಬೆಳಿಗ್ಗೆ ಸಂಭವಿಸಿದ ಲಾರಿ-ಕಾರು ಡಿಕ್ಕಿಯಲ್ಲಿ ಐಜಿಪಿ ಮತ್ತು ಎಸ್‌ಟಿಎಫ್‌ನ ಮಾಜಿ ಮುಖ್ಯಸ್ಥ ಶಂಕರ್ ಬಿದರಿ ಅವರಿಗೆ ಸಣ್ಣ-ಪುಟ್ಟ ಗಾಯಗಳಾಗಿದ್ದು, ಅವರು ಅಪಾಯದಿಂದ ಪಾರಾಗಿದ್ದಾರೆ.

ತೀವ್ರ ಗಾಯಗೊಂಡಿರುವ ಅವರ ಕಾರಿನ ಚಾಲಕ ತಿಮ್ಮಪ್ಪ, ಗನ್‌ಮ್ಯಾನ್ ನಂಜಯ್ಯ ಮತ್ತು ಬಿದರಿ ಅವರನ್ನು ಇಲ್ಲಿನ ಬಿ.ಎಂ. ಆಸ್ಪತ್ರೆಗೆ ಸೇರಿಸಲಾಗಿದೆ.

75 ವರ್ಷಗಳ ಹಿಂದೆ

ಮಂಗಳವಾರ, 22-5-1951

• ಬರೋಡಾ ಮಾಜಿ ಮಹಾರಾಜರಿಗೆ ಮನ್ನಣೆ ತೆಗೆದುಹಾಕಿದ ಸರ್ಕಾರ

ನವದೆಹಲಿ, ಮೇ 21– ಸರ್ ಪ್ರತಾಪ ಸಿಂಗರಿಗೆ ಬರೋಡಾ ರಾಜ್ಯದ ಮಹಾರಾಜರೆಂದು ಸಲ್ಲುತ್ತಿದ್ದ ಮನ್ನಣೆಯನ್ನು ಕೊಡುವುದನ್ನು ಪೂರ್ತಿ ಸರಿಯಾದುದು ದೆಂದು ರಾಷ್ಟ್ರಪತಿಗಳು ಮನಗಂಡ ಕಾರಣದಿಂದ ಆ ಮನ್ನಣೆಯನ್ನು ಇಂದು ಹಿಂತೆಗೆದು ಕೊಂಡಿದ್ದಾರೆ ಎಂದು ಮಹಾರಾಜರ ಸರ್ ಪ್ರತಾಪ್ ಸಿಂಗ್ ಗಾಯಕವಾಡರಿಗೆ ಭಾರತ ಸರ್ಕಾರದವರು ತಿಳಿಸಿದ್ದಾರೆ.

ಈಗ ಮುಂಬಯಿಯಲ್ಲಿರುವ ಮಾಜಿ ಮಹಾರಾಜರಿಗೆ ರಾಷ್ಟ್ರಪತಿಗಳ ನಿರ್ಧಾರವನ್ನು ತಿಳಿಸಲಾಯಿತು. ಸಂಸ್ಥಾನ ಸಚಿವ ಶಾಖೆಯ ಜಂಟಿ ಕಾರ್ಯದರ್ಶಿ ಎಸ್.ಎಂ. ಬುಚ್‌ರವರ ಪತ್ರವನ್ನು ಸರ್ ಪ್ರತಾಪ್ ಸಿಂಗ್ ಅವರಿಗೆ ನೀಡಲು ಇಂದು ಬೆಳಿಗ್ಗೆ ಸಂಸ್ಥಾನ ಸಚಿವ ಶಾಖೆ ಅಧಿಕಾರಿಯೊಬ್ಬರು ದೆಹಲಿಯನ್ನು ಬಿಟ್ಟು ಹೊರಟರು.

ಹೆಚ್ಚಿಸಿ, ಕೊಳ್ಳುವ 'ಶಕ್ತಿ'ಯನ್ನು!

ವಿಶ್ಲೇಷಣೆ



ವೇಣುಗೋಪಾಲ್ ಟಿ.ಎಸ್.

ಪ್ರಧಾನಿಯವರ ಮಿತವ್ಯಯದ ಕರೆ ಆಕರ್ಷಕವಾಗಿದೆ. ಆದರೆ, ಮಿತವ್ಯಯದಿಂದ ದೇಶದ ಅಭಿವೃದ್ಧಿ ಹಿನ್ನಡೆ ಕಾಣುವ ಅಪಾಯವೂ ಇದೆ. ಮಿತವ್ಯಯದ ನೀತಿ ಅಭಿವೃದ್ಧಿಶೀಲ ದೇಶಗಳಿಗೆ ಮಾರಕವಾಗುವ ಸಾಧ್ಯತೆಯೇ ಹೆಚ್ಚು. ದೇಶದ ಆರ್ಥಿಕತೆಯ ಚೇತರಿಕೆಗೆ ಜನರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸುವುದೇ ಉತ್ತಮ ಪರಿಹಾರ.

ಪೆಟ್ರೋಲ್, ಚಿನ್ನ, ಖಾದ್ಯ ತೈಲ, ರಾಸಾಯನಿಕ ಗೊಬ್ಬರ ಇವುಗಳ ಬಳಕೆಯನ್ನು ಕಡಿಮೆ ಮಾಡಿ, ವಿದೇಶಿ ಪ್ರಯಾಣವನ್ನು ನಿಲ್ಲಿಸಿ, ಸಾವಯವ ಕೃಷಿ ಅಳವಡಿಸಿಕೊಳ್ಳಿ, ಸ್ವದೇಶಿ ವಸ್ತುಗಳನ್ನು ಬಳಸಿ, ವಿದೇಶಿ ವಿನಿಮಯ ಉಳಿಸಲು ನೆರವಾಗಿ ಎಂದು ಪ್ರಧಾನಿಯವರು ನಾಗರಿಕರಲ್ಲಿ ಮನವಿ ಮಾಡಿಕೊಂಡಿದ್ದಾರೆ. ತ್ಯಾಗ, ದೇಶಪ್ರೇಮದ ಮಾತುಗಳನ್ನಾಡಿದ್ದಾರೆ. ಸಾಮಾನ್ಯವಾಗಿ ಬಿಕ್ಕಟ್ಟಿನ ಸಂದರ್ಭದಲ್ಲಿ ಪ್ರಧಾನಿಯವರು ತ್ಯಾಗ, ದೇಶಪ್ರೇಮ ಇತ್ಯಾದಿಗಳ ಬಗ್ಗೆ ಮಾತನಾಡುವುದನ್ನು ನಗದು ಅಮಾನ್ಯೀಕರಣ ಹಾಗೂ ಕೋವಿಡ್‌ನಂತಹ ಸಮಯಗಳಲ್ಲಿ ನೋಡಿದ್ದೇವೆ. ಅದೇನೆ ಇರಲಿ, ಆರ್ಥಿಕತೆ ಸಂಕಷ್ಟದಲ್ಲಿದೆ ಎಂದವರು ಒಪ್ಪಿಕೊಂಡಿರುವುದು ಒಳ್ಳೆಯ ಬೆಳವಣಿಗೆ. ಸಮಸ್ಯೆಯಿದೆ ಎಂದು ಒಪ್ಪಿಕೊಂಡರೆ ಪರಿಹಾರದ ಬಗ್ಗೆ ಯೋಚಿಸಬಹುದು. ಆದರೆ, ಇಂದು ಕಾಡುತ್ತಿರುವ ರೂಪಾಯಿ ಮೌಲ್ಯದ ಕುಸಿತ, ವಿದೇಶಿ ವಿನಿಮಯದ ಕೊರತೆ, ಹೂಡಿಕೆಯ ಕೊರತೆ ಇತ್ಯಾದಿ ಯಾವ ಸಮಸ್ಯೆಗಳೂ ಇದ್ದಕ್ಕಿದ್ದಂತೆ ಸೃಷ್ಟಿಯಾದವುಗಳಲ್ಲ. ಇವೆಲ್ಲ ಹಲವು ವರ್ಷಗಳಿಂದ ಕಾಡುತ್ತಿರುವ ಸಮಸ್ಯೆಗಳು. ಯುದ್ಧದ ಬಿಕ್ಕಟ್ಟು ಇವನ್ನು ತೀವ್ರವಾಗಿಸಿದೆ. ದೇಶಪ್ರೇಮ, ತ್ಯಾಗ ಇವೆಲ್ಲ ಒಳ್ಳೆಯದೆ. ಆದರೆ, ಭಾವನಾತ್ಮಕವಾಗಿ ನೋಡುವಾಗ ಬಿಕ್ಕಟ್ಟಿನ ಹಿಂದಿರುವ ಆಳವಾದ ಸಮಸ್ಯೆಗಳನ್ನು ಗಮನಿಸದೇ ಹೋಗುತ್ತೇವೆ.

ಕಚ್ಚಾತೈಲ, ಚಿನ್ನ, ರಾಸಾಯನಿಕ ಗೊಬ್ಬರಕ್ಕೆ ಬಹುತೇಕ ಆಮದನ್ನೇ ನೆಚ್ಚಿಕೊಂಡಿದ್ದೇವೆ. ಜೊತೆಗೆ ಇವುಗಳ ಆಮದಿನ ಪ್ರಮಾಣ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಅದಕ್ಕಾಗಿ ವರ್ಷಕ್ಕೆ 200 ಶತಕೋಟಿ ಡಾಲರ್‌ಗೂ ಹೆಚ್ಚು ಖರ್ಚು ಮಾಡುತ್ತಿದ್ದೇವೆ. ನಮ್ಮಲ್ಲೇ ರಸಗೊಬ್ಬರ ತಯಾರಿಸುವುದಕ್ಕೂ ನೈಸರ್ಗಿಕ ಅನಿಲ ಇತ್ಯಾದಿಗಳು ಶೇ 80ರಷ್ಟು ಹೊರದೇಶಗಳಿಂದಲೇ ಬರಬೇಕು. ಹಾಗೆಯೇ ಹಿಂದೆ ಸ್ವಾವಲಂಬನೆ ಪಟ್ಟಿಯಲ್ಲಿದ್ದ ಖಾದ್ಯ ತೈಲವನ್ನೂ ಆಮದು ಮಾಡಿಕೊಳ್ಳಲು ಪ್ರಾರಂಭಿಸಿದ್ದೇವೆ.

ಮೊದಲು ಒಂದಿಷ್ಟು ವಿದೇಶಿ ಬಂಡವಾಳಿಗರು ನಮ್ಮಲ್ಲಿ ಹೂಡಿಕೆ ಮಾಡುತ್ತಿದ್ದರು. ಈಗದು ಕಡಿಮೆಯಾಗುತ್ತಿದೆ. ವಿದೇಶಿಯರು ಬಿಡಿ, ನಮ್ಮವರೇ ಹೂಡಿಕೆ ಮಾಡುತ್ತಿಲ್ಲ. ಅಷ್ಟೇ ಅಲ್ಲ, ವಿದೇಶಗಳಲ್ಲಿ ಸ್ವತ್ತುಗಳನ್ನು, ಷೇರುಗಳನ್ನು ಕೊಳ್ಳುವುದೂ ಹೆಚ್ಚುತ್ತಿದೆ. ಹಾಗಾಗಿ ಡಾಲರಿನ ಹೊರಹರಿವು ಹೆಚ್ಚುತ್ತಿದೆ. ರೂಪಾಯಿ ಬೆಲೆಯೂ ಏನೇನೋ ಕಾರಣಕ್ಕೆ ಕುಸಿಯುತ್ತಲೇ ಇದೆ. ರೂಪಾಯಿಯ ಸ್ಥಿರತೆಯನ್ನು ಕಾಪಾಡಿಕೊಳ್ಳುವುದಕ್ಕೆ ಆರ್‌ಬಿಐ ಡಾಲರನ್ನು ಮಾರುಕಟ್ಟೆಯಲ್ಲಿ ಮಾರುತ್ತಿದೆ. ಅದು ವಿದೇಶಿ ವಿನಿಮಯವನ್ನು ಇನ್ನಷ್ಟು ಕರಗಿಸುತ್ತಿದೆ.

ಸಮಸ್ಯೆ ಗಂಭೀರವಾಗಿದೆ ಎನ್ನುವುದು ಸತ್ಯ. ಇಂಧನಕ್ಕಾಗಿ ಕೆಲವು ದೇಶಗಳನ್ನು ಹೆಚ್ಚು ಅವಲಂಬಿಸುತ್ತಿದ್ದೇವೆ. ಆಪತ್ತಿನ ಸಂದರ್ಭದಲ್ಲಿ ಪೂರೈಕೆ ಕಷ್ಟವಾಗುತ್ತದೆ. ಹಲವು ಮೂಲಗಳಿಂದ ಇಂಧನವನ್ನು ಪಡೆದುಕೊಳ್ಳುವುದು ಒಳ್ಳೆಯದು. ಅದಕ್ಕಾಗಿ ಪ್ರಯತ್ನವೂ ನಡೆದಿದೆ. ಆದರೂ ಅಮೆರಿಕದ ಒತ್ತಡವನ್ನು ಮೀರುವುದಕ್ಕೆ ಕಷ್ಟವಾಗುತ್ತಿದೆ. ಕಷ್ಟ ಬಂದಾಗಲೆಲ್ಲ ಇಂಧನವನ್ನು ಹೆಚ್ಚು ಶೇಖರಿಸಿಟ್ಟುಕೊಳ್ಳಬೇಕು ಅಂದುಕೊಳ್ಳುತ್ತೇವೆ. ಆಮೇಲೆ ಮರೆತುಬಿಡುತ್ತೇವೆ. ಸೌರ, ವಾಯು ಇತ್ಯಾದಿ ಪರ್ಯಾಯ ಇಂಧನ ಮೂಲಗಳನ್ನು ಬೆಳೆಸಬೇಕು ಅನ್ನುವುದು ಗೊತ್ತಿದ್ದರೂ ಮಾಡುತ್ತಿಲ್ಲ. ಹಲವು ಪರ್ಯಾಯಗಳಿದ್ದರೆ ವಿಪತ್ತಿನ ಸಮಯದಲ್ಲಿ ಕೊರತೆಯನ್ನು ನಿರ್ವಹಿಸುವುದಕ್ಕೆ ಸುಲಭವಾಗುತ್ತದೆ.

ರಾಸಾಯನಿಕ ಗೊಬ್ಬರವೂ ಬೇರೆ ದೇಶಗಳಿಂದಲೇ ಬರಬೇಕು. ಯುದ್ಧವೋ ಅಥವಾ ಇನ್ನಾವುದೋ ಕಾರಣಕ್ಕೆ ಪೂರೈಕೆಗೆ ಸಮಸ್ಯೆಯಾದರೆ ನಮ್ಮಲ್ಲಿ ಹಾಹಾಕಾರ ಉಂಟಾಗುತ್ತದೆ. ನಮ್ಮ ಉತ್ಪಾದನೆಯನ್ನು ಹೆಚ್ಚಿಸಬೇಕೆಂದು ಹೇಳುತ್ತಲೇ ಇದ್ದೇವೆ. ಆದರೆ, ಕಳೆದ ಎರಡು ದಶಕಗಳಲ್ಲಿ ನಮ್ಮಲ್ಲಿ ಉತ್ಪಾದನೆ ಹೆಚ್ಚಾಗಿರುವುದು ಬರೀ ಶೇ 2ರಷ್ಟು. ಈ ರಾಸಾಯನಿಕ ಗೊಬ್ಬರದ ಕಾಟವೇ ಬೇಡ, ನೈಸರ್ಗಿಕ ಕೃಷಿಯನ್ನು ಅಳವಡಿಸಿಕೊಳ್ಳೋಣ, ಅದರಿಂದ ಮಣ್ಣಿನ ಫಲವತ್ತತೆಯೂ ಹೆಚ್ಚುತ್ತದೆ ಎನ್ನುತ್ತಿದ್ದಾರೆ ಪ್ರಧಾನಿ. ಆದರೆ, ದಿಢೀರನೆ ಸಾವಯವ ಕೃಷಿಯ ಕಡೆಗೆ ಹೊರಳುವುದು ಸುಲಭವಲ್ಲ. ಶ್ರೀಲಂಕಾದಲ್ಲಿ ವಿದೇಶಿ ವಿನಿಮಯದ ಬಿಕ್ಕಟ್ಟು ತಪ್ಪಿಸಿಕೊಳ್ಳಲು ರಾಸಾಯನಿಕ ಗೊಬ್ಬರವನ್ನು ನಿಷೇಧಿಸಿ ಸಾವಯವ ಕೃಷಿಯನ್ನು ಕಡ್ಡಾಯಗೊಳಿಸಲಾಯಿತು. ಅದರಿಂದ ಭತ್ತ ಹಾಗೂ ಚಹಾ ಉತ್ಪಾದನೆ ತೀವ್ರವಾಗಿ ಕುಸಿಯಿತು. ವಿದೇಶಿ ವಿನಿಮಯದ ಬಿಕ್ಕಟ್ಟು ಪರಿಹರಿಸಲು ಹೋಗಿ ಶ್ರೀಲಂಕಾ ಆಹಾರದ ಬಿಕ್ಕಟ್ಟಿಗೆ ಸಿಲುಕಿತು. ನಾವು ನೈಸರ್ಗಿಕ ಕೃಷಿಯ ಬಗ್ಗೆ ಮಾತನಾಡುತ್ತಲೇ ಇದ್ದೇವೆ. ಆದರೆ, ಒಂದು ಸ್ಪಷ್ಟ ನೀತಿ ರೂಪಿಸಲು ನಮಗೆ ಸಾಧ್ಯವಾಗಿಲ್ಲ. ಸದ್ಯಕ್ಕೆ ಘೋಷಣೆಯ ಮಟ್ಟದಲ್ಲೇ ಉಳಿದುಕೊಂಡಿದೆ.

ವಿದೇಶಿ ವಿನಿಮಯದ ಕೊರತೆಯ ಸಮಸ್ಯೆಗಿರುವುದು ಎರಡು ಪರಿಹಾರ. ಒಂದು, ಮಿತವ್ಯಯ– ಅಂದರೆ ಖರ್ಚಿನಲ್ಲಿ ಕಡಿತ. ಇನ್ನೊಂದು, ವಿನಿಮಯದ ಮೀಸಲು ಹೆಚ್ಚಿಸುವುದು. ಮನೆಯಲ್ಲಿ ವರಮಾನ ಕಡಿಮೆಯಾದರೆ ಹೊಟ್ಟೆಬಟ್ಟೆ ಕಟ್ಟಿ, ಖರ್ಚನ್ನು ಕಡಿಮೆ ಮಾಡಿಕೊಳ್ಳಬೇಕು. ಅಥವಾ ವರಮಾನ ಹೆಚ್ಚಿಸಿಕೊಳ್ಳಬೇಕು. ನಮ್ಮ ಪ್ರಧಾನಿಯವರೂ ಸೇರಿದಂತೆ ಹಲವರು ಮಿತವ್ಯಯವನ್ನು ಸೂಚಿಸುತ್ತಿದ್ದಾರೆ. ಇದರಿಂದ ಹಣ ಉಳಿಯಬಹುದು. ಅಂತಿಮವಾಗಿ ಮನುಷ್ಯ ಅಶಕ್ತನಾಗುತ್ತಾನೆ. ಇದು ಆರ್ಥಿಕತೆಯ ವಿಷಯದಲ್ಲೂ ನಿಜ. ಮಿತವ್ಯಯದಿಂದ ಡಾಲರ್ ಉಳಿಯಬಹುದು. ಆದರೆ, ಆರ್ಥಿಕತೆ ಸೊರಗಿಹೋಗಬಹುದು.

ಮಿತವ್ಯಯ ಒಂದು ನೀತಿಯಾಗಿ ಯಾವುದೇ ದೇಶದಲ್ಲಿ, ಅದರಲ್ಲೂ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಂತೂ ಎಂದೂ ಯಶಸ್ವಿಯಾಗಿಲ್ಲ. ಗ್ರೀಸ್, ಇಟಲಿ, ಅಥವಾ ಲ್ಯಾಟಿನ್ ಅಮೆರಿಕದ ದೇಶಗಳಲ್ಲಿ ಐಎಂಎಫ್ ತಂದ ಮಿತವ್ಯಯ ಕಾರ್ಯಕ್ರಮಗಳು ವಿಫಲವಾಗಿವೆ. ಪಾವತಿ ಶಿಲ್ಕಿನ ಕೊರತೆ ನೀಗಿಸಿಕೊಳ್ಳಲು ಈ ದೇಶಗಳು ಕಠಿಣ ಮಿತವ್ಯಯದ ನೀತಿಯನ್ನು ಆಶ್ರಯಿಸಿದ್ದವು. ಆಮದಿನಲ್ಲಿ ವಿಪರೀತ ಕಡಿತ ಮಾಡಿಕೊಂಡವು. ಆದರೆ, ಚಿನ್ನ ಬರೀ ಬಳಕೆಯ ವಸ್ತುವಲ್ಲ. ಲಕ್ಷಾಂತರ ಜನ ಚಿನ್ನದ ಆಭರಣಗಳ ತಯಾರಿಕೆ, ಸಂಸ್ಕರಣೆ, ಮಾರಾಟದಲ್ಲಿ ತೊಡಗಿಸಿಕೊಂಡಿದ್ದಾರೆ. ಚಿನ್ನದ ಮಾರಾಟ ನಿಂತರೆ, ಅವರ ಆದಾಯವೂ ಕುಸಿಯುತ್ತದೆ, ಕಾರ್ಖಾನೆಗಳು ಮುಚ್ಚುತ್ತವೆ. ಆರ್ಥಿಕತೆಯು ಸೊರಗುತ್ತದೆ. ನಮ್ಮ ಆರ್ಥಿಕತೆಯಲ್ಲಿ ನಿಜವಾದ ಸಮಸ್ಯೆಯೆಂದರೆ, ಬಳಕೆಯ ಕೊರತೆ. ಮೊದಲೇ ಜನರ ಬಳಿ ಹಣವಿಲ್ಲ. ಮಿತವ್ಯಯದಿಂದ ಕೊಳ್ಳುವುದು ಇನ್ನೂ ಕಡಿಮೆಯಾಗುತ್ತಿದೆ. ಬೇಡಿಕೆಯ ಕೊರತೆ ಹೆಚ್ಚುತ್ತದೆ. ಸಹಜವಾಗಿಯೇ ಹೂಡಿಕೆಯೂ ಕಮ್ಮಿಯಾಗುತ್ತದೆ. ಉತ್ಪಾದನೆ ಇನ್ನೂ ಕಮ್ಮಿಯಾಗುತ್ತದೆ. ರಫ್ತು ಕುಸಿಯುತ್ತಿದೆ. ಮಿತವ್ಯಯದ ನೀತಿಯಿಂದ ಸಮಸ್ಯೆ ತೀವ್ರವಾಗುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಯಾವುದೇ ಬಿಕ್ಕಟ್ಟು ಎದುರಾದಾಗಲೂ ಸಮಸ್ಯೆ ತೀವ್ರವಾಗಿ ಕಾಡುವುದು ಸಾಮಾನ್ಯ ಜನರನ್ನು ಮತ್ತು ಸಣ್ಣ ಉದ್ದಿಮೆಗಳನ್ನು. ಈಗಲೂ ಹೋಟೆಲ್ ಇತ್ಯಾದಿ ಉದ್ದಿಮೆಗಳು ಸಂಕಷ್ಟದಲ್ಲಿವೆ. ಕೋವಿಡ್‌ನಂತಹ ಬಿಕ್ಕಟ್ಟಿನ ಸಮಯದಲ್ಲೂ ದೊಡ್ಡ ಉದ್ದಿಮೆಗಳ ಲಾಭಕ್ಕೆ ತೊಂದರೆಯಾಗಿರಲಿಲ್ಲ. ಸರ್ಕಾರದ ಮುಖ್ಯ ಆರ್ಥಿಕ ಸಲಹೆಗಾರರೇ ಗಮನಿಸಿರುವಂತೆ, ಕಾರ್ಪೊರೇಟ್ ಲಾಭದಲ್ಲಿ ಶೇ 30ರಷ್ಟು ಹೆಚ್ಚಳವಾಗಿದೆ. ಆದರೆ, ಕೆಳವರ್ಗದವರ ಸ್ಥಿತಿ ಪಾತಾಳಕ್ಕೆ ಕುಸಿದಿದೆ. ಹಾಗಾಗಿ ಅವರಿಗೆ ರಕ್ಷಣೆ ಕೊಡುವ ನಿಟ್ಟಿನಲ್ಲಿ ಯೋಚಿಸಬೇಕು. ಅವರಿಂದ ತ್ಯಾಗವನ್ನು ನಿರೀಕ್ಷಿಸುವುದಕ್ಕೆ ಸಾಧ್ಯವಿಲ್ಲ. ಆಹಾರ ಭದ್ರತೆ ಮತ್ತು ಜೀವನೋಪಾಯಕ್ಕೆ ಆದ್ಯತೆ ನೀಡಬೇಕು. ಮನರೇಗಾದಂತಹ ಯೋಜನೆಯನ್ನು ಉಳಿಸಿಕೊಂಡು ನಗರಗಳಿಗೂ ವಿಸ್ತರಿಸಿ, ಜನರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸಬೇಕು. ಜನರ ಖರ್ಚು ಮಾಡುವ ಸಾಮರ್ಥ್ಯವನ್ನು ಕಿತ್ತುಕೊಂಡರೆ, ಆರ್ಥಿಕತೆ ಇನ್ನಷ್ಟು ಕುಸಿಯುತ್ತದೆ. ಉತ್ಪಾದನೆ ಮತ್ತೂ ಕಮ್ಮಿಯಾಗುತ್ತದೆ. ನಮಗೆ ಬೇಕಿರುವುದು ಬೇಡಿಕೆಯನ್ನು ಸೃಷ್ಟಿಸುವ, ಸಂಪತ್ತನ್ನು ಸಮಾನವಾಗಿ ಹಂಚುವ ನೀತಿಗಳು. ಶ್ರೀಮಂತರನ್ನು ಓಲೈಸಿದರೆ ಅವರು ಬಂಡವಾಳ ಹೂಡಿಕೆ ಮಾಡುತ್ತಾರೆಂಬ ನಂಬಿಕೆ ಈಗ ಸಂಪೂರ್ಣ ಸುಳ್ಳಾಗಿದೆ.

ನಿಜ, ಭಾರತೀಯರೆಲ್ಲರೂ ದಿಢೀರನೆ ಚಿನ್ನ ಬಳಸುವುದನ್ನು ನಿಲ್ಲಿಸಿ, ಪಕ್ಕದ ತೋಟದಲ್ಲಿ ಬೆಳೆದ ಹೂವನ್ನು ಬಳಸುವುದಕ್ಕೆ ಪ್ರಾರಂಭಿಸಿದರೆ, ಅಥವಾ ಸ್ಕೂಟರ್, ಕಾರು ನಿಲ್ಲಿಸಿ ಸೈಕಲ್ ತುಳಿಯುವುದಕ್ಕೆ ಪ್ರಾರಂಭಿಸಿದರೆ ಆಮದು ಕಡಿಮೆಯಾಗುತ್ತದೆ. ಡಾಲರ್ ಮೇಲಿನ ಅವಲಂಬನೆಯೂ ಕಮ್ಮಿಯಾಗುತ್ತದೆ. ಚಾಲ್ತಿ ಖಾತೆ ಕೊರತೆಯೂ ಮಾಯವಾಗಬಹುದು. ಆದರೆ, ಇದರಿಂದ ಅಂತಿಮವಾಗಿ ದೇಶದ ಬೆಳವಣಿಗೆಯೂ ತಗ್ಗುತ್ತದೆ. ಕಚ್ಚಾತೈಲ, ಚಿನ್ನ ಅಥವಾ ಖಾದ್ಯ ತೈಲವನ್ನು ಅವಲಂಬಿಸಿರುವ ಎಲ್ಲ ಉದ್ಯಮಗಳ ಮಾರಾಟ ಕುಸಿಯುತ್ತದೆ. ಆರ್ಥಿಕ ಚಟುವಟಿಕೆಗಳು ಕಡಿಮೆಯಾದಂತೆ ಆರ್ಥಿಕತೆಯ ವೇಗ ಕುಂಠಿತಗೊಳ್ಳಬಹುದು. ದೀರ್ಘಕಾಲದ ಪರಿಹಾರವೆಂದರೆ ಆಮದನ್ನು ಕಡಿಮೆ ಮಾಡುವುದರ ಜೊತೆಗೆ, ನಮ್ಮ ರಫ್ತನ್ನು ಜಾಗತಿಕ ಮಟ್ಟದಲ್ಲಿ ಹೆಚ್ಚಿಸುವ ನಿಟ್ಟಿನಲ್ಲಿ ಯೋಚಿಸುವುದು. ನಮ್ಮಿಂದ ಬಂಡವಾಳ ಹರಿದುಹೋಗುವುದನ್ನು ತಪ್ಪಿಸುವುದರ ಜೊತೆಗೆ, ನಮ್ಮಲ್ಲಿಗೆ ಹಣ ಹರಿದು ಬರುವಂತೆ ನೋಡಿಕೊಳ್ಳುವುದು.

ವಿದೇಶಿ ಪ್ರವಾಸವನ್ನು ನಿಯಂತ್ರಿಸುವುದಕ್ಕಿಂತ ನಮ್ಮಲ್ಲಿ ಪ್ರವಾಸೋದ್ಯಮ ಬೆಳೆಯುವಂತೆ ನೋಡಿಕೊಳ್ಳುವುದು. ಅಂದರೆ, ವಿದೇಶಿ ವಿನಿಮಯದ ಪ್ರಮಾಣ ಹೆಚ್ಚುವಂತೆ ನೋಡಿಕೊಳ್ಳುವುದು ಉತ್ತಮ ಮಾರ್ಗ. ಅಂದರೆ ಆರ್ಥಿಕತೆಯನ್ನು ಬೆಳೆಸುವ ನಿಟ್ಟಿನಲ್ಲಿ ಯೋಚಿಸಬೇಕು. ಕೊಳ್ಳುವುದನ್ನು ಕಡಿಮೆ ಮಾಡುವುದಕ್ಕಿಂತ ಜನರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸಿ ಆರ್ಥಿಕತೆಯನ್ನು ಹೆಚ್ಚು ಸಕ್ರಿಯಗೊಳಿಸುವುದು ಒಳ್ಳೆಯ ದಾರಿಯಾಗಬಹುದು.



ವಾಚಕರ ವಾಣಿ

ಕ್ರಿಕೆಟ್ ಸ್ಟೇಡಿಯಂ: ವನ್ಯಜೀವಿಗಳಿಗೆ ಕುತ್ತು

ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ವ್ಯಾಪ್ತಿಯಲ್ಲಿ ₹900 ಕೋಟಿ ವೆಚ್ಚದ 80 ಸಾವಿರ ಆಸನಗಳ ಸಾಮರ್ಥ್ಯದ ಅಂತರರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣ ನಿರ್ಮಿಸುವ ಪ್ರಸ್ತಾವ ಪರಿಸರ ವಿರೋಧಿಯಾದುದು. ಕಾವೇರಿ ಮತ್ತು ಮಲೆಮಹದೇಶ್ವರ ವನ್ಯಜೀವಿಧಾಮಗಳ ಕೊಂಡಿಯಂತಿರುವ ಈ ಸೂಕ್ಷ್ಮ ಪರಿಸರ ವಲಯದಲ್ಲಿ 100 ಎಕರೆ ಹಸಿರನ್ನು ಬಲಿಗೊಡುವುದು ವನ್ಯಜೀವಿಗಳ ಆವಾಸಸ್ಥಾನವನ್ನು ಸಂಪೂರ್ಣವಾಗಿ ಧ್ವಂಸಗೊಳಿಸಲಿದೆ. 2020ರಲ್ಲಿ ಪರಿಸರ ಸೂಕ್ಷ್ಮ ವಲಯವನ್ನು 270 ಚದರ ಕಿ.ಮೀ.ನಿಂದ 150 ಚದರ ಕಿ.ಮೀ.ಗೆ ಕುಗ್ಗಿಸಿರುವುದು ಈಗಾಗಲೇ ಜೀವವೈವಿಧ್ಯಕ್ಕೆ ಕೊಡಲಿಪೆಟ್ಟು ನೀಡಿದೆ. ಮನರಂಜನೆಗಿಂತ ಪರಿಸರದ ಸಮತೋಲನ ಮುಖ್ಯ. ತೀವ್ರ ನಗರೀಕರಣ ಮತ್ತು ವಾಣಿಜ್ಯೀಕರಣದ ಈ ಹಪಹಪಿಗೆ ನ್ಯಾಯಾಲಯದಲ್ಲೂ ವಿರೋಧ ಇರುವಾಗ, ಸರ್ಕಾರ ತಕ್ಷಣ ಯೋಜನೆಯನ್ನು ಕೈಬಿಡಬೇಕು. ಪ್ರಕೃತಿಯನ್ನು ಸಂರಕ್ಷಿಸುವುದು ಇಂದಿನ ತುರ್ತು. ಅಭಿವೃದ್ಧಿ ಹೆಸರಿನಲ್ಲಿ ಜೀವಸಂಕುಲದ ಮಾರಣಹೋಮ ನಿಲ್ಲಲಿ.

ವಿಜಯಕುಮಾರ್ ಎಚ್.ಕೆ., ರಾಯಚೂರು

ಅಮೆರಿಕ ಉಪಾಧ್ಯಕ್ಷರ ಗೊಂದಲದ ಸ್ಥಿತಿ

'ಇರಾನಿಯನ್ನರು ಏನು ಸಾಧಿಸಲು ಹೊರಟಿದ್ದಾರೆ ಎನ್ನುವುದನ್ನು ಅರಿಯುವುದೇ ಕಷ್ಟವಾಗುತ್ತಿದೆ' ಎಂದು ಅಮೆರಿಕದ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಅವರು ಹೇಳಿದ್ದಾರೆ. ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೂ ಈ ಮಾತು ಸರಿಹೊಂದುತ್ತದೆ. ಯುದ್ಧದ ಸಂದರ್ಭದಲ್ಲಿ ಅಮೆರಿಕ–ಇರಾನ್ ಒಪ್ಪಂದಕ್ಕಾಗಿ ಪ್ರಯತ್ನಿಸುತ್ತಿರುವ ವ್ಯಾನ್ಸ್ ಅವರ ಮನಃಸ್ಥಿತಿಯು ಈ ರೀತಿ ಗೊಂದಲಮಯವಾಗಿಬಿಟ್ಟಿದೆ. ಶ್ವೇತಭವನದೊಳಗೆ ಅವರ ಪರಿಸ್ಥಿತಿ ಹೀಗಾದರೆ, ಅವರ ಸ್ವಂತ ಭವನದಲ್ಲಿ, ಅಂದರೆ ಮನೆಯಲ್ಲಿಯಾದರೂ ಅವರಿಗೆ ನೆಮ್ಮದಿ ದೊರಕುತ್ತಿರಬಹುದು. ಏಕೆಂದರೆ ಅವರ ಪತ್ನಿ ಭಾರತೀಯಳು. ಭಾರತೀಯ ಸ್ತ್ರೀಯರು ಶಾಂತಿ, ಸಹನೆ, ಸರಳತೆ, ನಿರಾಳತೆಗೆ ಹೆಸರಾದವರು ತಾನೆ?

ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು

ಚಿನ್ನ: ಸುಂಕ ಕಡಿತ ವರ್ಷಕ್ಕೆ ಸೀಮಿತವೆ?

ಪ್ರಧಾನಿ ನರೇಂದ್ರ ಮೋದಿಯವರು ಚಿನ್ನ ಖರೀದಿಯನ್ನು ಒಂದು ವರ್ಷದ ಮಟ್ಟಿಗೆ ಮುಂದೂಡುವಂತೆ ಮನವಿ ಮಾಡಿದ್ದಾರೆ. ಈ ಮನವಿ ಬಳಿಕ ಕೇಂದ್ರ ಸರ್ಕಾರ ಚಿನ್ನದ ಮೇಲಿನ ಮೂಲ ಆಮದು ಸುಂಕವನ್ನು ಹೆಚ್ಚಿಸಿದೆ. ಇದರಿಂದ ಮಾರುಕಟ್ಟೆಯಲ್ಲಿ ಚಿನ್ನದ ಧಾರಣೆ ಕೂಡ ಏರಿಕೆಯ ಹಾದಿ ಹಿಡಿದಿದೆ. ಸಂಕಷ್ಟದಲ್ಲಿ ಇಂಧನದ ಬೆಲೆ ಏರಿಕೆ ಅನಿವಾರ್ಯ. ಆದರೆ, ಚಿನ್ನದ ಮೇಲಿನ ಆಮದು ಸುಂಕ ಏರಿಕೆಯು ಸಮಂಜಸವಲ್ಲ. ಮದುವೆ ಮುಂತಾದ ಅನಿವಾರ್ಯ ಕಾರ್ಯಗಳಿಗೆ ಖರೀದಿ ಮಾಡಲು ಆಗದಂತೆ ಸುಂಕ ಏರಿಸಿದ್ದು ಸಮರ್ಥನೀಯವಲ್ಲ. ನಾಗರಿಕರು ಖರೀದಿ ಕಡಿಮೆ ಮಾಡಿದರೂ ಸರ್ಕಾರದ ವರಮಾನ ಮಾತ್ರ ಕಡಿಮೆ ಆಗಬಾರದು ಎಂಬ ಧೋರಣೆ ಇದರ ಹಿಂದಿದೆ. ಒಂದು ವರ್ಷದ ನಂತರ ಏರಿಸಿರುವ ಸುಂಕವನ್ನು ಕಡಿಮೆ ಮಾಡುವ ಬಗ್ಗೆ ಪ್ರಧಾನಿಯವರು ಆಶ್ವಾಸನೆ ನೀಡುವರೆ?

ಕೆ.ಎಂ. ನಾಗರಾಜು, ಮೈಸೂರು

ದುಬಾರಿ ಶುಲ್ಕ ಬರೆ: ಪೋಷಕರು ಹೈರಾಣು

ಪ್ರಸ್ತುತ ರಾಜ್ಯದ ಶಾಲಾಕಾಲೇಜುಗಳಲ್ಲಿ ಪ್ರವೇಶಾತಿ ನಡೆಯುತ್ತಿದೆ. ಆದರೆ, ಅನೇಕ ಶಾಲಾಕಾಲೇಜುಗಳಲ್ಲಿನ ದುಬಾರಿ ಶುಲ್ಕ ಭರಿಸಲಾಗದೆ ಪೋಷಕರು ಪರಿತಪಿಸುವಂತಾಗಿದೆ. ಅದರಲ್ಲೂ ಎರಡು, ಮೂರು ಮಕ್ಕಳಿರುವ ಪೋಷಕರ ಪಾಡು ಹೇಳತೀರದು. ಬಹಳಷ್ಟು ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳು ರಾಜಕಾರಣಿಗಳ ಒಡೆತನದಲ್ಲಿಯೇ ಇವೆ. ಅವರು ಪ್ರತಿನಿಧಿಸುವ ಜಾತಿಯ ಮಠಗಳ ಉಸ್ತುವಾರಿಯಲ್ಲಿಯೂ ಇವೆ. ಸರ್ಕಾರ ಸಭೆ ಕರೆದು ಏಕರೂಪದ ಶುಲ್ಕ ನಿಗದಿಗೆ ಕ್ರಮವಹಿಸಬೇಕಿದೆ.

ಪ್ರೊ. ಟಿ. ನಾರಾಯಣಪ್ಪ, ಬೆಂಗಳೂರು

ನಂಜನಗೂಡಿಗೆ 'ಗೌರಿ' ಮರಳಿ ಬರುವಳೆ?

ನಂಜನಗೂಡಿನ ಶ್ರೀಕಂಠೇಶ್ವರ ದೇವಸ್ಥಾನದ ಪಟ್ಟದ ಆನೆ 'ಗೌರಿ' ಕಾಲಿನ ಗಾಯ ಹಾಗೂ ಅನಾರೋಗ್ಯದಿಂದ ಬಳಲುತ್ತಿತ್ತು. ಆ ಕಾರಣ 2017–2018ರಲ್ಲಿ ಬೆಂಗಳೂರಿನ ವನ್ಯಜೀವಿ ಸಂರಕ್ಷಣೆ ಮತ್ತು ಪುನರ್ವಸತಿ ಕೇಂದ್ರಕ್ಕೆ ಉತ್ತಮ ಹಾರೈಕೆ ಮತ್ತು ಹೆಚ್ಚಿನ ಚಿಕಿತ್ಸೆಗಾಗಿ ಅದನ್ನು ವರ್ಗಾಯಿಸಿದ್ದು ಸರಿಯಷ್ಟೇ. ಆದರೆ, 'ಗೌರಿ'ಯನ್ನು ಇನ್ನೂ ವಾಪಸ್ ಕರೆತಂದಿಲ್ಲ. ಇದಕ್ಕೆ ಸೂಕ್ತ ಕಾರಣವೂ ತಿಳಿಯುತ್ತಿಲ್ಲ. ಸದ್ಯ ಆನೆ ಗುಣಮುಖವಾಗಿದ್ದು, ಚೆನ್ನಾಗಿದೆ ಎನ್ನುವ ಮಾಹಿತಿ ಇದೆ. ದೇವಸ್ಥಾನದಲ್ಲಿ ನಿರಂತರವಾಗಿ ನಡೆಯುವ ಸಾಂಪ್ರದಾಯಿಕ ಕೈಂಕರ್ಯಗಳು, ಅಭಿಷೇಕಕ್ಕಾಗಿ ಕಪಿಲಾ ನದಿಯಿಂದ ನೀರು ತರುವುದು; ಉತ್ಸವ, ಮೆರವಣಿಗೆಗಳಲ್ಲಿ ಬಳಕೆಯಾಗುತ್ತಿತ್ತು. 'ಗೌರಿ'ಯ ದರ್ಶನಕ್ಕೆ ಆಗಾಗ ಬರುತ್ತಿದ್ದ ಶಾಲಾ ಮಕ್ಕಳು, ಭಕ್ತರು ಈಗ ಅದನ್ನು ನೋಡಲಾಗದೆ ನಿರಾಸೆಯಿಂದ ತೆರಳುತ್ತಿದ್ದಾರೆ. ನಂಜನಗೂಡಿನ ಆಕರ್ಷಣೆಯಾಗಿದ್ದ ಅದನ್ನು ಆದ್ಯತೆಯ ಮೇರೆಗೆ ವಾಪಸ್ ಕರೆ ತರಬೇಕಿದೆ.

ಅನಿಲ್ ಕುಮಾರ್, ನಂಜನಗೂಡು

ಸಾರ್ವಜನಿಕರ ತೆರಿಗೆ ಹಣ ಸದ್ಬಳಕೆ ಆಗಲಿ

ಇತ್ತೀಚಿನ ದಿನಗಳಲ್ಲಿ ರಾಜಕೀಯ ಪಕ್ಷಗಳು ಸ್ಪರ್ಧೆಗೆ ಬಿದ್ದಂತೆ ಜನರಿಗೆ ಉಚಿತ ಯೋಜನೆಗಳನ್ನು ಘೋಷಿಸುತ್ತಿವೆ. ವೋಟ್ ಬ್ಯಾಂಕ್ ರಾಜಕೀಯಕ್ಕಾಗಿ ತೆರಿಗೆದಾರರ ಹಣವನ್ನು ಮನಸೋಇಚ್ಛೆ ವೆಚ್ಚ ಮಾಡುತ್ತಿರುವುದು ನೋವಿನ ಸಂಗತಿ. ತೆರಿಗೆ ಹಣದ ಸಿಂಹಪಾಲು ಶಿಕ್ಷಣ, ಆಸ್ಪತ್ರೆ ಸೇರಿದಂತೆ ಅಗತ್ಯ ಮೂಲಸೌಕರ್ಯ ಕಲ್ಪಿಸಲು ಬಳಕೆಯಾಗಬೇಕು. ಉಚಿತ ಯೋಜನೆ ಜಾರಿಗೊಳಿಸಿದರೂ ನೈಜ ಫಲಾನುಭವಿಗಳಿಗೆ ಸೌಲಭ್ಯ ತಲಪಿಸುವಂತಾಗಬೇಕು. ತೆರಿಗೆ ಹಣವನ್ನು ಯಾವ ಅಭಿವೃದ್ಧಿ ಕೆಲಸಗಳಿಗೆ ವಿನಿಯೋಗಿಸಬೇಕು ಎಂಬುದನ್ನು ತೆರಿಗೆದಾರರೇ ತೀರ್ಮಾನಿಸುವ ವ್ಯವಸ್ಥೆ ಜಾರಿಗೆ ಬರಬೇಕಿದೆ. ಇಂದಿನ ಕೃತಕ ಬುದ್ಧಿಮತ್ತೆ ಯುಗದಲ್ಲಿ ಇದನ್ನು ಅಳವಡಿಸುವುದು ಕಷ್ಟವೇನಲ್ಲ.

ಶ್ರೀಕಾಂತ ಬನ್ನಿಗೋಳ್ಕರ, ಮುದಗಲ್ಲ

ಚುರುಮುರಿ

ಬೇತಾಳದ ಹೊಸ ಪ್ರಶ್ನೆಗಳು!



• ಬಿ.ಎನ್. ಮಲ್ಲೇಶ್

ರಾತ್ರಿ ಬೈಕಲ್ಲಿ ಮನೆಗೆ ಹೊರಟಿದ್ದ ಗುಡ್ಡೆ. ಸ್ವಲ್ಪ ದೂರ ಹೋಗುವಷ್ಟರಲ್ಲಿ ಹಿಂದೆ ಯಾರೋ ಕೂತು ಹೆಗಲ ಮೇಲೆ ಕೈ ಇಟ್ಟಂತಾಯಿತು. ತಿರುಗಿ ನೋಡಿದರೆ ಬೇತಾಳ! 'ನನ್ನ ಹೊಸ ಪ್ರಶ್ನೆಗಳಿಗೆ ಉತ್ತರ ಹೇಳು, ಇಲ್ಲದಿದ್ದರೆ ನಿನ್ನ ತಲೆ ಸಹಸ್ರ ಹೋಳಾದೀತು' ಎಂದಿತು ಬೇತಾಳ.

'ನೀನೊಬ್ಬ... ನಂಗೆ ತಲೇನೆ ಇಲ್ಲಪ್ಪ, ಏನೀಗ? ಮನೇಲಿ ನಿನ್ ತರ ಪ್ರಶ್ನೆ ಕೇಳಾಕೆ ಒಬ್ರು ಕಾಯ್ತಿದಾರೆ, ನಾ ಯಾರಿಗಂತ ಉತ್ತರ ಕೊಡ್ಲಿ? ಸರಿ, ಅದೇನ್ ಕೇಳು...' ಎಂದ ಗುಡ್ಡೆ.

'ಏನಿಲ್ಲ, ಈ ಕರ್ನಾಟಕ ಮಾದರಿ ಅಂದ್ರೇನು?'

'ಅದಾ... ನಾ ಕೊಡಲ್ಲ, ನೀ ಬಿಡಲ್ಲ ಮಾದರಿ ಅಂತ...'

'ಅರ್ಥ ಆಯ್ತು, ಕೊಟ್ಟ ಕುದುರೆ ಏರದ ಎಚ್‌ಡಿಕೆ ವೀರನೂ ಅಲ್ಲ, ಶೂರನೂ ಅಲ್ಲ ಅಂತ ಡಿಕೆ ಅಂದ್ರಲ್ಲ, ಯಾಕೆ?'

'ನಂಗೆ ಕುದುರೆ ಕೊಟ್ಟು ನೋಡ್ಲಿ, ಹೆಂಗೆ ಸವಾರಿ ಮಾಡ್ತೀನಿ ಅಂತ ಅರ್ಥ... ಏನ್ಮಾಡೋದು, ಡಿಕೆಗೆ ಕುದುರೇನೆ ಸಿಗ್ತಿಲ್ಲ...'

'ಸರಿ, ಕೊಟ್ಟು ಹೋಗಬೇಕು, ಇಲ್ಲ ಬಿಟ್ಟು ಹೋಗಬೇಕು, ತಗಂಡು ಹೋಗಾಕಾಗಲ್ಲ ಅಂತ ಡಿಕೆ ಅಂದ್ರಲ್ಲ, ಏನದು?'

'ಸಿಎಂ ಕುರ್ಚಿ ಕಣಯ್ಯ, ಅಷ್ಟೂ ಗೊತ್ತಾಗಲ್ವಾ?'

'ಓ... ಈಗ ಅರ್ಥ ಆಯ್ತು, ಅದಿರ್ಲಿ, ಮೋದಿ ಸಾಹೇಬ್ರು ಇಲ್ಲಿ ಎಲ್ಲದರ ಬೆಲೆ ಏರಿಸಿ ಅಲ್ಲಿ ಇಟಲಿ ಪ್ರಧಾನಿಗೆ ಚಾಕೊಲೇಟ್ ಕೊಡೋದು ಸರೀನಾ?'

'ಪ್ರಶ್ನೆ ಸರಿ, ಉತ್ತರ ಅವರೇ ಕೊಡ್ಬೇಕು...'

'ನಿನ್ತಲೆ, ಈಗ ತಮಿಳುನಾಡು ಸಿಎಂ ಸಾಹೇಬ್ರು ಕಚೇರಿಗೆ ಲಂಚ್ ಬಾಕ್ಸ್ ತಗಂಡು ಹೋಗ್ತಾರಂತೆ, ನೀನು ಸಿಎಂ ಆಗಿದ್ರೆ ಏನ್ಮಾಡ್ತಿದ್ದೆ?'

'ಲಂಚ್ ಬಾಕ್ಸ್ ಬಿಟ್ಟು ಲಂಚದ ಬಾಕ್ಸ್ ತಗಂಡು ಹೋಗ್ತಿದ್ದೆ...'

'ಭ್ರಷ್ಟ ನೀನು... ಕೊನೇ ಪ್ರಶ್ನೆ, ಮನೇಲಿ ಹೆಂಡ್ತಿದೀರ ಕಾಟ ತಪ್ಪಿಸ್ಕಳಾಕೆ ಏನ್ ಮಾಡ್ಬೇಕು?'

'ದೇಶದಾದ್ಯಂತ ಬಸ್ ಫ್ರೀ ಮಾಡ್ಬೇಕು!'

ಗುಡ್ಡೆ ಉತ್ತರಕ್ಕೆ ನಗುತ್ತಾ ಬೇತಾಳ ಹಾರಿ ಹೋಗಿ ಹುಣಸೆಮರಕ್ಕೆ ನೇತು ಹಾಕಿಕೊಂಡಿತು.

ಸಂಗತ

'ಆನೆದಾರಿ'ಯಲ್ಲಿ ಮಾನವೀಯತೆ ನೇಪಥ್ಯಕ್ಕೆ

ದುಬಾರೆ ದುರಂತದ ಹಿನ್ನೆಲೆಯಲ್ಲಿ ಪ್ರವಾಸಿಗರ ಸುರಕ್ಷತೆಯ ಚರ್ಚೆಯಾಗುತ್ತಿದೆ. ಶಿಬಿರದಲ್ಲಿ ಬಂಧನದಲ್ಲಿರುವ ಆನೆಗಳ ಬಗ್ಗೆಯೂ ಚಿಂತನ–ಮಂಥನ ನಡೆಯಬೇಕು.

• ಕೆ.ಎಚ್. ಓಬಳೇಶ್

ಕೊಡಗಿನ ದುಬಾರೆ ಆನೆ ಶಿಬಿರದಲ್ಲಿನ ದುರಂತವು ಪ್ರವಾಸಿಗರ ಸುರಕ್ಷತೆ ಕುರಿತಂತೆ ಗಂಭೀರ ಚರ್ಚೆಯನ್ನು ಹುಟ್ಟುಹಾಕಿದೆ. ಆದರೆ, ಕಾಲಿಗೆ ಕಬ್ಬಿಣದ ದೊಡ್ಡ ಸರಪಳಿಯನ್ನು ಬಿಗಿಸಿಕೊಂಡು ಇಡೀ ಜೀವಿತಾವಧಿಯನ್ನು ಒಂದೇ ಸ್ಥಳದಲ್ಲಿ ಸವೆಸುವ ಸಾಕಾನೆಗಳ ದೂರು ದುಮ್ಮಾನಗಳ ಬಗ್ಗೆ ಚರ್ಚೆ ನಡೆಯುತ್ತಿಲ್ಲ.

ಸಾಮಾಜಿಕ ವ್ಯವಸ್ಥೆಯಲ್ಲಿ ಬದುಕುವ ಅವುಗಳನ್ನು ಕುಟುಂಬಗಳಿಂದ ಬೇರ್ಪಡಿಸಿ ಮನರಂಜನೆಯ ಸರಕುಗಳಾಗಿ ಬಳಸುವುದು ನೈತಿಕ ಅಪರಾಧವಲ್ಲವೆ? ಆನೆಗಳನ್ನು ಸೆರೆಹಿಡಿದು ಪಳಗಿಸಿ ನಮ್ಮ ಅಧೀನದಲ್ಲಿ ಇರಬೇಕೆಂದು ಬಯಸುವುದು ಮನುಷ್ಯನ ಅಹಂಕಾರ ಅಲ್ಲವೆ?

ಮಾನವನಂತೆಯೇ ಆನೆಯೂ ಸಾಮಾಜಿಕ ಜೀವಿ. ಅವುಗಳದು ಮಹಿಳಾಪ್ರಧಾನ ಕೌಟುಂಬಿಕ ವ್ಯವಸ್ಥೆ. ಹಿರಿಯ ಹೆಣ್ಣಾನೆಯೇ ಗುಂಪಿನ ಅಧಿನಾಯಕಿ. ಸೋದರಿ ಮತ್ತು ಮಕ್ಕಳೇ ಆಕೆಯ ಕುಟುಂಬ. ಚಿಕ್ಕಮ್ಮ ಆನೆಯದು ಮರಿಗಳ ಪಾಲನೆ ಕೆಲಸ; ಮರಿಗಳಿಗೆ ಕಾಡಿನ ಕಾಗುಣಿತ ಹೇಳಿಕೊಡುವುದು ಅದೇ. ಆ ಪಾಠವೇ ಅವುಗಳ ಭವಿಷ್ಯತ್ತಿಗೆ ಜೀವಾಳ. ಹಲವು ಸೋದರ ಸಂಬಂಧಿಗಳು ಸೇರಿ ಆನೆಯ ಒಂದು ಕುಲವಾಗುತ್ತದೆ. ಆ ಗುಂಪಿನಲ್ಲಿ 60ರಿಂದ 90 ಆನೆಗಳಿರುತ್ತವೆ. ವರ್ಷವೊಂದರಲ್ಲಿ ಆ ಗುಂಪು ಕಾಡಿನಲ್ಲಿ ಒಂದು ಸಾವಿರ ಚದರ ಕಿ.ಮೀ.ನಷ್ಟು ಚಲಿಸುತ್ತದೆ. ಆದರೆ, ಎಂದಿಗೂ ದಾರಿ ತಪ್ಪುವುದಿಲ್ಲ; ಅವು ಮುತ್ತಜ್ಜಿಯಿಂದ ಪಡೆದ ಜ್ಞಾನದ ಬಳುವಳಿ ಇದು.

ಬೇಸಿಗೆಯಲ್ಲಿ ಒಣಗಿ ನಿಂತ ಉದ್ದನೆಯ ಹುಲ್ಲು ಎಲ್ಲಿದೆ (ಎಲಿಫೆಂಟ್ ಗ್ರಾಸ್), ಯಾವ ಭಾಗದಲ್ಲಿ ಸೀಗೆಮುಳ್ಳು ಚಿಗುರೊಡೆದಿದೆ, ಉಪ್ಪಿನ ಅಂಶದ ಮಣ್ಣು ಯಾವ ಮೂಲೆಯಲ್ಲಿದೆ, ಕೆರೆಗಳು ಬತ್ತಿದಾಗ ಕಾಡಿನಲ್ಲಿ ಅಡಗಿರುವ ನೀರೆಲ್ಲಿದೆ; ಸಮೃದ್ಧವಾಗಿ ಬೆಳೆದುನಿಂತ ಬಿದಿರು ಮೆಳೆ ಎಲ್ಲಿದೆ? ಇದೆಲ್ಲ ಜ್ಞಾನ ಅಜ್ಜಿಯಿಂದ ತಾಯಿಗೆ, ತಾಯಿಯಿಂದ ಮರಿಗಳಿಗೆ ಹರಿಯುತ್ತಿರುತ್ತದೆ. ಗಂಡಾನೆಗಳಿಗೆ ಕುಟುಂಬದ ರೀತಿ ರಿವಾಜುಗಳೆಂದರೆ ಅಪಥ್ಯ. ಹತ್ತು ವರ್ಷಕ್ಕೆ ಕಾಲಿಡುವ ವೇಳೆಗೆ ಅವು ಕುಟುಂಬದ ಬಂಧವನ್ನು ಕಳಚಿಕೊಳ್ಳುತ್ತವೆ; ಗುಂಪಿನಿಂದ ದೂರ ಸರಿದು ತಮ್ಮದೇ ಹಾದಿ ಹಿಡಿಯುತ್ತವೆ.

ಕಾಡಾನೆಗಳ ದೈನಂದಿನ ದಿನಚರಿಗೆ ಹೋಲಿಸಿದರೆ ಅರಣ್ಯ ಇಲಾಖೆಯ ಶಿಬಿರಗಳು, ದೇಗುಲಗಳು ಮತ್ತು ಮಠಗಳ ಸುಪರ್ದಿಯಲ್ಲಿರುವ ಸಾಕಾನೆಗಳ ದಿನಚರಿ ತದ್ವಿರುದ್ಧವಾದುದು. ಕಾಡಾನೆಯೊಂದು ಅರಣ್ಯದಲ್ಲಿ ದಿನವೊಂದಕ್ಕೆ 20ರಿಂದ 40 ಚ.ಕಿ.ಮೀ. ಚಲಿಸಿದರೆ, ಸಾಕಾನೆಯು ಒಂದರಿಂದ ಎರಡು ಕಿ.ಮೀ. ಸಂಚರಿಸುವುದೇ ಹೆಚ್ಚು. ಅವುಗಳಿಗೆ ಕಾಡಿನ ಭಾಷೆ ಅಪರಿಚಿತ. ಮಾವುತನೇ ಅವುಗಳ ಒಡನಾಡಿ. ಪೇಟೆ ಮಂದಿಯ ಇತಿಮಿತಿಗಳು ಎಂದಿಗೂ ಅವುಗಳಿಗೆ ಅರ್ಥವಾಗದು.



ಶಿಬಿರಗಳಲ್ಲಿರುವ ಆನೆಗಳಿಗೆ ಸ್ನಾನ ಮಾಡಿಸಿ, ಕಾಡಿನೊಳಗೆ ಮೇಯಲು ಬಿಡುವುದು ವಾಡಿಕೆ. ಆದರೆ, ಈ ಪದ್ಧತಿಯು ಅವುಗಳ ಏಕಾಂಗಿತನಕ್ಕೆ ಪರಿಹಾರವಾಗದು. ಮತ್ತೊಂದೆಡೆ ದೇಗುಲಗಳಲ್ಲಿರುವ ಆನೆಗಳ ಏಕಾಂಗಿ ಬಾಳು–ನೋವು ಯಾರಿಗೂ ತಿಳಿಯದು. ಅವುಗಳದ್ದು ಒಂದರ್ಥದಲ್ಲಿ ಗ್ರೀಕ್‌ನ ದುರಂತ ನಾಟಕಗಳ ಸ್ಥಿತಿ; ಮಾವುತ ಹೇಳಿದರೆ ಭಕ್ತರಿಗೆ ನಮಸ್ಕರಿಸುವುದು, ದೇವಾಲಯವನ್ನು ಸುತ್ತು ಹಾಕುವುದು, ಗಂಟೆ ಬಾರಿಸುವುದು, ಕಾಣಿಕೆ ಕೊಡುವ ಭಕ್ತರ ಕೊರಳಿಗೆ ಹೂವಿನ ಹಾರ ಹಾಕುವುದು, ಅವರು ನೀಡಿದ ಹಣ್ಣುಹಂಪಲು ಮೆಲ್ಲುತ್ತಾ, ಮಾವುತನ ಆದೇಶಗಳನ್ನು ಪಾಲಿಸುವುದಷ್ಟೆ ಅವುಗಳ ಕಾಯಕ. ಸ್ವಚ್ಛಂದದ ಬದುಕೆಂಬುದು ಅವುಗಳ ಪಾಲಿಗೆ ಮರೀಚಿಕೆ.

ಆನೆಗಳು ಶಿಬಿರದಲ್ಲಿರಲಿ ಅಥವಾ ದೇವಸ್ಥಾನದಲ್ಲಿರಲಿ ಅವು ವನ್ಯಜೀವಿಗಳೇ. ಏಕಾಂಗಿಯಾಗಿದ್ದಾಗ ಅಥವಾ ಗುಂಪಿನಲ್ಲಿದ್ದಾಗಲೂ ಅವುಗಳ ಸ್ವಭಾವಸಿದ್ಧ ಗುಣ ಬದಲಾಗದು. ಅವುಗಳ ಮನಸ್ಸು ಒಂದೇ ತೆರನಾಗಿ ಇರುವುದಿಲ್ಲ; ಸ್ವಭಾವ, ವರ್ತನೆಯನ್ನು ಅಂದಾಜು ಮಾಡುವುದು ಕಷ್ಟ.

ಸೆರೆ ಹಿಡಿದ ಆನೆಗಳು, ಪ್ರವಾಸೋದ್ಯಮ ಚಟುವಟಿಕೆ ಮತ್ತು ಧಾರ್ಮಿಕ ಸಭೆ– ಸಮಾರಂಭಗಳಲ್ಲಿ ಬಳಸುವ ಸಾಕಾನೆಗಳು ಹೆಚ್ಚು ಮಾನಸಿಕ ಒತ್ತಡಕ್ಕೆ ಸಿಲುಕುತ್ತವೆ ಎಂದು ಹೈದರಾಬಾದ್‌ನ ಸಿಎಸ್‌ಐಆರ್ – ಜೀವಕೋಶ ಮತ್ತು ಆಣ್ವಿಕ ಜೀವವಿಜ್ಞಾನ ಕೇಂದ್ರದ (ಸಿಸಿಎಂಬಿ) ವಿಜ್ಞಾನಿಗಳು ನಡೆಸಿದ ಅಧ್ಯಯನ ಹೇಳಿದೆ. ಧಾರ್ಮಿಕ ಮೆರವಣಿಗೆಯ ಸಂದರ್ಭದಲ್ಲಿ ವಾದ್ಯಮೇಳ, ಜನರ ಗದ್ದಲಕ್ಕೆ ಅವು ಬೆದರುತ್ತವೆ. ಈ ಸಂದರ್ಭದಲ್ಲಿ ದೇಹದಲ್ಲಿ ಉತ್ಪತ್ತಿಯಾಗುವ ಹಾರ್ಮೋನ್‌ಗಳ ವ್ಯತ್ಯಾಸ ಅವುಗಳ ನಡವಳಿಕೆಯ ಮೇಲೆ ಪರಿಣಾಮ ಬೀರುತ್ತದೆ. ಅವುಗಳ ದಿಢೀರ್ ವರ್ತನೆಯು ಸಾರ್ವಜನಿಕ ಆಸ್ತಿ, ಜೀವಹಾನಿಗೆ ಕಾರಣ ಆಗುತ್ತದೆ.

ಕಾಡಿನಲ್ಲಿರುವ ಆನೆಗಳಿಗೆ ಹೋಲಿಸಿದರೆ ಸಾಕಾನೆಗಳು ಜೀವಿತಾವಧಿ ಮತ್ತು ಫಲವತ್ತತೆಯ ಸಮಸ್ಯೆ ಎದುರಿಸುತ್ತವೆ. ಇದರಿಂದ ದೇಹದಲ್ಲಾಗುವ ಬದಲಾವಣೆಯು ಅವುಗಳ ಪುಂಡಾಟಕ್ಕೂ ಕಾರಣವಾಗುತ್ತದೆ ಎಂದು ವನ್ಯಜೀವಿ ವಿಜ್ಞಾನಿಗಳು ಹೇಳುತ್ತಾರೆ.

ಆನೆಗಳ ಕಿವಿಗಳು ಅತ್ಯಂತ ಸೂಕ್ಷ್ಮ. ಭಕ್ತರು ದೇಗುಲಗಳಲ್ಲಿ ಬಾರಿಸುವ ಗಂಟೆನಾದ ಅವುಗಳಿಗೆ ಕಿರಿಕಿರಿ ಉಂಟುಮಾಡುತ್ತದೆ. ಆನೆ ಶಿಬಿರಗಳಲ್ಲಿ ಜನರು ಕೇಕೆ ಹಾಕುತ್ತಾರೆ; ಚಪ್ಪಾಳೆ ತಟ್ಟುತ್ತಾರೆ. ಜನರ ಈ ವರ್ತನೆಯಿಂದ ಅವು ಕೆರಳುವ ಸಾಧ್ಯತೆ ಇರುತ್ತದೆ. ಜೀವವಿಕಾಸದ ಕುಲುಮೆಯಲ್ಲಿ ಅರಳಿ ಲಕ್ಷಾಂತರ ವರ್ಷ ಬಾಳಿದ ಆನೆಗಳನ್ನು ಜನರ ಹುಚ್ಚಾಟವು ಸಂಕಷ್ಟಕ್ಕೆ ಸಿಲುಕಿಸಿರುವುದು ಸ್ಪಷ್ಟ. ದುಬಾರೆಯ ದುರಂತ ಪ್ರವಾಸಿಗರ ಸುರಕ್ಷತೆಯ ಬಗ್ಗೆ ವ್ಯವಸ್ಥೆಯನ್ನು ಜಾಗೃತಿಗೊಳಿಸಿದರಷ್ಟೇ ಸಾಲದು; ಆನೆಗಳ ಮೇಲಿನ ಮನುಷ್ಯನ ಆಧಿಪತ್ಯದ ಚಟುವಟಿಕೆಗಳು ಈಗಲೂ ಅಗತ್ಯವೇ ಎನ್ನುವ ಅವಲೋಕನಕ್ಕೂ ಕಾರಣವಾಗಬೇಕು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಕಾಕ್ರೋಚ್ ಜನತಾ ಪಾರ್ಟಿ ಡಿಜಿಟಲ್ ಸಂಚಲನ

ಕಾಕ್ರೋಚ್ ಜನತಾ ಪಾರ್ಟಿ(ಸಿಜೆಪಿ) ಎನ್ನುವ ಹೆಸರು ಎಕ್ಸ್, ಫೇಸ್‌ಬುಕ್, ಇನ್‌ಸ್ಟಾಗ್ರಾಂ ಸೇರಿದಂತೆ ವಿವಿಧ ಸಾಮಾಜಿಕ ಜಾಲತಾಣಗಳಲ್ಲಿ ಸಂಚಲನ ಸೃಷ್ಟಿಸುತ್ತಿದೆ. ಖ್ಯಾತನಾಮ ರಾಜಕಾರಣಿಗಳು, ಸಿನಿಮಾ ನಟರು, ಸಾಮಾಜಿಕ ಕಾರ್ಯಕರ್ತರು ಅದಕ್ಕೆ ಬೆಂಬಲ ವ್ಯಕ್ತಪಡಿಸಿದ್ದಾರೆ. ಪರ–ವಿರೋಧದ ಚರ್ಚೆ ತಾರಕ ಮುಟ್ಟಿದೆ. ಜೆನ್ ಝೀಗಳ ಬೆಂಬಲ ಪಡೆದಿರುವ ಆನ್‌ಲೈನ್ ಆಂದೋಲನವು ನೋಂದಾಯಿತ ರಾಜಕೀಯ ಪಕ್ಷವಾಗಿ ಚುನಾವಣಾ ರಾಜಕೀಯಕ್ಕೆ ಇಳಿಯುವುದೇ ಅಥವಾ ಆರಂಭವಾದಂತೆ ದಿಢೀರ್ ಆಗಿಯೇ ಅಂತ್ಯವಾಗುವುದೇ ಎನ್ನುವ ಬಗ್ಗೆ ಚರ್ಚೆಗಳು ನಡೆಯುತ್ತಿವೆ. ಭಾರತದಲ್ಲಿ ಸಿಜೆಪಿಯ 'ಎಕ್ಸ್' ಖಾತೆಯನ್ನು ಗುರುವಾರ ತಡೆ ಹಿಡಿಯಲಾಗಿದೆ. ಈ ಕ್ರಮದ ಬಗ್ಗೆಯೂ ಪರ –ವಿರೋಧ ಚರ್ಚೆ ನಡೆಯುತ್ತಿದೆ

• ಬಿ.ವಿ.ಶ್ರೀನಾಥ್, ಸೂರ್ಯನಾರಾಯಣ ವಿ.

ಹೆಸರಿನಲ್ಲಿ ಪಕ್ಷ ಎಂದು ಇದ್ದರೂ, ಕಾಕ್ರೋಚ್ ಜನತಾ ಪಾರ್ಟಿ (ಜಿರಲೆ ಜನತಾ ಪಕ್ಷ– ಸಿಜೆಪಿ) ಒಂದು ನೋಂದಾಯಿತ ರಾಜಕೀಯ ಪಕ್ಷವಲ್ಲ. ವರ್ಷಗಳ ಕಾಲದಿಂದ ನಿರ್ದಿಷ್ಟ ತತ್ವ ಸಿದ್ಧಾಂತ ಆಧರಿಸಿ ನಡೆದುಬಂದ ಚಳವಳಿಯೂ ಅಲ್ಲ. ದಿಢೀರ್ ಹುಟ್ಟುಪಡೆದು, ಶರವೇಗದಲ್ಲಿ ವ್ಯಾಪಿಸುತ್ತಿರುವ ಒಂದು ಆನ್‌ಲೈನ್ ಆಂದೋಲನ. ಇದರ ಹುಟ್ಟಿಗೆ ಆಧಾರವಾದದ್ದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರ ಹೇಳಿಕೆ. 'ಕೆಲವು ಯುವಕರು ಜಿರಲೆಗಳಿದ್ದಂತೆ. ಅವರಿಗೆ ಯಾವುದೇ ಉದ್ಯೋಗ ಸಿಗುವುದಿಲ್ಲ. ಅಂಥವರು ತಾವೇ ಮಾಧ್ಯಮ, ಸಾಮಾಜಿಕ ಮಾಧ್ಯಮ, ಮಾಹಿತಿ ಹಕ್ಕು ಕಾಯ್ದೆ (ಆರ್‌ಟಿಐ) ಅಥವಾ ಇತರೆ ಕಾರ್ಯಕರ್ತರಾಗಿ ಸಮಾಜದ ಎಲ್ಲರ ಮೇಲೆ ದಾಳಿ ಮಾಡಲು ಆರಂಭಿಸುತ್ತಾರೆ' ಎಂದಿದ್ದರು. ಪದಾಂಕಿತ ಹಿರಿಯ ವಕೀಲ ಸ್ಥಾನಕ್ಕಾಗಿ ವಕೀಲರೊಬ್ಬರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ ಸಿಜೆಐ ಹೀಗೆ ಹೇಳಿದ್ದರು ಎಂದು ವರದಿಯಾಗಿತ್ತು. ಅದರ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆ ಹುಟ್ಟಿಕೊಂಡಿತ್ತು. ತಾವು ಹಾಗೆ ಹೇಳಿದ್ದು ಯುವಜನರ ಬಗ್ಗೆ ಅಲ್ಲ, ತಮ್ಮ ಮಾತನ್ನು ತಪ್ಪಾಗಿ ವ್ಯಾಖ್ಯಾನಿಸಲಾಗಿದೆ ಎಂದು ಸಿಜೆಐ ಸೂರ್ಯಕಾಂತ್ ಸ್ಪಷ್ಟೀಕರಣ ನೀಡಿದ್ದರು.

ಈ ಹಿನ್ನೆಲೆಯಲ್ಲಿ ಹುಟ್ಟಿದ್ದೇ ಸಿಜೆಪಿ. ಇದೊಂದು ವಿಡಂಬನಾ ರಾಜಕೀಯ ಪಕ್ಷ. 'ಯುವಕರಿಂದ ಯುವಕರಿಗಾಗಿ ಯುವಕರೇ ಆರಂಭಿಸಿದ ಜಾತ್ಯತೀತ, ಸಮಾಜವಾದಿ, ಪ್ರಜಾತಾಂತ್ರಿಕ ರಾಜಕೀಯ ವೇದಿಕೆ' ಎಂದು ಸ್ವಯಂಘೋಷಣೆ ಮಾಡಿಕೊಂಡಿದೆ. ಸಾಮಾಜಿಕ ಜಾಲತಾಣಗಳಲ್ಲಿ ಸಿಜೆಪಿ ಬಗ್ಗೆ ಮೀಮ್‌ಗಳು, ಪೋಸ್ಟ್‌ಗಳನ್ನು ವ್ಯಾಪಕವಾಗಿ ಹಂಚಿಕೊಳ್ಳಲಾಗುತ್ತಿದೆ. ರಾಜಕೀಯ ಮತ್ತು ಇತರ ರಂಗಗಳ ಕೆಲವು ಪ್ರಮುಖರು ಪಕ್ಷಕ್ಕೆ ಬೆಂಬಲ ಸೂಚಿಸಿದ್ದು, ಗಂಭೀರ ಚರ್ಚೆಗಳು ನಡೆಯುತ್ತಿವೆ. ಪಕ್ಷದ ವತಿಯಿಂದ ಮುಂಬರುವ ಬಿಹಾರದ ಉಪಚುನಾವಣೆಯಲ್ಲಿ ಅಭ್ಯರ್ಥಿಗಳನ್ನು ಹಾಕುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ. ಆದರೆ, ಈ ಬಗ್ಗೆ ಅಧಿಕೃತ ಮಾಹಿತಿ ಹೊರಬಿದ್ದಿಲ್ಲ. ಕೆಲವರು ಇದು ದೇಶದ ರಾಜಕೀಯ ರಂಗದ ಭರವಸೆ, ನೆರೆಯ ರಾಷ್ಟ್ರಗಳಲ್ಲಿ ಆದಂತೆ ಇಲ್ಲೂ ಜೆನ್ ಝೀ ರಾಜಕಾರಣ ಬದಲಾವಣೆ ತರಬಲ್ಲದು ಎಂದರೆ, ಮತ್ತೆ ಕೆಲವರು ಇದು ಎರಡು ದಿನದ ಉನ್ಮಾದ ಅಷ್ಟೇ ಎನ್ನುತ್ತಿದ್ದಾರೆ.

1.71 ಕೋಟಿ ಫಾಲೋವರ್ಸ್: ಸಿಜೆಪಿ, ಸದ್ಯ ಅಮೆರಿಕದಲ್ಲಿರುವ ಪುಣೆಯ ಅಭಿಜೀತ್ ದೀಪ್ಕೆ ಎನ್ನುವ ಯುವಕ ಮೇ 16ರಂದು ಆರಂಭಿಸಿದ ವೇದಿಕೆ. ಯಾವ ಮುಂದಾಲೋಚನೆ, ವಿಶೇಷ ತಯಾರಿ ಇಲ್ಲದೇ ಆನ್‌ಲೈನ್‌ನಲ್ಲಿ ಪಕ್ಷ ಆರಂಭಿಸಿದ್ದಾಗಿ ದೀಪ್ಕೆ ಹೇಳಿದ್ದಾರೆ. ಆದರೆ, ಅದಕ್ಕೆ ಸಿಗುತ್ತಿರುವ ಸ್ಪಂದನೆ ನೋಡಿ ಸ್ವತಃ ಬೆರಗಾಗಿದ್ದಾರೆ. ಕೇವಲ ನಾಲ್ಕೇ ದಿನಕ್ಕೆ ಇನ್‌ಸ್ಟಾಗ್ರಾಂನಲ್ಲಿ ಅದರ ಫಾಲೋವರ್ಸ್ ಸಂಖ್ಯೆ 1.71 ಕೋಟಿ (ಮೇ 21ಕ್ಕೆ) ದಾಟಿದೆ. ಜಗತ್ತಿನ ಅತಿ ದೊಡ್ಡ ಪಕ್ಷ ಎಂದು ಪ್ರತಿಪಾದಿಸುವ ಬಿಜೆಪಿಯನ್ನು (89 ಲಕ್ಷ ಫಾಲೋವರ್‌ಗಳು) ಹಿಂದಿಕ್ಕಿರುವ ಬಗ್ಗೆ ದೀಪ್ಕೆ ಅವರು ಕಮಲವನ್ನು ತಿನ್ನುತ್ತಿರುವ ಜಿರಲೆಯ ಚಿತ್ರ ಹಾಕಿ ವ್ಯಂಗ್ಯ ಮಾಡಿದ್ದರು.

ಗುರುವಾರ ಮಧ್ಯಾಹ್ನದ ಹೊತ್ತಿಗೆ ಭಾರತದಲ್ಲಿ ಪಾರ್ಟಿಯ 'ಎಕ್ಸ್' ಖಾತೆಯನ್ನು @ಸಿಜೆಪಿ2029 ತಡೆ ಹಿಡಿಯಲಾಗಿದೆ. ಕಾನೂನು ಪ್ರಕಾರವಾಗಿ ಲಿಖಿತ ಕೋರಿಕೆಯ ಮೇರೆಗೆ ಖಾತೆ ತಡೆ ಹಿಡಿಯಲಾಗಿದೆ ಎಂದು 'ಎಕ್ಸ್' ಹೇಳಿದೆ. ತಡೆ ಹಿಡಿಯುವುದಕ್ಕೂ ಮುನ್ನ ಅದರ ಫಾಲೋವರ್‌ಗಳ ಸಂಖ್ಯೆ 2 ಲಕ್ಷದಷ್ಟಿತ್ತು. ಈಗ ಮತ್ತೊಂದು 'ಎಕ್ಸ್' ಖಾತೆಯನ್ನು ತೆರೆಯಲಾಗಿದೆ.

'ದೇಶದ ಬಹುತೇಕ ಯುವಕರು ನಿರುದ್ಯೋಗಿಗಳಾಗಿದ್ದಾರೆ ಮತ್ತು ಅವರನ್ನು ಮುಖ್ಯವಾಹಿನಿಯ ರಾಜಕೀಯದಿಂದ ದೂರ ಇಡಲಾಗಿದ್ದು, ಅಂಥ ಯುವಜನರ ರಾಜಕೀಯ ವೇದಿಕೆ ಇದು' ಎಂದು ದೀಪ್ಕೆ ಹೇಳಿದ್ದಾರೆ. ಸಾಂಪ್ರದಾಯಿಕ ರಾಜಕೀಯ ಪಕ್ಷಗಳಂತೆ ಆಗುವುದರಲ್ಲಿ ಮತ್ತು ಪಕ್ಷ ರಾಜಕಾರಣಿಗಳನ್ನು ಸೇರಿಸಿಕೊಳ್ಳುವುದರಲ್ಲಿ ತನಗೆ ಆಸಕ್ತಿ ಇಲ್ಲ ಎಂದೂ ಅವರು ಹೇಳಿದ್ದಾರೆ.

ಬಿಜೆಪಿಯೇ ಗುರಿ: ವ್ಯವಸ್ಥೆ ಮತ್ತು ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ– ಎರಡನ್ನೂ ವಿಡಂಬಿಸುವಂತೆ ಆನ್‌ಲೈನ್ ವೇದಿಕೆ ಹೆಸರನ್ನು ರೂಪಿಸಲಾಗಿದೆ. ಪಕ್ಷದ ವೆಬ್‌ಸೈಟ್‌ನಲ್ಲಿ ಐದು ಅಂಶಗಳ ಪ್ರಣಾಳಿಕೆಯನ್ನು ನೀಡಲಾಗಿದ್ದು, ಸದಸ್ಯತ್ವ ನೋಂದಣಿಗೆ ಅವಕಾಶವನ್ನೂ ನೀಡಲಾಗಿದೆ. ಯುವಜನರ ಬಗ್ಗೆ ಸೋಮಾರಿಗಳು, ಸದಾ ಆನ್‌ಲೈನ್‌ನಲ್ಲಿ ಇರುವವರು, ನಿರುದ್ಯೋಗಿಗಳು ಎನ್ನುವ ಟೀಕೆಗಳು ಕೇಳಿಬರುವುದು ಸಹಜ. ಅವೇ ತಮ್ಮ ಪಕ್ಷದ ಸದಸ್ಯತ್ವ ಪಡೆಯಲು ಬೇಕಾಗಿರುವ ಅರ್ಹತೆ ಎಂದು ಸಿಜೆಪಿ ಹೇಳಿದೆ. ಪಕ್ಷದ ಸದಸ್ಯತ್ವ ಪಡೆಯಲು ನಾಯಕರೊಂದಿಗೆ ಸೆಲ್ಫೀ ತೆಗೆದುಕೊಳ್ಳುವುದು, ಮಿಸ್ ಕಾಲ್ ಕೊಡುವುದು ಅಗತ್ಯವಿಲ್ಲ ಎಂದೂ ರಾಜಕೀಯ ಪಕ್ಷಗಳ ಸದಸ್ಯತ್ವ ಅಭಿಯಾನವನ್ನು ವ್ಯಂಗ್ಯ ಮಾಡಲಾಗಿದೆ.

ಇದರ ಜತೆಗೆ ಪಕ್ಷ ಅಧಿಕಾರಕ್ಕೆ ಬಂದರೆ ಏನು ಮಾಡುತ್ತದೆ ಎನ್ನುವುದನ್ನು ಸ್ಪಷ್ಟವಾಗಿ ಘೋಷಿಸಲಾಗಿದೆ. ಕೇಂದ್ರ ಸರ್ಕಾರದ ಆಡಳಿತವೇ ಗುರಿ ಎನ್ನುವಂತೆ ಮಹಿಳಾ ಮೀಸಲಾತಿ, ಅಂಬಾನಿ, ಅದಾನಿ ಒಡೆತನದ ಮಾಧ್ಯಮ ಸಂಸ್ಥೆಗಳನ್ನು ಪ್ರಣಾಳಿಕೆಯಲ್ಲಿ ಸೇರಿಸಲಾಗಿದೆ. 'ನಾವು ಪಿಎಂ ಕೇರ್ಸ್‌ಗಾಗಿ ಹಣ ಸಂಗ್ರಹಿಸುವುದಿಲ್ಲ' ಎಂದು ವಿಡಂಬಿಸಲಾಗಿದೆ. ರಾಜಕಾರಣಿಗಳ ಭ್ರಷ್ಟಾಚಾರ, ವಿದೇಶ ಪ್ರವಾಸಗಳನ್ನೂ ಪ್ರಸ್ತಾಪಿಸಲಾಗಿದೆ.

ಆಧಾರ: ಪಿಟಿಐ, ಬಿಬಿಸಿ, ರಾಯಿಟರ್ಸ್, ಜಾಲತಾಣಗಳ ಪೋಸ್ಟ್‌ಗಳು



ವೆಬ್‌ಸೈಟ್‌ನಲ್ಲಿ ಏನಿದೆ?

ಆಂದೋಲನದ ಭಾಗವಾಗಿ cockroachjantaparty.org ಎಂಬ ವೆಬ್‌ಸೈಟ್ ಒಂದನ್ನು ನಿರ್ವಹಿಸಲಾಗುತ್ತಿದೆ. ಪಾರ್ಟಿಯಲ್ಲಿ ಹೆಸರು ನೋಂದಾಯಿಸಲು ವೆಬ್‌ಸೈಟ್‌ನಲ್ಲಿ ಅರ್ಜಿ ನಮೂನೆ ಕೂಡ ಇದೆ. ಇಲ್ಲಿಯವರೆಗೆ 3.5 ಲಕ್ಷದಷ್ಟು ಮಂದಿ ಸೇರ್ಪಡೆಗೊಂಡಿದ್ದಾರೆ ಎಂದು ಹೇಳಲಾಗಿದೆ.

ಆಂದೋಲನದ ಧ್ಯೇಯ, ಪಕ್ಷದ ಪ್ರಣಾಳಿಕೆ (ಬೇಡಿಕೆ), ಸದಸ್ಯರಾಗಲು ಇರಬೇಕಾದ ಅರ್ಹತೆ ಮತ್ತು ಸಂಪರ್ಕದ ವಿವರಗಳನ್ನು ವೆಬ್‌ಸೈಟ್ ಒಳಗೊಂಡಿದೆ.

ಉದ್ದೇಶ: ಸೋಮಾರಿ, ಸದಾ ಆನ್‌ಲೈನ್‌ನಲ್ಲಿರುವವವರು ಮತ್ತು ಇತ್ತೀಚೆಗೆ ಜಿರಲೆಗಳು ಎಂದು ಕರೆಸಿಕೊಳ್ಳುವ ಯುವ ಜನರಿಗಾಗಿ ಪಕ್ಷವನ್ನು ಕಟ್ಟುವುದು ನಮ್ಮ ಉದ್ದೇಶ. ಉಳಿದಿದ್ದೆಲ್ಲವೂ ವಿಡಂಬನೆ ಎಂದು ಹೇಳಲಾಗಿದೆ.

ಆಂದೋಲನದ ಧ್ಯೇಯ

'ನಾವು ಮತ್ತೊಂದು ಪಿಎಂ ಕೇರ್ಸ್ ನಿಧಿ ಸ್ಥಾಪಿಸಲು, ತೆರಿಗೆದಾರರ ಸಂಬಳದಲ್ಲಿ ದಾವೋಸ್‌ನಲ್ಲಿ ರಜೆಯನ್ನು ಕಳೆಯಲು ಅಥವಾ ಭ್ರಷ್ಟಾಚಾರವನ್ನು 'ದೂರದೃಷ್ಟಿ ಉದ್ದೇಶದ ವೆಚ್ಚಗಳು' ಎಂದು ಮರುಬ್ರ್ಯಾಂಡ್ ಮಾಡುವುದಕ್ಕಾಗಿ ಬಂದಿಲ್ಲ. 'ಹಣ ಎಲ್ಲಿಗೆ ಹೋಯಿತು' ಎಂದು ಜೋರಾಗಿ, ಮತ್ತೆ ಮತ್ತೆ ಹಾಗೂ ಲಿಖಿತವಾಗಿ ಕೇಳುವುದಕ್ಕೆ ನಾವಿಲ್ಲಿದ್ದೇವೆ' ಎಂದು ಧ್ಯೇಯ ಹೇಳುತ್ತದೆ.

ಪ್ರಣಾಳಿಕೆ– ಬೇಡಿಕೆ

1. ಸಿಜೆಪಿ ಅಧಿಕಾರಕ್ಕೆ ಬಂದರೆ ಯಾವುದೇ ಮುಖ್ಯ ನ್ಯಾಯಮೂರ್ತಿ ಅವರಿಗೆ ನಿವೃತ್ತಿಯ ಕೊಡುಗೆಯಾಗಿ ರಾಜ್ಯಸಭಾ ಸ್ಥಾನವನ್ನು ನೀಡಲಾಗುವುದಿಲ್ಲ
2. ನಾಗರಿಕರ ಮತದಾನದ ಹಕ್ಕನ್ನು ಕಸಿದುಕೊಳ್ಳುವುದು ಭಯೋತ್ಪಾದನೆಗೆ ಸಮ. ಹಾಗಾಗಿ, ಸಿಜೆಪಿ ಅಥವಾ ವಿರೋಧ ಪಕ್ಷಗಳು ಆಡಳಿತದಲ್ಲಿರುವ ರಾಜ್ಯಗಳಲ್ಲಿ ಕಾನೂನುಬದ್ಧ ಮತವನ್ನು ತೆಗೆದುಹಾಕಿದರೆ, ಮುಖ್ಯ ಚುನಾವಣಾ ಆಯುಕ್ತರನ್ನು ಯುಎಪಿಎ ಅಡಿಯಲ್ಲಿ ಬಂಧಿಸಬೇಕು
3. ಸಂಸತ್ತಿನ ಸದಸ್ಯ ಬಲವನ್ನು ಹೆಚ್ಚಿಸದೇ ಮಹಿಳೆಯರಿಗೆ ಶೇ 33ರಷ್ಟು ಅಲ್ಲ, ಶೇ 50ರಷ್ಟು ಮೀಸಲು ಸಿಗಬೇಕು. ಹೆಚ್ಚುವರಿಯಾಗಿ ಎಲ್ಲ ಸಂಪುಟ ಸ್ಥಾನಮಾನಗಳಲ್ಲಿ ಮಹಿಳೆಯರಿಗೆ ಶೇ 50ರಷ್ಟು ಮೀಸಲಾತಿ ನೀಡಬೇಕು
4. ನಿಜವಾದ ಸ್ವತಂತ್ರ ಮಾಧ್ಯಮಕ್ಕೆ ಅವಕಾಶ ಕಲ್ಪಿಸುವುದಕ್ಕಾಗಿ ಅಂಬಾನಿ ಮತ್ತು ಅದಾನಿ ಮಾಲೀಕತ್ವದ ಎಲ್ಲ ಮಾಧ್ಯಮಗಳ ಪರವಾನಗಿಯನ್ನು ರದ್ದುಪಡಿಸಬೇಕು. ಗೋದಿ ಮಾಧ್ಯಮಗಳ ನಿರೂಪಕರ ಬ್ಯಾಂಕ್ ಖಾತೆಗಳ ಬಗ್ಗೆ ತನಿಖೆ ನಡೆಸಬೇಕು
5. ಪಕ್ಷಾಂತರ ಮಾಡುವ ಯಾವುದೇ ಶಾಸಕ ಅಥವಾ ಸಂಸದ 20 ವರ್ಷಗಳವರೆಗೆ ಚುನಾವಣೆಯಲ್ಲಿ ಸ್ಪರ್ಧಿಸುವುದು ಮತ್ತು ಯಾವುದೇ ಅಧಿಕಾರದ ಹುದ್ದೆ ಹೊಂದುವುದಕ್ಕೆ ನಿರ್ಬಂಧ ವಿಧಿಸಬೇಕು

ಪಕ್ಷಕ್ಕೆ ಸೇರಲು ಬೇಕಾದ ಅರ್ಹತೆ

1. ನಿರುದ್ಯೋಗಿಯಾಗಿರಬೇಕು (ಅದು ಬಲವಂತವಾಗಿ, ಸ್ವ–ಇಚ್ಛೆಯಿಂದ ಅಥವಾ ಅರ್ಹತೆ ಇದ್ದು ಉದ್ಯೋಗ ಸಿಗದಿದ್ದರೂ ಸರಿ, ನಾವು ಅದನ್ನು ಕೇಳುವುದಿಲ್ಲ)
2. ಸೋಮಾರಿಯಾಗಿರಬೇಕು (ಅದು ದೈಹಿಕವಾಗಿ ಮಾತ್ರ. ಮಿದುಳು ಕೆಲಸ ಮಾಡುತ್ತಿರುವುದನ್ನು ಮುಂದುವರಿಸಬಹುದು)
3. ಸದಾಕಾಲ ಆನ್‌ಲೈನ್‌ನಲ್ಲಿರಬೇಕು (ಸ್ನಾನ ಮತ್ತು ಶೌಚಾಲಯ ಬಳಕೆಯ ಸಂದರ್ಭದಲ್ಲಿನ ವಿರಾಮ ಸೇರಿದಂತೆ ದಿನಕ್ಕೆ ಕನಿಷ್ಠ 11 ಗಂಟೆ ಮೊಬೈಲ್ ಬಳಸಬೇಕು)
4. ವೃತ್ತಿಪರವಾಗಿ ಮಾತನಾಡುವ/ಬರೆಯುವ ಸಾಮರ್ಥ್ಯವಿರಬೇಕು (ವಿಷಯವು ತೀಕ್ಷ್ಣವಾಗಿದ್ದು, ಪ್ರಾಮಾಣಿಕ ಮತ್ತು ಗಮನಸೆಳೆಯುವ ಅಂಶಗಳಿಂದ ಕೂಡಿರಬೇಕು)

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಜೆನ್ ಝೀ ಆಂದೋಲನ

ಸಿಜೆಪಿಯ ಆಶಯ, ಪ್ರಣಾಳಿಕೆ ಇತ್ಯಾದಿ ನೋಡಿದರೆ, ಅದರ ಹುಟ್ಟು ಮತ್ತು ದಿಢೀರ್ ಜನಪ್ರಿಯತೆಯ ಹಿಂದೆ 'ಜೆನ್ ಝೀ'ಗಳ ಮನೋಧರ್ಮ ಎದ್ದುಕಾಣುತ್ತಿದೆ. ಅತಿಯಾಗಿ ಆಲೋಚನೆ ಮಾಡದೇ ತಕ್ಷಣವೇ ಸಾಮಾಜಿಕ ಜಾಲತಾಣಗಳ ಮೂಲಕ ಪ್ರತಿಕ್ರಿಯಿಸುವುದು ಜೆನ್ ಝೀಗಳ ಪ್ರಮುಖ ಗುಣವಾಗಿದೆ. ಇದನ್ನು ಜೆನ್ ಝೀಗಳ ರಾಜಕಾರಣ ಎಂದೇ ದೀಪ್ಕೆ ಹೇಳಿದ್ದಾರೆ. ವಿಶೇಷವೆಂದರೆ, ಈ ಆಂದೋಲನ ದೀರ್ಘ ಕಾಲ ಉಳಿಯದೆಯೂ ಇರಬಹುದು ಎನ್ನುವ ಅರಿವು ದೀಪ್ಕೆ ಅವರಿಗೆ ಇದೆ. 'ಕೆಲವೇ ದಿನಗಳಲ್ಲಿ ಇದು ಅಂತ್ಯವಾಗಬಹುದು. ಇದನ್ನು ಸ್ವತಂತ್ರ ಸಂಸ್ಥೆಯಾಗಿ ಬೆಳೆಸುವುದು ನನ್ನ ಆಸೆ. ಕನಿಷ್ಠ, ಯುವಜನರಿಗಾಗಿ ಒಂದು ಅವಕಾಶ, ಒಂದು ವೇದಿಕೆ ಸೃಷ್ಟಿಸುವ ಕೆಲಸವಾದರೂ ಆದೀತು' ಎನ್ನುವುದು ಅವರ ಭರವಸೆ.

ಯಾರಿದು ಅಭಿಜೀತ್ ದೀಪ್ಕೆ?



ಕಾಕ್ರೋಚ್ ಜನತಾ ಪಾರ್ಟಿ ಆಂದೋಲನದ ಸಂಸ್ಥಾಪಕ ಅಭಿಜೀತ್ ದೀಪ್ಕೆ. 30 ವರ್ಷದ ಈ ಯುವಕ ಸದ್ಯ ಅಮೆರಿಕದ ವಾಸಿ. ಅಲ್ಲಿನ ಬಾಸ್ಟನ್ ವಿಶ್ವವಿದ್ಯಾಲಯದಲ್ಲಿ ಸಾರ್ವಜನಿಕ ಸಂಪರ್ಕ ವಿಷಯದಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿದ್ದಾರೆ. ಅಭಿಜೀತ್ ಮೂಲತಃ ಮಹಾರಾಷ್ಟ್ರದ ಪುಣೆಯವರು. ಪತ್ರಿಕೋದ್ಯಮದಲ್ಲಿ ಪದವಿ ಪಡೆದಿದ್ದಾರೆ. ರಾಜಕೀಯ ಸಂವಹನ ಕ್ಷೇತ್ರದಲ್ಲಿ ಪರಿಣತಿ ಸಾಧಿಸಿದ್ದಾರೆ. ಅಮೆರಿಕಕ್ಕೆ ವ್ಯಾಸಂಗಕ್ಕೆ ತೆರಳುವ ಮೊದಲು ಅವರು ಆಮ್ ಆದ್ಮಿ ಪಾರ್ಟಿ ಜೊತೆ ಗುರುತಿಸಿಕೊಂಡಿದ್ದರು. 2020–23ರ ನಡುವೆ ಎಎಪಿಯ ಸಾಮಾಜಿಕ ಮಾಧ್ಯಮ ನಿರ್ವಹಣಾ ತಂಡದಲ್ಲಿ ಸ್ವಯಂ ಸೇವಕರಾಗಿ ದುಡಿದಿದ್ದರು. 2020ರಲ್ಲಿ ಎಎಪಿ ದೆಹಲಿ ಚುನಾವಣೆಯಲ್ಲಿ ಗೆದ್ದಿತ್ತು. ಮೀಮ್ ಆಧಾರಿತ ಡಿಜಿಟಲ್ ಪ್ರಚಾರದ ತಂಡದಲ್ಲಿ ಅಭಿಜೀತ್ ಕೆಲಸ ಮಾಡಿದ್ದರು.

ಅವರ ಸಿಜೆಪಿ ಸಾಮಾಜಿಕ ಜಾಲತಾಣಗಳಲ್ಲಿ ಸದ್ದು ಮಾಡುತ್ತಿರುವಂತೆಯೇ, ಅವರ ಪರ ಹಾಗೂ ವಿರೋಧವಾಗಿ ಹಲವರು ಪೋಸ್ಟ್‌ಗಳನ್ನು ಹಾಕುತ್ತಿದ್ದಾರೆ. 'ಅಭಿಜೀತ್ ಅವರು ಎಎಪಿಯ ಸದಸ್ಯರಾಗಿದ್ದು, ಆ ಪಕ್ಷದ ಜನಪ್ರಿಯತೆ ಕುಸಿಯುತ್ತಿರುವ ಹೊತ್ತಿನಲ್ಲಿ ಅದರ ಮುಖಂಡರು ಸಿಜೆಪಿ ಮೂಲಕ ಮತ್ತೊಂದು ರಾಜಕೀಯ ಪಕ್ಷ ಕಟ್ಟಲು ಯತ್ನಿಸುತ್ತಿದ್ದಾರೆ' ಎಂದು ಸಿಜೆಪಿಯನ್ನು ವಿರೋಧಿಸುವವರು ಹೇಳುತ್ತಿದ್ದಾರೆ. ಅಭಿಜೀತ್ ಅವರು ಮನೀಷ್ ಸಿಸೋಡಿಯಾ ಅವರೊಂದಿಗೆ ಇದ್ದ ಫೋಟೊವನ್ನು 2024ರ ಆಗಸ್ಟ್ 24ರಂದು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದರು. ಈಗ ಅವರನ್ನು ವಿರೋಧಿಸುತ್ತಿರುವವರನ್ನು ಅದನ್ನು ಹಂಚಿಕೊಳ್ಳುತ್ತಿದ್ದಾರೆ. ಆ ಪೋಸ್ಟ್‌ನಲ್ಲಿ ಸಿಸೋಡಿಯಾ ಅವರಿಗೆ ಧನ್ಯವಾದಗಳನ್ನು ಹೇಳಿದ್ದ ಅಭಿಜೀತ್, 'ನಿಮ್ಮ ಮಾರ್ಗದರ್ಶನದ ಅಡಿಯಲ್ಲಿ ಬಾಸ್ಟನ್‌ಗೆ ತೆರಳುತ್ತಿದ್ದೇನೆ. ಯಾವತ್ತಿಗೂ ಯಾವುದೇ ದೂರವು ಎಎಪಿಗೆ ಇರುವ ನನ್ನ ಬದ್ಧತೆಯನ್ನು ದುರ್ಬಲಗೊಳಿಸದು' ಎಂದಿದ್ದರು.

ಸೆಲೆಬ್ರಿಟಿಗಳು, ರಾಜಕಾರಣಿಗಳ ಬೆಂಬಲ

ಹಲವು ಸೆಲೆಬ್ರಿಟಿಗಳು, ರಾಜಕೀಯ ಮುಖಂಡರು, ಸಾಮಾಜಿಕ ಜಾಲತಾಣಗಳ ಇನ್‌ಫ್ಲುಯೆನ್ಸರ್‌ಗಳು ಸಿಜೆಪಿಯನ್ನು ಬೆಂಬಲಿಸಿದ್ದಾರೆ. ನಟ ಪ್ರಕಾಶ್ ರಾಜ್, ನಿರ್ದೇಶಕ ಅನುರಾಗ್ ಕಶ್ಯಪ್, ಹಾಸ್ಯ ಕಲಾವಿದ ಕುನಾಲ್ ಕಾಮ್ರಾ, ನಟಿ ಉರ್ಫಿ ಜಾವೇದ್ ಸೇರಿದಂತೆ ಸಿನಿಮಾ ಕ್ಷೇತ್ರದಲ್ಲಿ ತೊಡಗಿರುವ ಹಲವರು ಬೆಂಬಲಿಸಿದ್ದಾರೆ. ಟಿಎಂಸಿ ಮುಖಂಡರಾದ ಮಹುವಾ ಮೊಯಿತ್ರಾ, ಕೀರ್ತಿ ಆಜಾದ್, ಹಿರಿಯ ವಕೀಲ ಪ್ರಶಾಂತ್ ಭೂಷಣ್, ಯೂಟ್ಯೂಬರ್ ಧ್ರುವ ರಾಠಿ ಸೇರಿ ಹಲವರು ಆಂದೋಲನಕ್ಕೆ ಬೆಂಬಲ ಘೋಷಿಸಿದ್ದಾರೆ.

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು **'Deccan Herald- Prajavani Relief Trust'**ಗೆ ಕಳುಹಿಸಬಹುದು.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ದಾನ ನೀಡಿದ ಹಣಕ್ಕೆ 2025ನೇ ಸಾಲಿನ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 133ರ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ. ಚೆಕ್, ನಗದು ಮತ್ತು ಡಿ.ಡಿ ಸ್ವೀಕರಿಸುವುದಿಲ್ಲ.

https://bit.ly/3xFpoz4

ಪುಸ್ತಕಗಳನ್ನು ಖರೀದಿಸಿದೆ



ವಿಜ್ಞಾನ ವಿಭಾಗದಲ್ಲಿ ಪ್ರವೇಶ ಪಡೆದಿರುವೆ. ಅಧ್ಯಯನಕ್ಕೆ ಬೇಕಾದ ಪುಸ್ತಕಗಳನ್ನು ತೆಗೆದುಕೊಳ್ಳಲು 'ಪ್ರಜಾವಾಣಿ' ನೀಡಿದ ವಿದ್ಯಾರ್ಥಿ ವೇತನದಿಂದ ನೆರವಾಯಿತು. ನೇಕಾರಿಕೆ ಮಾಡುವ ಕುಟುಂಬದ ಮಕ್ಕಳ ಓದಿನ ಕನಸನ್ನು ನನಸಾಗಿಸಿದೆ. ಈ ನೆರವಿನಿಂದ ನನಗೆ ತುಂಬಾ ಸಂತೋಷವಾಗಿದೆ. ಆತ್ಮವಿಶ್ವಾಸ ಮೂಡಿದೆ.

ಅಮೃತಾ ಕರಿಜಾಡರ, ಬನಹಟ್ಟಿ, ಬಾಗಲಕೋಟೆ ಜಿಲ್ಲೆ

ಹಣ ಸದ್ಬಳಕೆ ಮಾಡುವೆ



ದ್ವಿತೀಯ ಪಿಯುಸಿ ಓದುತ್ತಿರುವ ನನ್ನ ಬಳಿ ಮೊಬೈಲ್ ಫೋನ್ ಇಲ್ಲ. ಮುಂದಿನ ವರ್ಷ ಜೆಇಇ, ಸಿಇಟಿ, ನೀಟ್‌ಗೆ ತಯಾರಿ ನಡೆಸಲು ಮೊಬೈಲ್ ಫೋನ್ ಅಗತ್ಯ. ಈ ಸ್ಕಾಲರ್‌ಶಿಪ್ ಹಣಕ್ಕೆ ಇನ್ನಷ್ಟು ಹಣ ಹೊಂದಿಸಿ ಹೊಸ ಮೊಬೈಲ್ ಫೋನ್ ಖರೀದಿಸೋಣ ಎಂದು ಪೋಷಕರು ಹೇಳಿದ್ದಾರೆ. ಅದಕ್ಕೆ ಹಣವನ್ನು ಜೋಪಾನವಾಗಿ ಇಟ್ಟಿರುವೆ. ಸದ್ಬಳಕೆ ಮಾಡುವೆ.

ಹೇಮಂತ್ ಎಚ್., ಕೊಟ್ಟೂರು, ವಿಜಯನಗರ ಜಿಲ್ಲೆ

ಮದರಸಾ: ವಂದೇ ಮಾತರಂ ಹಾಡುವುದು ಕಡ್ಡಾಯ



ಕೋಲ್ಕತ್ತ(ಪಿಟಿಐ): ರಾಜ್ಯದ ಎಲ್ಲ ಮದರಸಾಗಳಲ್ಲಿ ಬೆಳಿಗ್ಗೆಯ ಪ್ರಾರ್ಥನೆ ವೇಳೆ 'ವಂದೇ ಮಾತರಂ' ಹಾಡುವುದನ್ನು ಕಡ್ಡಾಯಗೊಳಿಸಿ ಪಶ್ಚಿಮ ಬಂಗಾಳ ಸರ್ಕಾರ ಆದೇಶಿಸಿದೆ.

ರಾಜ್ಯದ ಎಲ್ಲ ಶಾಲೆಗಳಲ್ಲಿ ಬೆಳಗಿನ ಪ್ರಾರ್ಥನೆ ವೇಳೆ 'ವಂದೇ ಮಾತರಂ' ಹಾಡುವುದನ್ನು ಕಡ್ಡಾಯಗೊಳಿಸಿ ವಾರದ ಹಿಂದೆಯಷ್ಟೆ ರಾಜ್ಯ ಸರ್ಕಾರ ಆದೇಶಿಸಿತ್ತು. ಈಗ, ಈ ಸಂಬಂಧ ಮದರಸಾ ಶಿಕ್ಷಣ ನಿರ್ದೇಶನಾಲಯ ಕೂಡ ಆದೇಶಿಸಿದೆ.

'ಸರ್ಕಾರದ ಮಾದರಿ ಮದರಸಾಗಳು, ಅನುದಾನಿತ ಮದರಸಾಗಳು, ಮಾಧ್ಯಮಿಕ ಶಿಕ್ಷಣ ಕೇಂದ್ರಗಳು ಹಾಗೂ ಅಲ್ಪಸಂಖ್ಯಾತರ ವ್ಯವಹಾರಗಳು ಹಾಗೂ ಮದರಸಾ ಶಿಕ್ಷಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಮಾನ್ಯತೆ ಪಡೆದ ಅನುದಾನ ರಹಿತ ಮದರಸಾಗಳಿಗೆ ತಕ್ಷಣದಿಂದಲೇ ಈ ನಿರ್ದೇಶನ ಅನ್ವಯಿಸುತ್ತದೆ' ಎಂದು ಆದೇಶದಲ್ಲಿ ತಿಳಿಸಲಾಗಿದೆ.

'ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಿ ಬೆಳಗಿನ ಹೊತ್ತು ನಡೆಯುವ ಪ್ರಾರ್ಥನೆ ವೇಳೆ ಏಕರೂಪತೆ ಇರಬೇಕು ಎಂಬ ಉದ್ದೇಶದಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ' ಎಂದು ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸರ್ವಾಧಿಕಾರಿ ಧೋರಣೆ: ವಿಪಕ್ಷಗಳ ಕಿಡಿ

ಮದರಸಾಗಳಲ್ಲಿ 'ವಂದೇ ಮಾತರಂ' ಹಾಡುವುದನ್ನು ಕಡ್ಡಾಯಗೊಳಿಸಿ ಆದೇಶಿಸಿರುವ ರಾಜ್ಯ ಸರ್ಕಾರದ ಕ್ರಮವನ್ನು ವಿರೋಧ ಪಕ್ಷಗಳು ಗುರುವಾರ ಟೀಕಿಸಿವೆ.


'ಸರ್ಕಾರದ ಈ ನಿರ್ಧಾರ ಸರ್ವಾಧಿಕಾರಿ ಧೋರಣೆಯಾಗಿದ್ದು, ದೇಶದ ಬಹುತ್ವ ಸಂಸ್ಕೃತಿಯನ್ನು ದುರ್ಬಲಗೊಳಿಸುವ ಪ್ರಯತ್ನವಾಗಿದೆ' ಎಂದು ವಾಗ್ದಾಳಿ ನಡೆಸಿವೆ.

'ರಾಜ್ಯದ ಶಿಕ್ಷಣ ಕ್ಷೇತ್ರ ಅಧೋಗತಿಗೆ ಇಳಿದಿದೆ. ಇಂತಹ ಆದೇಶದ ಮೂಲಕ ಜನರ ಗಮನವನ್ನು ಬೇರೆಡೆ ಸೆಳೆಯಲು ಸರ್ಕಾರ ಯತ್ನಿಸುತ್ತಿದೆ' ಎಂದು ಸಿಪಿಎಂನ ಹಿರಿಯ ನಾಯಕ ಸುಜನ್ ಚಕ್ರವರ್ತಿ ಆರೋಪಿಸಿದ್ದಾರೆ.

'ಮದರಸಾ ಶಿಕ್ಷಣ ನಿರ್ದೇಶನಾಲಯ ಹೊರಡಿಸಿರುವ ಆದೇಶ ಸರಿ ಇಲ್ಲ' ಎಂದು ಕಾಂಗ್ರೆಸ್‌ನ ಹಿರಿಯ ನಾಯಕ ಪ್ರದೀಪ್ ಭಟ್ಟಾಚಾರ್ಯ ಹೇಳಿದ್ದಾರೆ.

ನಿಮ್ಮ ಪ್ರಗತಿಯನ್ನು ತಡೆಯುತ್ತಿರುವವರು ಯಾರು?

ನುಡಿ ಬೆಳಗು



ರೇಣುಕಾ ನಿಡಗುಂದಿ

ಒಂದು ದಿನ ಉದ್ಯೋಗಿಗಳು ಕಚೇರಿಗೆ ಬಂದಾಗ ಗೇಟಿನ ಬಳಿ ದೊಡ್ಡದೊಂದು ನೋಟಿಸ್ ಅಂಟಿಸಿರುವುದನ್ನು ಕಂಡರು: 'ಈ ಕಂಪನಿಯಲ್ಲಿ ನಿಮ್ಮ ಪ್ರಗತಿಯನ್ನು ತಡೆಯುತ್ತಿದ್ದ ವ್ಯಕ್ತಿ ನಿನ್ನೆ ನಿಧನರಾಗಿದ್ದಾರೆ. ಅವರಿಗೆ ಅಂತಿಮ ನಮನ ಸಲ್ಲಿಸಲು ನಾವು ನಿಮಗೆ ಅವಕಾಶ ನೀಡುತ್ತಿದ್ದೇವೆ, ದಯವಿಟ್ಟು ಒಬ್ಬೊಬ್ಬರಾಗಿ ಮೀಟಿಂಗ್ ಹಾಲ್‌ಗೆ ಹೋಗಿ ಅವರನ್ನು ನೋಡಿ ಬರಬಹುದು'.

ನೋಟಿಸ್ ಓದಿದ ಎಲ್ಲರಿಗೂ ಮೊದಲು ಸ್ವಲ್ಪ ದುಃಖವಾಯಿತು, ಆದರೆ ನಂತರ ಕುತೂಹಲ ಮೂಡಿತು. ತಮ್ಮ ಬೆಳವಣಿಗೆಯನ್ನು ತಡೆಯುತ್ತಿದ್ದ ಆ ವ್ಯಕ್ತಿ ಯಾರು ಎಂಬ ಪ್ರಶ್ನೆಯೊಂದಿಗೆ ಎಲ್ಲರೂ ಹಾಲ್‌ನತ್ತ ಹೆಜ್ಜೆ ಹಾಕಿದರು. ನೋಡನೋಡುತ್ತಿದ್ದಂತೆ ಹಾಲ್‌ನ ಹೊರಗೆ ದೊಡ್ಡ ಜನಸಮೂಹವೇ ನೆರೆಯಿತು. ಕಾವಲುಗಾರರು ಎಲ್ಲರನ್ನು ನಿಯಂತ್ರಿಸಿ ಒಬ್ಬೊಬ್ಬರನ್ನೇ ಒಳಗೆ ಬಿಡುತ್ತಿದ್ದರು.

ಒಳಗೆ ಹೋಗಿ ಬರುತ್ತಿದ್ದ ಪ್ರತಿಯೊಬ್ಬ ವ್ಯಕ್ತಿಯೂ ಬಹಳ ಗಂಭೀರವಾಗಿ ಹೊರಬರುತ್ತಿದ್ದರು, ಯಾವುದೋ ಹತ್ತಿರದ ಸಂಬಂಧಿ ತೀರಿಕೊಂಡಾಗ ಆಗುವಂತಹ ಭಾವನೆ ಅವರ ಮುಖದಲ್ಲಿತ್ತು. ಈ ಬಾರಿ ಒಳಗೆ ಹೋಗುವ ಸರದಿ ಒಬ್ಬ ಹಳೆಯ ಉದ್ಯೋಗಿಯದ್ದಾಗಿತ್ತು. ಆತನಿಗೆ ಎಲ್ಲದರ ಬಗ್ಗೆಯೂ ದೂರುಗಳೇ—ಕಂಪನಿ ಬಗ್ಗೆ, ಸಹೋದ್ಯೋಗಿಗಳ ಬಗ್ಗೆ, ಸಂಬಳದ ಬಗ್ಗೆ, ಹೀಗೆ ಪ್ರತಿಯೊಂದರಲ್ಲೂ ಆತ ತಪ್ಪು ಹುಡುಕುತ್ತಿದ್ದ.

ಆದರೆ ಇಂದು ಆತ ಸ್ವಲ್ಪ ಖುಷಿಯಾಗಿದ್ದಂತೆ ಕಾಣುತ್ತಿದ್ದ. 'ಯಾರಿಂದಾಗಿ ನನ್ನ ಜೀವನದಲ್ಲಿ ಇಷ್ಟೊಂದು ಸಮಸ್ಯೆಗಳಿದ್ದವೋ, ಆತ ಕೊನೆಗೂ ಹೋದನಲ್ಲ' ಎಂದುಕೊಳ್ಳುತ್ತಾ ತನ್ನ ಸರದಿ ಬಂದಾಗ ವೇಗವಾಗಿ ಶವಪೆಟ್ಟಿಗೆಯ ಹತ್ತಿರ ಹೋಗಿ ಕುತೂಹಲದಿಂದ ಇಣುಕಿ ನೋಡಿದ. ಆದರೆ ಅಲ್ಲಿ ಕಂಡದ್ದೇನು? ಶವಪೆಟ್ಟಿಗೆಯ ಒಳಗೆ ಒಂದು ದೊಡ್ಡ ಕನ್ನಡಿ ಇರಿಸಲಾಗಿತ್ತು.

ಇದನ್ನು ಕಂಡು ಆತನಿಗೆ ಸಿಟ್ಟು ಬಂತು ಮತ್ತು ಜೋರಾಗಿ ಕಿರುಚಲು ಹೋದ. ಅಷ್ಟರಲ್ಲಿ ಆ ಕನ್ನಡಿಯ ಪಕ್ಕದಲ್ಲಿದ್ದ ಒಂದು ಸಂದೇಶ ಆತನ ಕಣ್ಣಿಗೆ ಬಿತ್ತು:

'ಈ ಜಗತ್ತಿನಲ್ಲಿ ನಿಮ್ಮ ಪ್ರಗತಿಯನ್ನು ತಡೆಯಬಲ್ಲ ಏಕೈಕ ವ್ಯಕ್ತಿ ಎಂದರೆ ಅದು ನೀವು ಮಾತ್ರ. ನಿಮ್ಮ ಜೀವನದಲ್ಲಿ ಕ್ರಾಂತಿ ತರಬಲ್ಲ ಏಕೈಕ ವ್ಯಕ್ತಿಯೂ ನೀವೇ'.

ನಿಮ್ಮ ಬಾಸ್ ಬದಲಾದಾಗ, ಗೆಳೆಯರು ಬದಲಾದಾಗ ಅಥವಾ ನಿಮ್ಮ ಕಂಪನಿ ಬದಲಾದಾಗ ನಿಮ್ಮ ಜೀವನ ಬದಲಾಗುವುದಿಲ್ಲ. ನಿಮ್ಮ ಜೀವನ ಬದಲಾಗುವುದು ನೀವು ಬದಲಾದಾಗ ಮಾತ್ರ. ಯಾವಾಗ ನಿಮ್ಮ ಜೀವನಕ್ಕೆ ನೀವೇ ಜವಾಬ್ದಾರರು ಎಂಬ ಸತ್ಯವನ್ನು ಅರಿತುಕೊಳ್ಳುತ್ತೀರೋ, ಆಗ ಬದಲಾವಣೆ ಆರಂಭವಾಗುತ್ತದೆ.

ನೀವು ಬೆಳೆಸಿಕೊಳ್ಳಬಹುದಾದ ಅತ್ಯುತ್ತಮ ಸಂಬಂಧವೆಂದರೆ ಅದು ನಿಮ್ಮೊಂದಿಗೆ ನೀವು ಬೆಳೆಸಿಕೊಳ್ಳುವ ಸಂಬಂಧ. ಈ ಕ್ಷಣವೇ ಆ ಹಳೆಯ 'ನಾನು' ಎಂಬ ಅಹಂಕಾರವನ್ನು ಹೂತುಹಾಕಿ ಮತ್ತು ಒಬ್ಬ ಹೊಸ 'ನಾನು' ಎಂಬ ವ್ಯಕ್ತಿತ್ವವನ್ನು ಸೃಷ್ಟಿಸಿಕೊಳ್ಳಿ. ನಮ್ಮ ಸೋಲು-ಗೆಲುವಿಗೆ ನಾವೇ ಜವಾಬ್ದಾರರು.

ಜಗತ್ತು ಒಂದು ಕನ್ನಡಿಯಿದ್ದಂತೆ: ಅದು ಮನುಷ್ಯನ ಪ್ರಬಲ ವಿಚಾರಗಳ ಪ್ರತಿಬಿಂಬವನ್ನು ಮಾತ್ರ ನೀಡುತ್ತದೆ. ಶವಪೆಟ್ಟಿಗೆಯಲ್ಲಿದ್ದ ಕನ್ನಡಿ ವಾಸ್ತವವಾಗಿ ನಮಗೆ ಹೇಳುತ್ತಿರುವುದು ಏನೆಂದರೆ— ಹೊರಗಿನ ಪರಿಸ್ಥಿತಿಯನ್ನು ದೂಷಿಸುವ ಬದಲು ನಮ್ಮ ಆಲೋಚನೆ ಮತ್ತು ದೃಷ್ಟಿಕೋನವನ್ನು ಬದಲಿಸಿಕೊಂಡರೆ ಜಗತ್ತೇ ಬದಲಾಗುತ್ತದೆ.

ನಿಮ್ಮ ದೋಷವನ್ನು ನೀವು ಅರಿತುಕೊಂಡರೆ ಜಗತ್ತೂ ನಿಮ್ಮನ್ನು ಗೌರವಿಸುತ್ತದೆ, ಪ್ರೀತಿಸುತ್ತದೆ. ❖

ಗುಂಡಣ್ಣ



ಪದಬಂಧ 6410

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಬೂಟಾಟಿಕೆ ಗುಣದವನು ಆಷಾಢದಲ್ಲಿ ಬಂದಿಹನಲ್ಲಾ? (5)
3.ಉಪಕಾರವನ್ನು ಮರೆಯುವವನು (3)
5.ಯುದ್ಧವನ್ನು ಸಾರುವ ಕಹಳೆ (5)
7.ದರ ಮೊದಲಿದ್ದಾಗ ಇದು ಅಗತ್ಯವಾಗುತ್ತದೆ (3)
9.ಪೋಲಕ ತೊಟ್ಟರುವವಳ ಕೆನ್ನೆ (3)
11.ಹೂವನ್ನು ಹೀಗೂ ಹೇಳುತ್ತಾರೆ (3)
13.ಬ್ರಹ್ಮೋಪದೇಶವನ್ನು ಹೀಗೆನ್ನಿ (5)
15.ನಂಜಿನಿಂದ ಕೂಡಿದ ಸಂಗತಿ (3)
16.ಅಲ್ಪನಾದ ಮನುಷ್ಯನಿವನು (5)

ಮೇಲಿಂದ ಕೆಳಕ್ಕೆ

1.ಭಾರತೀಯ ವೈದ್ಯಶಾಸ್ತ್ರ (4)
2.ಸಮುದ್ರದೊಳಗೆ ಚಾಚಿಕೊಂಡಿರುವ ಭೂಭಾಗ (3)
4.ತುಂಟ ಸ್ವಭಾವದ ಹುಡುಗಿ (3)
6.ಕೊಳೆ ಇಲ್ಲದೆ (3)
8.ಸರಕನ್ನು ಒಂದು ಪ್ರದೇಶದಿಂದ ಹೊರಕ್ಕೆ ಸಾಗಿಸುವುದು (2)
9. ಕದ ಜಡಿದು ನಡೆಸಿದ ಯುದ್ಧ (3)
10.ಆರಾಧಿಸುವಲ್ಲೇ ಜಾನುವಾರು ಕಾಣಿಸಿತಲ್ಲಾ! (2)
12.ಚಕ್ರವರ್ತಿಯು ಮಜದಲ್ಲಿದ್ದಾನೆ (4)
13.ಬಲವಾದ ಧ್ವನಿಯಿದು (3)
14.ನಲಿಯುತ್ತಿರುವ ರಾಷ್ಟ್ರ ಪಕ್ಷಿ (3)

1			2		■	3	4	
	■	■		■	■	■		■
	■	■	5		6			■
7	8		■	■		■	■	■
■		■	9			■	10	■
■	■	■		■	■	11		12
■	13				14	■	■	
■		■	■	■		■	■	
15			■	16				

6409ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ಪರಿಶ್ರಮ 3.ಪರಿಪಾಟ
5.ನೀರವ 6.ಅಪಜಯ
8.ಶಸ್ತ್ರಾಗಾರ 10.ಆಗಮಿಕ
12.ದಸಕತ್ತು 13.ಲಶುನ
16.ಅನುಭಾವ 17.ಹಿಯ್ಯಾಳಿಕೆ

ಮೇಲಿಂದ ಕೆಳಕ್ಕೆ:

1.ಪದ 2.ಮಹನೀಯ
3.ಪರವಶ 4.ಟಕ್ಕು
7.ಪಲ್ಲಂಗ 9.ಗಾಯಕ
11.ಕಲರವ 12.ದನಗಾಹಿ
14.ಕ್ಯಲ 15.ಅಂಕೆ

ಸುಡೊಕು 6793

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	7	6		4				9
5			6		9		4	2
	9			7		3		
7	8			2			5	3
			4	9	5			7
6		5		8			2	
		7	2				9	5
	5				7			
9				5	8	2		4

6792 ಸುಡೊಕು

2	3	9	8	5	7	1	6	4
8	6	4	1	3	2	7	5	9
5	1	7	4	9	6	2	8	3
7	9	8	2	4	5	6	3	1
4	5	1	6	8	3	9	2	7
3	2	6	9	7	1	5	4	8
6	7	2	3	1	4	8	9	5
9	4	5	7	6	8	3	1	2
1	8	3	5	2	9	4	7	6

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

22 ಮೇ 2026 ಶುಕ್ರವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಅಧಿಕ ಜ್ಯೇಷ್ಠ ಶುಕ್ಲ ಷಷ್ಠಿ ಗಂ. 06-25 ನಂತರ ಸಪ್ತಮಿ ಗಂ. 29-05 ನಕ್ಷತ್ರ : ಆಶ್ಲೇಷ ಗಂ. 26-09 ಯೋಗ : ವೃದ್ಧಿ ಗಂ. 08-19 ಕರಣ : ತೈತಿಲ ಗಂ. 06-25, ವೃಷಭ ಮಾಸದ 07 ನೇ ದಿನ. ಮಳೆ ನಕ್ಷತ್ರ : ಕೃತ್ತಿಕ 4 ನೇ ಪಾದ. ರಾಹುಕಾಲ : ಬೆಳಿಗ್ಗೆ 10-30 - 12-00, ಸೂರ್ಯೋದಯ : 06-07 ಸೂರ್ಯಾಸ್ತ : 06-47, ಮುಸ್ಲಿಂ ದಿನಾಂಕ : 05 ದುಲ್ ಹಿಜ್ಜಾ, ಅದೃಷ್ಟ ಸಂಖ್ಯೆ : 6, 9

ಮೇಷ: ಹೆಚ್ಚಿನ ಯಶಸ್ಸು ಪಡೆಯಲು ಶೀಘ್ರ ನಿರ್ಧಾರ ತೆಗೆದುಕೊಳ್ಳಬೇಕಾಗುವುದು. ವೈವಾಹಿಕ ಜೀವನದ ದಾರಿ ಪ್ರಾರಂಭವಾಗಲಿದೆ. ಅಧಿಕಾರಕ್ಕಾಗಿ ಹೋರಾಟ ನಡೆಸುವಿರಿ.

ವೃಷಭ: ಆರ್ಥಿಕ ಸಮಸ್ಯೆಗೆ ಶಾಶ್ವತ ಪರಿಹಾರವಾಗಿ ಸಾಲ ತೀರಿಸುವ ಬಗ್ಗೆ ಪ್ರಯತ್ನಿಸಿ. ವಾಸಸ್ಥಾನ ಬದಲಾವಣೆಯಿಂದ ನೆಮ್ಮದಿ ಸಿಗಲಿದೆ. ಮಾನಸಿಕ ವೇದನೆಯಿಂದ ಆರೋಗ್ಯದಲ್ಲಿ ವ್ಯತ್ಯಾಸವಾಗುವುದು.

ಮಿಥುನ: ಮುಂದಿನ ಯೋಜನೆಗಳಿಗೆ ಬೇಕಾಗುವ ಹಣಕಾಸಿನ ಹೊಂದಾಣಿಕೆ ಮಾಡಿಕೊಳ್ಳಿ. ಮಕ್ಕಳ ಯಶಸ್ಸಿನಿಂದ ಖುಷಿಯಾಗಲಿದೆ. ದ್ರವ್ಯಲಾಭ ಲಕ್ಷಣಗಳಿವೆ.

ಕರ್ಕಾಟಕ: ಅಂದುಕೊಂಡ ಯೋಜನೆ ಸಂಪೂರ್ಣಗೊಳ್ಳಲಿದೆ. ಕಲಾವಿದರಿಗೆ ಅದರಲ್ಲೂ ಪ್ರಮುಖವಾಗಿ ನಾಟ್ಯಕಲೆಯವರಿಗೆ ಹೆಸರಾಂತ ಅವಕಾಶಗಳು ದೊರೆಯಲಿವೆ.

ಸಿಂಹ: ಕಾರ್ಯಕ್ಷೇತ್ರದಲ್ಲಿ ವಿಳಂಬಗಳು ತೋರಿ ಬಂದರೂ ಯೋಜಿತ ಕೆಲಸಗಳು ಫಲ ನೀಡಲಿವೆ. ಟ್ರಾವೆಲ್ಸ್ ಉದ್ಯೋಗಿಗಳಿಗೆ ಲಾಭದಾಯಕ ಬೆಳವಣಿಗೆ ಇರುವುದು. ಸ್ವಸಾಮರ್ಥ್ಯದಿಂದ ಉತ್ತಮ ಹುದ್ದೆ ಪಡೆದುಕೊಳ್ಳುವಿರಿ.

ಕನ್ಯಾ: ವ್ಯವಸ್ಥಿತ ಹಾಗೂ ತಂತ್ರಗಾರಿಕೆ ಹೊಂದಿರುವ ಯೋಜನೆಗಳಿಂದ ಆರ್ಥಿಕ ಲಾಭ ಉಂಟಾಗಲಿದೆ. ವಿದ್ಯಾರ್ಥಿಗಳಿಗೆ ಪಠ್ಯಕ್ಕಿಂತ ಪಠ್ಯೇತರ ವಿಚಾರದಲ್ಲಿ ಆಸಕ್ತಿ ಮೂಡಲಿದೆ. ಯಾರಲ್ಲಿಯೂ ಗಲಾಟೆಯನ್ನು ಮಾಡಿಕೊಳ್ಳಬೇಡಿ.

ತುಲಾ: ಉದ್ಯೋಗ ಬದಲಾವಣೆ ಮಾಡುವ ವಿಚಾರ ಮೇಲಧಿಕಾರಿಗಳ ಗಮನಕ್ಕೆ ತರುವುದು ಒಳ್ಳೆಯದು. ತಂದೆಯಿಂದ ವೃತ್ತಿಗೆ ಸಹಾಯ ದೊರಕುತ್ತದೆ. ರಾಜಕೀಯ ರಂಗ ಪ್ರವೇಶ ಸಾಧ್ಯತೆ.

ವೃಶ್ಚಿಕ: ಲೆಕ್ಕಪತ್ರಗಳ ನಿರ್ವಹಣೆಯಲ್ಲಿ, ಪೋಷಣೆಯಲ್ಲಿ ದುಡುಕಬೇಡಿ. ವೃತ್ತಿ ನಿಪುಣತೆಯಿಂದ ಉನ್ನತಾಧಿಕಾರಿ ಹುದ್ದೆಗೆ ನೇಮಕಗೊಳ್ಳುವಿರಿ. ಮನಸ್ಸಿಗೆ ನೆಮ್ಮದಿ ಉಂಟಾಗುತ್ತದೆ.


ಧನು: ಸಾಮರ್ಥ್ಯಕ್ಕೆ, ಪ್ರತಿಭೆಗೆ ಅನುಗುಣವಾದ ಉದ್ಯೋಗ ಅವಕಾಶ ದೊರೆತು ಸಂತಸವಾಗಲಿದೆ. ವೃತ್ತಿ ಪ್ರಾಮಾಣಿಕತೆಗೆ ನಿರೀಕ್ಷೆ ಮೀರಿದ ಗೌರವ ಲಭ್ಯ. ಜಾಹೀರಾತು ಏಜೆನ್ಸಿಯವರಿಗೆ ಅಧಿಕ ಆದಾಯ.

ಮಕರ: ಕೌಟುಂಬಿಕ ಸಮಸ್ಯೆಗಳು ಬಗೆಹರಿದು ಮನೆಯವರಿಗೆಲ್ಲ ನೆಮ್ಮದಿ ಉಂಟಾಗುವುದು. ಕೇಟರಿಂಗ್ ಮತ್ತು ಹೋಟೆಲ್ ಉದ್ಯಮದವರಿಗೆ ಶುಭ ದಿನ. ಕಷ್ಟಗಳಿಂದ ಮುಕ್ತರಾಗಲು ವಿಷ್ಣುಸಹಸ್ರನಾಮ ಸ್ತೋತ್ರ ಪಠಿಸಿರಿ.

ಕುಂಭ: ವ್ಯವಹಾರಕ್ಕೆ ಸಂಬಂಧಿಸಿದಂತೆ ಮನೆಯಲ್ಲಿ ಹಿರಿಯರ ಮತ್ತು ಮಡದಿಯಲ್ಲಿದ್ದ ನಕಾರಾತ್ಮಕ ಪ್ರತಿಕ್ರಿಯೆ ಬದಲಾಗಿ ನಿರ್ಣಯಗಳಿಗೆ ಸಕಾರಾತ್ಮಕ ಬೆಂಬಲ ದೊರೆಯಲಿದೆ. ಉಡುಗೊರೆ ಲಭ್ಯವಾಗಬಹುದು.

ಮೀನ: ವಿನಾಕಾರಣ ಅಲೆದಾಟದಿಂದ ಬೇಸರ ಪಡುವ ಅವಶ್ಯಕತೆ ಇಲ್ಲ. ಇಂದಿನ ಶ್ರಮ ಮುಂದಿನ ದಿನಕ್ಕೆ ಒಂದು ಅಡಿಪಾಯವಾಗಲಿದೆ. ಆತ್ಮ ವಿಶ್ವಾಸವನ್ನು ಕಳೆದುಕೊಳ್ಳಬೇಡಿ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 23,659
ಇಂದಿನ ಅಂತ್ಯ: 23,654
ದಿನದ ಕನಿಷ್ಠ: 23,596
↓ 4

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು
100 ಕ್ಕೆ ₹600
12 ಕ್ಕೆ ₹86
ಮೈಸೂರು: 100 ಕ್ಕೆ ₹610

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹250
ಆರ್‌ಎಸ್‌ಎಸ್-5 ₹244
ಗುಡ್ ಲಾಟ್ ₹211

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ)₹259-699
ದ್ವಿತಳಿ (ಬಿ.ವಿ) ₹480-896

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)
ಶೇಂಗಾ (ರಿಫೈನ್ಡ್) ₹1640 (1640)
ಸೋಯಾ (ರಿಫೈನ್ಡ್) ₹1510 (1550)
ಸೂರ್ಯಕಾಂತಿ (ರಿಫೈನ್ಡ್) ₹1650 (1650)
ಪಾಮೋಲಿನ್ ₹1500 (1530)

ಮುದ್ರೆಮನೆ ಕಾಫಿ (50 ಕೆಜಿಗೆ)
ಎಪಿ ₹23000
ಎಸಿ ₹13850
ಆರ್‌ಪಿ ₹18000
ಆರ್‌ಸಿ ₹9650

ಜುಲೈನಲ್ಲಿ ಜೆಪ್ಟೊ ಐಪಿಒ

ನವದೆಹಲಿ (ಪಿಟಿಐ): ಜುಲೈ ತಿಂಗಳಿನಲ್ಲಿ ಸಾರ್ವಜನಿಕರಿಗೆ ಷೇರುಗಳನ್ನು ಮಾರಾಟ (ಐಪಿಒ) ಮಾಡುವ ಮೂಲಕ ₹11 ಸಾವಿರ ಕೋಟಿ ಬಂಡವಾಳ ಸಂಗ್ರಹಿಸುವ ಯೋಜನೆಯನ್ನು ಕ್ವಿಕ್ ಕಾಮರ್ಸ್ ವೇದಿಕೆ ಜೆಪ್ಟೊ ಹೊಂದಿದೆ ಎಂದು ಮೂಲಗಳು ಗುರುವಾರ ತಿಳಿಸಿವೆ.

ಬೆಂಗಳೂರು ಮೂಲದ ನವೋದ್ಯಮ ಕಂಪನಿಯಾದ ಜೆಪ್ಟೊ, ಈ ತಿಂಗಳ ಆರಂಭದಲ್ಲಿ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯಿಂದ (ಸೆಬಿ) ಐಪಿಒಗೆ ಅನುಮತಿ ಪಡೆದಿದೆ. ಈಗ ಕಂಪನಿಯು, ಹೊಸದಾಗಿ ದಾಖಲೆಗಳನ್ನು (ಯುಡಿಎಚ್‌ಆರ್‌ಪಿ) ಸೆಬಿಗೆ ಸಲ್ಲಿಸಲಿದೆ.

ಕಳೆದ ವರ್ಷದ ಡಿಸೆಂಬರ್‌ನಲ್ಲಿ ಕಂಪನಿಯು ಗೋಪ್ಯ ಮಾರ್ಗದ ಮೂಲಕ ಐಪಿಒ ದಾಖಲೆಗಳನ್ನು ಸೆಬಿಗೆ ಸಲ್ಲಿಸಿತ್ತು. ಜುಲೈ 31ರ ಒಳಗೆ ಕಂಪನಿಯನ್ನು ಷೇರುಪೇಟೆಯಲ್ಲಿ ನೋಂದಣಿ ಮಾಡುವ ಗುರಿಯನ್ನು ಕಂಪನಿಯ ಸಂಸ್ಥಾಪಕರಾದ ಆದಿತ್ ಪಲಿಚಾ ಮತ್ತು ಕೈವಲ್ಯ ವೋಹ್ರಾ ಹೊಂದಿದ್ದಾರೆ ಎಂದು ತಿಳಿಸಿವೆ.

ಅಡಿಕೆ ಧಾರಣೆ

ಚಿತ್ರದುರ್ಗ		ಚಾಲಿ	32999-42999	ಬಿಳಿಗೋಟು	21999-35899
ಆಪಿ	52619-53029	ಕೋಕ	12199-34009	ಚಾಲಿ	43600-47191
ಬೆಟ್ಟೆ	37849-38299	ಕೆಂಪುಗೋಟು	30009-41509	ಕೆಂಪುಗೋಟು	26019-37699
ಕೆಂಪುಗೋಟು	32009-32410	ರಾಶಿ	37099-62599	ರಾಶಿ	50000-52999
ರಾಶಿ	52139-52569	ಸಿಪ್ಪೆಗೋಟು	10599-21789	**ಯಲ್ಲಾಪುರ**	
ಕುಮಟಾ		**ಶಿವಮೊಗ್ಗ**		ಆಪಿ	58821-58821
ಚಿಪ್ಪು	28600-39699	ಸರಕು	55555-94696	ಬಿಳಿಗೋಟು	17612-36969
ಕೋಕ	14900-32896	ಬೆಟ್ಟೆ	50069-64500	ಚಾಲಿ	37369-47599
ಹಳೆಚಾಲಿ	37409-48098	ರಾಶಿ	43899-53759	ಕೋಕ	12900-35969
ಹೊಸಚಾಲಿ	32819-47029	ಗೊರಬಲು	19000-43099	ಕೆಂಪುಗೋಟು	17369-37569
ಸಾಗರ		**ಶಿರಸಿ**		ರಾಶಿ	50000-57609
ಬಿಳಿಗೋಟು	20666-33101	ಬೆಟ್ಟೆ	42309-50099	ತಟ್ಟಿಬೆಟ್ಟೆ	37506-50199

ಮಾರುತಿ ಸುಜುಕಿ ಕಾರು ಬೆಲೆ ಹೆಚ್ಚಳ

ನವದೆಹಲಿ (ಪಿಟಿಐ): ಕಾರು ತಯಾರಿಕಾ ಕಂಪನಿ ಮಾರುತಿ ಸುಜುಕಿ ಇಂಡಿಯಾ, ತನ್ನ ವಿವಿಧ ಮಾದರಿಯ ವಾಹನಗಳ ಬೆಲೆಯನ್ನು ₹30 ಸಾವಿರದವರೆಗೆ ಹೆಚ್ಚಿಸಲಿದೆ.

ಪರಿಷ್ಕೃತ ದರವು ಜೂನ್ ತಿಂಗಳಿನಿಂದ ಜಾರಿಗೆ ಬರಲಿದ್ದು, ಕಾರಿನ ಬೆಲೆ ಏರಿಕೆಯಲ್ಲಿ ಮಾದರಿಯಿಂದ ಮಾದರಿಗೆ ವ್ಯತ್ಯಾಸವಿರುತ್ತದೆ ಎಂದು ಕಂಪನಿ ಗುರುವಾರ ಷೇರುಪೇಟೆಗೆ ತಿಳಿಸಿದೆ.

ವಾಹನ ಬಿಡಿಭಾಗಗಳ ಬೆಲೆ ಹೆಚ್ಚಳವಾಗಿರುವುದರಿಂದ ಉತ್ಪಾದನೆ ವೆಚ್ಚವು ಜಾಸ್ತಿ ಆಗಿದೆ. ಹೀಗಾಗಿ, ವೆಚ್ಚ ಸರಿದೂಗಿಸಲು ಬೆಲೆ ಏರಿಕೆ ಮಾಡಲಾಗುತ್ತಿದೆ ಎಂದು ತಿಳಿಸಿದೆ.

ಆನೆ ಶಿಬಿರಗಳಲ್ಲಿ ವೀಕ್ಷಕರು ಅತಿ ಹತ್ತಿರಕ್ಕೆ ಹೋಗಬಾರದು ಎಂಬ ತಜ್ಞರ ಶಿಫಾರಸು ಮಾಡಿ ಏಳು ವರ್ಷ ಕಳೆದರೂ ಅರಣ್ಯ ಇಲಾಖೆ ಜಾರಿ ಮಾಡದಿರುವುದು ಸರಿಯೇ?

ಸರಿ ತಪ್ಪು

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಮುಂಬೈ ಧಾರಣೆ (ಶೇಂಗಾ)

21-05-2026	
ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10500-10600
ದಪ್ಪ ಮಧ್ಯಪ್ರದೇಶ (ಹೊಸ)	8500-8600
ದಪ್ಪ ಗುಜರಾತ್ (ಹೊಸ)	9400-9500
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1650 (1650)
ಒಂದು ವಾರದ ಡೆಲಿವರಿ	1645 (1645)
ಪಾಮ್ ವಾರದ ಡೆಲಿವರಿ	1498 (1528)
ಸೂರ್ಯಕಾಂತಿ ಎಣ್ಣೆ ಕಚ್ಚಾ	1550 (1560)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,57,400 (1,58,200)
ಬೆಳ್ಳಿ ಕೆ.ಜಿಗೆ	2,64,000 (2,66,500)


ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)
ಅರಸೀಕೆರೆ ₹20000-20000
ತಿಪಟೂರು ₹29500-32500
ತುರುವೇಕೆರೆ ₹30000-30000

ಸಿಎಡಿ ನಿಯಂತ್ರಣಕ್ಕೆ ಕ್ರಮ: ಕೇಂದ್ರ

ಡಿಸೆಂಬರ್ ತ್ರೈಮಾಸಿಕದಲ್ಲಿ ₹1.27 ಲಕ್ಷ ಕೋಟಿಗೆ ಚಾಲ್ತಿ ಖಾತೆ ಕೊರತೆ ಏರಿಕೆ

ನವದೆಹಲಿ (ಪಿಟಿಐ): ಸದ್ಯದ ಪರಿಸ್ಥಿತಿಯನ್ನು ಕೇಂದ್ರ ಸರ್ಕಾರ ಅವಲೋಕಿಸುತ್ತಿದೆ, ಚಾಲ್ತಿ ಖಾತೆ ಕೊರತೆ (ಸಿಎಡಿ) ಹೆಚ್ಚುತ್ತಿರುವುದನ್ನು ನಿಯಂತ್ರಣಕ್ಕೆ ತರಲು ಹಲವು ಕ್ರಮಗಳನ್ನು ಪರಿಗಣಿಸಲಾಗುತ್ತಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ತಿಳಿಸಿದ್ದಾರೆ.


ಪೀಯೂಷ್ ಗೋಯಲ್

ದೇಶದ ಚಾಲ್ತಿ ಖಾತೆ ಕೊರತೆಯು ಡಿಸೆಂಬರ್ 31ಕ್ಕೆ ಕೊನೆಗೊಂಡ ತ್ರೈಮಾಸಿಕದಲ್ಲಿ 13.2 ಬಿಲಿಯನ್ ಡಾಲರ್‌ಗೆ (ಇಂದಿನ ₹1.27 ಲಕ್ಷ ಕೋಟಿ) ಹೆಚ್ಚಳ ಆಗಿದೆ. ಇದು ದೇಶದ ಜಿಡಿಪಿಯ ಶೇ 1.3ರಷ್ಟು. 2024ರ ಡಿಸೆಂಬರ್ 31ಕ್ಕೆ ಕೊನೆಗೊಂಡ ತ್ರೈಮಾಸಿಕದಲ್ಲಿ ಚಾಲ್ತಿ ಖಾತೆ ಕೊರತೆಯು 11.3 ಬಿಲಿಯನ್ ಡಾಲರ್ (ಇಂದಿನ ₹1.08 ಲಕ್ಷ ಕೋಟಿ) ಆಗಿತ್ತು.

ಅಮೆರಿಕಕ್ಕೆ ರಫ್ತು ಪ್ರಮಾಣ ಕಡಿಮೆ ಆಗಿದ್ದುದು ಕೊರತೆ ಹೆಚ್ಚುವುದಕ್ಕೆ ಒಂದು ಪ್ರಮುಖ ಕಾರಣ ಎಂದು ಆರ್‌ಬಿಐ ಮಾರ್ಚ್ 2ರಂದು ಬಿಡುಗಡೆ ಮಾಡಿರುವ ಅಂಕಿ–ಅಂಶಗಳು ಹೇಳುತ್ತಿವೆ.

ನಿರ್ದಿಷ್ಟ ಅವಧಿಯಲ್ಲಿ ಆಮದು ಮಾಡಿಕೊಂಡ ಸೇವೆಗಳು ಹಾಗೂ ಸರಕುಗಳ ಮೌಲ್ಯವು ದೇಶದಿಂದ ರಫ್ತಾದ ಸರಕುಗಳು ಹಾಗೂ ಸೇವೆಗಳ ಮೌಲ್ಯಕ್ಕಿಂತ ಜಾಸ್ತಿ ಆದಾಗ ಚಾಲ್ತಿ ಖಾತೆ ಕೊರತೆ ಉಂಟಾಗುತ್ತದೆ.

ಮುಖ್ಯಾಂಶಗಳು
- ಅಮೆರಿಕಕ್ಕೆ ರಫ್ತು ಕಡಿಮೆ ಆಗಿರುವುದು ಕೊರತೆ ಹೆಚ್ಚಳಕ್ಕೆ ಕಾರಣ
- ಚಿನ್ನ, ಬೆಳ್ಳಿ ಆಮದು ಹೆಚ್ಚಳವೂ ಸಿಎಡಿ ಏರಿಕೆಗೆ ಕಾರಣ
- ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ಪರಿಸ್ಥಿತಿ ಅವಲೋಕಿಸಿ ಕ್ರಮ

‘ನಾವು ಪರಿಸ್ಥಿತಿಯನ್ನು ಅವಲೋಕಿಸುತ್ತಿದ್ದೇವೆ. ಸರ್ಕಾರದ ಎಲ್ಲ ಅಂಗಗಳು ಒಂದು ತಂಡವಾಗಿ ಕೆಲಸ ಮಾಡುತ್ತಿವೆ. ಹಲವು ಕ್ರಮಗಳನ್ನು ಪರಿಗಣಿಸಲಾಗುತ್ತಿದೆ. ಜಾಗತಿಕವಾಗಿ ಪರಿಸ್ಥಿತಿಯು ಸವಾಲಿನದ್ದಾಗಿದೆ. ಆದರೂ ಈ ಪರಿಸ್ಥಿತಿಯನ್ನೂ ನಾವು ಗೆದ್ದುಬರುತ್ತೇವೆ ಎಂಬ ಭರವಸೆ, ಧೈರ್ಯ ನಮಗೆ ಇದೆ’ ಎಂದು ಗೋಯಲ್ ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.

ರೂಪಾಯಿ ಮೌಲ್ಯ ಕುಸಿತ ಕಾಣುತ್ತಿರುವ ಹಿನ್ನೆಲೆಯಲ್ಲಿ ಚಾಲ್ತಿ ಖಾತೆ ಕೊರತೆ ಹೆಚ್ಚುವುದನ್ನು ತಡೆಯಲು ಸರ್ಕಾರ ಯಾವೆಲ್ಲ ಕ್ರಮಗಳನ್ನು ಕೈಗೊಳ್ಳಬಹುದು ಎಂಬ ಪ್ರಶ್ನೆಗೆ ಉತ್ತರವಾಗಿ ಅವರು ಹೀಗೆ ಹೇಳಿದ್ದಾರೆ.

ಚಿನ್ನ ಮತ್ತು ಬೆಳ್ಳಿ ಆಮದು ಹೆಚ್ಚುತ್ತಿರುವುದು ಕೂಡ ಸಿಎಡಿ ಹೆಚ್ಚುವುದಕ್ಕೆ ಒಂದು ಕಾರಣ. 2025–26ರಲ್ಲಿ ಚಿನ್ನದ ಆಮದು ಮೌಲ್ಯದ ಲೆಕ್ಕದಲ್ಲಿ ಶೇ 24ರಷ್ಟು ಜಾಸ್ತಿ ಆಗಿದೆ. ಇದೇ ಅವಧಿಯಲ್ಲಿ ಬೆಳ್ಳಿಯ ಆಮದು ಶೇ 150ರಷ್ಟು ಜಾಸ್ತಿ ಆಗಿದೆ.

ಬೆಳ್ಳಿ ಧಾರಣೆ ₹5 ಸಾವಿರ ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಏರಿಕೆಯಾಗಿದೆ.



ಶೇ 99.9ರಷ್ಟು ಪರಿಶುದ್ಧತೆಯ 10 ಗ್ರಾಂ ಚಿನ್ನದ ದರವು ₹600 ಹೆಚ್ಚಳವಾಗಿ, ₹1,65,500ಕ್ಕೆ ತಲುಪಿದೆ. ಬೆಳ್ಳಿ ಬೆಲೆಯು ಕೆ.ಜಿಗೆ ₹5 ಸಾವಿರ ಜಿಗಿತವಾಗಿ, ₹2.71 ಲಕ್ಷದಂತೆ ಮಾರಾಟವಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ರಾಜಕೀಯ ಬಿಕ್ಕಟ್ಟಿನಿಂದ ಹೂಡಿಕೆದಾರರು ಅಮೂಲ್ಯ ಲೋಹಗಳ ಖರೀದಿಯತ್ತ ಮುಂದಾಗಿದ್ದರಿಂದ ಇದರ ಧಾರಣೆ ಏರಿಕೆಯಾಗಿದೆ ಎಂದು ತಿಳಿಸಿದೆ.

ಬಾಷ್, ಟಿಎಸ್‌ಎಫ್ ನಡುವೆ ಸಹಭಾಗಿತ್ವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಣಿಜ್ಯ ವಾಹನಗಳಲ್ಲಿ ಬಳಕೆಯಾಗುವ ಏರ್ ಸಿಸ್ಟಂ ಅಭಿವೃದ್ಧಿಗಾಗಿ ಬಾಷ್ ಇಂಡಿಯಾ ಕಂಪನಿಯು ಚೆನ್ನೈ ಮೂಲದ ಟಿಎಸ್‌ಎಫ್ ಸಮೂಹದ ಜೊತೆ ಜಂಟಿ ಪಾಲುದಾರಿಕೆ ಮಾಡಿಕೊಂಡಿದೆ, ಇದು ಈ ವರ್ಷದ ಅಂತ್ಯದ ಹೊತ್ತಿಗೆ ಕಾರ್ಯಾಚರಣೆ ಆರಂಭಿಸಲಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಬಾಷ್ ಇಂಡಿಯಾ ಅಧ್ಯಕ್ಷ ಗುರುಪ್ರಸಾದ್ ಮುದ್ಲಾಪುರ ಅವರು, ‘ಉನ್ನತ ತಂತ್ರಜ್ಞಾನದ ಏರ್ ಸಿಸ್ಟಂಗಳ ಭವಿಷ್ಯ ರೂಪಿಸುವಲ್ಲಿ ಈ ಜಂಟಿ ಪಾಲುದಾರಿಕೆಯು ನಿರ್ಣಾಯಕ ಹೆಜ್ಜೆ’ ಎಂದು ಬಣ್ಣಿಸಿದರು.


ಗುರುಪ್ರಸಾದ್ ಮುದ್ಲಾಪುರ

ಟಿಎಸ್‌ಎಫ್ ಸಮೂಹದ ಬ್ರೇಕ್ಸ್ ಇಂಡಿಯಾ ಪ್ರೈ.ಲಿ. ಮತ್ತು ವೀಲ್ಸ್ ಇಂಡಿಯಾ ಲಿ. ಜೊತೆ ಈ ಸಹಭಾಗಿತ್ವ ಇರಲಿದೆ.

ಕಂಪನಿಯ ಹಣಕಾಸಿನ ಸಾಧನೆ ಕುರಿತು ಅವರು ವಿವರ ನೀಡಿದರು. ‘ಸುತ್ತಲಿನ ಜಗತ್ತಿನಲ್ಲಿ ಅನಿಶ್ಚಿತತೆ ಜಾಸ್ತಿ ಆಗಿದೆ. ಅನಿಶ್ಚಿತತೆಯು ಯಾವುದೇ ಉದ್ಯಮದ ಪಾಲಿಗೆ ಶತ್ರುವಿದ್ದಂತೆ’ ಎಂದರು.

ಕಂಪನಿಯು ಮಾರ್ಚ್ ತ್ರೈಮಾಸಿಕದಲ್ಲಿ ₹5,566 ಕೋಟಿ ವರಮಾನ ಗಳಿಸಿದೆ, ₹808 ಕೋಟಿ ತೆರಿಗೆ ಪೂರ್ವದ ಲಾಭ ಕಂಡಿದೆ. ಕಂಪನಿಯ ವರಮಾನ ಹಾಗೂ ತೆರಿಗೆ ಪೂರ್ವದ ಲಾಭವು ಹಿಂದಿನ ವರ್ಷದ ಇದೇ ಅವಧಿಗೆ ಹೋಲಿಸಿದರೆ ಕ್ರಮವಾಗಿ ಶೇ 13.3ರಷ್ಟು ಹಾಗೂ ಶೇ 3.8ರಷ್ಟು ಜಾಸ್ತಿ ಆಗಿದೆ.

ಸಾಗಣೆ ವೆಚ್ಚ ಉಕ್ಕು ಉದ್ಯಮಕ್ಕೆ ಹೊರೆ

ರಾಂಚಿ (ಪಿಟಿಐ): ಪಶ್ಚಿಮ ಏಷ್ಯಾದ ಸಂಘರ್ಷ ಸೇರಿದಂತೆ ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ಅನಿಶ್ಚಿತತೆಯಿಂದ ಸರಕುಗಳ ಸಾಗಣೆ ವೆಚ್ಚ ಶೇ 28ರಿಂದ ಶೇ 30ರಷ್ಟು ಹೆಚ್ಚಾಗಿದೆ. ಇದು ದೇಶದ ಉಕ್ಕು ಉದ್ಯಮಕ್ಕೆ ಅತಿದೊಡ್ಡ ಸವಾಲಾಗಿ ಪರಿಣಮಿಸಿದೆ ಎಂದು ಟಾಟಾ ಸ್ಟೀಲ್‌ನ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರಷ್ಯಾ–ಉಕ್ರೇನ್ ಯುದ್ಧ, ಪಶ್ಚಿಮ ಏಷ್ಯಾ ಸಂಘರ್ಷ ಸರಕುಗಳ ಸಾಗಣೆ ಮೇಲೆ ನೇರ ಪರಿಣಾಮ ಬೀರಿವೆ ಎಂದು ಕಂಪನಿಯ ಉಪಾಧ್ಯಕ್ಷ ಡಿ.ಬಿ.ಸುಂದರ ರಾಮಂ ಹೇಳಿದ್ದಾರೆ.

ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ಅಡಚಣೆಯ ನಡುವೆಯೂ ದೇಶದ ಉಕ್ಕು ಉದ್ಯಮವು ಉತ್ಪಾದನಾ ಮಟ್ಟವನ್ನು ಕಾಪಾಡಿಕೊಂಡಿದೆ. ಆದರೆ, ಸರಕುಗಳ ಸಾಗಣೆ ವೆಚ್ಚವು ಹೆಚ್ಚುತ್ತಿರುವುದು ಕಚ್ಚಾ ವಸ್ತುಗಳ ಸಾಗಣೆಗೆ ಸಮಸ್ಯೆ ಉಂಟು ಮಾಡಿದೆ ಎಂದು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಎಲ್‌ಐಸಿ ಲಾಭ ಶೇ 23ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ಮಾರ್ಚ್ 31ಕ್ಕೆ ಕೊನೆಗೊಂಡ ತ್ರೈಮಾಸಿಕದಲ್ಲಿ ₹23,420 ಕೋಟಿ ಲಾಭ ಗಳಿಸಿದೆ.

2024–25ರ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ನಿಗಮವು ₹19,013 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದ ಪ್ರಮಾಣ ಶೇ 23ರಷ್ಟು ಏರಿಕೆಯಾಗಿದೆ ಎಂದು ನಿಗಮವು ಷೇರುಪೇಟೆಗೆ ಗುರುವಾರ ತಿಳಿಸಿದೆ.

ಒಟ್ಟು ವರಮಾನವು ₹2.22 ಲಕ್ಷ ಕೋಟಿಯಿಂದ ₹2.53 ಲಕ್ಷ ಕೋಟಿಗೆ ಹೆಚ್ಚಳವಾಗಿದೆ.

ಮೊದಲ ವರ್ಷದ ವಿಮಾ ಕಂತು (ಪ್ರೀಮಿಯಂ) ಮೂಲಕ ₹12,970 ಕೋಟಿ ವರಮಾನ ಗಳಿಸಿದೆ. ನವೀಕರಿಸಿದ ವಿಮೆಯ ಕಂತಿನಿಂದ ₹81,933 ಕೋಟಿ ಗಳಿಸಿದೆ. 2024–25ರ ಇದೇ ಅವಧಿಯಲ್ಲಿ ಇದು ಕ್ರಮವಾಗಿ ₹11,069 ಕೋಟಿ ಮತ್ತು ₹79,138 ಕೋಟಿಯಷ್ಟಿತ್ತು.

ಕಳೆದ ಪೂರ್ಣ ಆರ್ಥಿಕ ವರ್ಷದಲ್ಲಿ ನಿಗಮವು ₹57,419 ಕೋಟಿ ಲಾಭ ಗಳಿಸಿದೆ. 2024–25ರಲ್ಲಿ ಇದು ₹48,151 ಕೋಟಿಯಷ್ಟಿತ್ತು. ಇದಕ್ಕೆ ಹೋಲಿಸಿದರೆ ಲಾಭದ ಪ್ರಮಾಣವು ಈ ಬಾರಿ ಶೇ 19ರಷ್ಟು ಏರಿಕೆಯಾಗಿದೆ. ವರಮಾನವು ₹8.84 ಲಕ್ಷ ಕೋಟಿಯಿಂದ ₹9.73 ಲಕ್ಷ ಕೋಟಿಗೆ ಹೆಚ್ಚಳವಾಗಿದೆ ಎಂದು ತಿಳಿಸಿದೆ.

ಪ್ರತಿ ಈಕ್ವಿಟಿ ಷೇರಿಗೆ ₹10 ಲಾಭಾಂಶ ನೀಡಲು ಆಡಳಿತ ಮಂಡಳಿಯು ಶಿಫಾರಸು ಮಾಡಿದೆ.

ಐಟಿಸಿಗೆ ₹5,469 ಕೋಟಿ ಲಾಭ

ನವದೆಹಲಿ (ಪಿಟಿಐ): 2025–26ರ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಐಟಿಸಿ ಕಂಪನಿಯು ₹5,469 ಕೋಟಿ ಲಾಭ ಗಳಿಸಿದೆ.

2024–25ರ ಇದೇ ಅವಧಿಯಲ್ಲಿ ಕಂಪನಿಯು ₹19,807 ಕೋಟಿ ಲಾಭ ಗಳಿಸಿತ್ತು. ಉತ್ಪನ್ನಗಳ ಮಾರಾಟದಿಂದ ₹23,625 ಕೋಟಿ ವರಮಾನ ಗಳಿಸಿದೆ. ವೆಚ್ಚವು ₹17,348 ಕೋಟಿಯಷ್ಟಾಗಿದೆ ಎಂದು ಕಂಪನಿ ಷೇರುಪೇಟೆಗೆ ಗುರುವಾರ ತಿಳಿಸಿದೆ.

ಕಳೆದ ಪೂರ್ಣ ಆರ್ಥಿಕ ವರ್ಷದಲ್ಲಿ ಕಂಪನಿಯು ₹21,018 ಕೋಟಿ ನಿವ್ವಳ ಲಾಭ ಗಳಿಸಿದ್ದರೆ, ವರಮಾನವು ₹92,339 ಕೋಟಿಯಷ್ಟಾಗಿದೆ ಎಂದು ತಿಳಿಸಿದೆ.

ಕಂಪನಿಯ ಆಡಳಿತ ಮಂಡಳಿಯು ಪ್ರತಿ ಷೇರಿಗೆ ₹8 ಅಂತಿಮ ಲಾಭಾಂಶ ಘೋಷಿಸಿದೆ. ಫೆಬ್ರುವರಿ 27ರಂದು ಕಂಪನಿಯು ₹6.50 ಮಧ್ಯಂತರ ಲಾಭಾಂಶ ನೀಡಿತ್ತು. ಇದರಿಂದ 2025–26ರಲ್ಲಿ ಕಂಪನಿಯು ಒಟ್ಟಾರೆ ₹14.50 ಲಾಭಾಂಶ ಘೋಷಿಸಿದಂತೆ ಆಗಿದೆ.

ಎವರೆಸ್ಟ್ ಏರಿದ 274 ಮಂದಿ

ಕಠ್ಮಂಡು / ಪುಣೆ (ಪಿಟಿಐ): ಮೂವರು ಭಾರತೀಯರು ಸೇರಿದಂತೆ 274 ಮಂದಿ ಪರ್ವತಾರೋಹಿಗಳು ನೇಪಾಳದ ಕಡೆಯಿಂದ ಮೌಂಟ್ ಎವರೆಸ್ಟ್ ಶಿಖರವನ್ನು ಬುಧವಾರ ಏರುವ ಮೂಲಕ ಹೊಸ ದಾಖಲೆ ಬರೆದಿದ್ದಾರೆ.

ಇದೇ ಮೊದಲ ಬಾರಿಗೆ ಏಕಕಾಲಕ್ಕೆ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಪರ್ವತಾರೋಹಿಗಳು ಮೌಂಟ್‌ಎವರೆಸ್ಟ್ ಏರಿದ್ದಾರೆ. ಈ ಮೊದಲು 2019ರಲ್ಲಿ 223 ಪರ್ವತಾರೋಹಿಗಳು ನೇಪಾಳ ಕಡೆಯಿಂದ ಮೌಂಟ್ ಎವರೆಸ್ಟ್ ಏರಿದ್ದರು.

ನೇಪಾಳದ 150 ಶೆರ್ಪಾಗಳು ಸೇರಿದಂತೆ 274 ಮಂದಿಯೂ 8,848.86 ಅಡಿ ಎತ್ತರದ ಶಿಖರವನ್ನು ತಲುಪಿದ್ದಾರೆ ಎಂದು ನೇಪಾಳದ ಶಿಖರ ಯಾತ್ರೆ ನಿರ್ವಾಹಕರ ಅಸೋಸಿಯೇಷನ್ ಪ್ರಧಾನ ಕಾರ್ಯದರ್ಶಿ ರಿಶಿ ರಾಮ್ ಭಂಡಾರಿ ಅವರು ತಿಳಿಸಿದ್ದಾರೆ.

ಭಾರತದ ತುಳಸಿ ರೆಡ್ಡಿ ಪಲ್ಪುನೂರಿ, ಸಂದೀಪ್ ಅರೆ ಮತ್ತು ಅಜಯ್ ಪಾಲ್ ಸಿಂಗ್ ಧಲಿವಾಲ್ ಅವರು ವಿಶ್ವದಾಖಲೆ ಮಾಡಿದ ಈ ತಂಡದ ಭಾಗವಾಗಿದ್ದರು.

ಇದೇ ಅವಧಿಯಲ್ಲಿ ನೇಪಾಳದ ಕಾಮಿ ರೀಟಾ ಶೆರ್ಪಾ ಅವರು 32ನೇ ಬಾರಿಗೆ ಮೌಂಟ್ ಎವರೆಸ್ಟ್ ಏರುವ ಮೂಲಕ ತಮ್ಮದೇ ದಾಖಲೆಯನ್ನು ಮುರಿದಿದ್ದಾರೆ.

ನಾಲ್ವರು ಭಾರತೀಯರಿಂದ ಪರ್ವತಾರೋಹಣ: ಪುಣೆಯ ಪರ್ವತಾರೋಹಣ ಕ್ಲಬ್ ‘ಗಿರಿಪ್ರೇಮಿ’ಯ ಮೂವರು ಪರ್ವತಾರೋಹಿಗಳು ಗುರುವಾರ ಮೌಂಟ್ ಎವರೆಸ್ಟ್ ಏರಿದ್ದಾರೆ ಎಂದು ಪರ್ವತಾರೋಹಣ ಆಯೋಜಕ ಹಾಗೂ ಕ್ಲಬ್‌ನ ಸದಸ್ಯ ಉಮೇಶ್ ಜಿರ್ಪೆ ತಿಳಿಸಿದರು.

‘ವಿವೇಕ್ ಶಿವಡೆ, ಮಿಹಿರ್ ಜಾಧವ್ ಮತ್ತು ಅಖಿಲ್ ಕಾಟ್ಕರ್ ಅವರು ಮೇ 21ರಂದು ಮುಂಜಾನೆ ವಿಶ್ವದ ಅತಿ ಎತ್ತರದ ಶಿಖರವನ್ನು ತಲುಪಿದರು. ಅವರೊಂದಿಗೆ ಮಾರ್ಗದರ್ಶಕರಾದ ಉರ್ಗೆನ್ ಶೆರ್ಪಾ, ಲಕ್ಪಾ ಶೆರ್ಪಾ ಮತ್ತು ಲಕ್ಪಾ ತೆಂಜಿ ಶೆರ್ಪಾ ಕೂಡ ಇದ್ದರು. ಹವಾಮಾನ ವೈಪರೀತ್ಯದ ನಡುವೆಯು ಪರ್ವತ ಏರಲು ತಂಡ ಸುಮಾರು 50 ದಿನಗಳನ್ನು ತೆಗೆದುಕೊಂಡಿದೆ ಎಂದು ಅವರು ಹೇಳಿದರು.

ಎಬೋಲಾ ಪೀಡಿತ ರಾಷ್ಟ್ರಗಳಿಂದ ಸಂಚರಿಸುವವರಿಗೆ ನಿರ್ದೇಶನ

ಭಾರತದಿಂದ ಮಾರ್ಗಸೂಚಿ ಬಿಡುಗಡೆ

ನವದೆಹಲಿ (ಪಿಟಿಐ): ಎಬೋಲಾ ಪೀಡಿತ ರಾಷ್ಟ್ರಗಳ ಮೂಲಕ ಸಂಚರಿಸುವ ಮತ್ತು ಅಲ್ಲಿಂದ ಬರುವ ಪ್ರಯಾಣಿಕರಿಗೆ ಭಾರತ ಆರೋಗ್ಯ ಮಾರ್ಗಸೂಚಿ ಬಿಡುಗಡೆ ಮಾಡಿದೆ.

ಸೋಂಕಿನ ಲಕ್ಷಣ ಹೊಂದಿರುವವರು ಪ್ರಯಾಣಕ್ಕೆ ಅನುಮತಿ ಪಡೆಯುವ ಮೊದಲು ವಿಮಾನ ನಿಲ್ದಾಣದ ಆರೋಗ್ಯ ಅಧಿಕಾರಿಗಳಿಗೆ ಮಾಹಿತಿ ನೀಡಬೇಕೆಂದು ಆರೋಗ್ಯ ಸೇವೆಗಳ ಮಹಾನಿರ್ದೇಶನಾಲಯ (ಡಿಜಿಎಚ್‌ಎಸ್) ತನ್ನ ಮಾರ್ಗಸೂಚಿಯಲ್ಲಿ ತಿಳಿಸಿದೆ.

ವಿಶೇಷವಾಗಿ ಕಾಂಗೊ, ಸುಡಾನ್ ಮತ್ತು ಉಗಾಂಡದಿಂದ ಬರುವವರು ಹೆಚ್ಚಿನ ಮುಂಜಾಗ್ರತೆ ವಹಿಸುವಂತೆ ಸೂಚಿಸಲಾಗಿದೆ.

ಜ್ವರ, ಅಸ್ವಸ್ಥತೆ, ತಲೆನೋವು, ಮಾಂಸಖಂಡಗಳಲ್ಲಿ ನೋವು, ವಾಂತಿ, ಭೇದಿ, ಗಂಟಲುನೋವು ಮತ್ತು ರಕ್ತಸ್ರಾವದಂಥ ಲಕ್ಷಣಗಳು ಕಂಡುಬಂದರೆ ಎಚ್ಚರವಹಿಸುವಂತೆ ಸಲಹೆ ನೀಡಲಾಗಿದೆ.



‘ಶಂಕಿತ ಅಥವಾ ದೃಢಪಟ್ಟಿರುವ ಸೋಂಕಿತರ ರಕ್ತ ಅಥವಾ ದೇಹದ ದ್ರವದೊಂದಿಗೆ ಸಂಪರ್ಕ ಹೊಂದಿದ ಪ್ರಯಾಣಿಕರು ತಕ್ಷಣ ವಿಮಾನ ನಿಲ್ದಾಣದ ಆರೋಗ್ಯಾಧಿಕಾರಿಗೆ ಮಾಹಿತಿ ನೀಡಬೇಕು. ವಿಮಾನ ಪ್ರಯಾಣದ ಬಳಿಕ 21 ದಿನಗಳೊಳಗಾಗಿ ರೋಗ ಲಕ್ಷಣಗಳು ಕಂಡುಬಂದರೆ ವೈದ್ಯಕೀಯ ಚಿಕಿತ್ಸೆ ಪಡೆದು, ತನ್ನ ಪ್ರಯಾಣದ ಮಾಹಿತಿಯನ್ನು ಅಧಿಕಾರಿಗಳಿಗೆ ನೀಡಬೇಕು’ ಎಂದು ಮಾರ್ಗಸೂಚಿ ತಿಳಿಸಿದೆ.

ಉನ್ನತಮಟ್ಟದ ಸಭೆ: ಕೇಂದ್ರ ಆರೋಗ್ಯ ಸಚಿವಾಲಯದ ಕಾರ್ಯದರ್ಶಿ ಪುಣ್ಯ ಸಲಿಲಾ ಶ್ರೀವಾತ್ಸವ್ ಅವರು ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಆರೋಗ್ಯ ಇಲಾಖೆಯ ಕಾರ್ಯದರ್ಶಿಗಳೊಂದಿಗೆ ಬುಧವಾರ ಉನ್ನತ ಮಟ್ಟದ ಸಭೆ ನಡೆಸಿದ್ದಾರೆ. ಎಬೋಲಾ ನಿಯಂತ್ರಣಕ್ಕೆ ಕೈಗೊಂಡಿರುವ ಸಿದ್ಧತೆ ಮತ್ತು ಕ್ರಮಗಳ ಬಗ್ಗೆ ಪರಿಶೀಲಿಸಿದರು.

ಭಾರತದಲ್ಲಿ ಈವರೆಗೆ ಎಬೋಲಾ ಪ್ರಕರಣ ಪತ್ತೆಯಾಗಿಲ್ಲ ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

ಭಾರತ–ಆಫ್ರಿಕಾ ಫೋರಂ ಶೃಂಗ ಮುಂದೂಡಿಕೆ

ದೆಹಲಿಯಲ್ಲಿ ಮೇ 28ರಿಂದ 31ರವರೆಗೆ ನಡೆಯಬೇಕಿದ್ದ ಭಾರತ–ಆಫ್ರಿಕಾ ಫೋರಂ ಶೃಂಗವು, ಎಬೋಲಾ ವೈರಾಣು ಸೋಂಕು ವ್ಯಾಪಕವಾಗಿ ಹರಡುತ್ತಿರುವ ಕಾರಣ ಮುಂದೂಡಲ್ಪಟ್ಟಿದೆ.

‘ಆಫ್ರಿಕಾ ರಾಷ್ಟ್ರಗಳೊಂದಿಗೆ ಮಾತುಕತೆ ನಡೆಸಿ ಹೊಸ ದಿನಾಂಕವನ್ನು ಘೋಷಿಸಲಾಗುವುದು’ ಎಂದು ಭಾರತದ ವಿದೇಶಾಂಗ ಸಚಿವಾಲಯ ತಿಳಿಸಿದೆ.

‘ಆಫ್ರಿಕಾದ ನಾಯಕರು ಮತ್ತು ಪಾಲುದಾರರು ಪೂರ್ಣ ಪ್ರಮಾಣದಲ್ಲಿ ಭಾಗವಹಿಸುವುದನ್ನು ಖಚಿತಪಡಿಸಲು ಮತ್ತು ಆಫ್ರಿಕಾ ಖಂಡದಲ್ಲಿನ ಆರೋಗ್ಯ ಪರಿಸ್ಥಿತಿಯ ಬಗ್ಗೆ ಭಾರತ ಸರ್ಕಾರ ಮತ್ತು ಆಫ್ರಿಕಾ ಒಕ್ಕೂಟದ ಮುಖ್ಯಸ್ಥರ ನಡುವೆ ಸಮಾಲೋಚನೆ ನಡೆದಿದೆ. ಈ ಮಾತುಕತೆ ಬಳಿಕ ಉಭಯ ಪಕ್ಷಗಳು ನಾಲ್ಕನೇ ಭಾರತ–ಆಫ್ರಿಕಾ ಫೋರಂ ಶೃಂಗವನ್ನು ಮುಂದೂಡಲು ನಿರ್ಧರಿಸಿದವು’ ಎಂದು ತಿಳಿಸಿದೆ.

‘ಹೊರ್ಮುಜ್‌ನಿಂದ ಹಡಗುಗಳನ್ನು ತರಲು ಭಾರತ ಯತ್ನ’

ನವದೆಹಲಿ (ರಾಯಿಟರ್ಸ್): ಇಂಧನವನ್ನು ತರುವುದಕ್ಕಾಗಿ ಹೊಸ ಹಡಗುಗಳನ್ನು ಕಳುಹಿಸುವುದಕ್ಕೂ ಮೊದಲು, ಈಗ ಕೊಲ್ಲಿಯಲ್ಲಿ ಸಿಲುಕಿಕೊಂಡಿರುವ ಹಡಗುಗಳನ್ನು ಸುರಕ್ಷಿತವಾಗಿ ವಾಪಸಾಗುವಂತೆ ಮಾಡಲು ಭಾರತ ಬಯಸುತ್ತದೆ ಎಂದು ಬಂದರು, ಹಡಗು ಸಾಗಣೆ ಮತ್ತು ಜಲಮಾರ್ಗಗಳ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಮುಕೇಶ್ ಮಂಗಲ್ ಗುರುವಾರ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ನಮ್ಮ ಎಲ್ಲಾ ಹಡಗುಗಳನ್ನು ಹೊರ್ಮುಜ್ ಜಲಸಂಧಿಯಿಂದ ಹೊರತರುವುದು ಆದ್ಯತೆಯಾಗಿದೆ. ಪರಿಸ್ಥಿತಿಯು ಅನುಕೂಲಕರವಾಗಿರುವ ಎಲ್ಲಾ ಸಂದರ್ಭಗಳಲ್ಲಿ, ಭಾರತವು ಹಡಗುಗಳನ್ನು ಜಲಸಂಧಿಯ ಪಶ್ಚಿಮಕ್ಕೆ ಕಳುಹಿಸುತ್ತದೆ’ ಎಂದರು.

‘ವಿದೇಶಾಂಗ ವ್ಯವಹಾರಗಳ ಸಚಿವಾಲಯದೊಂದಿಗೆ ನಾವು ಸಂಪರ್ಕದಲ್ಲಿದ್ದೇವೆ. ಕೊಲ್ಲಿಯಲ್ಲಿ ಸಿಲುಕಿರುವ ಎಲ್ಲಾ ಹಡಗುಗಳು ಮರಳಿದ ಬಳಿಕ, ಮತ್ತೆ ಹಡಗುಗಳನ್ನು ಕಳುಹಿಸುವ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಗುವುದು’ ಎಂದರು.

‘ಭಾರತದ ಧ್ವಜ ಹೊಂದಿರುವ 13 ಹಾಗೂ ಭಾರತೀಯರೊಬ್ಬರ ಒಡೆತನದ 1 ಹಡಗು ಸೇರಿ ಒಟ್ಟು 14 ಹಡಗು ಜಲಸಂಧಿಯ ಪಶ್ಚಿಮ ಭಾಗದಲ್ಲಿ ಸಿಲುಕಿವೆ’ ಎಂದು ಮಾಹಿತಿ ನೀಡಿದರು.

ದಾಖಲೆ ಸೃಷ್ಟಿಸಿದ ವಿದ್ಯುತ್ ಬೇಡಿಕೆ

ನವದೆಹಲಿ (ಪಿಟಿಐ): ದೇಶದಲ್ಲಿ ವಿದ್ಯುತ್ ಬೇಡಿಕೆ ಗುರುವಾರ 270.82 ಗಿಗಾವಾಟ್‌ಗೆ ತಲುಪಿದೆ. ಇದು ಈವರೆಗಿನ ಗರಿಷ್ಠ ಮಟ್ಟದ ವಿದ್ಯುತ್ ಬೇಡಿಕೆ ಎಂದು ಕೇಂದ್ರ ವಿದ್ಯುತ್ ಸಚಿವಾಲಯ ತಿಳಿಸಿದೆ.

ಬಿಸಿಗಾಳಿ ಹೆಚ್ಚಳದ ಕಾರಣದಿಂದಾಗಿ ದೇಶದಲ್ಲಿ ಹವಾನಿಯಂತ್ರಕಗಳು, ಕೂಲರ್‌ಗಳ ಬಳಕೆ ಹೆಚ್ಚಿದೆ. ಇದರಿಂದ ವಿದ್ಯುತ್ ಬೇಡಿಕೆ ಏರಿಕೆಯಾಗಿದೆ ಎಂದು ತಿಳಿಸಿದೆ.

ಈ ಬೇಸಿಗೆಯಲ್ಲಿ ವಿದ್ಯುತ್ ಬೇಡಿಕೆ 270 ಗಿಗಾವಾಟ್‌ಗೆ ತಲುಪಲಿದೆ ಎಂದು ಸಚಿವಾಲಯವು ಅಂದಾಜಿಸಿತ್ತು. ಇದೀಗ ಈ ಅಂದಾಜನ್ನು ತುಸು ಮೀರಿದೆ.

ತರಕಾರಿ ಸಾಗಾಟ

ಪಿಟಿಐ ಚಿತ್ರ


ಪಶ್ಚಿಮ ಬಂಗಾಳದ ಕೋಲ್ಕತ್ತದಲ್ಲಿ ವ್ಯಾಪಾರಿಗಳು ಗುರುವಾರ ತರಕಾರಿಗಳನ್ನು ಸಾಗಿಸಿದರು

ಕೆನಡಾ: ಕ್ರಿಕೆಟ್ ಆಡಳಿತ ಮಂಡಳಿ ಅಧ್ಯಕ್ಷನ ಮೇಲೆ ದಾಳಿ

ಒಟ್ಟಾವ (ಎಪಿ): ಕೆನಡಾ ಕ್ರಿಕೆಟ್ ಆಡಳಿತ ಮಂಡಳಿಯ ಅಧ್ಯಕ್ಷ, ಭಾರತೀಯ ಮೂಲದ ಅರವಿಂದರ್ ಖೋಸಾ ಅವರ ನಿವಾಸದ ಮೇಲೆ ಅಪರಿಚಿತ ಬಂದೂಕುಧಾರಿಯೊಬ್ಬ ಗುಂಡಿನ ದಾಳಿ ನಡೆಸಿದ್ದಾನೆ ಎಂದು ಸಿಬಿಸಿ ನ್ಯೂಸ್ ವರದಿ ಮಾಡಿದೆ.

ಖೋಸಾ ಅವರು ಇತ್ತೀಚೆಗೆ ಕೆನಡಾ ಕ್ರಿಕೆಟ್ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಅವರ ನಿವಾಸದ ಮೇಲೆ ಗುಂಡಿನ ದಾಳಿ ನಡೆದಿರುವುದನ್ನು ಪೊಲೀಸ್ ಮೂಲಗಳು ಖಚಿತಪಡಿಸಿದೆ. ಬುಧವಾರ ಬೆಳಗಿನ ಜಾವ 4.40ರ ಸುಮಾರಿಗೆ ಗುಂಡಿನ ದಾಳಿ ನಡೆದಿದೆ

ಫುಜೈರಾ ದಕ್ಷಿಣ ಜಲಪ್ರದೇಶದ ಮೇಲೆ ನಿಯಂತ್ರಣ: ಇರಾನ್

ಟೆಹರಾನ್(ಎಎಫ್‌ಪಿ): ಯುಎಇ ಪ್ರಮುಖ ಬಂದರುಗಳಲ್ಲೊಂದಾದ ಫುಜೈರಾದ ದಕ್ಷಿಣಕ್ಕಿರುವ ಸಮುದ್ರ ಪ್ರದೇಶದ ಮೇಲೆ ತಾನು ನಿಯಂತ್ರಣ ಸಾಧಿಸಿದ್ದಾಗಿ ಇರಾನ್‌ನ ಪರ್ಷಿಯನ್ ಕೊಲ್ಲಿ ಜಲಸಂಧಿ ಪ್ರಾಧಿಕಾರ ಹೇಳಿಕೊಂಡಿದೆ.

ಇದಕ್ಕೆ ತೀಕ್ಷ್ಣ ಪ್ರತಿಕ್ರಿಯೆ ನೀಡಿರುವ ಯುಎಇ, ಪ್ರಾಧಿಕಾರದ ಹೇಳಿಕೆಯನ್ನು ಖಂಡಿಸಿದೆ.

ಪ್ರಾಧಿಕಾರವನ್ನು ಇರಾನ್ ಇತ್ತೀಚೆಗೆ ಸ್ಥಾಪಿಸಿದೆ. ಜಲ ಪ್ರದೇಶದ ಕುರಿತು ಬುಧವಾರ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದೆ. ತಾನು ನಿಯಂತ್ರಣ ಹೊಂದಿರುವುದಾಗಿ ಹೇಳಿಕೊಂಡಿರುವ ಜಲಪ್ರದೇಶದ ನಕ್ಷೆಯನ್ನು ಕೂಡ ಪ್ರಾಧಿಕಾರವು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದು, ಈ ಜಲಸಂಧಿಯ ವ್ಯಾಪ್ತಿ ಕುರಿತು ನಿರ್ಧರಿಸಿದ್ದಾಗಿ ಹೇಳಿಕೊಂಡಿದೆ.

‘ಇರಾನ್‌ನ ಕುಹ್–ಎ–ಮುಬಾರಕ್‌ನಿಂದ ಯುಎಇಯ ಫುಜೈರಾದ ದಕ್ಷಿಣದ ಜಲಪ್ರದೇಶದ ವರೆಗೆ, ನಂತರ ಇರಾನ್‌ನ ಕೆಶ್ಮ್ ದ್ವೀಪದಿಂದ ಯುಎಇಯ ಉಮ್–ಅಲ್ ಕುವೇನ್ ವರೆಗಿನ ಜಲಪ್ರದೇಶ ತನ್ನ ವ್ಯಾಪ್ತಿಗೆ ಒಳಪಡಲಿದೆ’ ಎಂದು ಪ್ರಾಧಿಕಾರ ಹೇಳಿಕೊಂಡಿದೆ.

‘ಹೊರ್ಮುಜ್ ಜಲಸಂಧಿ ಮೂಲಕ ಸಾಗಲು ಫುಜೈರಾ ಬಂದರಿನ ದಕ್ಷಿಣದ ಈ ಜಲಪ್ರದೇಶದ ಮೂಲಕವೇ ಸಂಚರಿಸಬೇಕು. ಇದಕ್ಕಾಗಿ ಪ್ರಾಧಿಕಾರದಿಂದ ದೃಢೀಕರಣ ಹಾಗೂ ಸಮನ್ವಯ ಅಗತ್ಯ’ ಎಂದೂ ಹೇಳಿದೆ.

ಖಂಡನೆ: ಇರಾನ್‌ನ ಈ ಹೇಳಿಕೆಯನ್ನು ಯುಎಇ ಅಧ್ಯಕ್ಷರ ಸಲಹೆಗಾರ ಅನ್ವರ್ ಗರ್ಗಶ್ ಗುರುವಾರ ಖಂಡಿಸಿದ್ದಾರೆ.

‘ಹೊರ್ಮುಜ್ ಜಲಸಂಧಿ ಮೇಲೆ ನಿಯಂತ್ರಣ ಸಾಧಿಸಲು ಇಲ್ಲವೇ ಸಮುದ್ರ ಗಡಿಗೆ ಸಂಬಂಧಿಸಿ ಯುಎಇಯ ಸಾರ್ವಭೌಮತೆಯನ್ನು ಉಲ್ಲಂಘಿಸಲು ಇರಾನ್ ಪ್ರಯತ್ನಿಸುತ್ತಿದೆ. ಇದು ಅಸಾಧ್ಯದ ಮಾತು’ ಎಂದು ಅವರು ‘ಎಕ್ಸ್’ನಲ್ಲಿ ತಿರುಗೇಟು ನೀಡಿದ್ದಾರೆ.

‘ಸಮೃದ್ಧೀಕರಿಸಿದ ಯುರೇನಿಯಂ ವಿದೇಶಕ್ಕೆ ಕಳುಹಿಸಬೇಡಿ’

ದುಬೈ (ರಾಯಿಟರ್ಸ್): ಇರಾನ್‌ನಲ್ಲಿರುವ ಅಣ್ವಸ್ತ್ರ ತಯಾರಿಕೆಗೆ ಸಿದ್ಧವಿರುವ ಸಮೃದ್ಧೀಕರಿಸಿದ ಯುರೇನಿಯಂ ಅನ್ನು ವಿದೇಶಗಳಿಗೆ ಕಳುಹಿಸಬಾರದು ಎಂದು ಪರಮೋಚ್ಚ ನಾಯಕ ಆಯತೊಲ್ಲಾ ಮೊಜ್ತಬಾ ಖಮೇನಿ ಆದೇಶಿಸಿದ್ದಾರೆ.


ಆಯತೊಲ್ಲಾ ಮೊಜ್ತಬಾ ಖಮೇನಿ

‘ಯುರೇನಿಯಂ ಅನ್ನು ವಿದೇಶಕ್ಕೆ ಕಳುಹಿಸುವುದರಿಂದ ದೇಶವು ಭವಿಷ್ಯದಲ್ಲಿ ಅಮೆರಿಕ ಮತ್ತು ಇಸ್ರೇಲ್‌ನ ದಾಳಿಗಳಿಗೆ ಹೆಚ್ಚಾಗಿ ತುತ್ತಾಗಬಹುದು ಎಂಬ ಆತಂಕವನ್ನು ಖಮೇನಿ ವ್ಯಕ್ತಪಡಿಸಿದ್ದಾರೆ’ ಎಂದು ಇರಾನ್‌ನ ಅಧಿಕಾರಿಗಳು ತಿಳಿಸಿದ್ದಾರೆ.

ಸಮೃದ್ಧೀಕರಿಸಿದ ಯುರೇನಿಯಂ ಅನ್ನು ಇರಾನ್ ತನ್ನ ಬಳಿ ಇರಿಸಿಕೊಳ್ಳಬಾರದು ಎನ್ನುವುದು ಅಮೆರಿಕದ ಪ್ರಮುಖ ಬೇಡಿಕೆಯಾಗಿದೆ. ಆದರೆ, ಇರಾನ್ ಈಗ ತನ್ನ ನಿಲುವನ್ನು ಮತ್ತಷ್ಟು ಕಠಿಣಗೊಳಿಸಿದೆ. ಮೊಜ್ತಬಾ ಖಮೇನಿ ಅವರ ಈ ಆದೇಶವು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಮತ್ತಷ್ಟು ನಿರಾಸೆಗೊಳಿಸಬಹುದು. ಇರಾನ್ ವಿರುದ್ಧ ಅಮೆರಿಕ–ಇಸ್ರೇಲ್ ಯುದ್ಧವನ್ನು ಕೊನೆಗೊಳಿಸುವ ಮಾತುಕತೆಗಳನ್ನು ಸಂಕೀರ್ಣಗೊಳಿಸುವ ಸಾಧ್ಯತೆ ಇದೆ.

‘ಇರಾನ್ ಅಣ್ವಸ್ತ್ರ ತಯಾರಿಸಲು ಅಗತ್ಯವಿರುವ ಹಾಗೂ ಗರಿಷ್ಠ ಪ್ರಮಾಣದಲ್ಲಿ ಸಮೃದ್ಧೀಕರಿಸಿದ ದಾಸ್ತಾನು ಇರಿಸಿರುವ ಯುರೇನಿಯಂ ಅನ್ನು ಆ ದೇಶದಿಂದ ಹೊರಗೆ ಸಾಗಿಸಲಾಗುವುದು. ಯಾವುದೇ ಶಾಂತಿ ಒಪ್ಪಂದದಲ್ಲಿ ಈ ಅಂಶವನ್ನು ಕಡ್ಡಾಯವಾಗಿ ಸೇರಿಸಲಾಗುವುದು ಎಂದು ಟ್ರಂಪ್ ಅವರು ಇಸ್ರೇಲ್‌ಗೆ ಭರವಸೆ ನೀಡಿದ್ದಾರೆ’ ಎಂಬುದಾಗಿ ಇಸ್ರೇಲ್‌ನ ಅಧಿಕಾರಿಗಳು ತಿಳಿಸಿದ್ದಾರೆ.

‘ಇರಾನ್‌ನಿಂದ ಸಮೃದ್ಧೀಕರಿಸಿದ ಯುರೇನಿಯಂ ಅನ್ನು ಹೊರಗೆ ಸಾಗಿಸುವವರೆಗೆ, ಅದು ತನ್ನ ಬಂಡುಕೋರ ಗುಂಪುಗಳಿಗೆ ನೀಡುವ ಬೆಂಬಲವನ್ನು ನಿಲ್ಲಿಸುವವರೆಗೆ ಮತ್ತು ಅದರ ಬ್ಯಾಲಿಸ್ಟಿಕ್ ಕ್ಷಿಪಣಿ ಸಾಮರ್ಥ್ಯ ಕಡಿಮೆಯಾಗುವವರೆಗೆ ಯುದ್ಧವು ಕೊನೆಗೊಂಡಿದೆ ಎಂದು ನಾವು ಪರಿಗಣಿಸುವುದಿಲ್ಲ’ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿದ್ದಾರೆ.

ದಾಳಿ ಬದಲು ಶಾಂತಿ ಒಪ್ಪಂದಕ್ಕೆ ಟ್ರಂಪ್ ಒಲವು; ಯುದ್ಧ ಪುನರಾರಂಭಿಸಲು ಇಸ್ರೇಲ್ ಪ್ರಧಾನಿ ಉತ್ಸುಕ

ಟ್ರಂಪ್–ನೆತನ್ಯಾಹು ದೂರವಾಣಿ ಸಂಭಾಷಣೆ

ವಾಷಿಂಗ್ಟನ್ (ಪಿಟಿಐ): ಇರಾನ್ ಮೇಲೆ ನಡೆಸುವ ದಾಳಿಯ ಬಗ್ಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ದೂರವಾಣಿ ಮೂಲಕ ಸಂಭಾಷಣೆ ನಡೆಸಿದ್ದಾರೆ.

‘ದಾಳಿಯನ್ನು ಪುನರಾರಂಭಿಸುವ ಬದಲು ಒಪ್ಪಂದ ಮಾಡಿಕೊಳ್ಳಲು ಟ್ರಂಪ್ ಒಲವು ತೋರುತ್ತಿದ್ದಾರೆ’ ಎಂದು ಅಮೆರಿಕದ ಮಾಧ್ಯಮಗಳು ವರದಿ ಮಾಡಿವೆ.

‘ಟ್ರಂಪ್ ಅವರೊಂದಿಗಿನ ಸಂಭಾಷಣೆ ನಂತರ ನೆತನ್ಯಾಹು ಅವರು ಆತಂಕಗೊಂಡಿದ್ದಾರೆ’ ಎಂದು ಅಮೆರಿಕದ ಮಾಧ್ಯಮ ಸಂಸ್ಥೆ ‘ಆಕ್ಸಿಯೋಸ್’ ಬುಧವಾರ ವರದಿ ಮಾಡಿದೆ.


ಡೊನಾಲ್ಡ್ ಟ್ರಂಪ್


ಬೆಂಜಮಿನ್ ನೆತನ್ಯಾಹು

‘ಇರಾನ್‌ನ ಸೇನಾ ಸಾಮರ್ಥ್ಯಗಳನ್ನು ಮತ್ತಷ್ಟು ಕುಗ್ಗಿಸಲು ಮತ್ತು ಅದರ ಪ್ರಮುಖ ಮೂಲಸೌಕರ್ಯಗಳನ್ನು ಧ್ವಂಸಗೊಳಿಸುವ ಮೂಲಕ ಅಲ್ಲಿನ ಆಡಳಿತವನ್ನು ದುರ್ಬಲಗೊಳಿಸಲು, ದಾಳಿಗಳನ್ನು ಪುನರಾರಂಭಿಸಲು ಇಸ್ರೇಲ್ ಪ್ರಧಾನಿ ಉತ್ಸುಕರಾಗಿದ್ದಾರೆ’ ಎಂದು ಹೇಳಿದೆ.

‘ಕತಾರ್ ಮತ್ತು ಯುಎಇ ಸೇರಿದಂತೆ ಅರಬ್ ರಾಷ್ಟ್ರಗಳ ಮನವಿ ಮೇರೆಗೆ ಇರಾನ್ ಮೇಲೆ ನಡೆಸಲು ಯೋಜಿಸಿದ್ದ ದಾಳಿಯನ್ನು ಮುಂದೂಡಲಾಗಿದೆ’ ಎಂದು ಟ್ರಂಪ್ ಅವರು ಭಾನುವಾರ ತಿಳಿಸಿದ್ದರು.

ಅಮೆರಿಕ ಮತ್ತು ಇರಾನ್ ನಡುವಿನ ಭಿನ್ನಾಭಿಪ್ರಾಯಗಳನ್ನು ನಿವಾರಿಸಲು ಪ್ರಾದೇಶಿಕ ಸಂಧಾನಕಾರರ ಸಲಹೆಗಳನ್ನು ಪಡೆದು ಕತಾರ್ ಮತ್ತು ಪಾಕಿಸ್ತಾನ ಪರಿಷ್ಕೃತ ಶಾಂತಿ ಪತ್ರವನ್ನು ಸಿದ್ಧಪಡಿಸಿವೆ ಎಂದು ‘ಆಕ್ಸಿಯೋಸ್’ ಮೂಲಗಳನ್ನು ಉಲ್ಲೇಖಿಸಿ ವರದಿ ಮಾಡಿದೆ.

ಮಾತುಕತೆಗಳ ಬಗ್ಗೆ ನೆತನ್ಯಾಹು ಅವರು ತೀವ್ರ ಸಂಶಯ ವ್ಯಕ್ತಪಡಿಸಿದ್ದಾರೆ.

ಒಪ್ಪಂದ ಮಾಡಿಕೊಳ್ಳಬಹುದು ಎಂದು ಟ್ರಂಪ್ ಹೇಳುತ್ತಲೇ ಇದ್ದಾರೆ. ಆದರೆ, ಅದು ಸಾಧ್ಯವಾಗದಿದ್ದರೆ ಯುದ್ಧವನ್ನು ಪುನರಾರಂಭಿಸಲು ಅವರು ಸಿದ್ಧರಿದ್ದಾರೆ.

‘ಇದು ತೀರ ಸೂಕ್ಷ್ಮ ಹಂತದಲ್ಲಿರುವ ವಿಚಾರ. ನಮಗೆ ಸರಿಯಾದ ಉತ್ತರಗಳು ಸಿಗದಿದ್ದರೆ, ಪರಿಸ್ಥಿತಿ ಕೈಮೀರಿ ಹೋಗುತ್ತದೆ. ನಾವೆಲ್ಲರೂ ಹೊರಡಲು ಸಿದ್ಧರಾಗಿದ್ದೇವೆ. ನಮಗೆ ಸರಿಯಾದ ಉತ್ತರಗಳು ಸಿಗಲೇಬೇಕು. ಅದು ನೂರಕ್ಕೆ ನೂರರಷ್ಟು ಉತ್ತಮ ಉತ್ತರಗಳಾಗಿರಬೇಕು’ ಎಂದು ಟ್ರಂಪ್ ಅವರು ಕನೆಕ್ಟಿಕಟ್‌ನ ಕೋಸ್ಟ್ ಗಾರ್ಡ್ ಅಕಾಡೆಮಿಯಿಂದ ವಾಷಿಂಗ್ಟನ್‌ಗೆ ಮರಳಿದ ನಂತರ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಪರಿಷ್ಕೃತ ಪ್ರಸ್ತಾವವನ್ನು ಪರಿಶೀಲಿಸುತ್ತಿರುವುದಾಗಿ ಇರಾನ್ ಹೇಳಿದೆ. ಆದರೆ, ಈ ಬಗ್ಗೆ ಹೆಚ್ಚಿನ ಮಾಹಿತಿ ನೀಡಿಲ್ಲ.

‘ಇರಾನ್‌ನ 14 ಅಂಶಗಳ ಪ್ರಸ್ತಾವದ ಆಧಾರದ ಮೇಲೆ ಮಾತುಕತೆಗಳು ನಡೆಯುತ್ತಿವೆ. ಪಾಕಿಸ್ತಾನದ ಗೃಹ ಸಚಿವರು ಸಂಧಾನಕ್ಕೆ ಸಹಾಯ ಮಾಡಲು ಟೆಹರಾನ್‌ಗೆ ಬಂದಿದ್ದಾರೆ’ ಎಂದು ಇರಾನ್‌ನ ವಿದೇಶಾಂಗ ಸಚಿವಾಲಯವು ತಿಳಿಸಿದೆ.

ಯುದ್ಧವನ್ನು ಅಧಿಕೃತವಾಗಿ ಕೊನೆಗೊಳಿಸಲು ಮತ್ತು ಇರಾನ್‌ನ ಅಣ್ವಸ್ತ್ರ ಕಾರ್ಯಕ್ರಮ, ಹೊರ್ಮುಜ್ ಜಲಸಂಧಿಯನ್ನು ಮುಕ್ತಗೊಳಿಸುವಂತಹ ವಿಷಯಗಳ ಕುರಿತು 30 ದಿನಗಳ ಮಾತುಕತೆ ಪ್ರಾರಂಭಿಸಲು ಅಮೆರಿಕ ಮತ್ತು ಇರಾನ್ ಸಹಿ ಮಾಡುವ ಉದ್ದೇಶದ ಪತ್ರ ಸಿದ್ಧಪಡಿಸಲು ಸಂಧಾನಕಾರರು ಕೆಲಸ ಮಾಡುತ್ತಿದ್ದಾರೆ ಎಂದು ಟ್ರಂಪ್ ಅವರು ನೆತನ್ಯಾಹು ಅವರಿಗೆ ತಿಳಿಸಿದ್ದಾರೆ ಎಂದು ವರದಿಯಾಗಿದೆ.

ಚಿಟಿಕೆ ಸುದ್ದಿ

ಜಾಮೀನು: ಹೈಕೋರ್ಟ್‌ಗೆ ಉಮರ್

ನವದೆಹಲಿ (ಪಿಟಿಐ): ದೆಹಲಿಯ ಈಶಾನ್ಯ ಭಾಗದಲ್ಲಿ 2020ರಲ್ಲಿ ನಡೆದ ಗಲಭೆಗಳಿಗೆ ಸಂಬಂಧಿಸಿದ ಪ್ರಕರಣದ ಆರೋಪಿ ಉಮರ್ ಖಾಲಿದ್ ಅವರು ಜಾಮೀನು ಅರ್ಜಿ ವಜಾಗೊಳಿಸಿದ ದೆಹಲಿ ಕೋರ್ಟ್‌ನ ಆದೇಶ ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಗುರುವಾರ ಅರ್ಜಿ ಸಲ್ಲಿಸಿದ್ದಾರೆ.


ಉಮರ್ ಖಾಲಿದ್

ಖಾಲಿದ್ ಅವರ ಜಾಮೀನು ಅರ್ಜಿಯನ್ನು ದೆಹಲಿಯ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯ ಮಂಗಳವಾರ ವಜಾಗೊಳಿಸಿತ್ತು.

‘ಸೋದರ ಸಂಬಂಧಿ ಮೃತಪಟ್ಟಿದ್ದು, 40 ದಿನ ನಡೆಸುವ ಧಾರ್ಮಿಕ ವಿಧಿಗಳಲ್ಲಿ ಪಾಲ್ಗೊಳ್ಳಬೇಕು. ತಾಯಿ ಕೂಡ ಶಸ್ತ್ರಚಿಕಿತ್ಸೆಗೆ ಒಳಗಾಗಲಿದ್ದು, ಆರೈಕೆ ಮಾಡಬೇಕಾಗಿರುವ ಕಾರಣ 15 ದಿನಗಳ ಮಧ್ಯಂತರ ಜಾಮೀನು ಮಂಜೂರು ಮಾಡಬೇಕು’ ಎಂದು ಖಾಲಿದ್ ಸೆಷನ್ಸ್ ಕೋರ್ಟ್‌ನಲ್ಲಿ ಮನವಿ ಮಾಡಿದ್ದರು.

ದಲಿತರ ಮದುವೆ ಮೆರವಣಿಗೆ: ಕಲ್ಲು ತೂರಾಟ

ಮಥುರಾ (ಪಿಟಿಐ): ಉತ್ತರ ಪ್ರದೇಶದ ಮಥುರಾದಲ್ಲಿ ಇಬ್ಬರು ದಲಿತ ಸಹೋದರರ ಮದುವೆ ಮೆರವಣಿಗೆ ಪ್ರಬಲ ಜಾತಿಯವರಿರುವ ಪ್ರದೇಶಕ್ಕೆ ಹೋದಾಗ ಕಲ್ಲು ತೂರಾಟ ನಡೆದಿದ್ದು, ಈ ಕಾರಣಕ್ಕೆ ಭುಗಿಲೆದ್ದ ಘರ್ಷಣೆಯಲ್ಲಿ ವೃದ್ಧೆಯೊಬ್ಬರು ಗಾಯಗೊಂಡಿದ್ದಾರೆ.

ಬುಧವಾರ ರಾತ್ರಿ ನಡೆದ ಪರಿಶಿಷ್ಟ ಜಾತಿಯ ಇಬ್ಬರು ಸಹೋದರರ ಮದುವೆಯ ಮೆರವಣಿಗೆಯ ವೇಳೆ ಘಟನೆ ನಡೆದಿದೆ. ‘ಮದುವೆ ಮೆರವಣಿಗೆಯು ಪ್ರಬಲ ಜಾತಿಯವರು ಇರುವ ಪ್ರದೇಶಕ್ಕೆ ತಲುಪಿದಾಗ ಚಾವಣಿಯ ಮೇಲಿಂದ ಕಲ್ಲುಗಳನ್ನು ಎಸೆಯಲಾಯಿತು. ಈ ವೇಳೆ ಘರ್ಷಣೆ ನಡೆದಿದ್ದು, ಸಿಹಿತಿಂಡಿಯ ಅಂಗಡಿಗಳಿಗೆ ದುಷ್ಕರ್ಮಿಗಳು ಹಾನಿ ಮಾಡಿದ್ದಾರೆ’ ಎಂದು ವಧುವಿನ ಸಂಬಂಧಿಕರೊಬ್ಬರು ದೂರು ನೀಡಿದ್ದಾರೆ.‘ಇನ್ನೊಂದು ಗುಂಪಿನ ಸದಸ್ಯರು ತಮ್ಮ ಮನೆಗೆ ನುಗ್ಗಿ, ಮದುವೆಗೆ ಇಟ್ಟಿದ್ದ ವಸ್ತುಗಳನ್ನು ಹಾನಿಗೊಳಿಸಿದ್ದಾರೆ’ ಎಂದು ವಧುವಿನ ಸಹೋದರ ಆರೋಪಿಸಿದ್ದಾರೆ.

‘ಗಂಭೀರವಾಗಿ ಗಾಯಗೊಂಡಿರುವ ವೃದ್ಧೆಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಘರ್ಷಣೆಯಲ್ಲಿ ಭಾಗಿಯಾಗಿದ್ದ ಐವರನ್ನು ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿಗಳ ಮೂಲಕ ಗುರುತಿಸಿ, ವಶಕ್ಕೆ ಪಡೆಯಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಮಣಿಪುರ: ನಾಲ್ವರ ಸೆರೆ, ಶಸ್ತ್ರಾಸ್ತ್ರ ಜಪ್ತಿ



ಇಂಫಾಲ್ (ಪಿಟಿಐ): ಮಣಿಪುರದ ಇಂಫಾಲ್ ಪೂರ್ವ ಜಿಲ್ಲೆಯಲ್ಲಿ ನಿಷೇಧಿತ ಯುಎನ್‌ಎಲ್‌ಎಫ್(ಪಾಂಬೈ) ಸಂಘಟನೆಯ ನಾಲ್ವರನ್ನು ಬಂಧಿಸಿರುವ ಪೊಲೀಸರು 60ಕ್ಕೂ ಅಧಿಕ ಶಸ್ತ್ರಾಸ್ತ್ರಗಳನ್ನು ಜಪ್ತಿ ಮಾಡಿದ್ದಾರೆ.

‘ಭದ್ರತಾ ಪಡೆಗಳಿಂದ ಲೂಟಿ ಮಾಡಿದ ಶಸ್ತ್ರಾಸ್ತ್ರಗಳನ್ನು ಮಾರಾಟಕ್ಕಾಗಿ ಲಾಮ್‌ಡೆಂಗ್‌ಗೆ ತರಲಾಗುತ್ತಿದೆ ಎಂಬ ಗುಪ್ತಚರ ಮಾಹಿತಿಯ ಆಧಾರದಲ್ಲಿ ಯುಎನ್‌ಎಲ್‌ಎಫ್ ಶಿಬಿರದಲ್ಲಿ ಶೋಧ ನಡೆಸಿ ಇಬ್ಬರನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಕಾರ್ಯಾಚರಣೆ ವೇಳೆ ಬಂಧಿತರ ಸಹಚರರಿಬ್ಬರು ಪೊಲೀಸರ ಮೇಲೆ ಗುಂಡು ಹಾರಿಸಿದ್ದು, ಅವರನ್ನು ಬಂಧಿಸಲಾಗಿದೆ.

‘ಎಕೆ ಸರಣಿಯ ರೈಫಲ್‌ಗಳು, ಎಂ ಸರಣಿಯ ರೈಫಲ್‌ಗಳು, ಪಿಸ್ತೂಲ್ ಮತ್ತು ಸ್ಫೋಟಕಗಳು, ಆರ್‌ಪಿಜಿ ಉಡಾವಣಾ ವಾಹಕ ಸೇರಿದಂತೆ 38 ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಬೀದಿ ನಾಯಿ ದಾಳಿ ವ್ಯಕ್ತಿ ಸಾವು ಶವವಿಟ್ಟು ಪ್ರತಿಭಟನೆ

ಲಾತೂರ್ (ಪಿಟಿಐ): ಬೀದಿ ನಾಯಿಗಳ ದಾಳಿಯಿಂದ ಮೃತಪಟ್ಟಿದ್ದ ವಿಲಾಸ್ ಗೋರ್ವೆ (22) ಅವರ ಶವವನ್ನು ಸಂಬಂಧಿಕರು ಹಾಗೂ ನಿವಾಸಿಗಳು ಮಹಾರಾಷ್ಟ್ರದ ಲಾತೂರ್‌ನ ಪುರಸಭೆ ಕಚೇರಿ ಎದುರು ಇಟ್ಟು ಗುರುವಾರ ಪ್ರತಿಭಟನೆ ನಡೆಸಿದ್ದಾರೆ.

‘ನಗರದಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದ್ದರೂ ಅವುಗಳನ್ನು ನಿಯಂತ್ರಿಸಲು ಪುರಸಭೆ ಯಾವುದೇ ಕ್ರಮ ಕೈಗೊಂಡಿಲ್ಲ’ ಎಂದು ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪುರಸಭೆಯ ಸಂಕೀರ್ಣಕ್ಕೆ ಹಾಕಿದ್ದ ಬೀಗವನ್ನು ಒಡೆಯಲು ಪ್ರತಿಭಟನಕಾರರು ಮುಂದಾದರು. ಸ್ಥಳದಲ್ಲಿ ಹೆಚ್ಚಿನ ಪೊಲೀಸರನ್ನು ನಿಯೋಜಿಸಲಾಗಿತ್ತು.

ತಮಿಳುನಾಡು: ಸಂಪುಟ ವಿಸ್ತರಣೆ

ಟಿವಿಕೆಯ 21, ಕಾಂಗ್ರೆಸ್‌ನ ಇಬ್ಬರಿಗೆ ಸಚಿವ ಸ್ಥಾನ ಸಚಿವರ ಸಂಖ್ಯೆ 33ಕ್ಕೆ ಏರಿಕೆ

ಚೆನ್ನೈ (ಪಿಟಿಐ): ತಮಿಳುನಾಡಿನ ಮುಖ್ಯಮಂತ್ರಿ ಸಿ. ಜೋಸೆಫ್ ಅವರು ಗುರುವಾರ ತಮ್ಮ ಸಂಪುಟ ವಿಸ್ತರಿಸಿದ್ದು, 23 ಶಾಸಕರು ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು. ಇದರಲ್ಲಿ ಟಿವಿಕೆ ಪಕ್ಷದ 21 ಹಾಗೂ ಕಾಂಗ್ರೆಸ್‌ನ ಇಬ್ಬರು ಶಾಸಕರು ಸೇರಿದ್ದಾರೆ.

ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಅವರು ಹೊಸ ಸಚಿವರಿಗೆ ಅಧಿಕಾರ ಗೋಪ್ಯತೆ ಬೋಧಿಸಿದರು. ಇದರಿಂದ ವಿಜಯ್ ನೇತೃತ್ವದ ಸಂಪುಟದ ಬಲ 33ಕ್ಕೆ (ಸಿ.ಎಂ ಸೇರಿ) ಏರಿಕೆಯಾಯಿತು.

ಖಾತೆಗಳ ಹಂಚಿಕೆ: ಮುಖ್ಯಮಂತ್ರಿ ವಿಜಯ್ ಅವರು ನೂತನ ಸಚಿವರಿಗೆ ಖಾತೆಗಳನ್ನು ಹಂಚಿಕೆ ಮಾಡಿದ್ದಾರೆ. ಅಲ್ಲದೆ ಅವರು ಈ ಮೊದಲು ಸಚಿವರಾಗಿದ್ದವರ ಕೆಲ ಖಾತೆಗಳನ್ನು ಪರಿಷ್ಕರಿಸಿದ್ದಾರೆ.

ವಿಜಯ್ ಅವರು ತಮ್ಮ ಬಳಿ ಸಾರ್ವಜನಿಕ ಆಡಳಿತ, ಗೃಹ, ಬಡತನ ನಿರ್ಮೂಲನೆ, ಯುವಜನ ಕಲ್ಯಾಣ, ಮಕ್ಕಳ ಅಭಿವೃದ್ಧಿ, ನಗರಾಡಳಿತ, ನೀರು ಸರಬರಾಜು ಖಾತೆಗಳನ್ನು ಉಳಿಸಿಕೊಂಡಿದ್ದಾರೆ.

ಸಚಿವ ಎನ್. ಆನಂದ್ ಅವರಿಗೆ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್, ನೀರಾವರಿ ಖಾತೆಗಳನ್ನು ವಹಿಸಲಾಗಿದೆ. ಆಧವ್ ಅರ್ಜುನ್ ಅವರಿಗೆ ಲೋಕೋಪಯೋಗಿ ಮತ್ತು ಕ್ರೀಡಾ ಅಭಿವೃದ್ಧಿ, ಕೆ.ಜಿ. ಅರುಣ್ ರಾಜ್ ಅವರಿಗೆ ಆರೋಗ್ಯ, ವೈದ್ಯಕೀಯ ಶಿಕ್ಷಣ, ಪಿ. ವೆಂಕಟರಮಣನ್ ಅವರಿಗೆ ಆಹಾರ ಮತ್ತು ನಾಗರಿಕ ಸರಬರಾಜು ಖಾತೆಗಳನ್ನು ಹಂಚಿಕೆ ಮಾಡಲಾಗಿದೆ.

ಹಣಕಾಸು ಖಾತೆ ಬದಲು: ಈ ಹಿಂದೆ ಹಣಕಾಸು ಖಾತೆ ಹಂಚಿಕೆ ಮಾಡಲಾಗಿದ್ದ ಕೆ.ಎ.ಸೆಂಗೋಟ್ಟೆಯನ್ ಅವರಿಗೆ ಆ ಖಾತೆಯ ಬದಲಿಗೆ ಕಂದಾಯ ಇಲಾಖೆಯ ಜವಾಬ್ದಾರಿ ನೀಡಲಾಗಿದೆ.ಹಣಕಾಸು ಖಾತೆಯನ್ನು ಎನ್. ಮಾರಿ ವಿಲ್ಸನ್ ಅವರಿಗೆ ವಹಿಸಲಾಗಿದೆ. ವಿನೋತ್ ಅವರಿಗೆ ಕೃಷಿ ಇಲಾಖೆ ಹಂಚಿಕೆ ಮಾಡಲಾಗಿದೆ.

ಡಿ. ಲೋಕೇಶ್ ತಮಿಳ್‌ಸೆಲ್ವನ್ ಅವರಿಗೆ ವಾಣಿಜ್ಯ ತೆರಿಗೆ ಮತ್ತು ನೋಂದಣಿ ಖಾತೆ ಹಂಚಿಕೆ ಮಾಡಲಾಗಿದೆ. ಅವರು ಮಾಜಿ ಸ್ಪೀಕರ್ ಧನಪಾಲ್ ಅವರ ಮಗ.

ಸಚಿವ ಸ್ಥಾನ ಪಡೆದಿರುವ ಕಾಂಗ್ರೆಸ್ ಶಾಸಕರಾದ ಎಸ್. ರಾಜೇಶ್ ಕುಮಾರ್ ಅವರಿಗೆ ಪ್ರವಾಸೋದ್ಯಮ, ಪಿ. ವಿಶ್ವನಾಥನ್ ಅವರಿಗೆ ಶಿಕ್ಷಣ ಖಾತೆ ನೀಡಲಾಗಿದೆ.

ಎ.ಐ ಸಚಿವಾಲಯ ಸ್ಥಾಪನೆ: ತಮಿಳುನಾಡು ಸರ್ಕಾರ ಕೃತಕ ಬುದ್ಧಿಮತ್ತೆಗೆ (ಎ.ಐ) ಮೀಸಲಾದ ಸಚಿವಾಲಯವನ್ನು ಸ್ಥಾಪಿಸಿದ್ದು, ಮೇಲಾಚೇರಿ ಶಾಸಕ ಆರ್. ಕುಮಾರ್ ಅವರಿಗೆ ಎ.ಐ, ಮಾಹಿತಿ ತಂತ್ರಜ್ಞಾನ ಮತ್ತು ಡಿಜಿಟಲ್ ಸೇವೆಗಳ ಖಾತೆ ಹಂಚಿಕೆ ಮಾಡಿದೆ. ಈ ಮೂಲಕ ಪಕ್ಕದ ಕೇರಳಂ ರಾಜ್ಯದ ಬಳಿಕ ಎ.ಐಗೆ ಪ್ರತ್ಯೇಕ ಸಚಿವಾಲಯ ರಚಿಸಿದ ಎರಡನೇ ರಾಜ್ಯ ಎಂಬ ಹೆಗ್ಗಳಿಕೆಗೆ ತಮಿಳುನಾಡು ಪಾತ್ರವಾಗಿದೆ.

ಸಂಪುಟ ಸೇರಲಿರುವ ಐಯುಎಂಎಲ್: ಮುಖ್ಯಮಂತ್ರಿ ವಿಜಯ್ ನೇತೃತ್ವದ ಸಂಪುಟದಲ್ಲಿ ಭಾಗಿ ಆಗುವುದಾಗಿ ಐಯುಎಂಎಲ್ ಪಕ್ಷದ ಮುಖ್ಯಸ್ಥ ಕೆ.ಎಂ. ಖಾದರ್ ಮೊಹಿದೀನ್ ಗುರುವಾರ ಪ್ರಕಟಿಸಿದರು.

ಪಕ್ಷದ ಶಾಸಕ ಎ.ಎಂ. ಷಹಜಹಾನ್ ಅವರನ್ನು ಸಂಪುಟಕ್ಕೆ ಸೇರಿಸಿಕೊಳ್ಳಲು ಶಿಫಾರಸು ಮಾಡಿರುವುದಾಗಿ ಅವರು ಸುದ್ದಿಗಾರರಿಗೆ ತಿಳಿಸಿದರು.

ಪ್ರಮಾಣವಚನ: ರಾಹುಲ್ ಪರ ಘೋಷಣೆ

ಚೆನ್ನೈ (ಪಿಟಿಐ): ಕಾಂಗ್ರೆಸ್ ಶಾಸಕ ಎಸ್. ರಾಜೇಶ್ ಕುಮಾರ್ ಅವರು ಸಚಿವರಾಗಿ ಪ್ರಮಾಣವಚನ ಸ್ವೀಕರಿಸುವ ವೇಳೆ ಕಾಂಗ್ರೆಸ್ ನಾಯಕರಾದ ಕಾಮರಾಜ್, ರಾಜೀವ್ ಗಾಂಧಿ ಮತ್ತು ರಾಹುಲ್ ಗಾಂಧಿ ಅವರ ಪರ ಘೋಷಣೆಗಳನ್ನು ಕೂಗಿದರು. ಈ ವೇಳೆ ಮಧ್ಯಪ್ರವೇಶಿಸಿದ ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಅವರು ‘ಅದು ನಿಮ್ಮ ಪ್ರಮಾಣವಚನದ ಭಾಗವಲ್ಲ, ಪ್ರಮಾಣ ವಚನದ ಲಿಖಿತ ಪತ್ರಕ್ಕೆ ಬದ್ಧರಾಗಿರಿ’ ಎಂದು ತಿಳಿಸಿದರು.

ರಾಜ್ಯಪಾಲರ ಹೇಳಿಕೆ ಬೆನ್ನಲ್ಲೇ ಅಧಿಕಾರಿಯೊಬ್ಬರು ರಾಜೇಶ್ ಅವರ ಬಳಿ ಬಂದು, ಮುಂದೆ ಇರಿಸಲಾಗಿರುವ ಲಿಖಿತ ಹೇಳಿಕೆಯನ್ನು ಓದುವಂತೆ ತೋರಿಸಿದರು.ಬಳಿಕ ಅವರು ಪ್ರಮಾಣವಚನ ಪೂರ್ಣಗೊಳಿಸಿದರು. ಅವರು ಕಿಲ್ಲಿಯೂರ್ ಕ್ಷೇತ್ರದ ಶಾಸಕ.


ಎಸ್. ರಾಜೇಶ್ ಕುಮಾರ್

ಮುಸ್ಲಿಮರ ಪ್ರಾತಿನಿಧ್ಯ ಹೆಚ್ಚಿಸಿ- ಎಸ್‌ಡಿಪಿಐ: ಮುಂಬರುವ ದಿನಗಳಲ್ಲಿ ರಾಜ್ಯ ಸಚಿವ ಸಂಪುಟದಲ್ಲಿ ಮುಸ್ಲಿಂ ಸಮುದಾಯಕ್ಕೆ ಸೂಕ್ತ ಪ್ರಾತಿನಿಧ್ಯ ನೀಡುವಂತೆ ಎಸ್‌ಡಿಪಿಐ ಗುರುವಾರ ತಮಿಳುನಾಡು ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಅವರನ್ನು ಆಗ್ರಹಿಸಿದೆ. ಟಿವಿಕೆ ನೇತೃತ್ವದ ಸಂಪುಟದಲ್ಲಿ ಮುಸ್ಲಿಂ ಸಮುದಾಯದ ಒಬ್ಬರಿಗೆ ಮಾತ್ರ ಅವಕಾಶ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಸ್ಥಾನಗಳನ್ನು ನೀಡುವಂತೆ ಎಸ್‌ಡಿಪಿಐ ತಮಿಳುನಾಡು ಘಟಕದ ಅಧ್ಯಕ್ಷ ಮುಹಮ್ಮದ್ ಮುಬಾರಕ್ ಒತ್ತಾಯಿಸಿದ್ದಾರೆ.


ತಮಿಳುನಾಡಿನ ಹಣಕಾಸು ಸಚಿವರಾಗಿ ಗುರುವಾರ ಪ್ರಮಾಣವಚನ ಸ್ವೀಕರಿಸಿದ ಎನ್. ಮಾರಿ ವಿಲ್ಸನ್ ಅವರಿಗೆ ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಹೂಗುಚ್ಛ ನೀಡಿ ಶುಭಕೋರಿದರು. ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಇದ್ದಾರೆ —ಪಿಟಿಐ ಚಿತ್ರ

ಮತ್ತೆ ‘ವಂದೇ ಮಾತರಂ’ ವಿವಾದ

ಲೋಕಭವನದಲ್ಲಿ ಗುರುವಾರ ನಡೆದ ಸಚಿವರ ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ಹಾಡಿದ ಗೀತೆಗಳ ಪೈಕಿ ‘ತಮಿಳ್ ತಾಯ್ ವಾಜ್ತು’ (ನಾಡಗೀತೆ) ಕೊನೆಯದಾಗಿ ಹಾಡಲಾಯಿತು. ಅದೀಗ ವಿವಾದವಾಗಿದೆ.

ಸಮಾರಂಭದಲ್ಲಿ ‘ವಂದೇ ಮಾತರಂ’ ಮತ್ತು ರಾಷ್ಟ್ರಗೀತೆ ಬಳಿಕ ನಾಡಗೀತೆ ಹಾಡಿದ್ದಕ್ಕೆ ಎಡಪಕ್ಷಗಳು ಆಕ್ಷೇಪ ವ್ಯಕ್ತಪಡಿಸಿವೆ.

ವಿಜಯ್ ಅವರು ಮೇ 10ರಂದು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವಿಕರಿಸಿದಾಗಲೂ ‘ವಂದೇ ಮಾತರಂ’, ‘ಜನ ಗಣ ಮನ’ದ ಬಳಿಕ ಮೂರನೆಯದ್ದಾಗಿ ನಾಡಗೀತೆ ಪ್ರಸ್ತುತಪಡಿಸಲಾಗಿತ್ತು. ಇದೀಗ ಎರಡನೇ ಬಾರಿಯೂ ಹಾಗೆಯೇ ಮಾಡಲಾಗಿದೆ ಎಂದು ಸಿಪಿಐ ರಾಜ್ಯ ಘಟಕದ ಕಾರ್ಯದರ್ಶಿ ಎಂ. ವೀರಪಾಂಡ್ಯನ್ ಹೇಳಿದ್ದಾರೆ.

ತಮಿಳುನಾಡಿನ ರಾಜ್ಯಪಾಲರು ನಾಡಗೀತೆಗೆ ಆದ್ಯತೆ ನೀಡಬೇಕು. ಈ ಮೂಲಕ ತಮಿಳು ಜನರ ಭಾವನೆಗಳನ್ನು ಗೌರವಿಸಬೇಕು ಎಂದು ಅವರು ಒತ್ತಿ ಹೇಳಿದರು.

ಚುನಾವಣೆಯಲ್ಲಿ ಮಕ್ಕಳ ಬಳಕೆ: ವಿಜಯ್‌ಗೆ ನೋಟಿಸ್

ಚೆನ್ನೈ (ಪಿಟಿಐ): ಇತ್ತೀಚೆಗೆ ನಡೆದ ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ, ಮತದಾರರ ಮೇಲೆ ಪ್ರಭಾವ ಬೀರಲು ಮಕ್ಕಳನ್ನು ಬಳಸಿಕೊಂಡ ಆರೋಪದ ಬಗ್ಗೆ ತನಿಖೆ ನಡೆಸಲು ಚುನಾವಣಾ ಆಯೋಗಕ್ಕೆ ನಿರ್ದೇಶಿಸಬೇಕೆಂದು ಕೋರಿ ಸಲ್ಲಿಸಲಾದ ಅರ್ಜಿಯ ವಿಚಾರಣೆ ನಡೆಸಿದ ಮದ್ರಾಸ್ ಹೈಕೋರ್ಟ್, ಟಿವಿಕೆ ಪಕ್ಷದ ಸ್ಥಾಪಕ, ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಸೇರಿ ಹಲವರಿಗೆ ಗುರುವಾರ ನೋಟಿಸ್ ಜಾರಿಗೊಳಿಸಿದೆ.



ಕಡಲೂರು ಜಿಲ್ಲೆಯ ವಕೀಲೆ ಎಲ್.ವಾಸುಕಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಜಿ.ಆರ್. ಸ್ವಾಮಿನಾಥನ್ ಮತ್ತು ವಿ.ಲಕ್ಷ್ಮಿನಾರಾಯಣನ್ ಅವರ ರಜಾಕಾಲದ ಪೀಠವು, ಚುನಾವಣಾ ಆಯೋಗ, ತಮಿಳುನಾಡಿನ ಮುಖ್ಯ ಚುನಾವಣಾ ಅಧಿಕಾರಿ, ಡಿಎಂಕೆ ಅಧ್ಯಕ್ಷ ಎಂ.ಕೆ ಸ್ಟಾಲಿನ್ ಮತ್ತು ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಕೆ. ಪಳನಿಸ್ವಾಮಿ ಅವರಿಗೂ ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ. ಪ್ರಕರಣಕ್ಕೆ ಸಂಬಂಧಿಸಿದ ಮುಂದಿನ ವಿಚಾರಣೆ ಮೇ 29ರಂದು ನಡೆಯಲಿದೆ.

ಚೆನ್ನೈ ವೈಎಂಸಿಎ ಕ್ರೀಡಾಂಗಣದಲ್ಲಿ ನಡೆದ ಚುನಾವಣಾ ಪ್ರಚಾರದಲ್ಲಿ ಟಿವಿಕೆ ಸ್ಥಾಪಕ ವಿಜಯ್ ಅವರು, ಯಾವ ಅಭ್ಯರ್ಥಿಗೆ ಮತ ನೀಡಬೇಕು ಎನ್ನುವ ವಿಷಯದಲ್ಲಿ ಮಕ್ಕಳು ತಮ್ಮ ಪೋಷಕರ ಮೇಲೆ ಭಾವನಾತ್ಮಕವಾಗಿ ಪ್ರಭಾವ ಬೀರುವಂತೆ, ಒತ್ತಡ ಹೇರುವಂತೆ ಕರೆ ನೀಡಿದ್ದಾಗಿ ವಾಸುಕಿ ಆರೋಪಿಸಿದ್ದಾರೆ.

ಮಗಳನ್ನು ಕತ್ತರಿಸಿದ ತಂದೆ ಬಂಧನ

ಲಖನೌ (ಉತ್ತರ ಪ್ರದೇಶ) (ಪಿಟಿಐ): ಅನ್ಯ ಧರ್ಮೀಯ ಯುವಕನನ್ನು ಪ್ರೀತಿಸುತ್ತಿದ್ದಾಳೆ ಎಂದು ಶಂಕಿಸಿ, ಮಗಳ ಹತ್ಯೆಗೈದು ದೇಹವನ್ನು ಆರು ತುಂಡುಗಳಾಗಿ ಕತ್ತರಿಸಿದ್ದ ಆರೋಪದ ಮೇಲೆ ತಂದೆಯನ್ನು ಪೊಲೀಸರು ಬಂಧಿಸಿದ್ದಾರೆ.

‘ಕುಶಿನಗರ ನಿವಾಸಿ ಬಿಗ್ಗನ್ ಅನ್ಸಾರಿ, ತಂಗಿ ನೂರ್‌ಜಹಾನ್ ಮತ್ತು ಭಾಮೈದ ಮುಜಿಬುಲ್ಲ ಅನ್ಸಾರಿ ಸಹಾಯದಿಂದ 15 ವರ್ಷದ ಮಗಳು ಶಾಬಾಳನ್ನು ಹತ್ಯೆ ಮಾಡಿದ್ದಾನೆ. ಮೂವರೂ ಆರೋಪಿಗಳನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.

‘ಕುಶಿನಗರದ ಕೊಳವೊಂದರಲ್ಲಿ ಶಾಬಾಳ ತಲೆ ಪತ್ತೆಯಾಗಿದ್ದರೆ, ಛಾಪ್ರಾ-ಗೋಮತಿ ನಗರ ಎಕ್ಸ್‌ಪ್ರೆಸ್ ರೈಲಿನ ಎಸ್-1 ಕೋಚ್‌ನಲ್ಲಿ ಮೇ 17ರಂದು ಮುಂಡ ಪತ್ತೆಯಾಗಿತ್ತು. ಕೈ ಕಾಲುಗಳನ್ನು ಪ್ರತ್ಯೇಕವಾಗಿ ಪಾಲಿಥಿನ್ ಚೀಲದಲ್ಲಿ ಇರಿಸಲಾಗಿತ್ತು’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಎಸ್‌ಪಿ ರೋಹಿತ್ ಮಿಶ್ರಾ ಅವರು ಸಂತ್ರಸ್ತೆ ಮತ್ತು ಆರೋಪಿ ಪತ್ತೆಗಾಗಿ ಮೂರು ತಂಡಗಳನ್ನು ರಚಿಸಿದ್ದರು. ‘ತನಿಖಾಧಿಕಾರಿಗಳು ಕುಶಿನಗರ ಜಿಲ್ಲೆಯ ರೈಲು ನಿಲ್ದಾಣಗಳಲ್ಲಿನ ಸುಮಾರು 800 ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಪರಿಶೀಲಿಸಿದಾಗ ಇದು ಗೊತ್ತಾಯಿತು’ ಎಂದು ರೋಹಿತ್ ಮಿಶ್ರಾ ತಿಳಿಸಿದ್ದಾರೆ. ‘ವಿಚಾರಣೆ ವೇಳೆ, ಬಿಗ್ಗನ್ ಅನ್ಸಾರಿ ಅಪರಾಧ ಎಸಗಿರುವುದನ್ನು ಒಪ್ಪಿಕೊಂಡಿದ್ದಾನೆ’ ಎಂದು ತಿಳಿಸಿದ್ದಾರೆ.

ವಿಕ್ರಾಂತ್‌ಗೆ ತ್ರಿಪಾಠಿ ಭೇಟಿ...


ಪ್ರಜಾವಾಣಿ ಚಿತ್ರ:


ನೌಕಾಪಡೆಯ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕೆ. ತ್ರಿಪಾಠಿ ಅವರು ಮುಂಬೈನಲ್ಲಿ ಗುರುವಾರ ಯುದ್ಧವಿಮಾನ ವಾಹಕನೌಕೆ ಐಎನ್‌ಎಸ್ ವಿಕ್ರಾಂತ್‌ಗೆ ಭೇಟಿ ನೀಡಿ ಪರಿಶೀಲಿಸಿದರು —ಪಿಟಿಐ ಚಿತ್ರ

ಟ್ವಿಶಾ ಪ್ರಕರಣ: ಹೈಕೋರ್ಟ್ ಮೊರೆ

ಜಬಲಪುರ/ಭೋಪಾಲ್ (ಪಿಟಿಐ): ನಟಿ ಟ್ವಿಶಾ ಶರ್ಮಾ ಸಾವು ಪ್ರಕರಣ ಸಂಬಂಧ, ಆಕೆ ಪೋಷಕರು ಹಾಗೂ ತಲೆಮರೆಸಿಕೊಂಡಿರುವ ಅವರ ಪತಿ ಸಮರ್ಥ್ ಸಿಂಗ್ ಅವರ ಕುಟುಂಬದವರ ನಡುವಿನ ಕಾನೂನು ಹೋರಾಟ ಗುರುವಾರ ತೀವ್ರಗೊಂಡಿದೆ. ಎರಡೂ ಕುಟುಂಬಗಳು ಮಧ್ಯಪ್ರದೇಶದ ಹೈಕೋರ್ಟ್‌ನ ಮೊರೆಹೋಗಿವೆ.

ಸಮರ್ಥ್ ಅವರು ಜಾಮೀನು ಕೋರಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರೆ, ಅವರ ತಾಯಿ, ಭೋಪಾಲ್ ಗ್ರಾಹಕ ನ್ಯಾಯಾಲಯದ ಅಧ್ಯಕ್ಷೆ ಗಿರಿಬಾಲಾ ಸಿಂಗ್ ಅವರಿಗೆ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ನೀಡಿರುವ ನಿರೀಕ್ಷಣಾ ಜಾಮೀನನ್ನು ಪ್ರಶ್ನಿಸಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಲು ಟ್ವಿಶಾ ಶರ್ಮಾ ಅವರ ಪೋಷಕರು ನಿರ್ಧರಿಸಿದ್ದಾರೆ.


ಟ್ವಿಶಾ ಶರ್ಮಾ, ಸಮರ್ಥ್

ಭೋಪಾಲ್‌ನ ಕತಾರ ಹಿಲ್ಸ್ ಪ್ರದೇಶದಲ್ಲಿರುವ ಮನೆಯಲ್ಲಿ ಟ್ವಿಶಾ ಅವರ ಮೃತದೇಹ ನೇಣು ಬಿಗಿದ ಸ್ಥಿತಿಯಲ್ಲಿ ಮೇ 12ರಂದು ಪತ್ತೆಯಾಗಿತ್ತು.

‘ವರದಕ್ಷಿಣೆ ಕಿರುಕುಳ ನೀಡಿ ಆಕೆಯನ್ನು ಕೊಲೆ ಮಾಡಲಾಗಿದೆ’ ಎಂದು ಟ್ವಿಶಾ ಅವರ ಪಾಲಕರು ಆರೋಪಿಸಿದ್ದರು. ‘ಸೊಸೆಯು ಮಾದಕ ವಸ್ತುವಿನ ವ್ಯಸನಿಯಾಗಿದ್ದಳು’ ಎಂದು ಸಿಂಗ್ ದಂಪತಿ ಹೇಳಿದ್ದರು.

ಪೊಲೀಸರು ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 80(2), 85, ಮತ್ತು 3(5)ರ ಅಡಿ ವರದಕ್ಷಿಣೆ ನಿಷೇಧ ಕಾಯ್ದೆಯ ಸಂಬಂಧಿತ ಸೆಕ್ಷನ್‌ಗಳಡಿ ಸಮರ್ಥ್ ಸಿಂಗ್ ಮತ್ತು ಗಿರಿಬಾಲಾ ಸಿಂಗ್ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ.

ಸಮರ್ಥ್ ಬಗ್ಗೆ ಮಾಹಿತಿ ನೀಡಿದವರಿಗೆ ₹10 ಸಾವಿರ ನಗದು ಬಹುಮಾನ ನೀಡುವುದಾಗಿ ಪೊಲೀಸರು ಘೋಷಿಸಿದ್ದಾರೆ. ಅವರ ಪಾಸ್‌ಪೋರ್ಟ್ ರದ್ದುಗೊಳಿಸುವಂತೆ ನ್ಯಾಯಾಲಯದ ಮೊರೆಹೋಗಿದ್ದಾರೆ.

ಉಗ್ರರಿಗೆ ನೆರವು ನೀಡಿದ ವ್ಯಕ್ತಿ ಬಂಧನ

ಶ್ರೀನಗರ (ಪಿಟಿಐ): ಸ್ಥಳೀಯವಾಗಿ ಉಗ್ರರಿಗೆ ನೆರವು ನೀಡುತ್ತಿದ್ದ ವ್ಯಕ್ತಿಯನ್ನು ಜಮ್ಮು ಮತ್ತು ಕಾಶ್ಮೀರದ ಕುಲಗಾಂವ್ ಜಿಲ್ಲೆಯಲ್ಲಿ ಭದ್ರತಾ ಪಡೆಗಳು ಬಂಧಿಸಿವೆ.

ಪೊಲೀಸರು, ಸೇನೆ ಮತ್ತು ಸಿಆರ್‌ಪಿಎಫ್ ಸಿಬ್ಬಂದಿ ಜಿಲ್ಲೆಯ ಮೊಹಮ್ಮದ್‌ಪುರ ಗ್ರಾಮದಲ್ಲಿ ಜಂಟಿ ಕಾರ್ಯಾಚರಣೆ ನಡೆಸಿದ್ದು, ಈ ವೇಳೆ ಎರಡು ಗ್ರೆನೇಡ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಬಂಧಿತನನ್ನು ಮೊಹಮ್ಮದ್‌ಪುರ ನಿವಾಸಿ ಆದಿಲ್ ಹುಸೇನ್ ಲೋನ್ ಎಂದು ಗುರುತಿಸಲಾಗಿದೆ. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನೀಟ್: ಕಾಂಗ್ರೆಸ್ ಕಾರ್ಯಕರ್ತರ ಪ್ರತಿಭಟನೆ

ಜೈಪುರ (ಪಿಟಿಐ): ನೀಟ್-ಯುಜಿ ವೈದ್ಯಕೀಯ ಪ್ರವೇಶ ಪರೀಕ್ಷೆಯಲ್ಲಿನ ಅಕ್ರಮಗಳನ್ನು ಖಂಡಿಸಿ ನೂರಾರು ಕಾಂಗ್ರೆಸ್ ಕಾರ್ಯಕರ್ತರು ಗುರುವಾರ ಇಲ್ಲಿನ ಬಿಜೆಪಿ ರಾಜ್ಯ ಪ್ರಧಾನ ಕಚೇರಿಯತ್ತ ಮೆರವಣಿಗೆ ನಡೆಸಿದರು. ಪೊಲೀಸರು ಅವರನ್ನು ಬ್ಯಾರಿಕೇಡ್‌ಗಳ ಮೂಲಕ ತಡೆದು ಜಲಫಿರಂಗಿಗಳನ್ನು ಪ್ರಯೋಗಿಸಿ, ಚದುರಿಸಿದರು.

ಪ್ರತಿಭಟನೆ ವೇಳೆ ಕೆಲವು ಕಾಂಗ್ರೆಸ್ ಕಾರ್ಯಕರ್ತರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಅವರನ್ನು ಎಸ್‌ಎಂಎಸ್ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪಕ್ಷದ ವಕ್ತಾರರು ತಿಳಿಸಿದ್ದಾರೆ.

ರಾಜಸ್ಥಾನ ಪ್ರದೇಶ ಕಾಂಗ್ರೆಸ್ ಸಮಿತಿಯ ಮುಖ್ಯಸ್ಥ ಗೋವಿಂದ್ ಸಿಂಗ್ ಡೊಟಾಸ್ರಾ ನೇತೃತ್ವದಲ್ಲಿ ಪೋಸ್ಟರ್‌ಗಳು ಮತ್ತು ಫಲಕಗಳನ್ನು ಹಿಡಿದು ಪ್ರತಿಭಟನೆ ನಡೆಸಿದ ಪ್ರತಿಭಟನಕಾರರು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆಗೆ ಒತ್ತಾಯಿಸಿದರು.

ಹಲವು ಕಾಂಗ್ರೆಸ್ ಕಾರ್ಯಕರ್ತರು ಬ್ಯಾರಿಕೇಡ್‌ಗಳನ್ನು ಹತ್ತಿ ಬಿಜೆಪಿ ಪ್ರಧಾನ ಕಚೇರಿಯ ಕಡೆಗೆ ದಾಟಲು ಯತ್ನಿಸಿದಾಗ, ಪೊಲೀಸರು ಶಹೀದ್ ಸ್ಮಾರಕದ ಬಳಿ ಜಲಫಿರಂಗಿಗಳನ್ನು ಬಳಸಿದರು. ಈ ವೇಳೆ ಪಕ್ಷದ ಕಾರ್ಯಕರ್ತರು ಡೊಟಾಸ್ರಾ ಅವರನ್ನು ಹೆಗಲ ಮೇಲೆ ಎತ್ತಿಕೊಂಡರು. ಮುಂದೆ ಸಾಗದಂತೆ ತಡೆಯಲು ಪ್ರಯತ್ನಿಸಿದಾಗ ಕಾಂಗ್ರೆಸ್ ಕಾರ್ಯಕರ್ತರು ಪೊಲೀಸರನ್ನು ತಳ್ಳಿದರು.

ಮೇ 3ರಂದು ಪದವಿ ಪೂರ್ವ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕಾಗಿ ನಡೆದ ನೀಟ್ (ಯುಜಿ) 2026ರ ಪರೀಕ್ಷೆಯನ್ನು ಎರಡು ದಿನಗಳ ನಂತರ ಪ್ರಶ್ನೆಪತ್ರಿಕೆ ಸೋರಿಕೆ ಕಾರಣಕ್ಕಾಗಿ ರದ್ದುಗೊಳಿಸಲಾಯಿತು. ಪರೀಕ್ಷೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ಬಗ್ಗೆ ಸಮಗ್ರ ತನಿಖೆ ನಡೆಸುವಂತೆ ಕೇಂದ್ರ ಸರ್ಕಾರ ಸಿಬಿಐಗೆ ತಿಳಿಸಿದೆ.

ಸಂಸದೀಯ ಸಮಿತಿ ಮುಂದೆ ಹಾಜರಾದ ವಿನೀತ್, ಅಭಿಷೇಕ್

ನವದೆಹಲಿ: ‘ನೀಟ್-ಯುಜಿ’ 2026ರ ಪ್ರಶ್ನೆಪತ್ರಿಕೆ ಸೋರಿಕೆಗೆ ಸಂಬಂಧಿಸಿ ಉನ್ನತ ಶಿಕ್ಷಣ ಕಾರ್ಯದರ್ಶಿ ವಿನೀತ್ ಜೋಶಿ ಹಾಗೂ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಅಧ್ಯಕ್ಷ ಅಭಿಷೇಕ್ ಸಿಂಗ್ ಅವರು ಸಂಸದೀಯ ಸ್ಥಾಯಿ ಸಮಿತಿ ಮುಂದೆ ಗುರುವಾರ ಹಾಜರಾಗಿ, ಹೇಳಿಕೆ ದಾಖಲಿಸಿದರು.

ಸಮಿತಿ ಮುಂದೆ ಹಾಜರಾಗುವಂತೆ ಜೋಶಿ ಹಾಗೂ ಸಿಂಗ್ ಅವರಿಗೆ ಕಾಂಗ್ರೆಸ್ ಸಂಸದ ದಿಗ್ವಿಜಯ್ ಸಿಂಗ್ ನೇತೃತ್ವದ ಶಿಕ್ಷಣ, ಮಹಿಳೆಯರು, ಮಕ್ಕಳು, ಯುವಜನತೆ ಹಾಗೂ ಕ್ರೀಡೆ ಕುರಿತ ಸಂಸದೀಯ ಸ್ಥಾಯಿ ಸಮಿತಿಯು ಬುಧವಾರ ಸೂಚಿಸಿತ್ತು. ಸಮಿತಿ ಸಭೆ ಆರಂಭವಾಗುತ್ತಿದ್ದಂತೆಯೇ ಬಿಜೆಪಿ ಸಂಸದರು ಎನ್‌ಟಿಎ ಕಾರ್ಯವೈಖರಿಯನ್ನು ಸಮರ್ಥಿಸಿಕೊಂಡರೆ, ವಿಪಕ್ಷಗಳ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು. ಹೀಗಾಗಿ, ಸಭೆಯು ಆಡಳಿತ ಮತ್ತು ವಿಪಕ್ಷಗಳ ಸದಸ್ಯರ ನಡುವಿನ ಜಟಾಪಟಿಗೆ ಸಾಕ್ಷಿಯಾಯಿತು.

ಸಭೆಗೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ದಿಗ್ವಿಜಯ್ ಸಿಂಗ್, ‘22 ಲಕ್ಷ ವಿದ್ಯಾರ್ಥಿಗಳ ಭವಿಷ್ಯ ಅತಂತ್ರವಾಗಿದೆ. ಇಂತಹ ಸನ್ನಿವೇಶ ಹೇಗೆ ಮತ್ತು ಏಕೆ ಸೃಷ್ಟಿಯಾಯಿತು ಎಂಬ ಬಗ್ಗೆ ಅವರಿಂದ (ಜೋಶಿ ಮತ್ತು ಅಭಿಷೇಕ್ ಸಿಂಗ್) ಉತ್ತರ ಬಯಸಿದ್ದೇವೆ’ ಎಂದು ಹೇಳಿದರು.

‘ಆರೋಪಿಗೆ ಆಕ್ಷೇಪವಿಲ್ಲದಿದ್ದರೆ ವಿಚಾರಣೆ ನಡೆಸಬಹುದು’

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ್ರೋಹಕ್ಕೆ ಸಂಬಂಧಿಸಿದ ಭಾರತೀಯ ದಂಡ ಸಂಹಿತೆ (ಐಪಿಸಿ) ಸೆಕ್ಷನ್ 124ಎ ಕುರಿತು ಆರೋಪಿಗೆ ಯಾವುದೇ ಆಕ್ಷೇಪಣೆ ಇಲ್ಲದಿದ್ದರೆ ನ್ಯಾಯಾಲಯಗಳು ವಿಚಾರಣೆ ಮುಂದುವರಿಸಬಹುದು ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

ಐಪಿಸಿ 124ಎ

ದೇಶದ್ರೋಹಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ 17 ವರ್ಷಗಳಿಂದ ಜೈಲಿನಲ್ಲಿರುವ ಆರೋಪಿಯೊಬ್ಬರ ಅರ್ಜಿ ಆಲಿಸುವಾಗ ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯ ಬಾಗ್ಚಿ ಮತ್ತು ವಿಪುಲ್ ಎಂ. ಪಂಚೋಲಿ ಅವರನ್ನೊಳಗೊಂಡ ಪೀಠ ಈ ಕುರಿತು ಸ್ಪಷ್ಟೀಕರಣ ನೀಡಿತು.

ಅರ್ಜಿದಾರರು ಸೆಕ್ಷನ್ 124ಎ ಅಡಿಯಲ್ಲಿನ ಆರೋಪಗಳು ಸೇರಿದಂತೆ ತನ್ನ ಮೇಲಿನ ಕ್ರಿಮಿನಲ್ ಮೇಲ್ಮನವಿಯನ್ನು ಪೂರ್ಣವಾಗಿ ಆಲಿಸಿದರೆ ಯಾವುದೇ ಅಭ್ಯಂತರವಿಲ್ಲ ಎಂದು ಅರ್ಜಿಯಲ್ಲಿ ಉಲ್ಲೇಖಿಸಿದ್ದಾರೆ ಎಂದು ಪೀಠ ಹೇಳಿದೆ.

ಆರೋಪಿಗೆ ಯಾವುದೇ ಆಕ್ಷೇಪಣೆ ಇಲ್ಲದಿರುವಾಗ, ನ್ಯಾಯಾಲಯಗಳು ಅರ್ಹತೆಗಳ ಆಧಾರದ ಮೇಲೆ ಮತ್ತು ಕಾನೂನಿನ ಪ್ರಕಾರ ಇಂತಹ ವಿಷಯಗಳನ್ನು ನಿರ್ಧರಿಸಲು ಯಾವುದೇ ಅಡ್ಡಿ ಇರುವುದಿಲ್ಲ ಪೀಠ ಹೇಳಿದೆ.

ಆರೋಪಿಯ ಮೇಲ್ಮನವಿ ಮಧ್ಯ ಪ್ರದೇಶದ ಹೈಕೋರ್ಟ್‌ನಲ್ಲಿ ಬಾಕಿಯಿದೆ. ಅದನ್ನು ಅರ್ಹತೆ ಆಧಾರದ ಮೇಲೆ ನಿರ್ಧರಿಸುವಂತೆ ಸುಪ್ರೀಂ ಕೋರ್ಟ್ ಮಧ್ಯ ಪ್ರದೇಶ ಹೈಕೋರ್ಟ್‌ಗೆ ಸೂಚಿಸಿದೆ.

ವಸಾಹತುಶಾಹಿ ಅವಧಿಯ ದೇಶದ್ರೋಹ ಕಾಯ್ದೆ ಕುರಿತು ಕೇಂದ್ರ ಸರ್ಕಾರವು ತನ್ನ ಭರವಸೆಯ ಪರಿಶೀಲನೆಯನ್ನು ಪೂರ್ಣಗೊಳಿಸುವವರೆಗೆ ದೇಶದ್ರೋಹದ ಮೇಲಿನ ದಂಡದ ನಿಬಂಧನೆಯನ್ನು ಸುಪ್ರೀಂ ಕೋರ್ಟ್ 2022ರ ಮೇ ತಿಂಗಳಲ್ಲಿ ತಡೆಹಿಡಿದಿತ್ತು. ಈ ಅಪರಾಧವನ್ನು ಪ್ರಚೋದಿಸುವ ಯಾವುದೇ ಹೊಸ ಪ್ರಕರಣವನ್ನು ದಾಖಲಿಸದಂತೆ ನ್ಯಾಯಾಲಯವು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ನಿರ್ದೇಶಿಸಿತ್ತು.

27 ನಕ್ಸಲರ ಶರಣಾಗತಿ

ರಾಂಚಿ (ಪಿಟಿಐ): ಜಾರ್ಖಂಡ್ ಡಿಜಿಪಿ ತದಾಶಾ ಮಿಶ್ರಾ ಅವರ ಸಮ್ಮುಖದಲ್ಲಿ 27 ನಕ್ಸಲರು ಪೊಲೀಸರ ಮುಂದೆ ಗುರುವಾರ ಶರಣಾಗಿದ್ದಾರೆ. ಜಾರ್ಖಂಡ್ ಪೊಲೀಸ್, ಜಾರ್ಖಂಡ್ ಜಾಗ್ವಾರ್ ಮತ್ತು ಸಿಆರ್‌ಪಿಎಫ್ ಸೇರಿದಂತೆ ಇತರ ಅಧಿಕಾರಿಗಳ ಮುಂದೆ ನಿಷೇಧಿತ ಸಿಪಿಐ ಸಂಘಟನೆಗೆ ಸೇರಿದ ನಕ್ಸಲರು ಶಸ್ತ್ರಾಸ್ತ್ರಗಳನ್ನು ತ್ಯಜಿಸಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಹಲವು ಪ್ರಕರಣಗಳಲ್ಲಿ ಬೇಕಾಗಿದ್ದ 27 ನಕ್ಸಲರು ‘ಆಪರೇಷನ್ ನವಜೀವನ’ ಅಡಿಯಲ್ಲಿ ಪೊಲೀಸರ ಮುಂದೆ ಶರಣಾಗಿದ್ದಾರೆ. ಈ ವರ್ಷ ಇಲ್ಲಿವರೆಗೆ 22 ನಕ್ಸಲರನ್ನು ಹತ್ಯೆ ಮಾಡಲಾಗಿದ್ದು, 44 ಜನರನ್ನು ಬಂಧಿಸಲಾಗಿದೆ ಮತ್ತು 29 ಮಂದಿ ಶರಣಾಗಿದ್ದಾರೆ. ಉಳಿದ ಕೆಲವರು ಮುಖ್ಯವಾಹಿನಿಗೆ ಮರಳಬೇಕೆಂದು ಮನವಿ ಮಾಡುತ್ತೇವೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಶರಣಾದವರ ಪೈಕಿ ಸಿಪಿಐನ ಕೊನೆಯ ಪಾಲಿಟ್ ಬ್ಯೂರೋ ಸದಸ್ಯ ಮಿಸಿರ್ ಬೆಸ್ರಾ ಇದ್ದಾರೆ. ಬೆಸ್ರಾ ಅವರ ಸುಳಿವು ನೀಡಿದವರಿಗೆ ₹1 ಕೋಟಿ ಬಹುಮಾನ ಘೋಷಿಸಲಾಗಿತ್ತು. ಸಾರಂಡಾ ಮತ್ತು ಕೊಲ್ಹಾನ್ ಪ್ರದೇಶಗಳಲ್ಲಿ ಅವರು ಸಕ್ರಿಯರಾಗಿದ್ದರು. 123 ಪ್ರಕರಣಗಳಲ್ಲಿ ಬೇಕಾಗಿದ್ದ ‘ಸಬ್ ಝೋನಲ್ ಕಮಾಂಡರ್’ ಸಗೆನ್ ಅಂಗಾರಿಯಾ ಮತ್ತು ಜೆಜೆಎಂಪಿಯ ‘ಸಬ್ ಝೋನಲ್ ಕಮಾಂಡರ್’ ಸಚಿನ್ ಬೇಗ ಅವರೂ ಶರಣಾಗಿದ್ದಾರೆ ಎಂದರು.

ಪೆರೋಲ್‌ನಿಂದ ಪರಾರಿ 12 ವರ್ಷಗಳ ನಂತರ ಬಂಧನ

ಅಹಮದಾಬಾದ್ (ಪಿಟಿಐ): ಪೆರೋಲ್ ಪಡೆದು ಜೈಲಿನಿಂದ ಹೊರಬಂದು ತಲೆಮರೆಸಿಕೊಂಡಿದ್ದ ಅಪರಾಧಿಯನ್ನು ಸುಮಾರು 12 ವರ್ಷಗಳ ನಂತರ ಬಂಧಿಸಲಾಗಿದೆ. ಈ ನಡುವೆ, ಅಪರಾಧಿಯು ಬಾಲಿವುಡ್ ಸೇರಿದಂತೆ ಹಲವಾರು ಚಿತ್ರಗಳು, ವೆಬ್ ಸರಣಿಗಳಲ್ಲಿ ನಟಿಸಿದ್ದ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.



ಹೇಮಂತ್ ಮೋದಿ (53) ಬಂಧನಕ್ಕೊಳಗಾದ ಅಪರಾಧಿ. ಕೊಲೆ ಪ್ರಕರಣದಲ್ಲಿ ಮೆಹ್ಸಾನಾ ಜಿಲ್ಲಾ ಕಾರಾಗೃಹದಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿದ್ದ ಮೋದಿಗೆ 2014ರಲ್ಲಿ ಗುಜರಾತ್ ಹೈಕೋರ್ಟ್ 30 ದಿನಗಳ ಪೆರೋಲ್ ನೀಡಿತ್ತು. ಆದರೆ, ಶರಣಾಗಲು ವಿಫಲವಾದ ಆತನನ್ನು ‘ಪೆರೋಲ್ ಜಂಪ್’ ಮಾಡಿದ ವ್ಯಕ್ತಿ ಎಂದು ಆ ವರ್ಷದ ಜುಲೈನಲ್ಲಿ ಘೋಷಿಸಿತ್ತು. 2005ರಲ್ಲಿ ಆತನ ವಿರುದ್ಧ ಕೊಲೆ ಮತ್ತು ಗಲಭೆ ಪ್ರಕರಣ ದಾಖಲಾಗಿತ್ತು.

ಪೆರೋಲ್‌ನಿಂದ ತಪ್ಪಿಸಿಕೊಂಡಿದ್ದ ಹೇಮಂತ್, ತನ್ನ ಗುರುತನ್ನು ಬದಲಾಯಿಸಿ ಪೋಷಕ ನಟನಾಗಿ ಕೆಲಸ ಮಾಡಲು ಪ್ರಾರಂಭಿಸಿದ್ದ. ಹಿಂದಿ-ಗುಜರಾತಿ ಚಿತ್ರಗಳು, ವೆಬ್ ಸರಣಿಗಳು ಮತ್ತು ಎರಡೂ ಭಾಷೆಗಳ ನಾಟಕಗಳಲ್ಲಿ ವಿವಿಧ ಪಾತ್ರಗಳನ್ನು ನಿರ್ವಹಿಸಿದ್ದ.

ಬುಧವಾರ ಅಪರಾಧ ವಿಭಾಗದ ಪೊಲೀಸರು ಅಹಮದಾಬಾದ್‌ನ ಮೆಟ್ರೋ ರೈಲು ನಿಲ್ದಾಣದ ಬಳಿ ಅಪರಾಧಿಯನ್ನು ಬಂಧಿಸಿದ್ದಾರೆ.

ಅಮಿತಾಭ್–ಆಮಿರ್ ಖಾನ್ ಜೊತೆ ನಟನೆ

ಪೆರೋಲ್‌ನಿಂದ ತಪ್ಪಿಸಿಕೊಂಡಿದ್ದ ಮೋದಿ, 10 ವರ್ಷಗಳ ಕಾಲ ಮನರಂಜನಾ ಉದ್ಯಮದಲ್ಲಿ ಅತ್ಯಂತ ಸಕ್ರಿಯವಾಗಿದ್ದನು. ಬಾಲಿವುಡ್ ದಿಗ್ಗಜರಾದ ಅಮಿತಾಭ್ ಬಚ್ಚನ್ ಮತ್ತು ಆಮಿರ್ ಖಾನ್ ಅವರೊಂದಿಗೆ ‘ಥಗ್ಸ್ ಆಫ್ ಹಿಂದೂಸ್ತಾನ್’ ಮತ್ತು ರಣವೀರ್ ಸಿಂಗ್ ಅವರೊಂದಿಗೆ ‘ಜಯೇಶ್‌ಭಾಯ್ ಜೋರ್ದಾರ್’ನಂತಹ ಪ್ರಮುಖ ಚಿತ್ರಗಳಲ್ಲಿ ಕಾಣಿಸಿಕೊಂಡಿದ್ದ. ಅಷ್ಟೇ ಅಲ್ಲದೆ, ಪರದೆಯಾಚೆಗೆ ರಂಗಭೂಮಿಯಲ್ಲಿ ಸಕ್ರಿಯನಾಗಿದ್ದ ಮೋದಿ, ‘ಯುಗಪುರುಷ’ ಮತ್ತು ‘ಗಾಂಧಿ ವಿರುದ್ಧ್ ಗೋಡ್ಸೆ’ ನಾಟಕಗಳಲ್ಲಿ ನಟಿಸಿದ್ದ.

ಚೆಸ್: ಹಿಂದೆಸರಿದ ಅಲಿರೇಝಾ

ಬುಕಾರೆಸ್ಟ್ (ರುಮೆನಿಯಾ), (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದ ಅವರು ಸೂಪರ್ ಕ್ಲಾಸಿಕ್ ಚೆಸ್ ಟೂರ್ನಿಯ ಆರನೇ ಸುತ್ತಿನಲ್ಲಿ ಆತಿಥೇಯ ರುಮೇನಿಯಾದ ಡೇನಿಯಲ್ ಡೀಕ್ ಬೊಗ್ದಾನ್ ಅವರ ಜೊತೆ ಬುಧವಾರ 68 ನಡೆಗಳಲ್ಲಿ ಡ್ರಾ ಮಾಡಿಕೊಂಡರು.


ಆರ್. ಪ್ರಜ್ಞಾನಂದ

ಇದೇ ವೇಳೆ ಫ್ರಾನ್ಸ್‌ನ ಆಟಗಾರ ಅಲಿರೇಜಾ ಫಿರೋಝ್ ಪಾದದ ನೋವಿನಿಂದ ಕೊನೆಗೂ ಟೂರ್ನಿಯಿಂದ ಹಿಂದೆಸರಿದರು. ಇದರಿಂದಾಗಿ, ಅಗ್ರಸ್ಥಾನದಲ್ಲಿದ್ದ ಜರ್ಮನಿಯ ವಿನ್ಸೆಂಟ್ ಕೀಮರ್ (4.5) ಅವರು ಆರನೇ ಸುತ್ತಿನಲ್ಲಿ ವಾಕ್ ಓವರ್ ಪಡೆದು ತಮ್ಮ ಮುನ್ನಡೆಯನ್ನು ಒಂದು ಪಾಯಿಂಟ್‌ಗೆ ಹೆಚ್ಚಿಸಿದರು.

ಹಾಲೆಂಡ್‌ನ ಜೋರ್ಡನ್ ವಾನ್ ಫೋರೀಸ್ಟ್, ಅನೀಶ್ ಗಿರಿ, ಅಗ್ರ ಶ್ರೇಯಾಂಕದ ಫ್ಯಾಬಿಯಾನೊ ಕರುವಾನ (ಅಮೆರಿಕ) ಮತ್ತು ಪ್ರಜ್ಞಾನಂದ ಅವರು ತಲಾ 3.5 ಪಾಯಿಂಟ್ಸ್ ಸಂಗ್ರಹಿಸಿದ್ದು ಜಂಟಿ ಎರಡನೇ ಸ್ಥಾನದಲ್ಲಿದ್ದಾರೆ.

ಆರನೇ ಸುತ್ತಿನಲ್ಲಿ ಒಂದು ಪಂದ್ಯ ವಾಕ್‌ಓವರ್ ಕಂಡರೆ, ನಾಲ್ಕು ಪಂದ್ಯಗಳು ಡ್ರಾ ಆದವು. ಕರುವಾನ ಅವರು ಉಜ್ಬೇಕಿಸ್ತಾನದ ಜಾವೊಕಿರ್ ಸಿಂದರೋವ್ (2.5) ಜೊತೆ, ವಾನ್ ಫೋರಿಸ್ಟ್ ಅವರು ಅನಿಶ್ ಗಿರಿ ಜೊತೆ, ಫ್ರಾನ್ಸ್‌ನ ಮ್ಯಾಕ್ಸಿಂ ವೇಷಿಯರ್ ಲಗ್ರಾವ್ (3), ಅಮೆರಿಕದ ವೆಸ್ಲಿ ಸೊ (3) ಆರನೇ ಸ್ಥಾನ ಹಂಚಿಕೊಂಡಿದ್ದಾರೆ. ಅಲಿರೇಝಾ ಫಿರೋಝ್‌ಜಾ ಅವರು ಐದು ಸುತ್ತುಗಳಲ್ಲಿ 1 ಪಾಯಿಂಟ್ ಗಳಿಸಿ ಅಭಿಯಾನ ಮುಗಿಸಿದರು.

ಗ್ರ್ಯಾಂಡ್‌ಚೆಸ್ ಟೂರ್‌ನ ಭಾಗವಾಗಿರುವ ಈ ಟೂರ್ನಿಯಲ್ಲಿ 10 ಆಟಗಾರರು ಭಾಗವಹಿಸುತ್ತಿದ್ದಾರೆ. ಟೂರ್ನಿಯು ರೌಂಡ್‌ರಾಬಿನ್ ಮಾದರಿಯಲ್ಲಿ ನಡೆಯುತ್ತಿದ್ದು 9 ಸುತ್ತುಗಳನ್ನು ಒಳಗೊಂಡಿದೆ.

ಮಧ್ಯ ಏಷ್ಯಾ ವಾಲಿಬಾಲ್‌ಗೆ ಭಾರತ ತಂಡ

ಬೆಂಗಳೂರು: ಕಠ್ಮಂಡುವಿನಲ್ಲಿ ಇದೇ 22 ರಿಂದ 29ರವರೆಗೆ ನಡೆಯಲಿರುವ ಮಧ್ಯ ಏಷ್ಯಾ ವಾಲಿಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಲಿರುವ ಭಾರತ ಮಹಿಳಾ ತಂಡ ಇಂತಿದೆ.

ಶಿಲ್ಪಾ ಆರ್.ಎಸ್., ಆರ್ಯಾ ಕೆ., ಅನಾಮಿಕಾ ಪಳ್ಳಿಯತ್, ಶಾಲಿನಿ ಶರವಣನ್, ಅನಘಾ ರಾಧಾಕೃಷ್ಣ, ಆಯುಷಿ ಔಂಡಾರಿ, ಕವಿತಾ, ಪ್ರೇರಣಾ ಪಾಲ್, ಅನುಶ್ರೀ ಕೆ.ಪಿ., ಚಂದನಾ ಸೋನಿಯಾ ಕುಮಾರ್, ನಂದನಾ ವೇಲಪ್ಪಿಳ್, ಅನನ್ಯಾ ದಾಸ್, ಸತಿ ದಾಸ್, ಅನ್ನಾ ಮ್ಯಾಥ್ಯೂ.

ತಂಡಕ್ಕೆ ಕುಲನ್ ಜೇನಾ ಮುಖ್ಯ ತರಬೇತುದಾರರಾಗಿದ್ದಾರೆ. ಕರ್ನಾಟಕದ ಕೆ.ಆರ್. ಲಕ್ಷ್ಮಿನಾರಾಯಣ್ ಅವರು ಸಹಾಯಕ ಕೋಚ್ ಆಗಿದ್ದಾರೆ.



ಅಗ್ರಸ್ಥಾನ ಗಟ್ಟಿಗೊಳಿಸುವತ್ತ ಬೆಂಗಳೂರು ಪಡೆಯ ಚಿತ್ತ • ವಿರಾಟ್, ಭುವನೇಶ್ವರ್ ಮೇಲೆ ಭರವಸೆ

ಆರ್‌ಸಿಬಿಗೆ 'ಸನ್' ಚಾಲೆಂಜ್

ಪ್ರಜಾವಾಣಿ ವಾರ್ತೆ/ಪಿಟಿಐ

ಹೈದರಾಬಾದ್: ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಸನ್‌ರೈಸರ್ಸ್ ಹೈದರಾಬಾದ್ ತಂಡಗಳು ಈ ಸಲದ ಐಪಿಎಲ್ ಟೂರ್ನಿಯ ಉದ್ಘಾಟನಾ ಪಂದ್ಯದಲ್ಲಿ ಮುಖಾಮುಖಿಯಾಗಿದ್ದವು. ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆ ಪಂದ್ಯ ನಡೆದು ಈಗ 55 ದಿನಗಳು ಸರಿದುಹೋಗಿವೆ. ಈ ಅವಧಿಯಲ್ಲಿ ಏಳು, ಬೀಳುಗಳನ್ನು ಕಾಣುತ್ತ ಪ್ಲೇ ಆಫ್ ಪ್ರವೇಶಿಸಿರುವ ಉಭಯ ತಂಡಗಳು ಈಗ ಮತ್ತೆ ಹಣಾಹಣಿಗೆ ಸಿದ್ಧವಾಗಿವೆ.

ಈ ಬಾರಿ ಸನ್‌ರೈಸರ್ಸ್ ತಂಡದ ತವರು ಉಪ್ಪಳದ ರಾಜೀವಗಾಂಧಿ ಕ್ರೀಡಾಂಗಣದಲ್ಲಿ ಆಡಲಿವೆ. ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿರುವ ಹಾಲಿ ಚಾಂಪಿಯನ್ ಆರ್‌ಸಿಬಿ (18 ಅಂಕ) ಮತ್ತು ಮೂರನೇ ಸ್ಥಾನದಲ್ಲಿರುವ ಸನ್‌ರೈಸರ್ಸ್ (16 ಅಂಕ) ತಂಡಗಳಿಗೆ ಮೊದಲ ಸ್ಥಾನ ಪಡೆಯುವ ಪೈಪೋಟಿ ಇದೆ. ಆರ್‌ಸಿಬಿಯು ಉತ್ತಮ ನೆಟ್ ರನ್‌ರೇಟ್ (1.065) ಗಳಿಸಿರುವುದರಿಂದ ಅಗ್ರಸ್ಥಾನದಲ್ಲಿಯೇ ಉಳಿಯುವ ಅವಕಾಶಗಳು ಹೆಚ್ಚು.

ರಜತ್ ಪಾಟೀದಾರ್ ನಾಯಕತ್ವದ ಬೆಂಗಳೂರು ತಂಡವು ಎಲ್ಲ ವಿಭಾಗಗಳಲ್ಲಿಯೂ ಸಮತೋಲನದಿಂದ ಕೂಡಿದೆ. ಸ್ಫೋಟಕ ಶೈಲಿಯ ಬ್ಯಾಟರ್‌ಗಳು, ಪರಿಣಾಮಕಾರಿ ದಾಳಿ ಮಾಡುವ ಬೌಲರ್‌ಗಳು ಮತ್ತು ಫೀಲ್ಡಿಂಗ್‌ನಲ್ಲಿಯೂ ಉಳಿದೆಲ್ಲ ತಂಡಗಳಿಗಿಂತ ಹೆಚ್ಚು ಶಿಸ್ತುಬದ್ಧತೆಯ ಆಟಗಾರರು ತಂಡದಲ್ಲಿದ್ದಾರೆ.

'ದಿಗ್ಗಜ' ಆಟಗಾರ ವಿರಾಟ್ ಕೊಹ್ಲಿ ಅಮೋಘ ಲಯದಲ್ಲಿದ್ದಾರೆ. 13 ಪಂದ್ಯಗಳಿಂದ 542 ರನ್ ಗಳಿಸಿದ್ದಾರೆ. ದೇವದತ್ತ ಪಡಿಕ್ಕಲ್ ಅವರೂ ಉತ್ತಮ ಲಯದಲ್ಲಿದ್ದಾರೆ. ಜೇಕಬ್ ಬೆಥೆಲ್ ಅವರು ಸತತ ವೈಫಲ್ಯ ಅನುಭವಿಸುತ್ತಿದ್ದಾರೆ.



ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿರಾಟ್ ಕೊಹ್ಲಿ


ಅವರು ಲಯಕ್ಕೆ ಮರಳಿದರೆ ತಂಡದ ಬಲ ಹೆಚ್ಚಲಿದೆ. ಕಳೆದ ಪಂದ್ಯದಲ್ಲಿ ರಜತ್ ಆಡಿರಲಿಲ್ಲ. ಅವರ ಬದಲಿಗೆ ಸ್ಥಾನ ಪಡೆದಿದ್ದ ವೆಂಕಟೇಶ್ ಅಯ್ಯರ್ ಮಿಂಚಿದ್ದರು. ಪಂದ್ಯದ ಆಟಗಾರ ಗೌರವ ಗಳಿಸಿದ್ದರು.

ಆಲ್‌ರೌಂಡರ್ ಕೃಣಾಲ್ ಪಾಂಡ್ಯ, ಟಿಮ್ ಡೇವಿಡ್ ಅವರು ಮಧ್ಯಮ ಕ್ರಮಾಂಕದ ಶಕ್ತಿಯಾಗಿದ್ದಾರೆ. ಜಿತೇಶ್ ಶರ್ಮಾ ಅವರು ತಮ್ಮ ನೈಜ ಬ್ಯಾಟಿಂಗ್ ಸಾಮರ್ಥ್ಯವನ್ನು ಪ್ರದರ್ಶಿಸಬೇಕಿದೆ. ಸುಯಶ್ ಶರ್ಮಾ ಮತ್ತು ರೊಮೆರಿಯೊ ಶೆಫರ್ಡ್ ಕೂಡ ಇದುವರೆಗೆ ಹೆಚ್ಚು ಪರಿಣಾಮ ಬೀರಿಲ್ಲ.

ಆದರೆ; ಭುವನೇಶ್ವರ್ ಕುಮಾರ್, ಜೋಶ್ ಹೇಜಲ್‌ವುಡ್ ಮತ್ತು ರಸಿಕ್ ಸಲಾಮ್ ದಾರ್ ಅವರ ವೇಗದ ದಾಳಿಯು ಪರಿಣಾಮಕಾರಿಯಾಗಿದೆ. ಸನ್‌ರೈಸರ್ಸ್ ತಂಡದ ಬಲಿಷ್ಠ ಬ್ಯಾಟಿಂಗ್ ಪಡೆಗೆ ಆರ್‌ಸಿಬಿ ಬೌಲಿಂಗ್ ವಿಭಾಗವು ಕಠಿಣ ಸವಾಲೊಡ್ಡುವ ಸಾಧ್ಯತೆಗಳು ಹೆಚ್ಚು. ಆತಿಥೇಯ ತಂಡದ ಆರಂಭಿಕ ಜೋಡಿ ಅಭಿಷೇಕ್ ಶರ್ಮಾ, ಟ್ರಾವಿಸ್



ಸನ್‌ರೈಸರ್ಸ್ ಹೈದರಾಬಾದ್ ತಂಡದ ನಾಯಕ ಪ್ಯಾಟ್ ಕಮಿನ್ಸ್ ಪಿಟಿಐ ಚಿತ್ರ



ಭುವನೇಶ್ವರ್ ಕುಮಾರ್

ಹೆಡ್, ಇಶಾನ್ ಕಿಶನ್ ಮತ್ತು ಹೆನ್ರಿಚ್ ಕ್ಲಾಸೆನ್ ಅವರನ್ನು ಕಟ್ಟಿಹಾಕುವುದು ಬೌಲರ್‌ಗಳ ಮುಂದಿರುವ ಪ್ರಮುಖ ಸವಾಲುಗಳು. ಮೊದಲಾರ್ಧದಲ್ಲಿ ನಡೆದಿದ್ದ ಪಂದ್ಯದಲ್ಲಿ ಆರ್‌ಸಿಬಿಯ ಜೇಕಬ್ ಡಫಿ ಅವರು ಸನ್‌ರೈಸರ್ಸ್ ತಂಡವನ್ನು ಕಟ್ಟಿಹಾಕಿದ್ದರು.

ಆದರೆ ಆಗ ಪ್ಯಾಟ್ ಕಮಿನ್ಸ್ ಇರಲಿಲ್ಲ. ಅವರು ಗಾಯದಿಂದ ಚೇತರಿಸಿಕೊಂಡು ಬಂದ ನಂತರ ತಂಡವನ್ನು ಸಮರ್ಥವಾಗಿ ಮುನ್ನಡೆಸುತ್ತಿದ್ದಾರೆ. ಅವರಿಂದಾಗಿ ತಂಡದ ಬೌಲಿಂಗ್ ಬಲವೂ ಹೆಚ್ಚಾಗಿದೆ. ಆಸ್ಟ್ರೇಲಿಯಾ ತಂಡದ ನಾಯಕ ಕಮಿನ್ಸ್ ಅವರ ತಂತ್ರಗಾರಿಕೆ ಈ ಪಂದ್ಯದಲ್ಲಿ ಪ್ರಮುಖವಾಗಲಿದೆ.

'ಈ ಪಂದ್ಯದಲ್ಲಿ ರಜತ್ ಕಣಕ್ಕೆ ಇಳಿಯಲಿದ್ದಾರೆ' ಎಂದು ಆರ್‌ಸಿಬಿ ತಂಡದ ಕ್ರಿಕೆಟ್ ನಿರ್ದೇಶಕ ಮೊ ಬೊಬಾಟ್ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಐಪಿಎಲ್ 2026: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಆರ್‌ಸಿಬಿ	13	9	4	0	18	1.065
ಜಿ ಟಿ	14	9	5	0	18	0.695
ಎಸ್‌ಆರ್‌ಎಚ್	13	8	5	0	16	0.350
ಆರ್ ಆರ್	13	7	6	0	14	0.083
ಪಿಬಿಕೆಎಸ್	13	6	6	1	13	0.227
ಕೆಕೆಆರ್	13	6	6	1	13	0.011
ಸಿಎಸ್‌ಕೆ	14	6	8	0	12	- 0.345
ಡಿ ಸಿ	13	6	7	0	12	- 0.871
ಎಂ ಐ	13	4	9	0	8	- 0.510
ಎಲ್‌ಎಸ್‌ಜಿ	13	4	9	0	8	- 0.702

ಆರೆಂಜ್ ಕ್ಯಾಪ್: ಸಾಯಿ ಸುದರ್ಶನ್, ಜಿಟಿ (638 ರನ್)

ಪರ್ಪಲ್ ಕ್ಯಾಪ್: ಭುವನೇಶ್ವರ್ ಕುಮಾರ್, ಆರ್‌ಸಿಬಿ (24 ವಿಕೆಟ್)

ಟೈಟನ್ಸ್‌ಗೆ ನಿರಾಯಾಸ ಗೆಲುವು

ಪ್ಲೇ ಆಫ್ ರೇಸ್‌ನಿಂದ ಹೊರಬಿದ್ದ ಚೆನ್ನೈ ಸೂಪರ್ ಕಿಂಗ್ಸ್

ಅಹಮದಾಬಾದ್ (ಪಿಟಿಐ): ಆರಂಭಿಕ ಬ್ಯಾಟರ್ ಸಾಯಿ ಸುದರ್ಶನ್ ಮತ್ತು ನಾಯಕ ಶುಭಮನ್ ಗಿಲ್ ಅವರ ಶತಕದ ಜೊತೆಯಾಟದ ಬಲದಿಂದ ಗುಜರಾತ್ ಟೈಟನ್ಸ್ ತಂಡವು ಗುರುವಾರ ನಡೆದ ಐಪಿಎಲ್ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು 89 ರನ್‌ಗಳಿಂದ ಸುಲಭವಾಗಿ ಮಣಿಸಿತು. ಈ ಸೋಲಿನೊಂದಿಗೆ ಐದು ಬಾರಿಯ ಚಾಂಪಿಯನ್ ಚೆನ್ನೈ ತಂಡವು ಪ್ಲೇ ಆಫ್ ರೇಸ್‌ನಿಂದ ಹೊರಬಿತ್ತು.

ಉಭಯ ತಂಡಗಳಿಗೆ ಇದು ಲೀಗ್ ಹಂತದಲ್ಲಿ ಕೊನೆಯ ಪಂದ್ಯವಾಗಿತ್ತು. ಗುಜರಾತ್ ತಂಡವು ಈ ಮೊದಲೇ ಪ್ಲೇ ಆಫ್ ಸ್ಥಾನವನ್ನು ಖಚಿತಪಡಿಸಿಕೊಂಡಿತ್ತು. ಈ ಗೆಲುವಿನೊಂದಿಗೆ ಸದ್ಯ ಅಂಕಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದೆ. ರನ್ ಆಧಾರದಲ್ಲಿ ಟೈಟನ್ಸ್ ತಂಡಕ್ಕೆ ಇದು (89 ರನ್) ಐಪಿಎಲ್‌ನಲ್ಲೇ ಅತಿ ದೊಡ್ಡ ಗೆಲುವಾದರೆ, ಚೆನ್ನೈ ತಂಡಕ್ಕೆ ಇದು ಅತಿ ದೊಡ್ಡ ಅಂತರದ ಸೋಲಾಗಿದೆ.

ಚೆನ್ನೈ ತಂಡವು ಈ ಪಂದ್ಯವನ್ನು ಗೆದ್ದಿದ್ದರೆ ಮುಂದಿನ ಹಂತಕ್ಕೇರುವ ಕ್ಷೀಣ ಅವಕಾಶ ಜೀವಂತವಾಗಿ ಉಳಿಯುತ್ತಿತ್ತು. ಆದರೆ, ಹ್ಯಾಟ್ರಿಕ್ ಸೋಲಿನೊಂದಿಗೆ ಋತುರಾಜ್ ಗಾಯಕವಾಡ್ ಪಡೆಯು ಈ ಬಾರಿಯ ಅಭಿಯಾನ ಮುಗಿಸಿತು.

ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಟಾಸ್ ಗೆದ್ದ ಚೆನ್ನೈ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಸಾಯಿ (84; 53ಎ, 4X7, 6X4) ಮತ್ತು ಗಿಲ್ (64; 37ಎ, 4X7, 6X3) ಅವರು ಮೊದಲ ವಿಕೆಟ್ ಜೊತೆಯಾಟದಲ್ಲಿ 125 ರನ್ ಸೇರಿಸಿದರು. ಜೋಸ್ ಬಟ್ಲರ್ (ಔಟಾಗದೇ 57; 27ಎ, 4X5, 6X4) ಅವರೂ ಮಿಂಚಿನ ಅರ್ಧಶತಕ ಹೊಡೆದರು. ಅದರಿಂದಾಗಿ ಟೈಟನ್ಸ್ ತಂಡವು 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 229 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಚೆನ್ನೈ ತಂಡವು ಟೈಟನ್ಸ್‌ನ ವೇಗಿಗಳಾದ ಮೊಹಮ್ಮದ್ ಸಿರಾಜ್ (26ಕ್ಕೆ 3), ಕಗಿಸೊ ರಬಾಡ (32ಕ್ಕೆ 3) ಮತ್ತು ಸ್ಪಿನ್ನರ್ ರಶೀದ್ ಖಾನ್ (18ಕ್ಕೆ 3) ಅವರ ದಾಳಿಗೆ ತತ್ತರಿಸಿತು. ಶಿವಂ ದುಬೆ (47;17ಎ) ಹೊರತುಪಡಿಸಿ ಉಳಿದ ಬ್ಯಾಟರ್‌ಗಳು ಪೆವಿಲಿಯನ್‌ಗೆ ಪರೇಡ್ ನಡೆಸಿದರು. ಯಾವುದೇ ಹಂತದಲ್ಲಿ ಚೇತರಿಸಿಕೊಳ್ಳದ ಚೆನ್ನೈ ತಂಡವು 13.4 ಓವರ್‌ಗಳಲ್ಲಿ 140 ರನ್ ಗಳಿಸಿ ಹೋರಾಟ ಮುಗಿಸಿತು.



ಗುಜರಾತ್ ಟೈಟನ್ಸ್ ತಂಡದ ಸಾಯಿ ಸುದರ್ಶನ್ ಮತ್ತು ಶುಭಮನ್ ಗಿಲ್



ಸಿರಾಜ್

ಸಿರಾಜ್ ಆರಂಭದಲ್ಲೇ ಚೆನ್ನೈ ತಂಡಕ್ಕೆ ಪೆಟ್ಟು ನೀಡಿದರು. ಸಂಜು ಸ್ಯಾಮ್ಸನ್ ಅವರನ್ನು ಇನಿಂಗ್ಸ್‌ನ ಮೊದಲ ಎಸೆತದಲ್ಲೇ ಔಟ್ ಮಾಡಿದ ಸಿರಾಜ್, ತಮ್ಮ ಎರಡನೇ ಓವರ್‌ನಲ್ಲಿ ಗಾಯಕವಾಡ್ (16ಎ) ಮತ್ತು ಉರ್ವಿಲ್ (0) ಅವರ ವಿಕೆಟ್ ಪಡೆದು ಸಂಭ್ರಮಿಸಿದರು. ಹೀಗಾಗಿ, ತಂಡವು 28 ರನ್‌ಗಳಿಗೆ ಪ್ರಮುಖ ಮೂರು ವಿಕೆಟ್ ಕಳೆದುಕೊಂಡಿತು.

ನಂತರ ರಶೀದ್ ಮತ್ತು ರಬಾಡ ಅವರು ವಿಕೆಟ್ ಬೇಟೆ ಆರಂಭಿಸಿದರು. ಇದರಿಂದಾಗಿ ಮ್ಯಾಥ್ಯೂ ಶಾರ್ಟ್ (24), ಕಾರ್ತಿಕ್ ಶರ್ಮಾ (19), ಡೆವಾಲ್ಡ್ ಬ್ರೆವಿಸ್ ಅವರೂ ಕ್ರೀಸ್‌ನಲ್ಲಿ ಜಾಸ್ತಿ ಹೊತ್ತು ನಿಲ್ಲಲಿಲ್ಲ. ಈ ಮಧ್ಯೆ ದುಬೆ ಮಾತ್ರ ನಾಲ್ಕು ಬೌಂಡರಿ ಮತ್ತು ನಾಲ್ಕು ಸಿಕ್ಸರ್ ಬಾರಿಸಿ ಕೊಂಚ ಪ್ರತಿರೋಧ ತೋರಿದರು.

ಇದಕ್ಕೂ ಮೊದಲು ಆರಂಭಿಕ ಓವರ್‌ನಿಂದಲೇ ಸಾಯಿ ಮತ್ತು ಗಿಲ್ ಅವರು ಬೀಸಾಟವಾಡಿದರು. ಈ ಟೂರ್ನಿಯಲ್ಲಿ ಇಬ್ಬರೂ ಬ್ಯಾಟರ್‌ಗಳು 600 ರನ್‌ಗಳ ಗಡಿಯನ್ನು ದಾಟಿದರು.

ಪವರ್‌ಪ್ಲೇ ಅವಧಿಯಲ್ಲಿ ಅಬ್ಬರಿಸಿದ ಇವರಿಬ್ಬರೂ ನಂತರದ ಆರು ಓವರ್‌ಗಳಲ್ಲಿ ತಾಳ್ಮೆಯಿಂದ ಬ್ಯಾಟಿಂಗ್ ಮಾಡಿದರು. ಶತಕದ ಸನಿಹ ಸಾಗಿದ್ದ ಸಾಯಿ ಅವರ ವಿಕೆಟ್ ಗಳಿಸುವಲ್ಲಿ ಅನ್ಷುಲ್ ಕಂಬೋಜ್ ಯಶಸ್ವಿಯಾದರು. ಆದರೆ ಕ್ರೀಸ್‌ಗೆ ಬಂದ ಬಟ್ಲರ್ ವೇಗವಾಗಿ ರನ್ ಗಳಿಸಿದರು. ಗಿಲ್ ಮತ್ತು ಬಟ್ಲರ್ ಸೇರಿ 36 ಎಸೆತಗಳಲ್ಲಿ 82 ರನ್ ಕಲೆಹಾಕಿದರು. 19ನೇ ಓವರ್‌ನಲ್ಲಿ ಜಾನ್ಸನ್ ಹಾಕಿದ ಎಸೆತವನ್ನು ಬೌಂಡರಿ ದಾಟಿಸುವ ಧಾವಂತದಲ್ಲಿ ಗಿಲ್ ಅವರು ಶಿವಂ ದುಬೆ ಕ್ಯಾಚ್ ಕೊಟ್ಟರು. ಚೆನ್ನೈ ಬೌಲಿಂಗ್ ಹೆಚ್ಚು ಪರಿಣಾಮಕಾರಿಯಾಗಿರಲಿಲ್ಲ.

ಸಂಕ್ಷಿಪ್ತ ಸ್ಕೋರು: ಗುಜರಾತ್ ಟೈಟನ್ಸ್: 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 229 (ಸಾಯಿ ಸುದರ್ಶನ್ 84, ಶುಭಮನ್ ಗಿಲ್ 64, ಜೋಸ್ ಬಟ್ಲರ್ ಔಟಾಗದೇ 57, ಮುಕೇಶ್ ಚೌಧರಿ 36ಕ್ಕೆ1, ಸ್ಪೆನ್ಸರ್ ಜಾನ್ಸನ್ 47ಕ್ಕೆ1). ಚೆನ್ನೈ ಸೂಪರ್ ಕಿಂಗ್ಸ್: 13.4 ಓವರ್‌ಗಳಲ್ಲಿ 140 (ಮ್ಯಾಥ್ಯೂ ಶಾರ್ಟ್ 24, ಶಿವಂ ದುಬೆ 47; ಮೊಹಮ್ಮದ್ ಸಿರಾಜ್ 26ಕ್ಕೆ 3, ಕಗಿಸೊ ರಬಾಡ 32ಕ್ಕೆ 3, ರಶೀದ್ ಖಾನ್ 18ಕ್ಕೆ 3). ಪಂದ್ಯದ ಆಟಗಾರ: ಮೊಹಮ್ಮದ್ ಸಿರಾಜ್

ಐಎಸ್‌ಎಲ್: ಈಸ್ಟ್ ಬೆಂಗಾಲ್‌ಗೆ ಕಿರೀಟ

ಕೋಲ್ಕತ್ತ (ಪಿಟಿಐ): ಈಸ್ಟ್ ಬೆಂಗಾಲ್ ಎಫ್‌ಸಿ ತಂಡವು ಇಂಡಿಯನ್ ಸೂಪರ್ ಲೀಗ್‌ನಲ್ಲಿ ಮೊದಲ ಬಾರಿ ಚಾಂಪಿಯನ್ ಆಗಿ ಹೊರಹೊಮ್ಮಿತು. ಇದರೊಂದಿಗೆ ದೇಶದ ಅಗ್ರಶ್ರೇಣಿಯ ಫುಟ್‌ಬಾಲ್ ಟೂರ್ನಿಯಲ್ಲಿ 22 ವರ್ಷಗಳ ಪ್ರಶಸ್ತಿ ಬರ ನೀಗಿಸಿಕೊಂಡಿತು.

ಪ್ರತಿಷ್ಠಿತ ಫುಟ್‌ಬಾಲ್ ಕ್ಲಬ್‌ಗಳಲ್ಲಿ ಒಂದಾದ ಈಸ್ಟ್ ಬೆಂಗಾಲ್ ಮತ್ತು ಅದರ ಸಾಂಪ್ರದಾಯಿಕ ಎದುರಾಳಿ ಮೋಹನ್ ಬಾಗನ್ ಸೂಪರ್ ಜೈಂಟ್ ತಂಡಗಳ ನಡುವೆ ಪ್ರಶಸ್ತಿಗೆ ಪೈಪೋಟಿ ಏರ್ಪಟ್ಟಿತ್ತು.

ಇಲ್ಲಿನ ಕಿಶೋರ್ ಭಾರತಿ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಕೊನೆಯ ಲೀಗ್ ಪಂದ್ಯದಲ್ಲಿ ಬೆಂಗಾಲ್ ತಂಡವು 2-1ರಿಂದ ಇಂಟರ್ ಕಾಶಿ ವಿರುದ್ಧ ಜಯ ಸಾಧಿಸಿದ ನಂತರ ಪ್ರಶಸ್ತಿಗೆ ಮುತ್ತಿಕ್ಕಿತು.

ಯುವ ಭಾರತಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಕಳೆದ ಬಾರಿಯ ಚಾಂಪಿಯನ್ ಮೋಹನ್ ಬಾಗನ್ ತಂಡವು 2-1ರಿಂದ ಸ್ಪೋರ್ಟಿಂಗ್ ಕ್ಲಬ್ ದೆಹಲಿಯನ್ನು ಮಣಿಸಿ, ರನ್ನರ್ಸ್ ಅಪ್‌ನೊಂದಿಗೆ ಅಭಿಯಾನ ಮುಗಿಸಿತು. ಇತರ ಪಂದ್ಯಗಳಲ್ಲಿ ಮುಂಬೈ ಎಫ್‌ಸಿ ತಂಡವು 2-0ರಿಂದ ಪಂಜಾಬ್ ಎಫ್‌ಸಿ ತಂಡವನ್ನು ಸೋಲಿಸಿದರೆ; ಒಡಿಶಾ ಎಫ್‌ಸಿ ಮತ್ತು ಜಮ್ಶೆಡ್‌ಪುರ ಎಫ್‌ಸಿ ತಂಡಗಳ ನಡುವಣ ಪಂದ್ಯ ಗೋಲಿಲ್ಲದೆ ಡ್ರಾ ಆಯಿತು.



ಇಂಡಿಯನ್ ಸೂಪರ್ ಲೀಗ್‌ನ ಟ್ರೋಫಿಯೊಂದಿಗೆ ಸಂಭ್ರಮಿಸಿದ ಈಸ್ಟ್ ಬೆಂಗಾಲ್ ತಂಡದ ಆಟಗಾರರು ಪಿಟಿಐ ಚಿತ್ರ

ಹಾಲಿ ಆವೃತ್ತಿಯಲ್ಲಿ ಲೀಗ್ ಹಂತದಲ್ಲಿ ಅಗ್ರಸ್ಥಾನ ಗಳಿಸಿದ ತಂಡವನ್ನೇ ಚಾಂಪಿಯನ್ ಎಂದು ಘೋಷಿಸಲಾಯಿತು. ಬೆಂಗಾಲ್ ಮತ್ತು ಮೋಹನ್ ಬಾಗನ್ ತಂಡಗಳು 13 ಪಂದ್ಯಗಳಿಂದ ತಲಾ 26 ಅಂಕಗಳನ್ನು ಸಂಪಾದಿಸಿದವು. ಆದರೆ, ಬೆಂಗಾಲ್ (+18) ತಂಡವು ಮೋಹನ್ ಬಾಗನ್ (+13) ತಂಡಕ್ಕಿಂತ ಹೆಚ್ಚಿನ ಗೋಲುಗಳ ವ್ಯತ್ಯಾಸದೊಂದಿಗೆ ನಿರ್ಣಾಯಕ ಮುನ್ನಡೆ ಸಾಧಿಸಿತು.

ಮುಂಬೈ ಸಿಟಿ ಎಫ್‌ಸಿ ತಂಡವು (25 ಅಂಕ) ಮೂರನೇ ಸ್ಥಾನ ಪಡೆದರೆ, ಕಳೆದ ಬಾರಿಯ ರನ್ನರ್ಸ್ ಅಪ್ ಬೆಂಗಳೂರು ಎಫ್‌ಸಿ ತಂಡವು ನಾಲ್ಕನೇ ಸ್ಥಾನದೊಂದಿಗೆ ಅಭಿಯಾನ ಮುಗಿಸಿತು.

'ನಿಷೇಧಿತ ಮದ್ದು ಪೂರೈಕೆ; 5 ವರ್ಷ ಜೈಲು'

ನವದೆಹಲಿ (ಪಿಟಿಐ): ಇತ್ತೀಚೆಗಷ್ಟೇ ಪರಿಷ್ಕೃತಗೊಂಡಿರುವ ರಾಷ್ಟ್ರೀಯ ಡೋಪಿಂಗ್ ನಿಗ್ರಹ ಕಾಯ್ದೆಗೆ ಮತ್ತೊಮ್ಮೆ ತಿದ್ದುಪಡಿ ತರಲು ಸರ್ಕಾರ ಉದ್ದೇಶಿಸಿದೆ. ಇದರ ಅನ್ವಯ ಅಥ್ಲೀಟುಗಳಿಗೆ ನಿಷೇಧಿತ ಉದ್ದೀಪನಮದ್ದು ಪೂರೈಸುವವರಿಗೂ ಐದು ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸಲು ಅವಕಾಶವಿದೆ.

ನಿಷೇಧಿತ ಔಷಧಗಳನ್ನು ಕ್ರೀಡಾಪಟುಗಳಿಗೆ ನೀಡಬಾರದೆಂದು ಗೊತ್ತಿದ್ದರೂ ಅವುಗಳನ್ನು ಉದ್ದೇಶಪೂರ್ವಕವಾಗಿ ಬರೆದುಕೊಡುವ ವೈದ್ಯರನ್ನೂ ಈ ತಿದ್ದುಪಡಿಯಡಿ ಶಿಕ್ಷೆಗೆ ಒಳಪಡಿಸಬಹುದಾಗಿದೆ. ಪ್ರಸ್ತಾವಿತ ತಿದ್ದುಪಡಿಗಳ ವಿವರವನ್ನು ಕ್ರೀಡಾ ಸಚಿವಾಲಯದ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ. ಇದಕ್ಕೆ ಸಂಬಂಧಿಸಿ ಸಾರ್ವಜನಿಕರು ಪ್ರತಿಕ್ರಿಯೆ, ಸಲಹೆಗಳನ್ನು ಜೂನ್ 18ರೊಳಗೆ ಸಲ್ಲಿಸಬಹುದಾಗಿದೆ.

ಈ ಸಲಹೆಗಳನ್ನು ಪರಿಗಣಿಸಿ ತಿದ್ದುಪಡಿ ಮಾಡಲಾದ ಮಸೂದೆಯನ್ನು ಸಂಸತ್ತಿನ ಮುಂಬರುವ ಮುಂಗಾರು ಅಧಿವೇಶನದಲ್ಲಿ ಮಂಡಿಸಲಾಗುವುದು ಎಂದು ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ತಿಳಿಸಿದರು.

'ಯಾವುದೇ ವ್ಯಕ್ತಿ ಕ್ರೀಡಾಪಟುವಿಗೆ ಉದ್ದೀಪನ ಮದ್ದು ಪೂರೈಕೆ ಮಾಡಿದಲ್ಲಿ ಐದು ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸಲು ಅಥವಾ 2 ಲಕ್ಷ ರೂಪಾಯಿವರೆಗೆ ದಂಡ ವಿಧಿಸಲು ಅಥವಾ ಎರಡನ್ನೂ ವಿಧಿಸುವ ಪ್ರಸ್ತಾವ ಉದ್ದೇಶಿತ ತಿದ್ದುಪಡಿಯಲ್ಲಿದೆ' ಎಂದರು.

ಬಾನವೀರ್ ಸಿಂಗ್‌ಗೆ 7 ವರ್ಷ ನಿಷೇಧ

ನವದೆಹಲಿ (ಪಿಟಿಐ): ಡಿಸ್ಕಸ್ ಥ್ರೋ ಅಥ್ಲೀಟ್ ಬಾನವೀರ್ ಸಿಂಗ್ ಅವರ ಮೇಲೆ ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಘಟಕವು (ಎಡಿಎಪಿ) ಏಳು ವರ್ಷ ನಿಷೇಧ ವಿಧಿಸಿದೆ.

ಅವರು ಮದ್ದು ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿದ್ದರಿಂದ ಶಿಸ್ತು ಸಮಿತಿಯು ಐದು ವರ್ಷ ನಿಷೇಧ ಶಿಕ್ಷೆ ವಿಧಿಸಿತ್ತು. ನಾಡಾ ಎರಡು ವರ್ಷ ಹೆಚ್ಚುವರಿಯಾಗಿ ಶಿಕ್ಷೆಯನ್ನು ಪ್ರಕಟಿಸಿದೆ. 2024ರ ಡಿ. 23ರಿಂದ ಈ ನಿಷೇಧವು ಅನ್ವಯವಾಗಲಿದೆ.

ಅವರು ಸ್ಟೆರಾಯ್ಡ್ ಮೆಥಾಂಡೀನೊನ್ ಸೇವಿಸಿದ್ದು ಪರೀಕ್ಷೆಯಲ್ಲಿ ಸಾಬೀತಾಗಿತ್ತು. ಅವರು ಈಗಾಗಲೇ 12 ತಿಂಗಳ ಅವಧಿಯಲ್ಲಿ ಮೂರು ಬಾರಿ ಚಲನವಲನ (ವೇರ್ ಅಬೌಟ್ಸ್) ಮಾಹಿತಿ ನೀಡುವಲ್ಲಿ ವಿಫಲರಾಗಿದ್ದರು. ಅದಕ್ಕಾಗಿ ಅವರನ್ನು ಎರಡು ವರ್ಷ ಅನರ್ಹಗೊಳಿಸಲಾಗಿತ್ತು. ಆ ಶಿಕ್ಷೆಯು ಇದೇ ಡಿಸೆಂಬರ್ 22ರವರೆಗೆ ಇರಲಿದೆ.

ದೂರ ಅಂತರದ ಓಟಗಾರ ಹರೇಂದ್ರ ಕುಮಾರ್ ಅವರಿಗೂ ನಾಡಾ ನಾಲ್ಕು ವರ್ಷಗಳ ಅಮಾನತು ಶಿಕ್ಷೆ ವಿಧಿಸಿದೆ.

ಟೆನಿಸ್: ಸಿಂಗಲ್ಸ್‌ನಲ್ಲಿ ಭಾರತದ ಸವಾಲು ಅಂತ್ಯ

ಕ್ವಾರ್ಟರ್‌ನಲ್ಲಿ ಹೊರಬಿದ್ದ ಮುಕುಂದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚೆನ್ನೈನ ಮುಕುಂದ್ ಶಶಿಕುಮಾರ್ ಅವರು ಇಲ್ಲಿ ನಡೆಯುತ್ತಿರುವ ಎಸ್.ಎಂ.ಕೃಷ್ಣ ಸ್ಮರಣಾರ್ಥ ಓಪನ್ ಎಟಿಪಿ ಚಾಲೆಂಜರ್ ಟೆನಿಸ್ ಟೂರ್ನಿಯ ಕ್ವಾರ್ಟರ್ ಫೈನಲ್‌ನಲ್ಲಿ ಹೊರಬಿದ್ದರು. ಇದರೊಂದಿಗೆ ಸಿಂಗಲ್ಸ್‌ನಲ್ಲಿ ಭಾರತದ ಸವಾಲು ಅಂತ್ಯಗೊಂಡಿತು.

ಕಬ್ಬನ್ ಪಾರ್ಕ್‌ನ ಎಸ್.ಎಂ. ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಎಂಟರ ಘಟ್ಟದ ಪಂದ್ಯದಲ್ಲಿ ಎರಡನೇ ಶ್ರೇಯಾಂಕದ ಅಲಸ್ಟೇರ್ ಗ್ರೇ 6-2, 5-7, 7-6 (3)ರ ಮೂರು ಸೆಟ್‌ಗಳ ಹೋರಾಟದಲ್ಲಿ ಮುಕುಂದ್ ಅವರನ್ನು ಹಿಮ್ಮೆಟ್ಟಿಸಿದರು. ಈ ರೋಚಕ ಪಂದ್ಯ ಎರಡು ಗಂಟೆ 40 ನಿಮಿಷದವರೆಗೆ ಸಾಗಿತು.

ವಿಶ್ವ ಕ್ರಮಾಂಕದಲ್ಲಿ 536ನೇ ಸ್ಥಾನದಲ್ಲಿರುವ ಮುಕುಂದ್ ಆರಂಭದಲ್ಲಿ ಲಯಕ್ಕಾಗಿ ಪರದಾಡಿದರು. ಇದರ ಲಾಭ ಪಡೆದ ಬ್ರಿಟನ್‌ನ ಅಲಸ್ಟೇರ್ ಮೊದಲ ಸೆಟ್ ಅನ್ನು ನಿರಾಯಾಸವನ್ನು ಗೆದ್ದುಕೊಂಡರು. ಆದರೆ ಎರಡನೇ ಸೆಟ್‌ನಲ್ಲಿ ಭಾರತದ ಆಟಗಾರ ಪುಟಿದೆದ್ದರು. ಚುರುಕಾದ ಸರ್ವ್ ಮಾಡುವ ಜೊತೆಗೆ ಫೋರ್‌ಹ್ಯಾಂಡ್ ಹೊಡೆತಗಳಲ್ಲಿ ಯಶಸ್ಸು ಸಾಧಿಸಿದ ಅವರು ಪಂದ್ಯವನ್ನು ನಿರ್ಣಾಯಕ ಸೆಟ್‌ಗೆ ಕೊಂಡೊಯ್ದರು.

ಮೂರನೇ ಸೆಟ್‌ನಲ್ಲಿ ಉಭಯ ಆಟಗಾರರಿಂದ ಸಮಬಲದ ಹೋರಾಟ ಕಂಡುಬಂತು. ಆದರೆ, ಅಂತಿಮವಾಗಿ ಟೈಬ್ರೇಕರ್‌ನಲ್ಲಿ ಬ್ರಿಟನ್ ಆಟಗಾರ ಮೇಲುಗೈ ಸಾಧಿಸಿ, ಸೆಮಿಫೈನಲ್‌ಗೆ ಮುನ್ನಡೆದರು. ಮುಕುಂದ್ ಪಂದ್ಯದಲ್ಲಿ ಒಟ್ಟು 14 ಏಸ್‌ಗಳನ್ನು ಸಿಡಿಸಿದರು. ಆದರೆ, ಬ್ರೇಕ್ ಪಾಯಿಂಟ್‌ನಲ್ಲಿ ಪದೇ ಪದೇ ಎಡವಿದ್ದು ಅವರಿಗೆ ದುಬಾರಿಯಾಯಿತು.

ಅಲಸ್ಟೇರ್ ನಾಲ್ಕರ ಘಟ್ಟದ ಪಂದ್ಯದಲ್ಲಿ ನಾಲ್ಕನೇ ಶ್ರೇಯಾಂಕದ ಪೀಟರ್ ಬಾರ್ ಬಿರ್ಯುಕೋವ್ ಅವರನ್ನು ಎದುರಿಸಲಿದ್ದಾರೆ. ರಷ್ಯಾದ ಪೀಟರ್ 6-2, 5-7, 6-3ರಿಂದ ಮಲೇಷ್ಯಾದ ಕಾಂಗ್ ಲಿಯಾಂಗ್ ಅವರನ್ನು ಮಣಿಸಿದರು.



ಬ್ರಿಟನ್‌ನ ಅಲಸ್ಟೇರ್ ಗ್ರೇ ಪ್ರಜಾವಾಣಿ ಚಿತ್ರ

ಮೂರನೇ ಶ್ರೇಯಾಂಕದ ಹ್ಯಾಮಿಶ್ ಸ್ಟೀವರ್ಟ್ (ಬ್ರಿಟನ್) 6-2, 6-1ರಿಂದ ಆರನೇ ಶ್ರೇಯಾಂಕದ ಒಗ್ನೆಂಜನ್ ಮಿಲಿಕ್ (ಸರ್ಬಿಯಾ) ಅವರನ್ನು ಸೋಲಿಸಿದರು. ಹ್ಯಾಮಿಶ್ ಸೆಮಿಫೈನಲ್‌ನಲ್ಲಿ ಬೆಲರೂಸ್‌ನ ಇಲ್ಯಾ ಇವಾಶ್ಕ ಅವರನ್ನು ಎದುರಿಸುವರು. ಇವಾಶ್ಕ 6-1, 6-2ರಿಂದ ಮೆಕ್ಸಿಕೊದ ಅಲೆಕ್ಸ್ ಹೆರ್ನಾಂಡೆಜ್ ಅವರನ್ನು ಸೋಲಿಸಿದರು.

ಎಂಟರ ಘಟ್ಟಕ್ಕೆ ಅಶ್ಮಿತಾ ಚಾಲಿಹಾ

ಕ್ವಾಲಾಲಂಪುರ (ಪಿಟಿಐ): ಅಶ್ಮಿತಾ ಚಾಲಿಹಾ ಅವರು ಮಲೇಷ್ಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಸೂಪರ್ 500 ಟೂರ್ನಿಯ ಮಹಿಳಾ ಸಿಂಗಲ್ಸ್ ಎಂಟರ ಘಟ್ಟ ಪ್ರವೇಶಿಸಿದರು. ಆದರೆ ಭಾರತದ ಉಳಿದ ಸ್ಪರ್ಧಿಗಳು ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ ಹೊರಬಿದ್ದರು.

ಗುರುವಾರ ನಡೆದ ಎರಡನೇ ಸುತ್ತಿನ ಪಂದ್ಯದಲ್ಲಿ ಅಶ್ಮಿತಾ ಸರ್ವಾಂಗೀಣ ಆಟವಾಡಿ 21-13, 21-16 ರಿಂದ ಮಲೇಷ್ಯಾದ ಗೋಹ್ ಜಿನ್ ವೀ ಅವರನ್ನು ಸೋಲಿಸಿದರು. ಅಶ್ಮಿತಾ ಕ್ವಾರ್ಟರ್‌ಫೈನಲ್‌ನಲ್ಲಿ ಎಂಟನೆ ಶ್ರೇಯಾಂಕದ ಲಿನೆ ಹೊಜ್ಮಾರ್ಕ್ ಜೇರ್ಸ್‌ಫೆಲ್ಟ್ (ಡೆನ್ಮಾರ್ಕ್) ಅವರನ್ನು ಎದುರಿಸಲಿದ್ದಾರೆ. ಡೆನ್ಮಾರ್ಕ್‌ನ ಆಟಗಾರ್ತಿ ಸುಮಾರು ಒಂದು ಗಂಟೆ ನಡೆದ ಇನ್ನೊಂದು ಪಂದ್ಯದಲ್ಲಿ ಭಾರತದ ಮಾಳವಿಕಾ ಬನ್ಸೋಡ್ ಅವರನ್ನು 16-21, 21-8, 21-15 ರಿಂದ ಸೋಲಿಸಿದರು.

ಅಗ್ರಶ್ರೇಯಾಂಕ ಪಡೆದಿರುವ ಚೀನಾದ ಆಟಗಾರ್ತಿ ಚೆನ್ ಯೂಫಿ 22-16, 21-13 ರಿಂದ ದೇವಿಕಾ ಸಿಹಾಗ್ ಅವರನ್ನು ಹಿಮ್ಮೆಟ್ಟಿಸಿದರು.

ಪೋಕ್ಸೊ ಪ್ರಕರಣ: ಆರ್ಚರಿ ಕೋಚ್ ಕುಲದೀಪ್‌ಗೆ 5 ವರ್ಷ ಸಜೆ

ಚಂಡೀಗಢ (ಪಿಟಿಐ): ಅಪ್ರಾಪ್ತ ವಯಸ್ಸಿನ ಬಿಲ್ಗಾರ್ತಿಗೆ ಲೈಂಗಿಕ ಕಿರುಕುಳ ನೀಡಿದ ಪ್ರಕರಣದಲ್ಲಿ ರಾಷ್ಟ್ರೀಯ ಪ್ಯಾರಾ ಆರ್ಚರಿ ಕೋಚ್ ಕುಲದೀಪ್ ವೇದ್ವಾನ್ ಅವರಿಗೆ ಸೋನಿಪತ್‌ನ ತ್ವರಿತಗತಿಯ ವಿಶೇಷ ನ್ಯಾಯಾಲಯ ಗುರುವಾರ ಐದು ವರ್ಷಗಳ ಕಠಿಣ ಜೈಲು ಶಿಕ್ಷೆ ವಿಧಿಸಿದೆ



ಕುಲದೀಪ್ ಅವರನ್ನು ಪೋಕ್ಸೊ ಕಾಯಿದೆಯಡಿ 2023ರಲ್ಲಿ ಬಂಧಿಸಲಾಗಿತ್ತು. 2024ರ ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ಗೆ ಮೊದಲು ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿತ್ತು. ಅವರನ್ನು ಮೇ 15ರಂದು ದೋಷಿ ಎಂದು ಪ್ರಕಟಿಸಿದ್ದು, ಮತ್ತೆ ಕಸ್ಟಡಿಗೆ ಪಡೆಯಲಾಗಿತ್ತು. ನ್ಯಾಯಾಲಯವು ಬುಧವಾರ ಶಿಕ್ಷೆಯ ಪ್ರಮಾಣ ಪ್ರಕಟಿಸಿದ್ದು, ಜೈಲು ಶಿಕ್ಷೆಯ ಜೊತೆ ₹15,000 ದಂಡವನ್ನೂ ವಿಧಿಸಲಾಗಿದೆ.

'2023ರ ಏಪ್ರಿಲ್‌ನಲ್ಲಿ ಸೋನಿಪತ್‌ನ ಭಾರತ ಕ್ರೀಡಾ ಪ್ರಾಧಿಕಾರದ ಕೇಂದ್ರದಲ್ಲಿ ಯುವ ಚಾಂಪಿಯನ್‌ಷಿಪ್ ಟ್ರಯಲ್ಸ್ ವೇಳೆ ವಿದ್ವಾನ್ ತಮ್ಮನ್ನು ಲೈಂಗಿಕವಾಗಿ ಶೋಷಿಸಿದ್ದರು' ಎಂದು ಬಾಲಕಿ ಬಿಲ್ಗಾರ್ತಿ ಆರೋಪಿಸಿದ್ದಳು. 'ತಾನು ತಂಗಿದ್ದ ಹೋಟೆಲ್ ಕೊಠಡಿಗೆ ಬಂದಿದ್ದ ಕೋಚ್ ಅಸಭ್ಯವಾಗಿ ವರ್ತಿಸಿದ್ದರು. 15-20 ನಿಮಿಷಗಳ ಕಾಲ ಪ್ರತಿರೋಧ ತೋರಿದ ಬಳಿಕ ಹೇಗೋ ತಪ್ಪಿಸಿಕೊಂಡು ಮಹಿಳಾ ಕ್ರೀಡಾಪಟುಗಳು ಉಳಿದಿದ್ದ ಇನ್ನೊಂದು ಕೊಠಡಿಗೆ ಓಡಿಹೋಗಿದ್ದೆ' ಎಂದು ದೂರಿನಲ್ಲಿ ತಿಳಿಸಿದ್ದಳು.

ಕುಲದೀಪತ್ ಗೈರುಹಾಜರಿಯಲ್ಲಿ ಅವರ ಪತ್ನಿ ಅಭಿಲಾಷಾ ಚೌಧರಿ ಅವರನ್ನು ಭಾರತ ಪ್ಯಾರಾ ಆರ್ಚರಿ ಕೋಚ್ ಆಗಿ ನೇಮಕ ಮಾಡಲಾಗಿತ್ತು. ಕೈಗಳಿಲ್ಲದ ಬಿಲ್ಗಾರ್ತಿ, ಜಮ್ಮುವಿನ ಶೀತಲ್ ದೇವಿ ಮತ್ತು ಕೈ-ಕಾಲುಗಳಿಲ್ಲದ ಒಡಿಶಾದ ಬಿಲ್ಗಾರ್ತಿ ಪಾಯಲ್ ನಾಗ್ ಅವರಿಗೆ ವೇದ್ವಾನ್ ತರಬೇತಿ ನೀಡಿದ್ದರು.